॥ ಶ್ರೀಃ ಹರಿಃ ಓಂ ॥

ಶ್ರೀ ಗರುಡವಾಹನ ಲಕ್ಷ್ಮೀನರಸಿಂಹಾಭಿನ್ನ ಶ್ರೀ ಜಗನ್ನಾಥವಿಠ್ಠಲಾಯನಮಃ॥

# ದತ್ತಸ್ವಾತಂತ್ರ್ಯ ಸಂಧಿ

(ಸಂಧಿ-೧೭)

ಹರಿಕಥಾಮೃತಸಾರ ಗುರುಗಳ
ಕರುಣದಿಂದಾಪನಿತು ಪೇಳುವೆ ।
ಪರಮ ಭಗವದ್ಭಕ್ತರಿದನಾದರದಿ ಕೇಳುವುದು ॥ ಪ ॥

ಪದ-೧

ಮೂಲ :-

ಕಾರುಣಿಕ ಹರಿ ತನ್ನೊಳಿಪ್ಪಾ ।
ಪಾರ ಸ್ವಾತಂತ್ರ್ಯಯು ಗುಣವು ನಾ ।
ನೂರು ತೆಗೆದು ಸಪಾದ ಆರೊಂದಧಿಕ ಅರವತ್ತು ॥
ನಾರಿಗಿತ್ತ ದ್ವಿಷೋಡಶಾಧಿಕ ।
ನೂರು ಪಾದತ್ರಯುವ ತನ್ನ ಶ ॥
ರೀರದೊಳಗೀಪರಿ ವಿಭಾಗವ ಮಾಡಿ ತ್ರಿಪದಾಹ್ವ ॥ ॥ ೧ ॥

ಅವತರಣಿಕೆ :

ಪರಮಕರುಣಾಮಯನಾದ ಶ್ರೀಪರಮಾತ್ಮನು ಸ್ವಗತ ಅಪಾರ ಸ್ವಾತಂತ್ರ್ಯ ಎಂಬ ಗುಣದಲ್ಲಿ ಜಗದ್ವ್ಯಾಪಾರಕ್ಕಾಗಿಯೂ ಮತ್ತು ಆಯಾಯ

ಜೀವರ ಸಾಧನಕ್ಕಾಗಿಯೂ ಬಿಂಬರೂಪದಿಂದ ಕ್ರಿಯಾಭಿವ್ಯಕ್ತಿಗಾಗಿ ಇಟ್ಟಿರುವ ಹಂಚಿಕೆಯ ವಿವರಣೆಗಳನ್ನು ಪ್ರಾರಂಭಿಸುತ್ತಾರೆ.

**ಪ್ರತಿಪದಾರ್ಥ :-**

**ಕಾರುಣಿಕ** = ಸೃಷ್ಟ್ಯಾದಿವ್ಯಾಪಾರಗಳಿಗೆ ಮೂಲಕಾರಣನಾದ ಪರಮ ದಯಾಳುವಾದ, **ಹರಿ** = ಶ್ರೀಪರಮಾತ್ಮನು, **ತನ್ನೊಳಿಪ್ಪ** = ತನ್ನಲ್ಲಿರುವ (ಅವನಿಂದ ಅಭಿನ್ನವಾದ) **ಅಪಾರ** = ಅನಂತವಾದ, **ಸ್ವಾತಂತ್ರ್ಯ ಗುಣವು** = ಸ್ವರೂಪಭೂತವಾದ ಸ್ವಾತಂತ್ರ್ಯ ಎಂಬ ಗುಣದಲ್ಲಿ, **ನಾನೂರು ತೆಗೆದು** = ನಾನ್ನೂರು ವಿಭಾಗ ಮಾಡಿ, **ಸಪಾದ** = ಒಂದು ಪಾದದಿಂದ ಸಹಿತವಾದ (ಕಾಲುಭಾಗ ಸಹಿತ) **ಆರೊಂದಧಿಕ** = ಆರರ ಮೇಲೆ ಒಂದು ಹೆಚ್ಚಾದ, ಅಂದರೆ ಏಳು, **ಅರವತ್ತು** = ೬೦, ಅಂದರೆ ೬೦ + ೭ + ಕಾಲುಭಾಗ= ೬೭ ಕಾಲುಭಾಗ, **ನಾರಿಗಿತ್ತ** = ತನ್ನ ಪತ್ನಿಯಾದ ಶ್ರೀಲಕ್ಷ್ಮೀದೇವಿಯಲ್ಲಿ ಇಡುವವನಾದನು. **ದ್ವಿಷೋಡಶ** = ಎರಡಷ್ಟು ಹದಿನಾರು = ೨ × ೧೬ = ೩೨, **ಅಧಿಕನೂರು** = ೩೨ರ ಮೇಲೆ ನೂರು ಹೆಚ್ಚಾದ ಅಂದರೆ ೧೦೦ + ೩೨ = ೧೩೨ ಎಂದಾಯಿತು, **ಪಾದತ್ರಯುವ** = ಪಾದದ ಮೂರರಷ್ಟು ಅಂದರೆ ಮುಕ್ಕಾಲುಭಾಗ, ಅಲ್ಲಿಗೆ ೧೩೨ ಮುಕ್ಕಾಲು ಭಾಗವಾಯಿತು. **ತನ್ನ ಶರೀರ ದೊಳಗೆ** = ತನ್ನಲ್ಲಿ (ಸ್ವರೂಪಭೂತಸ್ವಾತಂತ್ರ್ಯದ ವಿಭಾಗ) **ಈಪರಿ** = ಈ ರೀತಿಯಲ್ಲಿ, **ತ್ರಿಪದಾಹ್ವ** = ೨೪ ಅಕ್ಷರಾತ್ಮಕವಾದ ಗಾಯತ್ರಿಮಂತ್ರವು ಮೂರು ಪಾದಗಳುಳ್ಳದ್ದು. ಪ್ರತಿ ಎಂಟು ಅಕ್ಷರಗಳ ಶ್ರೇಣಿಗೆ ಒಂದು ಪಾದ. ಅಂದರೆ ತ್ರಿಪಾದಯುಕ್ತವಾದ ಗಾಯತ್ರಿಮಂತ್ರಪ್ರತಿಪಾದ್ಯನಾದ, ಶ್ರೀಹರಿಯು (ಅಥವಾ **ತ್ರಿ** - ತ್ರಿವರ್ಗಜೀವರು, **ಪ** - ಪಾಲಕನಾದ, **ದ** - ಅವರವರ ಸ್ವರೂಪಯೋಗ್ಯತಾನುಸಾರ ಕಾರ್ಯಾಭಿವ್ಯಕ್ತಿ ಮಾಡುವವನು) **ವಿಭಾಗವ ಮಾಡಿ** = ಹಂಚಿದನು.

ಅಂದರೆ ೧. ಶ್ರೀ ಲಕ್ಷ್ಮೀ ದೇವಿಯರಲ್ಲಿ ಇಟ್ಟ ಭಾಗ = ೬೭ ೧/೪

೨. ತನ್ನಲ್ಲಿಟ್ಟುಕೊಂಡ ಸ್ವಗತಸ್ವಾತಂತ್ರ್ಯ = ೧೩೨ ೩/೪

**ಅಲ್ಲಿಗೆ ಒಟ್ಟು = ೨೦೦ ಭಾಗಗಳಾಯಿತು** ||೧||

# ವ್ಯಾಖ್ಯಾನಗಳು

## ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಹಿಂದಿನ ಸಂಧ್ಯಂತರಗಳಲ್ಲಿ ಹೇಳಿದ ಕ್ರಮಕ್ಕೆ ಅನುಸಂಧಾನ ಮಾಡಿ ಪೂಜಾ ಮಾಡತಕ್ಕ ಜೀವನ ಕರ್ತೃತ್ವ ಎಂಬುದು ಸ್ವಾಧೀತಕರ್ತೃತ್ವವೇ, ಪರಾಧೀನಕರ್ತೃತ್ವವೇ ಎಂದರೆ, ಜೀವರಿಗೆ ಕರ್ತೃತ್ವ ಎಂಬ ಸ್ವಾತಂತ್ರ್ಯ ವೇನೋ ಉಂಟು. ಅದು ಪರಾಧೀನಸ್ವಾತಂತ್ರ್ಯವೇ ಹೊರತು, ಈಶ್ವರನೋ ಪಾದಿಯಲ್ಲಿ ಸ್ವಾಧೀನಸ್ವಾತಂತ್ರ್ಯವಲ್ಲ. ಅದನ್ನನುಸರಿಸಿದ ಕೆಲವು ತತ್ತ್ವ ಗಳನ್ನು ಈ ಸಂಧಿಯಲ್ಲಿ ವಿವರ ಮಾಡಿದ್ದಾರೆ.

ಸೃಷ್ಟ್ಯಾದಿ ವ್ಯಾಪಾರಗಳಿಗೆ ಮೂಲಕಾರಣನಾದ ವಟಪತ್ರಶಾಯಿಯಾದ ಶ್ರೀನಾರಾಯಣದೇವರು, ತನ್ನ ಉದರದಲ್ಲಿ ವಿದ್ಯಮಾನರಾದ, ಅಂತ್ಯದಿಂದ ರಹಿತರಾದ ಜೀವರಾಶಿಗಳೊಳಗೆ ಸೃಜ್ಯರಾಗಿ ಸಾಧನೆ ಮಾಡತಕ್ಕ ಜೀವರು ಯಾರೋ ಅವರಿಗೆ ತನ್ನ ಸ್ವಕೀಯವಾದ, ಜೀವರ ಕಡಿಯಿಂದ ವ್ಯಾಪಾರ ಮಾಡಿಸುವುದಕ್ಕೆ ಯೋಗ್ಯವಾದ ಮೂರು (ಸಂಧಿ ಪ್ರಯುಕ್ತ 'ತ್ರ' ಎಂಬ ವರ್ಣವನ್ನು ಆವರ್ತನ ಮಾಡಿಕೊಂಡು ಪೂರ್ವಾಪರಗಳಿಗೆ ಸೇರಿಸಿಕೊಂಡು ಸ್ವಾತಂತ್ರ್ಯ ತ್ರಯ ಎಂತ ಅರ್ಥ ಮಾಡಬೇಕು) ಸ್ವಾತಂತ್ರ್ಯತ್ರಯಗಳು ಎನತಕದ್ದು ಪರಮಾತ್ಮನ ಗುಣವು, ಪರಮಾತ್ಮನಿಗೆ ಅಭಿನ್ನವು. ತ್ರಯ ಯಾವುದೆಂದರೆ ದತ್ತಸ್ವಾತಂತ್ರ್ಯಗುಣ ಒಂದು, ಸ್ವಗತಸ್ವಾತಂತ್ರ್ಯಗುಣ ಒಂದು, ಸರ್ವಸ್ವಾತಂತ್ರ್ಯಗುಣ ಒಂದು ಅಂತೂ ಮೂರು. ಸ್ವಗತ ಸ್ವಾತಂತ್ರ್ಯ ಸರ್ವಸ್ವಾತಂತ್ರ್ಯ ವಿಚಾರ ಸಂಧ್ಯಂತರದಲ್ಲಿ ಹೇಳುತ್ತಾರೆ ಪರಮಾತ್ಮನ ಸ್ವರೂಪಭೂತವೆಂದು ನಾಲ್ಕನೇ ಶ್ಲೋಕದಲ್ಲಿ ಹೇಳುತ್ತಾರೆ. ದತ್ತಸ್ವಾಂತ್ರಗುಣದೊಳಗೆ ನಾನ್ನೂರು ವಿಭಾಗವು ಮಾಡಿ ತೆಗೆದು ಎಂದರೆ, ಮೂಲರೂಪದಿಂದ ಮತ್ಸ್ಯಾದಿ ರೂಪಗಳು ಹ್ಯಾಂಗೆ ಅಭಿವ್ಯಕ್ತಿಯೋ, ಹಾಗೆಯೇ ಮೂಲರೂಪದಿಂದ ನಾನ್ನೂರು ಗುಣಗಳು ಅಭಿವ್ಯಕ್ತಿ ಆಗೋ-ವಾದವು. ಅರ್ಜುನಾದಿಗಳಲ್ಲಿ ಭಗವದಂಶ ಆವಿಷ್ಟವಾದಂತೆ, ಜೀವರ ಸ್ವರೂಪಭೂತಸ್ವಾತಂತ್ರ್ಯದಲ್ಲಿ ಪ್ರವಿಷ್ಟವಾಗೋದಾಯಿತು. ಪಾದದಿಂದ ಸಹಿತವಾದ (೧/೪), ಆರರ ಮೇಲೆ ಒಂದು (೭), ಅರವತ್ತು ಅಂತೂ

ಅರವತ್ತೇಳೂಕಾಲು(೬೭ ೧/೪), ತನ್ನ ಪತ್ನಿಯಾದ ಲಕ್ಷ್ಮೀದೇವಿಯಲ್ಲಿ ಇಡೋವನಾದ. ಎರಡು ಹದಿನಾರುಗಳು ಎಂದರೆ ಮೂವತ್ತೆರಡು (೩೨), ಮೂವತ್ತೆರಡಕ್ಕೆ ಮೇಲೆ ಅಧಿಕ ನೂರು, ಮುಕ್ಕಾಲು (೩/೪) ಅಂತೂ ನೂರಮೂವತ್ತೆರಡು ಮುಕ್ಕಾಲು (೧೩೭-೩/೪) ಎಂತ ಅರ್ಥ. ಪರಮಾತ್ಮ ತನ್ನ ಶರೀರದಲ್ಲಿ ನೂರಮೂವತ್ತೆರಡು ಮುಕ್ಕಾಲು (೧೩೨-೩/೪) ಗುಣಗಳನ್ನು ಇಡೋವನಾದ. ಈ ಪ್ರಕಾರ ವಿಭಾಗ ಮಾಡಿ ತ್ರಿಪದ ಎಂತ ಕರಸುವನಾದ. ಹೇಗೆಂದರೆ, ತ್ರಿವಿಧ ಜೀವರುಗಳನ್ನು ಪಾಲನೆ ಮಾಡುತ್ತ, ಅವರವರ ಸ್ವರೂಪಯೋಗ್ಯತಾನುಸಾರ ಬುದ್ಧ್ಯಾದಿಗಳ ಅಭಿವ್ಯಕ್ತಿ ಮಾಡಿಕೊಡುತ್ತ ಆಯಾ ಜೀವರ ಸ್ವರೂಪ ಯಾವುದೋ ಆಯಾ ನಾಮಗಳಿಂದ ಕರಸುತ್ತಾ ಜೀವಾಂತರ್ಗತನಾಗಿ ಪರಮಾತ್ಮ ಬಿಂಬನಾಗಿ ಇದ್ದಾನೆ. ಪಾದತ್ರಯ ಸಾಂಕೇತವಾದ ಸ್ವಾತಂತ್ರ್ಯತ್ರಯದಲ್ಲಿ ತತ್ತನ್ನಾಮದಿಂದಲೂ ಇದ್ದಾನೆ. ತ್ರಿವಿಧಜೀವರ ಸ್ವರೂಪಭೂತ ಸ್ವಾತಂತ್ರ್ಯತ್ರಯದಲ್ಲಿ ತ್ರಿವಿಧ ನಾಮದಿಂದಲೂ ಇದ್ದಾನೆ. ಈ ವಿಭಾಗ ಮಾಡಿದ ದತ್ತಸ್ವಾತಂತ್ರ್ಯ ದೇವರು ತನ್ನಲ್ಲಿ ರಮಾದೇವಿಯರಲ್ಲಿ ಇಟ್ಟು ಇರೋಣದರಿಂದ, ಜೀವರ ಸ್ವರೂಪಭೂತಸ್ವಾತಂತ್ರ್ಯವೆನ್ನುವುದಕ್ಕೆ ಆಗುವುದಿಲ್ಲ. ಹಾಗೆಯೇ ಜಡ ಎಂತಲೂ ಅನ್ನುವುದಕ್ಕೆ ಕೂಡುವುದಿಲ್ಲ. ಈ ಉಭಯಗಳು ರಮಾಮಧುಸೂದನರ ಸ್ವರೂಪಭೂತಸ್ವಾತಂತ್ರ್ಯದಕ್ಕಿಂತಲೂ ಅತ್ಯಂತ ನೀಚಗಳಾದ ಪ್ರಯುಕ್ತ ಯೋಜನ ಕೂಡುವುದಿಲ್ಲ. ಆದ್ದರಿಂದ ಈಶ್ವರನ ಸ್ವರೂಪಭೂತಸ್ವಾತಂತ್ರ್ಯಗಳ ವಿಭಾಗವೆಂತಲೇ ಅರ್ಥಾತ್ ಸಿದ್ಧವು. ಬ್ರಹ್ಮಾದಿ ತೃಣಾಂತ ತ್ರಿವಿಧಜೀವರ ಸ್ವರೂಪದಲ್ಲೇನು, ಹಾಗೇ ರಮಾದೇವಿಯರ ಸ್ವರೂಪದಲ್ಲೇನು, ಅನಾದಿ ಸ್ವರೂಪಭೂತಸ್ವಾತಂತ್ರ್ಯಗುಣದಲ್ಲಿ ತದ್ವಾಚ್ಯ ಪರಮಾತ್ಮನ ಸ್ವಾತಂತ್ರ್ಯಗುಣಗಳು ಇರೋವಾಗಿವೆ, ಅದು ಲಿಂಗಭಂಗಾನಂತರ ಸ್ವರೂಪದೇಹದ ಕಾರ್ಯಗಳ ಮಾಡಿಸುವುದಕ್ಕೆ ಕಾರಣವಾದದ್ದು. ಸ್ಥಿತಿಕಾಲದಲ್ಲಿ ಅದರ ಕಾರ್ಯ ಪೃಥಕ್ ಆಗಿಲ್ಲವಾದ್ದರಿಂದ ತನ್ನಿಮಿತ್ತ ಸ್ಥಿತಿಕಾಲದ ತ್ರಿಗುಣವ್ಯಾಪಾರಗಳ ನಡಿಸುವ ನಿಮಿತ್ತ ಸೃಷ್ಟ್ಯಾದಿ ವ್ಯಾಪಾರಗಳಿಗೆ ಕಾರಣನಾದ ಶ್ರೀನಾರಾಯಣದೇವರು, ತನ್ನ ಸ್ವಕೀಯ ಸ್ವಾತಂತ್ರ್ಯಗುಣಗಳ ಜೀವನ ಸ್ವರೂಪಭೂತಸ್ವಾತಂತ್ರ್ಯ ಗುಣಗತ ತನ್ನ ಸ್ವರೂಪಭೂತಗುಣಗಳಲ್ಲಿ, ಬ್ರಹ್ಮರೂಪಗತ ತನ್ನ ಗುಣಗಳ

ಇಡೋವನಾಗಿದ್ದಾನೆ. ಅದು ಪುನಃ ಮೂಲದಲ್ಲಿ ಲಯವಾಗುತ್ತದೆ. ತದನ್ಯ ಗುಣ ನೀತವಾಗಿರುತ್ತದೆ. ರಮಾದೇವಿಯರಲ್ಲಿ ಇಟ್ಟದ್ದನ್ನು ಪೂರ್ವೋಕ್ತ ಪ್ರಕಾರ ಸೃಷ್ಟ್ಯಾದಿ ವ್ಯಾಪಾರಕ್ಕಾಗಿ, ದೃಷ್ಟಾಂತದಿಂದ ಸಮಾಧಾನ. ಪರಮಾತ್ಮನ ಅನಂತಾನಂತ ರೂಪಗಳಿಗೆ ಅಭೇದವಾದರೂ, ರಾವಣನ ದೇಹಾಂತರ್ಗತರೂಪದಿಂದ ರಾವಣನ ಸಂಹಾರ ಮಾಡುವ ಶಕ್ತಿ ಇದ್ದರೂ, ಪ್ರತ್ಯೇಕವಾದ ರಾಮರೂಪದಿಂದ ಸಂಹಾರ ಮಾಡಿದ ತೆರದಿ, ಸೃಷ್ಟ್ಯಾದಿಗಳ ನಡೆಸುವ ನಿಮಿತ್ತ ನೂರವತ್ತೆರಡೂಮುಕ್ಕಾಲು ಗುಣ ತನ್ನಲ್ಲಿ ತಾನು ಇಟ್ಟುಕೊಳ್ಳುವನಾದ, ಎಂದರೆ ಇಷ್ಟು ಗುಣದಿಂದ ಸೃಷ್ಟ್ಯಾದಿಗಳ ನಡೆಸುತ್ತಾನೆ ಎಂತ ತಾತ್ಪರ್ಯ. ಅವಶಿಷ್ಟ ಗುಣಗಳಿಂದ ಸ್ವರಮಣನಾಗಿರುತ್ತಾನೆ.

ರಮಾದೇವಿಯರ ಸ್ವರೂಪಭೂತ ಸ್ವಾತಂತ್ರ್ಯ ಗುಣಗಳಿಂದ, ತದ್ಗತ ತನ್ನ ಸ್ವಾಮ್ಯಗುಣಗಳಿಂದ ಪರಮಾತ್ಮನ ಪ್ರದೇಶದಲ್ಲಿ ಪರಮಾತ್ಮನಾದ ತನ್ನ ಅಂಗಸಂಗಾದಿ ಕಾರ್ಯಗಳನ್ನು ನಡೆಸುತ್ತಾನೆ. ೬೭ ೧/೪ ಗುಣದಿಂದ ರಮಾದೇವಿಯರ ದ್ವಾರಾ ಸೃಷ್ಟ್ಯಾದಿ ಕಾರ್ಯಗಳನ್ನು ನಡೆಸುತ್ತಾನೆ. ಅಂತೂ ಸ್ವರೂಪ ಕಾರ್ಯಕ್ಕೆ ಸ್ವರೂಪಗುಣಗಳು, ಬಾಹ್ಯ ವ್ಯಾಪಾರಕ್ಕೆ ಪ್ರವಿಷ್ಟಗುಣಗಳು. ಈ ಕಾರಣದಿಂದ ಪರಮಾತ್ಮನು ತನ್ನ ಸ್ವಾಮ್ಯ ಸ್ವಾತಂತ್ರ್ಯ ಗುಣಗಳ ಇಡುವವನಾಗಿದ್ದಾನೆಂದು ತಾತ್ಪರ್ಯ.

೧. ದತ್ತಸ್ವಾತಂತ್ರ್ಯ ಅಂದರೆ ಅಪಕ್ವದಶಾದಲ್ಲಿ ಇದರ ಕಾರ್ಯ. ಈ ಸ್ವಾತಂತ್ರ್ಯದ್ವಾರಾ ಅಪಕ್ವದಶಾದಲ್ಲಿ ಅಹಂ ಮಮತಾದಿಗಳ ಪ್ರೇರಿಸಿ ತದ್ದ್ವಾರಾ ಪ್ರಾಪ್ತವಾಗತಕ್ಕ ಸುಖದುಃಖಾದಿಗಳು, ದೇಹದ್ವಾರಾ ಜೀವಗೆ ತಾನು ದತ್ತ ಮಾಡಿ ಉಣ್ಣಿಸುತ್ತಾನಾದಕಡಿಯಿಂದ ದತ್ತಸ್ವಾತಂತ್ರ್ಯ ಎಂದು ಹೆಸರು.

೨. ಸ್ವಗತಸ್ವಾತಂತ್ರ್ಯದ್ವಾರಾ ತನ್ನಲ್ಲಿರತಕ್ಕ ಸರ್ವೋತ್ತಮತ್ವಾದಿ ನಿರ್ದೋಷಗಳಾದ ಮಹಾಮಹಾತ್ಮೆ ವೇದಶಾಸ್ತ್ರಾದಿಗಳಿಂದ ತಿಳಿಸಿ, ವಿಷಯಾ

ದಿಗಳಲ್ಲಿ ಆಸಕ್ತಿ, ಅಹಂ ಮಮತಾದಿಗಳ ಸಂಪೂರ್ಣವಾಗಿ ಪರಿಹಾರ ಮಾಡದೆ, ಸಂಸಾರ ಹೇಯ ಅಹಂಮಮತಾದಿಗಳು ಹೇಯ ಎಂತಲೂ, ಇದನ್ನ ತ್ಯಾಗ ಮಾಡಬೇಕೆಂತಲೂ ಉಭಯಮಿಶ್ರದಿಂದ ಸಾಧನ ಯಾವುದಿದೆ ಇದೇ ಪಕ್ವಾಪಕ್ವ ಕಾಲ. ಸ್ವಗತ ಮಹಿಮೆಗಳ ತಿಳಿಸುತ್ತಾನಾದ್ದರಿಂದ ಸ್ವಗತಸ್ವಾತಂತ್ರ್ಯ ಎಂತ ಹೆಸರು.

೩. ಸರ್ವಸ್ವಾತಂತ್ರ್ಯ ಎಂದರೆ, ಪಕ್ವದಶಾದಲ್ಲಿ ಇದರ ಕಾರ್ಯ. ಈ ಸ್ವಾತಂತ್ರ್ಯದಿಂದ ಅಹಂ ಮಮತಾದಿಗಳ ಬಿಡಿಸಿ, ಸರ್ವವೂ ಈಶಾಧೀನವೆಂದು ತಿಳಿಸಿ, ತದೇಕಧ್ಯಾನದಿಂದ ಯುಕ್ತನನ್ನಾಗಿ ಮಾಡುತ್ತಾನಾದ್ದರಿಂದ ಸರ್ವಸ್ವಾತಂತ್ರ್ಯ ಎಂತ ಹೆಸರು.

೪. ಜೀವರ ಸ್ವರೂಪಗತಸ್ವಾತಂತ್ರ್ಯಗತಪರಮಾತ್ಮನ ಸ್ವರೂಪಸ್ವಾತಂತ್ರ್ಯ ಎಂದರೆ, ಇದರ ಕಾರ್ಯ ಲಿಂಗಭಂಗಾನಂತರ ಜೀವನ ಸ್ವರೂಪಭೂತಗತ (ಸ್ವರೂಪಭೂತ ಸ್ವಾತಂತ್ರ್ಯಗತ) ಪರಮಾತ್ಮನ ಸ್ವತಂತ್ರಗುಣದ ಕಾರ್ಯ, ಪೃಥಕ್ಕಾಗಿ ಮೋಕ್ಷದಲ್ಲಿ ಕಾರ್ಯ ಮಾಡೋದಾಗತದೆ. ದತ್ತಸ್ವಾತಂತ್ರ್ಯ ಗುಣದ ವಿಚಾರವಾಯಿತು. ಸ್ವಗತಸ್ವಾತಂತ್ರ್ಯ, ಸರ್ವಸ್ವಾತಂತ್ರ್ಯ ಗುಣ ವಿಭಾಗದ ವಿಚಾರ ಆಯಾ ಸಂಧಿಗಳಲ್ಲಿ ವಿವರವಾಗಿ ಹೇಳಲ್ಪಡುತ್ತದೆ. ॥೧॥

### ಭಾವಪ್ರಕಾಶಿಕೆ

ಮಹಾ ಕರುಣಾಳುವಾದ ಶ್ರೀಪರಮಾತ್ಮನು ತನ್ನೊಳಗಿರುವ ಅಪರಿಮಿತವಾದ ಸ್ವಾತಂತ್ರ್ಯ ಗುಣಗಳಲ್ಲಿ, ಸೃಷ್ಟ್ಯಾದಿ ಜಗತ್ಕಾರ್ಯವನ್ನು ಮಾಡುವುದಕ್ಕಾಗಿ ೪೦೦ ಭಾಗ ಸ್ವಾತಂತ್ರ್ಯವನ್ನು ಮಾತ್ರ ಬೇರೆ ತೆಗೆದು ಅದರಲ್ಲಿ (೬೭।) ಅರವತ್ತೇಳುಕಾಲು ಭಾಗಗಳನ್ನು ಲಕ್ಷ್ಮೀದೇವಿಯರಿಗಿತ್ತು (೧೩೨।।।) ನೂರ ಮೂವತ್ತೆರಡೂ ಮುಕ್ಕಾಲು ಭಾಗವನ್ನು ತಾನು ಇಟ್ಟುಕೊಂಡನು. ಈ ಪ್ರಕಾರ ೪೦೦ ಭಾಗಗಳಲ್ಲಿ ೨೦೦ ಭಾಗಗಳನ್ನು ಲಕ್ಷ್ಮೀನಾರಾಯಣರು ಇಟ್ಟುಕೊಂಡು ಉಳಿದ ೨೦೦ ಭಾಗಗಳನ್ನು ಬ್ರಹ್ಮದೇವರು ಮೊದಲು ಸಕಲ ಪ್ರಾಣಿಗಳಿಗೂ ಹಂಚಿರುವನು. ಒಬ್ಬ ಮನುಷ್ಯನು ಅತ್ಯಲ್ಪವಾದ ಒಂದು ಕೆಲಸವನ್ನು ಮಾಡಬೇಕಾದರೆ ತನ್ನಲ್ಲಿರುವ ಯಾವತ್ ಶಕ್ತಿಯನ್ನೂ

ಉಪಯೋಗಿಸಬೇಕಾಗುವುದಿಲ್ಲ. ಯೋಗ್ಯತೆ ಮೀರಿದ ಕೆಲಸವನ್ನು ಮಾಡಬೇಕಾದರೆ ಮಾತ್ರ ತನಗಿರುವ ಎಲ್ಲಾ ಶಕ್ತಿಯನ್ನೂ ಉಪಯೋಗಿಸಬೇಕಾಗುವುದು. ಹಾಗೆ ಶ್ರೀಪರಮಾತ್ಮನಿಗೆ ಈ ಜಗತ್ತಿನ ಸೃಷ್ಟಿ, ಸ್ಥಿತಿ, ಸಂಹಾರ, ನಿಯಮನ, ಜ್ಞಾನಾಜ್ಞಾನಾದಿ ಅಷ್ಟಕರ್ತೃತ್ವಕಾರ್ಯವನ್ನು ತಾನು ಮಾಡಬೇಕಾದರೆ ಅದೊಂದು ದೊಡ್ಡಕಾರ್ಯವಲ್ಲ. ಕೇವಲ ಅಲ್ಪ ಕಾರ್ಯವು. ಇಷ್ಟು ಕಾರ್ಯ ಮಾಡುವುದಕ್ಕೋಸ್ಕರ ತನ್ನ ಶಕ್ತಿಯಲ್ಲಿ ಎಲ್ಲವೂ ಬೇಕಾಗುವುದಿಲ್ಲ. ತನಗಿರುವ ಸ್ವಾತಂತ್ರ್ಯಾದಿ ಗುಣಗಳು ಅಪರಿಮಿತ. ಈ ಕರ್ಮಗಳಿಗೆ ಬೇಕಾಗುವುದು ಸ್ವಲ್ಪ ಪರಿಮಿತಿಯುಳ್ಳ ಸ್ವಾತಂತ್ರ್ಯ. ಆದ್ದರಿಂದ ಅಪರಿಮಿತ ಸ್ವಾತಂತ್ರ್ಯಗುಣಗಳ ಪೈಕಿ ೪೦೦ ಭಾಗವಿದ್ದರೆ ಎಲ್ಲಾ ಜಗದ್ವ್ಯಾಪಾರಗಳಿಗೂ ಸಾಕಾಗುವದೆಂದು ನಿಶ್ಚಯಿಸಿ ಅಷ್ಟೇ ಭಾಗಗಳನ್ನು ತೆಗೆದು ಅವುಗಳಲ್ಲಿ ಲಕ್ಷ್ಮೀ ಸಮೇತ ತಾನು ಮಾಡಬೇಕಾದ ಕಾರ್ಯಗಳಿಗೆ ೨೦೦ ಭಾಗಗಳನ್ನು ಇಟ್ಟುಕೊಂಡನು. ಸಾತ್ವಿಕಾದಿ ಜೀವರು ತಮ್ಮ ತಮ್ಮ ಯೋಗ್ಯತಾನುಸಾರವಾಗಿ ಗತಿ ಹೊಂದಬೇಕಾದರೆ ಅವರವರು ಯತ್ಕಿಂಚಿತ್ತಾದರೂ ಕರ್ಮಗಳನ್ನು ಮಾಡಬೇಕು ಮತ್ತು ಅವರು ಆ ಫಲಗಳನ್ನನುಭವಿಸಬೇಕೆಂದು ನಿಶ್ಚಯಿಸಿ ಅದರಂತೆಯೇ ತನ್ನ ಪ್ರತಿಬಿಂಬರಾದ ಬ್ರಹ್ಮಾದಿ ಸಕಲ ಚೇತನರಿಗೂ ೨೦೦ ಭಾಗಗಳನ್ನು ಕೊಟ್ಟನು ಎಂದು ತಾತ್ಪರ್ಯ. ತ್ರಿಪದಾಹ್ವ ಎಂಬಲ್ಲಿ ಪಾದ ಶಬ್ದಕ್ಕೆ ಅಂಶ ಎಂದು ಅರ್ಥವನ್ನು ಭಾಗವತ ದ್ವಿತೀಯ ಸ್ಕಂಧದ ವ್ಯಾಖ್ಯಾನದಲ್ಲಿ ಮಾಡಿರುವರು. "ಪಾದೋಸ್ಯ ವಿಶ್ವಾ ಭೂತಾನಿ ತ್ರಿಪಾದಸ್ಯಾಮೃತಂ ದಿವಿ" ಎಂಬ ಪುರುಷಸೂಕ್ತ ವಾಕ್ಯದಿಂದ, ಈ ಪ್ರಪಂಚ ಆದ್ಯಂತವೂ ತ್ರಿಪಾದನಾಮಕ ಪರಮಾತ್ಮನಿಗೆ ಒಂದು ಪಾದವು ಅಂದರೆ ಪರಮಾತ್ಮನ ಒಂದಂಶವೆಂದರ್ಥ. "ಮಮೈವಾಂಶೋ ಜೀವಲೋಕೇ ಜೀವಭೂತಃ ಸನಾತನಃ"ಎಂಬ ಗೀತಾವಾಕ್ಯದಂತೆ ಅಂಶ ಎಂದರೆ ಪ್ರತಿಬಿಂಬನೆಂದರ್ಥ. ಅವಶಿಷ್ಟ ಎರಡು ಪಾದಗಳು, ಶ್ವೇತದ್ವೀಪ, ಅನಂತಾಸನ, ವೈಕುಂಠಾದಿಗತ ನಾರಾಯಣಾದಿ ರೂಪಗಳು, ರಾಮಕೃಷ್ಣಾದ್ಯವತಾರ ರೂಪಗಳು ಇವುಗಳಿಗೆ ಸ್ವಾಂಶವೆಂದು ಹೆಸರು. ನರ, ಪ್ರದ್ಯುಮ್ನ, ಸಾಂಬ, ಲಕ್ಷ್ಮಣ, ಮೊದಲಾದವರಲ್ಲಿರುವ ಅಂಶರೂಪಕ್ಕೆ ಭಿನ್ನಾಂಶವೆಂದು ಹೆಸರು. ಈ ಪ್ರಕಾರ ಮೂರು ಅಂಶಗಳಿಂದ ಜಗತ್ಕಾರ್ಯಗಳನ್ನು ಮಾಡಿಸುವುದಕ್ಕೆ ೪೦೦ ಸ್ವಾತಂತ್ರ್ಯ

ಭಾಗಗಳಿಗಿಂತಲೂ ಹೆಚ್ಚು ಬೇಕಾಗುವುದಿಲ್ಲ. ಆದ್ದರಿಂದ ಅಷ್ಟನ್ನು ಮಾತ್ರ ತೆಗೆದುಕೊಂಡನೆಂದು ಭಾವ. ॥ ೧ ॥

**೩. ಭಾವದರ್ಪಣ**

**ಸರ್ವವಸ್ತುಷು ಯಾ ಶಕ್ತಿಃ ಸಾ ಮದೀಯೈವ ನಾನ್ಯಥಾ। ಎಂಬ ವಚನ ರೀತ್ಯಾ "ಓಂ ಪರಾತ್ತುಚ್ಛ್ರುತೇಃ ಓಂ ಸಾ ಕರ್ತೃತ್ವಶಕ್ತಿಃ ಪರಾದೇವ" । ಈ ಸೂತ್ರಭಾಷ್ಯೋಕ್ತಿರೀತ್ಯಾ** ತನ್ನಲ್ಲಿದ್ದಂಥಾ ಸ್ವರೂಪ ಭೂತ ಸ್ವಾತಂತ್ರ್ಯಾಂಶವನ್ನೇ ಜೀವರಿಗೆ ಕೊಟ್ಟನೆಂದು ಹೇಳುತ್ತಾರೆ. ಕಾರುಣಿಕೇತಿ, ನಾನೂರುಗುಣಗಳು ತೆಗೆದದ್ದರಲ್ಲಿ ಸಪಾದ ಆರೊಂದಧಿಕ ಅರವತ್ತು (ಎಂದರೆ ೬೭-೧/೪) ದ್ವಿಷೋಡಶಾಧಿಕ ನೂರುಪಾದತ್ರಯವ (ಎಂದರೆ ೧೩೨-೩/೪). ಅಹತ್ಯ ಉಭಯರಿಂದ ೨೦೦ ಗುಣ ಇಟ್ಟುಕೊಂಡು ಇರುತ್ತಾನೆಂದು ತಾತ್ಪರ್ಯ. ॥ ೧ ॥

**೪. ಶ್ರೀ ವ್ಯಾಸದಾಸಸಿದ್ಧಾಂತಕೌಮುದೀ**

ಪದ್ಯಾ ೧-೨ ಕೂಡಿಸಿ ಬರೆದಿದ್ದಾರೆ. ಕಾರಣ ಎರಡನೇ ಪದ್ಯದಲ್ಲಿ ಕೊಟ್ಟಿದೆ. ಮುಂದೆ ನೋಡಿ ಆನಂದ ಪಡೆಯುವರಾಗಿರಿ. ॥ ೧ ॥

**ಶ್ರೀಗುರುಹೃದಯ ಪ್ರಕಾಶಿಕೆ**

ಸೂಚನೆ– ಇತರ ಎಲ್ಲಾ ವ್ಯಾಖ್ಯಾನಗಳಲ್ಲಿ ಈ ಸಂಧಿಯು ಹದಿನಾರನೇ ಸಂಧಿಯಾಗಿ ಹೇಳಲ್ಪಟ್ಟಿದೆ. ಗುರುಹೃದಯಪ್ರಕಾಶಿಕೆ ಎಂಬ ಈ ವ್ಯಾಖ್ಯಾನ ಕಾರರು ಇದನ್ನು ಹದಿನೇಳನೇ ಸಂಧಿಯಾಗಿ ಸೂಚಿಸಿರುತ್ತಾರೆ. ವ್ಯಾಖ್ಯಾನ ಸಂಗ್ರಹಕ್ಕೆ ಅನುಗುಣವಾಗುವಂತೆ ಈ ಸಂಧಿಯ ವ್ಯಾಖ್ಯಾನವನ್ನು ಹದಿನಾರನೆ ಸಂಧಿಗೇ ಸೇರಿಸಲಾಗಿದೆ. ಇತರ ವ್ಯಾಖ್ಯಾನಗಳ ಹದಿನೇಳನೇ ಸಂಧಿಯು ಈ ವ್ಯಾಖ್ಯಾನದಲ್ಲಿ ಹದಿನಾರನೇ ಸಂಧಿಯಾಗಿ ಸೂಚಿಸಲ್ಪಟ್ಟಿದೆ. ಅದನ್ನು ಮುಂದಿನ ಸಂಧಿಗೆ ಅನ್ವಯಿಸಲಾಗಿದೆ. ಓದುಗರಿಗೆ ಗೊಂದಲವಾಗದಿರಲೆಂದು ಈ ಸೂಚನೆಯನ್ನು ಕೊಟ್ಟಿದೆ.

(ಮೇಲೆ ಹೇಳಿದ ಅಧ್ಯಾಯದ ಅಭಿಪ್ರಾಯವನ್ನೇ ವಿವರಿಸಿ ಹೇಳುತ್ತಾರೆ), ಸ್ವಾತಂತ್ರದಾನಸಂಧಿ ಎಂಬ ಈ (ಹದಿನೇಳನೇ) ಸಂಧಿಯಲ್ಲೂ ದೇವರು ಅನಿಮಿತ್ತ ಬಂಧುವೆಂತಲೂ, ಬಾಹ್ಯಾಭ್ಯಂತರದೀಕ್ಷಾವಿಧಾನ ಪ್ರೇರಕ, ತತ್ತತ್ಸ್ವಾತಂತ್ರ್ಯಾದಿ ಗುಣವ್ಯಂಜಕ, ತದಿಚ್ಛಾನುಗುಣಫಲದಾತು ದೋಷದೂರನೆಂತಲೂ ಹೇಳುವ ಹರಿಕಥೆಯೇ ಅಮೃತಕ್ಕಿಂತ ಸಾರವೆಂದು ಗುರುಗಳ ಕರುಣದಿಂದ ಆದಷ್ಟು ಹೇಳುವುದರನ್ನು ನಿಷ್ಕಾಮಹರಿಭಕ್ತರು ಕೇಳತಕ್ಕದ್ದು. ॥ ಸಂ. ಸೂ. ॥

ಕರುಣಾಶಾಲಿಯಾದ ಶ್ರೀಹರಿಯು ತನ್ನಲ್ಲಿಪ್ಪ ಅಪಾರ ಸ್ವಾತಂತ್ರ್ಯ ಗುಣಗಳಲ್ಲಿ ನಾಸೂರು ತೆಗೆದು ಸಪಾದ ಆರೊಂದಧಿಕ ಅರವತ್ತು ಅಂದರೆ, ಅರತ್ತೇಳೂಕಾಲು ಸ್ವಾತಂತ್ರ್ಯಗುಣಭಾಗವನ್ನು ನಾರಿ ಎಂಬ ತನ್ನ ಪ್ರೀಯಾದ ರಮಾದೇವಿಗೆ ಕೊಟ್ಟು, ದ್ವಿಷೋಡಶಾಧಿಕ ನೂರು ಪಾದತ್ರಯುವ ಅಂದರೆ, ನೂರಮೂವತ್ತೆರಡೂಮುಕ್ಕಾಲು ಸ್ವಾತಂತ್ರ್ಯಗುಣಭಾಗವನ್ನು ತನ್ನ ಸ್ವರೂಪ ಶರೀರದಲ್ಲಿಟ್ಟುಕೊಂಡು, ಪಾದದ್ವಯುವೆಂಬ ಇನ್ನೂರು ಗುಣ ಸ್ವಾತಂತ್ರ್ಯವನ್ನು ಹೀಗೆ ಅಂದರೆ, ಲಕ್ಷ್ಮೀನಾರಾಯಣರೆಂಬ ತಮ್ಮಿಬ್ಬರಲ್ಲಿಯೇ ವಿಭಾಗ ಮಾಡಿಕೊಂಡದ್ದರಿಂದ, ತ್ರಿಪದಾಹ್ವ ಅಂದರೆ, ತ್ರಿಪದನೆಂಬ ಹೆಸರುಳ್ಳವನಾದವನು (ದೇವರು ಎಂದರ್ಥ). ॥ ೧ ॥

## ಸರ್ವವ್ಯಾಖ್ಯಾನಸಾರ ಸಂಗ್ರಹ

ಶ್ರೀಪರಮಾತ್ಮನು ಸರ್ವೋತ್ತಮನು. ರಮಾ ಬ್ರಹ್ಮಾದಿಗಳೆಲ್ಲರೂ ಶ್ರೀಹರಿಯ ಅಧೀನರು. ಅಂದರೆ ಸಕಲಜೀವರೂ ಪರಾಧೀನ ಕರ್ತೃತ್ವಶಕ್ತಿಯುಳ್ಳವರು.

ಸೃಷ್ಟಿಸ್ಥಿತಿಲಯಾದಿ ಜಗದ್ವ್ಯಾಪಾರಗಳಿಗಾಗಿ ಸರ್ವತಂತ್ರಸ್ವತಂತ್ರನಾದ ಸರ್ವೇಶ್ವರನು ತನ್ನ ಅಪಾರವಾದ ಸ್ವಾತಂತ್ರ್ಯವೆಂಬ ಗುಣದಲ್ಲಿ ಆಯಾಯ ಕಾರ್ಯಗಳ ನಿರ್ವಹಣೆಗೆ ಬೇಕಾಗುವಷ್ಟು ಭಾಗಗಳನ್ನು ಯಾವ ರೀತಿ ಮಾಡಿ

ಆ ಅಂಶಗಳನ್ನು ವಿವಿಧ ಜೀವರಲ್ಲಿ ಯಾವ ರೀತಿ ಇಟ್ಟಿದ್ದಾನೆ ಎಂಬುದೇ ಪ್ರಸಕ್ತ ಸಂಧಿಗತ ವಿಷಯವು.

ಒಂದು ಕಾರ್ಯವು ನಿರ್ವಹಣೆಯಾಗಲು ಪ್ರಧಾನವಾಗಿ ಎರಡು ಕಾರಣ ಗಳು ಇರಲೇಬೇಕು. ಕರ್ತೃತ್ವಶಕ್ತಿ ಮತ್ತು ಸ್ವಾತಂತ್ರ್ಯಗುಣ. ಇವೆರಡೂ ಒಂದೇ ಅಲ್ಲ. ಭಿನ್ನ ಭಿನ್ನವಾದ ಧರ್ಮಗಳು ಈ ವಿಷಯವನ್ನು ಸ್ಪಷ್ಟವಾಗಿ ಅರಿತರೇ ಪ್ರಸಕ್ತ ಸಂಧಿಗತ ವಿಷಯವು ಅಂದರೆ ದತ್ತಸ್ವಾತಂತ್ರ್ಯ ವೆಂಬುವುದು ನಿಸ್ಸಂದೇಹವಾಗಿ ತಿಳಿಯಲು ಸಾಧ್ಯ.

ಕರ್ತೃತ್ವ ಶಕ್ತಿ :- ಒಂದು ಕೆಲಸವನ್ನು ಮಾಡಲು ಬೇಕಾಗಿರುವ ಕ್ರಿಯಾಸಾಮರ್ಥ್ಯಕ್ಕೆ ಕರ್ತತ್ವಶಕ್ತಿ ಎಂದು ಹೆಸರು. ಈ ಧರ್ಮವು ಶಕ್ತ್ಯಾತ್ಮಕವಾಗಿರುವುದು. ದೃಷ್ಟಾಂತವಾಗಿ ಒಂದು ಚಕ್ರಕ್ಕೆ ಚಲಿಸುವ ಶಕ್ತಿ ಇದೆ. ಆದರೆ ಇತರ ಸಹಾಯವಿಲ್ಲದೇ ಆ ಶಕ್ತಿಯು ಅಭಿವ್ಯಕ್ತಿಯಾಗಲಾರದು. ಆದರ ಕರ್ತೃತ್ವಶಕ್ತಿಯು ಕ್ರಿಯಾತ್ಮಕವಾಗಬೇಕಾದರೆ ಚಕ್ರವನ್ನು ತಿರುಗಿಸುವ, ಅದಕ್ಕೆ ಅನ್ಯವಾದ ಇನ್ನೊಂದು ಶಕ್ತಿ ಬೇಕು.

ಸ್ವಾತಂತ್ರ್ಯ :- ತಂತ್ರ-ಎಂದರೆ ಒಂದು ವಸ್ತುವಿನ ನಿರ್ಮಾಣ ದಲ್ಲಿರುವ ಯಾಂತ್ರಿಕ ಕೌಶಲ್ಯ (Technic) ಅದು ಆ ವಸ್ತುವಿಗೇ ಸಂಬಂಧ ಪಟ್ಟಿದ್ದು. ಸ್ವ-ಎಂದರೆ ಆ ಯಾಂತ್ರಿಕ ಕೌಶಲ್ಯವನ್ನು ಕ್ರಿಯಾರೂಪವಾಗಿ ಪರಿವರ್ತಿಸಲು, ಇತರ ಯಾವ ಸಹಾಯವೂ ಇಲ್ಲದೇ ಆ ವಸ್ತುವೇ ಸ್ವಯಂ ಶಕ್ತಿಯನ್ನು ಹೊಂದಿರುವ ಗುಣಧರ್ಮವು. ಜೀವರಾಗಲೀ ಅಥವಾ ಜಡವಸ್ತು ವಾಗಲೀ ತಾನೇ ತಾನಾಗಿ ತನ್ನ ಕರ್ತೃತ್ವಶಕ್ತಿಯನ್ನು ಕ್ರಿಯಾತ್ಮಕವಾಗಿ ಮಾಡುವ ಗುಣಧರ್ಮವನ್ನೇ ಸ್ವಾತಂತ್ರ್ಯ ಎನ್ನುವರು.

ಈಶನಾದ ಶ್ರೀಪರಮಾತ್ಮನಿಗೂ ಅವನ ಅಧೀನರಾದ ಸಕಲ ಜೀವಜಡ ರಾಶಿಗಳಿಗೂ ಇರುವ ವೈಲಕ್ಷಣ್ಯವೇ ಸ್ವತಂತ್ರತತ್ವ ಮತ್ತು ಅಸ್ವತಂತ್ರ ತತ್ವಗಳ ಪ್ರಮುಖ ವಿಷಯವಾಗಿದೆ.

ಶ್ರೀಪರಮಾತ್ಮನಿಗೆ ಜಗದ್ವ್ಯಾಪಾರಗಳನ್ನು ನಿರ್ವಹಿಸುವುದಕ್ಕೆ ಇತರರ ಸಹಾಯ ಬೇಕಿಲ್ಲ. ಸ್ವಾತಂತ್ರ್ಯವೆಂಬುದು ಶ್ರೀಪರಮಾತ್ಮನ ಸ್ವರೂಪ ಭೂತಗುಣವು.

ಈಶನಿಂದ ಅತ್ಯಂತ ಭಿನ್ನರಾದ ತ್ರಿವಿಧ ಜೀವರೆಲ್ಲರೂ ಈಶಾಧೀನರು. ಅವರ ಸ್ವರೂಪಭೂತಗುಣಗಳಾದ ಇಚ್ಛಾಶಕ್ತಿ, ಜ್ಞಾನಶಕ್ತಿ ಮತ್ತು ಕ್ರಿಯಾಶಕ್ತಿ ಶ್ರೀಪರಮಾತ್ಮನ ಅಧೀನವಾಗಿವೆ. ಈ ಗುಣಧರ್ಮವೇ ಜೀವರು ಮತ್ತು ಜಡಗಳಿಗೆ ಇರುವ ಪರಸ್ಪರ ಭೇದವನ್ನು ಸೂಚಿಸುವುದು. ಜ್ಞಾನ ಮತ್ತು ಇಚ್ಛಾಶಕ್ತಿಗಳಿಂದ ಯುಕ್ತವಾದ ಪರಾಧೀನ ಕರ್ತೃತ್ವಶಕ್ತಿಯು ಜೀವರಿಗೆ ಇದೆ. ಜಡವಸ್ತುಗಳಿಗೆ ಜ್ಞಾನಶಕ್ತಿಯಾಗಲೀ, ಇಚ್ಛಾಶಕ್ತಿಯಾಗಲೀ ಇಲ್ಲ.

ಇದರಿಂದ ಶ್ರೀಹರಿಯು ಸರ್ವಸ್ವತಂತ್ರನು ಮತ್ತು ತದ್ಭಿನ್ನರಾದ ಸಕಲ ಜೀವರೂ ಅಸ್ವತಂತ್ರರು.

**ಪ್ರಮಾಣ :-**

**ಸ್ವತಂತ್ರಮಸ್ವತಂತ್ರ ಚ ದ್ವಿವಿಧಂ ತತ್ತ್ವಮಿಷ್ಯತೆ ||**
**ಸ್ವತಂತ್ರೋ ಭಗವಾನ್ ವಿಷ್ಣುಃ ಭಾವಾಭಾವೌದ್ವಿಧೇತರತ್ ||**
**ತತ್ತ್ವಸಂಖ್ಯಾನ ಗ್ರಂಥದ ಮಂಗಳಾಚರಣಶ್ಲೋಕ**
**(ಶ್ರೀಗುರುಮಧ್ವರ ವಚನ)**

ತತ್ತ್ವಗಳಲ್ಲಿ ಎರಡು ಪ್ರಕಾರ :-
ಸ್ವತಂತ್ರತತ್ತ್ವ ಮತ್ತು ಅಸ್ವತಂತ್ರತತ್ತ್ವ.
ಭಗವಾನ್ ಶ್ರೀವಿಷ್ಣುವೇ ಸ್ವತಂತ್ರತತ್ವನು.
ವಿಷ್ಣ್ವಾಧೀನರಾದ ಸಕಲಜಗತ್ತು ಮತ್ತು ಜೀವರು ಅಸ್ವತಂತ್ರ ತತ್ವಾತ್ಮಕರು.

ಅಸೃಜ್ಯಾವಸ್ಥೆಯಲ್ಲಿ ಜೀವರನ್ನು ತನ್ನ ಸಂಕಲ್ಪಾನುಸಾರ ಸೃಷ್ಟಿಗೆ ತಂದು ಅವರಿಗೆ ಸಾಧನಪರಿಕರಗಳನ್ನು ಒದಗಿಸಿ ಅಸ್ವಂತ್ರರಾದ

ಜೀವರಲ್ಲಿ ತಾನು ಜೀವಾಂತರ್ಯಾಮಿಯಾಗಿ ಪ್ರವೇಶಿಸಿ, ಅವರ ಕರ್ತೃತ್ವ ಶಕ್ತಿಯನ್ನು ಸ್ವ ಇಚ್ಛೆಯಿಂದ ಕ್ರಿಯಾತ್ಮಕವನ್ನಾಗಿ ಮಾಡಿ ಬಿಂಬಕ್ರಿಯದ್ವಾರಾ, ಜೀವರಿಂದ ಸಕಲ ಕ್ರಿಯಗಳನ್ನು ಮಾಡಿ ಮಾಡಿಸುತ್ತಿರುವ ಆ ಕಮಲದಳಾಯ ತಾಕ್ಷನು ಪರಮ ಕಾರುಣಿಕನು.

ಶ್ರೀಪರಮಾತ್ಮನ ಅಂಗಾಗಳಿಗಾಗಲೀ ಅವತಾರ ವಿಶೇಷಗಳಿಗಾಗಲೀ ರೂಪ, ನಾಮ ಕ್ರಿಯೆಗಳಿಗಾಗಲೀ ಪರಸ್ಪರ ಭೇದವಿಲ್ಲ. ಇದರಿಂದ ಶ್ರೀಹರಿಯು ಸ್ವಗತಭೇದವಿವರ್ಜಿತನು. ಅವನಿಗೂ ಅವನ ಸ್ವರೂಪಭೂತವಾದ ಸ್ವಾತಂತ್ರ್ಯವೆಂಬ ಗುಣಕ್ಕೂ ಅಭೇದ. ಶ್ರೀಪರಮಾತ್ಮನ ಸ್ವಾತಂತ್ರ್ಯ ಗುಣ ಅಪಾರ. ಇಂತಹ ಅನಂತಾನಂತ ಸ್ವಾತಂತ್ರ್ಯಗುಣರಾಶಿಯಲ್ಲಿ ಹರಿಯು ಜಗದ್ವ್ಯಾಪಾರಗಳನ್ನು ನಿರ್ವಹಿಸಲು ನಾನೂರು ಭಾಗಗಳನ್ನು ಮಾತ್ರ ತೆಗೆದುಕೊಂಡು ಅದನ್ನು ಈ ರೀತಿ ವಿಭಾಗಿಸಿದನು-

ತನ್ನ ಪತ್ನಿಯಾದ ಶ್ರೀ ಲಕ್ಷ್ಮೀದೇವಿಯರಲ್ಲಿ ೬೭ ೧/೪ ಭಾಗ ಇಟ್ಟನು.

ತನ್ನಲ್ಲಿ ಸ್ವಗತಸ್ವಾತಂತ್ರ್ಯ ರೂಪದಲ್ಲಿ ೧೩೨-೩/೪ ಭಾಗ ಇಟ್ಟುಕೊಂಡನು.

ಉಳಿದ ಅಂಶವನ್ನು ಬ್ರಹ್ಮಾದಿ ತೃಣಾಂತ ಸಕಲಜೀವರಲ್ಲಿ ೨೦೦ ಭಾಗ ಇಟ್ಟನು.

ಅಲ್ಲಿಗೆ ಒಟ್ಟು ೪೦೦ ಭಾಗಗಳಾಯಿತು

ಶ್ರೀ ಲಕ್ಷ್ಮೀದೇವಿಯರಲ್ಲಿ ಇಟ್ಟ ವಿಭಾಗವನ್ನು ಸಪಾದ ಆರೊಂದಧಿಕ ಅರವತ್ತು ಎಂದಿದ್ದಾರೆ.

| | |
|---|---|
| ಅಂದರೆ ಆರೊಂದಧಿಕ | ೭ ಭಾಗ |
| ಅರವತ್ತು | ೬೦ ಭಾಗ |
| ಸಪಾದ | ೧/೪ ಭಾಗ |

ಸಪಾದ ಆರೊಂಧಿಕ ಅರವತ್ತು = ೬೭$\frac{೧}{೪}$ ಭಾಗ

ತನ್ನ ಶರೀರದಲ್ಲಿ ಅಂದರೆ ಸ್ವಗತವಾಗಿ ಇಟ್ಟುಕೊಂಡ ವಿಭಾಗ :
ದ್ವಿಷೋಡಶ ೩೨

(ದ್ವಿ-ಎರಡರಷ್ಟು ಷೋಡಶ-೧೬)

ಅಧಿಕನೂರು ೧೦೦

೩ ಪಾದತ್ರಯವ (ಪಾದಗಳು) $\frac{೩}{೪}$ ಭಾಗ

ಅಲ್ಲಿಗೆ ದ್ವಿಷೋಡಶ ಅಧಿಕನೂರು ಪಾದತ್ರಯವ

೧೩೨ $\frac{೩}{೪}$ ಭಾಗಗಳಾಯಿತು

ಈ ರೀತಿಯಲ್ಲಿ ತನ್ನಲಿ ಇಟ್ಟುಕೊಂಡ ಭಾಗ ೧೩೨–೪/೩
ನಾರಿಗಿತ್ತದ್ದು ೬೭–೧/೪
ಬ್ರಹ್ಮಾದಿ ತೃಣಾಂತ
ಚೇತನರಲ್ಲಿ ೨೦೦ ಭಾಗ

ಮೂರು ಭಾಗಮಾಡಿ ಇಟ್ಟದ್ದರೀದ ಸರ್ವತಂತ್ರಸ್ವತಂತ್ರನಾದ ಶ್ರೀಹರಿಗೆ ತ್ರಿಪದಾಹ್ವನೆಂದು ಹೆಸರು. (ತ್ರಿಪದ-ಮೂರು ಪಾದಗಳು ಆಹ್ವ-ಹೆಸರುಳ್ಳವನು).

**ವಿಶೇಷ ವಿಚಾರ :**

ಶ್ರೀಹರಿಯು ಸರ್ವತಂತ್ರಸ್ವತಂತ್ರನು. ಅವನ ಸ್ವಾತಂತ್ರ್ಯಗುಣಕ್ಕೂ ಅವನಿಗೂ ಅಭೇದ. ಜೀವರಲ್ಲಿ ತನ್ನ ಸ್ವಾತಂತ್ರ್ಯವನ್ನು ಇಟ್ಟನು ಎಂದರೆ

ಅಸ್ವಂತ್ರರಾದ ಜೀವರಲ್ಲಿ ಬಿಂಬರೂಪದಿಂದ ಪ್ರವೇಶಿಸಿ, ಜೀವರಿಗೆ ನಿತ್ಯಾವಿಯೋಗಿಯಾಗಿದ್ದು ಜೀವನಾಮಕನಾಗಿ ಜೀವಾಧಾರನಾಗಿ ಜೀವರಲ್ಲಿರುವ ಕರ್ತೃತ್ವಶಕ್ತಿಯನ್ನು ಪ್ರೇರಿಸುವನು. ಈ ಕ್ರಿಯೆಯು ಶ್ರೀಹರಿಯ ಬಿಂಬಕ್ರಿಯೆಯಿಂದ ಪ್ರವರ್ತಿತವಾಗುವುದು. ಸರ್ವಜೀವರಲ್ಲಿ ಆಯಾಯ ಜೀವರ ಸ್ವರೂಪ ಯೋಗ್ಯತೆಗೆ ತಕ್ಕಂತೆ ತಾನು ಬಿಂಬನಾಗಿದ್ದು ಅವರ ದ್ವಾರ ಪ್ರೇರಿಸುವ ಶಕ್ತಿ ವಿಶೇಷವೇ ಅಂದರೆ ಶ್ರೀಹರಿಯ ಬಿಂಬಕ್ರಿಯಾರೂಪರಾದ ಪ್ರೇರಣಯೇ ದತ್ತ ಸ್ವಾತಂತ್ರ್ಯವು. ಈ ಅರ್ಥ ಹೊರತು ಜೀವರಿಗೆ ತನ್ನ ಸ್ವಾತಂತ್ರ್ಯವನ್ನೆ ಕೊಟ್ಟನು ಎಂಬ ವಿವರಣೆಯು, ತತ್ತ್ವಕ್ಕೆ ವಿರೋಧವಾಗುವುದು. ದತ್ತ-ಎಂದರೆ ಕೊಡಲ್ಪಟ್ಟದ್ದು ಎಂಬರ್ಥವಲ್ಲ. **ಬಿಂಬನಾಗಿ ತಾನು ಇಟ್ಟಿರುವುದು** ಎಂದರ್ಥ. ದತ್ತಸ್ವಾತಂತ್ರ್ಯವೆಂದರೆ ಶ್ರೀಹರಿಯ ಬಿಂಬಕ್ರಿಯಾರೂಪವಾದ ಜೀವನ್ನಿಷ್ಠ ವ್ಯಾಪಾರವೇ ವಿನಹ ಅನ್ಯಥಾ ಅಲ್ಲವೇ ಅಲ್ಲ. ॥ ೧ ॥

### ಪದ್ಯ ೨

**ಮೂಲ :**

ಸತ್ಯಲೋಕಾಧಿಪನೊಳಗೆ ಐ ।
ವತ್ತೆರಡು ಪವಮಾನನೊಳು ನಾ ।
ಲ್ವತ್ತು ಮೇಲೆಂಟಧಿಕ ಶಿವನೊಳಗಿಟ್ಟನಿಪ್ಪತ್ತು ॥
ಚಿತ್ತಜೇಂದ್ರರೊಳೈದಧಿಕದಶ ।
ತತ್ತ್ವಮಾನಿಗಳೆನಿಪ ಸುರರೊಳು ।
ಹತ್ತು ಈರೈದಖಿಳಜೀವರೊಳಿಟ್ಟ ನಿರವದ್ಯ ॥ ೨ ॥

**ಅವತರಣಿಕೆ :**

ಅವಿಶಿಷ್ಟವಾದ ೨೦೦ ಭಾಗಗಳ ಹಂಚಿಕೆಯ ವಿಚಾರವನ್ನು ತಿಳಿಸುತ್ತಾರೆ.

**ಪ್ರತಿಪಾದಾರ್ಥ :**

**ಸತ್ಯಲೋಕಾಧಿಪನೊಳಗೆ** = ಸತ್ಯಲೋಕಕ್ಕೆ ಒಡೆಯನಾದ ಬ್ರಹ್ಮದೇವರಲ್ಲಿ, **ಐವತ್ತೆರಡು** = ೫೨ ಭಾಗಗಳನ್ನು, **ಪವಮಾನನೊಳು** = ಶ್ರೀಹರಿಗೆ ಪ್ರಥಮಾಂಗಭೂತರಾದ ಶ್ರೀವಾಯುದೇವರಲ್ಲಿ, **ನಾಲ್ವತ್ತು ಮೇಲೆಂಟಧಿಕ** = ೪೮ ಭಾಗಗಳನ್ನು (ನಾಲ್ವತ್ತು ಮೇಲೆ ಎಂಟು ಅಧಿಕ = ೪೦+೮=೪೮) **ಶಿವನೊಳಗೆ** = ಪರಮಮಂಗಳಕರನಾದ ಪಾರ್ವತೀಪತಿ ಮಹಾರುದ್ರದೇವರಲ್ಲಿ, **ಇಪ್ಪತ್ತು** = ೨೦ ಭಾಗಗಳನ್ನು, **ಇಟ್ಟ** = ಇಡುವವನಾದನು. **ಚಿತ್ತಜ** = ಶ್ರೀಹರಿಯ ಮನಸ್ಸಿನಿಂದ ಉತ್ಪನ್ನನಾದ ಮನ್ಮಥ, **ಇಂದ್ರರೊಳು** = ಸ್ವರ್ಗಾಧಿಪತಿಯಾದ ಇಂದ್ರ-ಇವರಲ್ಲಿ, **ಐದಧಿಕದಶ** = ೧೫ ಭಾಗಗಳನ್ನು (೫+೧೦=೧೫), **ತತ್ತ್ವಮಾನಿಗಳೆನಿಪ** = ಪೂರ್ವೋಕ್ತ ಬ್ರಹ್ಮ, ವಾಯು, ರುದ್ರ, ಇಂದ್ರ, **ಮನ್ಮಥ**ರನ್ನು ಬಿಟ್ಟು ಮಿಕ್ಕ ತತ್ತ್ವಾಭಿಮಾನಿದೇವತೆಗಳೆನಿಸುವ, **ಸುರರೊಳು** = ಮುಖ್ಯಾಮುಖ್ಯ ತತ್ತ್ವಮಾನಿಗಳಾದ ಶತಸ್ಥರಪರ್ಯಂತ ದೇವತೆಗಳು, ಪುಷ್ಕರನ ಪರ್ಯಂತ ಕರ್ಮಜ ದೇವತೆಗಳು ಈ ದೇವತಾವರ್ಗದಲ್ಲಿ, **ಹತ್ತು** = ೧೦ ಭಾಗ, **ಅಖಿಳ ಜೀವರೊಳು** = ೨೪ ಕೋಟಿ ದೇವಗಂಧರ್ವಪರ್ಯಂತ ಆಜಾನಜದೇವತೆಗಳು, ಆಜಾನಜರಲ್ಲಿ ಸೇರಿದ ಶತೋನ ನೂರುಕೋಟಿ ಋಷಿಗಳು ಮನುಷ್ಯಗಂಧರ್ವರಾರಭ್ಯ ತೃಣಾಂತ ಮುಕ್ತಿಯೋಗ್ಯರು ಇತ್ಯಾದಿ ಉಳಿದ ಸಕಲ ಜೀವರಾಶಿಗಳಲ್ಲಿ, **ಈರೈದು** = ೧೦ ಭಾಗಗಳನ್ನು (೫×೨=೧೦) **ನಿರವದ್ಯ** = ದೋಷದೂರನಾದ ಶ್ರೀ ಪರಮಾತ್ಮನು, **ಇಟ್ಟ** = ಜಗದ್ವ್ಯಾಪಾರಕ್ಕಾಗಿ ಆಯಾಯ ಜೀವರ ಕರ್ಮಾಭಿವ್ಯಕ್ತಿಗಾಗಿ ಇಡುವವನಾದನು. ॥ ೨ ॥

## ವ್ಯಾಖ್ಯಾನಗಳು

### ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಇನ್ನೂ ದತ್ತಸ್ವಾತಂತ್ರ್ಯದ ವಿಚಾರ ಹೇಳತಾರೆ.

ಬ್ರಹ್ಮದೇವನೊಳಗೆ ಐವತ್ತೆರಡು, ವಾಯುದೇವನೊಳು ನಾಲ್ವತ್ತು, ನಾಲ್ವತ್ತಕ್ಕೆ ಮೇಲೆ ಎಂಟು ಅಂದರೆ ನಲ್ವತೆಂಟುಗುಣ ವಾಯುದೇವರಲ್ಲಿ. ಉಮಾಪತಿಯಾದ ರುದ್ರದೇವರಲ್ಲಿ ಇಪ್ಪತ್ತು ಇಡೋವನಾದ. ದೋಷದೂರನಾದ ಶ್ರೀನಾರಾಯಣದೇವರು ಮನ್ಮಥ ಇಂದ್ರ ಇವರುಗಳಲ್ಲಿ ಹತ್ತು, ಇದರ ಮೇಲೆ ಐದು ಅಧಿಕ ಎಂದರೆ ಹದಿನೈದು ಇಂದ್ರಕಾಮರಲ್ಲಿ. ತತ್ವಾಭಿಮಾನಿಗಳೆನಿಸತಕ್ಕ ಮೇಲೆ ಹೇಳಿದವರು ಹೋಗತಾ ಉಳಿದ ಮುಖ್ಯಾಮುಖ್ಯ ತತ್ತ್ವಮಾನಿಗಳಾದ ಶತಸ್ಥರ ಪರ್ಯಂತ ದೇವತೆಗಳು, ಪುಷ್ಕರನ ಪರ್ಯಂತ ಕರ್ಮಜರು ಏತಾದೃಶ ತತ್ತ್ವಾಭಿಮಾನಿಗಳು ಎನಿಸುವ ದೇವತೆಗಳಲ್ಲಿ ಎರಡು ಐದುಗಳು ಎಂದರೆ ಹತ್ತು, ಇಪ್ಪತ್ನಾಲ್ಕುಕೋಟಿ ದೇವಗಂಧರ್ವರ ಪರ್ಯಂತ ಆಜಾನಜದೇವತೆಗಳು, ಆಜಾನಜರಲ್ಲಿ ಸೇರಿದ ನೂರು ಕಡಿಮೆ ನೂರು ಕೋಟಿ ಋಷಿಗಳು, ಮಾನುಷಗಂಧರ್ವರಾರಭ್ಯ ತೃಣಾಂತ ಮುಕ್ತಿಯೋಗ್ಯರು ಏತಾದೃಶ ಅಖಿಳಜೀವರೊಳು ಹತ್ತುಗುಣ ಇಡುವವನಾಗಿದ್ದಾನೆಂದು ತಾತ್ಪರ್ಯ ॥೨॥

### ಭಾವಪ್ರಕಾಶಿಕೆ

ಬ್ರಹ್ಮದೇವರಲ್ಲಿ ೫೨ ಭಾಗಗಳನ್ನೂ, ವಾಯುದೇವರಲ್ಲಿ ೪೮ ಭಾಗಗಳನ್ನೂ ರುದ್ರದೇವರಲ್ಲಿ ೨೦ ಭಾಗಗಳನ್ನೂ, ಇಂದ್ರ ಮತ್ತು ಮನ್ಮಥರಲ್ಲಿ ೧೫, ತತ್ವಾಭಿಮಾನಿ ದೇವತೆಗಳಲ್ಲಿ ೧೦ ಭಾಗಗಳನ್ನೂ, ಮಿಕ್ಕ ಎಲ್ಲಾ ಜೀವರೊಳಗೆ ೧೦ ಭಾಗಗಳನ್ನೂ ಇಟ್ಟನು. ॥೨॥

### ಭಾವದರ್ಪಣ

ಮಿಕ್ಕಾದ ಇನ್ನೂರು ಗುಣದಲ್ಲಿ ಬ್ರಹ್ಮದೇವರಿಗೆ ೫೨, ವಾಯುದೇವರಿಗೆ ೪೮, ರುದ್ರದೇವರಿಗೆ ೨೦, ಇಂದ್ರಕಾಮರಿಗೆ ೧೫, ದಶಕರಣಕ್ಕಭಿಮಾನಿಗಳಾದ ತತ್ವೇಶರಿಗೆ ೧೦, ಸಮಸ್ತ ಜೀವರಿಗೆ ೧೦, ಕಲ್ಯಾದಿ ದೈತ್ಯರಿಗೆ ೪೫, ಎಲ್ಲ ಕೂಡಿ ೪೦೦ ಗುಣಗಳ ವಿಭಾಗ ತಿಳಿದು ನಿತ್ಯಾಚರಣಕ್ಕೆ ತರತಕ್ಕ

ತರತಕ್ಕ ಪುರುಷನಿಗೆ ಸ್ನೇಹಿತನೋಪಾದಿಯಲ್ಲಿ ಸಂರಕ್ಷಿಸುತ್ತಿಪ್ಪನೆಂದು ಭಾವ ತೋರಿಸುತ್ತಾರೆ, ಸತ್ಯಲೋಕಾಧಿಪೇತಿ ॥೨॥

**ಶ್ರೀವ್ಯಾಸದಾಸಸಿದ್ಧಾಂತಕೌಮುದೀ**

ಶ್ರೀರಸ್ತು । ಹರಿಃ ಓಂ ॥
"ಕಾರುಣಿಕ" ಇತಿ "ಸತ್ಯ" ಇತಿ ಚ ॥ ೧ ॥ ೨ ॥

## ಕನ್ನಡಾರ್ಥ

ವಿಷ್ಣು ರಹಸ್ಯದಲ್ಲಿಯೇ ಇನ್ನೊಂದು ಅಧ್ಯಾಯದಲ್ಲಿ "ಆ ಹರಿಯೇ ಜೀವರ ಗತಿಗೋಸುಗ ದೇಹಸಂಬಂಧದಿಂದ ಜೀವರನ್ನು ಸೃಷ್ಟಿಸಿ, ಅವರಲ್ಲಿ ತಾನೇ ಪ್ರವೇಶಿಸಿದನು. ಬ್ರಹ್ಮದೇವನನ್ನೂ, ಪ್ರಾಣದೇವರನ್ನೂ ಹಾಗೂ ಬೇರೆ ತತ್ವಾಭಿಮಾನಿ ದೇವತೆಗಳನ್ನೂ ದೇಹದಲ್ಲಿ ನಿಯೋಜಿಸಿದನು. ಅದರಂತೆ ಕಲಿ ಮುಂತಾದ ದೈತ್ಯರನ್ನೂ ನಿಯಮಿಸಿದನು. ಅವರಲ್ಲಿಯೂ, ಜೀವರಲ್ಲಿಯೂ ಭಾಗಶಃ ಸ್ವತಂತ್ರತ್ವವನ್ನು ಹಂಚಿದನು.

ಸ್ವಾತಂತ್ರ್ಯದ ಸ್ವರೂಪವಿಂತಿರುತ್ತದೆ :–

"ಎಲ್ಲ ಜೀವರಲ್ಲಿ ಯಾವಾಗಲೂ ನಿಯಂತ್ರಕನಾಗಿ ಇದ್ದು, ಹರಿಯು ತನ್ನಲ್ಲಿಯ ೪೦೦ರಲ್ಲಿ ಅರ್ಧ ಸ್ವಾತಂತ್ರ್ಯವನ್ನು ತನ್ನಲ್ಲಿಟ್ಟುಕೊಂಡು, ಮಿಕ್ಕ ಅರ್ಧಭಾಗವನ್ನು ನೂರರಂತೆ ವಿಭಜಿಸಿದನು. ಆ ನೂರರಲ್ಲಿ ೪೮ ಭಾಗ ಗಳನ್ನು ಮುಖ್ಯಪ್ರಾಣನಲ್ಲಿಯೂ, ೫೨ ಭಾಗಗಳನ್ನು ಬ್ರಹ್ಮದೇವರಲ್ಲಿಯೂ ಹಂಚಿದನು. ಉಳಿದ ಕೊನೆಯ ನೂರರ ಭಾಗದಲ್ಲಿ ೧೦ ಭಾಗಗಳನ್ನು ಜೀವರಲ್ಲಿಯೂ, ೨೦ ಭಾಗಗಳನ್ನು ಅಹಂಕಾರಾಭಿಮಾನಿ ರುದ್ರನಲ್ಲಿಯೂ, ೧೫ ಭಾಗಗಳನ್ನು ಇಂದ್ರ-ಕಾಮರಲ್ಲಿಯೂ, ೧೦ ಭಾಗಗಳನ್ನು ತತ್ವಾಭಿಮಾನಿ ದೇವತೆಗಳಲ್ಲಿಯೂ ಹಂಚಿ ಇಟ್ಟನು" ಎಂದು ವಿಷ್ಣುರಹಸ್ಯದಲ್ಲಿ ಹೇಳ ಲಾಗಿರುತ್ತದೆ.

ವಿಷ್ಣುರಹಸ್ಯದ ಈ ಶ್ಲೋಕಾರ್ಥವನ್ನು ಎರಡು ಪದ್ಯಗಳಿಂದ ವಿವರಿಸುತ್ತಾರೆ, "ಕಾರುಣಿಕ" ಹಾಗೂ "ಸತ್ಯ" ಎಂಬುದಾಗಿ. ॥ ೧, ೨ ॥

## ಶ್ರೀಗುರುಹೃದಯಪ್ರಕಾಶಿಕೆ

ಸತ್ಯಲೋಕಾಧಿಪನೆಂಬ ಬ್ರಹ್ಮದೇವರಲ್ಲಿ ಐವತ್ತೆರಡು ಗುಣ ಸ್ವಾತಂತ್ರ್ಯ, ಪವಮಾನನೆಂಬ ವಾಯುದೇವರಲ್ಲಿ ನಾಲ್ವತ್ತೆಂಟು ಗುಣ ಸ್ವಾತಂತ್ರ್ಯ, ಶಿವ ನೆಂಬ ರುದ್ರದೇವರಲ್ಲಿ ಇಪ್ಪತ್ತು ಗುಣ ಸ್ವಾತಂತ್ರ್ಯ, ಚಿತ್ತಜೇಂದ್ರರೆಂಬ ಕಾಮ ಇಂದ್ರದೇವರು ಈ ಇಬ್ಬರಲ್ಲೂ ಹದಿನೈದು ಗುಣ ಸ್ವಾತಂತ್ರ್ಯ, ಸೂರ್ಯಾದಿ ತತ್ತ್ವಾಭಿಮಾನಿ ದೇವತೆಗಳಲ್ಲಿ ಹತ್ತು ಗುಣ ಸ್ವಾತಂತ್ರ್ಯ. ತದಿತರ ಅಖಿಳ ಜೀವರಲ್ಲೂ ಹತ್ತುಗುಣ ಸ್ವಾತಂತ್ರ್ಯ, ನಿರ್ದೋಷನಾದ ದೇವರು ಹಂಚಿಟ್ಟನು ॥ ೨ ॥

# ಸರ್ವವ್ಯಾಖ್ಯಾನಸಾರಸಂಗ್ರಹ

ಉಳಿದ ೨೦೦ ಭಾಗದಲ್ಲಿ ಸ್ವಾತಂತ್ರ್ಯಗುಣದ ಹಂಚಿಕೆಯ ವಿಷಯವನ್ನು ತಿಳಿಸುತ್ತಾರೆ.

ಚತುರ್ಮುಖಬ್ರಹ್ಮದೇವರು ಸತ್ಯಲೋಕಕ್ಕೆ ಪ್ರಭುಗಳು. ಜಗತ್ತಿನ ಸೃಷ್ಟಿ ಎಂಬ ವ್ಯಾಪಾರವನ್ನು ಶ್ರೀಪರಮಾತ್ಮನು ರಜೋಗುಣೋಪಾದನ ಕಾರಣದಿಂದ (ಸೃಷ್ಟಿ – ಎಂದರೆ ಗುಣ ವೈಷಮ್ಯ. ರಜೋಗುಣದ ಧರ್ಮ ಇದು) ಬ್ರಹ್ಮದೇವರಲ್ಲಿ ತಾನೇ ಅಜನಾಮಕನಾಗಿ ಅಂತರ್ಯಾಮಿಯಾಗಿ ನಿಂತು, ಅವರ ದ್ವಾರಾ ಜಗತ್ತಿನ ಸೃಷ್ಟಿ ಮಾಡುವನು. ಇದಕ್ಕಾಗಿ ಸತ್ಯ ಲೋಕಾಧಿಪರಾದ ಬ್ರಹ್ಮದೇವರಲ್ಲಿ ೫೨ ಭಾಗಗಳನ್ನು ಇಟ್ಟನು.

ಸತ್ವಪ್ರಾಚುರ್ಯದೇಹವುಳ್ಳವರೂ, ಅತಿರೋಹಿತವಿಮಲವಿಜ್ಞಾನಿ ಗಳೂ, ಶ್ರೀಹರಿಯ ಪ್ರಥಮಾಂಗಭೂತರೂ ಆದ ಶ್ರೀವಾಯುದೇವರಿಗೆ

ಪವಮಾನ ಎಂದು ಹೆಸರು. ಪವಮಾನರು ಮಹತತ್ತ್ವಾಭಿಮಾನಿಗಳು. ತ್ರಿವಿಧಜೀವರಲ್ಲೂ ತತ್ತ್ವಕಾರ್ಯದ ನಿರ್ವಹಣೆಗಾಗಿ ಪವಮಾನನಾಮಕರಾದ ಶ್ರೀವಾಯುದೇವರಲ್ಲಿ ೪೮ ಭಾಗಗಳನ್ನು ಇಟ್ಟು ಅವರಲ್ಲಿ ಪ್ರವೇಶಿಸಿದನು.

ಮಂಗಳಸ್ವರೂಪರೂ ಮತ್ತು ಶ್ರೀಹರಿಯ ಚರಣಾರವಿಂದಗಳಲ್ಲಿ ತೈಲ ಧಾರೆಯಂತೆ ಮನಸ್ಸನ್ನು ಅನುಗೊಳಿಸುವವರೂ ಅಹಂಕಾರತತ್ತ್ವಾಭಿ ಮಾನಿಗಳೂ ಆದ ರುದ್ರದೇವರಲ್ಲಿ ೨೦ ಭಾಗಗಳನ್ನು ಇಟ್ಟನು.

ಶ್ರೀಹರಿಯ ಮನಸ್ಸಿನಿಂದ ಬ್ರಹ್ಮಾಂಡದ ಒಳಗೆ ಮನ್ಮಥನು ಉದ್ಭವಿಸಿದನು. ಇದರಿಂದ ಮನ್ಮಥನಿಗೆ ಚಿತ್ತಜನೆಂದು ಹೆಸರು. ಶಚೀಪತಿ ಯಾದ ಇಂದ್ರನು ಸ್ವರ್ಗಲೋಕಾಧಿಪತಿಯು. ಇಂದ್ರ ಮತ್ತು ಕಾಮರು ಮನೋಭಿಮಾನಿಗಳು. ಇವರಲ್ಲಿ ೧೫ ಭಾಗಗಳನ್ನು ಇಟ್ಟನು. ಐದಧಿಕದಶ ಭಾಗಗಳು = ೫ + ೧೦ = ೧೫ ಭಾಗಗಳೆಂದರ್ಥ.

ಉಳಿದ ದಶಕರಣಾಭಿಮಾನಿಗಳಲ್ಲಿ ಹಾಗೂ ಭೂತ ತನ್ಮಾತ್ರಾಭಿಮಾನಿ ದೇವತೆಗಳಲ್ಲಿ ೧೦ ಭಾಗಗಳನ್ನು ತತ್ತ್ವಕಾರ್ಯ ನಿರ್ವಹಣೆಗಾಗಿ ಇಟ್ಟನು.

ಪೂರ್ವೋಕ್ತ ದೇವತಾವರ್ಗದಲ್ಲಿ ಅವರವರ ಅಂತರ್ಯಾಮಿ ರೂಪತ್ವೇನ ತನ್ನದೇ ಆದ ಸರ್ವತಂತ್ರಸ್ವಾತಂತ್ರ್ಯಗುಣದಿಂದ, ಪೂರ್ವೋಕ್ತ ಪ್ರಕಾರ ವಿಭಾಗಗೈಸಿ ಬಿಂಬಕ್ರಿಯಾದ್ವಾರಾ ಜಗದ್ವ್ಯಾಪಾರ ಹಾಗೂ ಸರ್ವ ತತ್ತ್ವ ಕಾರ್ಯಗಳನ್ನು ಮಾಡಿ ಮಾಡಿಸುತ್ತಿರುವನು.

ಜಗದ್ವ್ಯಾಪಾರಗಳನ್ನು ದೇವ ದಾನವರಲ್ಲಿ ತಾನು ಬಿಂಬಕ್ರಿಯಾದ್ವಾರಾ ಮಾಡಿ ಮಾಡಿಸುತ್ತಿದ್ದರೂ, ತಜ್ಜನ್ಯವಾದ ಕರ್ಮಫಲಗಳಿಂದ ನಿರ್ಲಿಪ್ತನೂ ಆಗಿರುವುದರಿಂದ ಸರ್ವತಂತ್ರಸ್ವತಂತ್ರನಾದ ಆ ಜಗತ್ಪತಿಗೆ ನಿರವದ್ಯನೆಂದು ಹೆಸರು.

೧೪೫ ಭಾಗಗಳ ಹಂಚಿಕೆಯ ಕ್ರಮ :-

ಸತ್ಯಲೋಕಾಧಿಪತಿಯಾದ ಬ್ರಹ್ಮದೇವರಲ್ಲಿ (ಸರಸ್ವತೀಗ್ರಾಹ್ಯ)
= ೫೨ ಭಾಗಗಳು

ಪವಮಾನ ನಾಮಕರಾದ ಶ್ರೀವಾಯುದೇವರಲ್ಲಿ (ಭಾರತೀ ಗ್ರಾಹ್ಯ)
= ೪೮ ಭಾಗಗಳು

ಶಿವನಾಮಕರಾದ ರುದ್ರದೇವರಲ್ಲಿ (ಪಾರ್ವತೀ ಗ್ರಾಹ್ಯ) = ೨೦ ಭಾಗಗಳು

(ಇದರಿಂದ ಗರುಡ ಶೇಷರೂ ತತ್ಪತ್ನೀಯರೂ ಗ್ರಾಹ್ಯ)
ಮನೋಭಿಮಾನಿಗಳಾದ ಇಂದ್ರ ಮತ್ತು ಕಾಮರಲ್ಲಿ
(ಶಚೀ ಮತ್ತು ರತೀಗ್ರಾಹ್ಯ) = ೧೫ ಭಾಗಗಳು

ಉಳಿದ ತತ್ತ್ವಾಭಿಮಾನಿದೇವತೆಗಳಲ್ಲಿ ಹಾಗೂ ಅವಶಿಷ್ಟ
ಸಕಲ ದೇವತೆಗಳಲ್ಲಿ = ೧೦ ಭಾಗಗಳು

ಒಟ್ಟು = ೧೪೫ ಭಾಗಗಳು

ಇದರಿಂದ ಜೀವೋತ್ತಮರಾದ ಶ್ರೀಬ್ರಹ್ಮ-ವಾಯುಗಳ ಸ್ವರೂಪಶಕ್ತಿ ಎಷ್ಟೆಂದು ಪರಿಗಣಿಸಬಹುದು. ಅವರ ಪ್ರೇರಣೆ ಉಳಿದ ದೇವತೆಗಳಿಗೆಲ್ಲಾ. ॥೨॥

## ಪದ್ಯ ೩

ಮೂಲ :-

ಕಲಿಮೊದಲುಗೊಂಡಖಿಳ ದಾನವ ।
ರೊಳಗೆ ನಾಲ್ವತ್ತೈದು ಈ ಪರಿ ।
ತಿಳಿದುಪಾಸನೆ ಮಾಡು ಮರೆಯದೆ ಪರಮಭಕುತಿಯಲಿ ।
ಇಳೆಯೊಳಗೆ ಸಂಚರಿಸು ಲಕುಮೀ ।
ನಿಲಯನಾನಾಳೆಂದು ಸರ್ವ ।
ಸ್ಥಳಗಳಲಿ ಸಂತೈಸುತಿಪ್ಪನು ಗೆಳೆಯನಂದದಲಿ ॥ ॥೩॥

**ಅವತರಣಿಕೆ :-**

ಕೊನೆಯ ೧೦೦ ಭಾಗದಲ್ಲಿ ವಿಭಾಗ ಮಾಡಿ, ಕಲಿ ಮೊದಲಾದ ಸಕಲ ದೈತ್ಯರಲ್ಲೂ ಮತ್ತು ಮಧ್ಯಮಜೀವರಾದ ರಾಜಸರಲ್ಲಿ ಇಟ್ಟಿರುವ ದತ್ತ ಸ್ವಾತಂತ್ರ್ಯದ ವಿವರಗಳನ್ನು ತಿಳಿಸುತ್ತಾರೆ.

**ಪ್ರತಿಪದಾರ್ಥ :-**

**ಕಲಿಮೊದಲುಗೊಂಡು** = ನೀಚೋತ್ತಮನಾದ ಪರಮ ತಮೋಯೋಗ್ಯ ಜೀವಿಯಾದ ಕಲಿಯಿಂದ ಪ್ರಾರಂಭಿಸಿ, ನಿತ್ಯಸಂಸಾರಿಜೀವವರ್ಗದಲ್ಲಿ ಶ್ರೇಷ್ಟನಾದ ಪುರಂಜನ ಪರ್ಯಂತ ತಮೋಯೋಗ್ಯಜೀವರು ಮತ್ತು ರಾಜಸಜೀವರಲ್ಲಿ, **ಅಖಿಳದಾನವರೊಳಗೆ** = ಸಮಸ್ತ ತೃಣಾಂತ ದೈತ್ಯರಲ್ಲಿ, **ನಾಲ್ವತ್ತೈದು** = ೪೫ ಭಾಗಗಳು (ಅವಶಿಷ್ಟಾಂಶ) ಕಲ್ಯಾದಿ ತೃಣಾಂತ ತಾಮಸರಲ್ಲಿ, ಪುರಂಜನಾದಿ ತೃಣಾಂತ ರಾಜಸರಲ್ಲಿ, **ಈಪರಿ** = ಈ ಪ್ರಕಾರ ಇಟ್ಟಿದ್ದಾನೆಂದು, **ತಿಳಿದು** = ಶಾಸ್ತ್ರ ದ್ವಾರಾ, ಗುರೂಪದೇಶ ದ್ವಾರಾ ಅರಿತು, ಮರೆಯದೆ, (ಸ್ಮೃತಿಪೂರ್ವಕವಾಗಿ), **ಪರಮಭಕುತಿಯಲಿ** = ಅತ್ಯಂತ ಭಕ್ತಿಪೂರ್ವಕವಾಗಿ, **ಉಪಾಸನೆ ಮಾಡು** = ಧ್ಯಾನಕ್ರಮದಿಂದ ಉಪಾಸಿಸು, **ಲಕುಮೀ ನಿಲಯನ** = ರಮಾದೇವಿಗೆ ಆಶ್ರಯಭೂತನಾದ ಶ್ರೀಪರಮಾತ್ಮನ (ಶ್ರೀಲಕ್ಷ್ಮೀವಕ್ಷನಾದ), **ಅನಾಳೆಂದು** = ಸೇವಕರ ಸೇವಕನೆಂದು, **ಇಳೆಯೊಳಗೆ** = ಈ ಭೂಮಿಯ ಮೇಲೆ, **ಸಂಚರಿಸುತಿರು** = ನಿರ್ಭಯನಾಗಿ ಅಡ್ಡಾಡುತ್ತಿರು, **ಸರ್ವಸ್ಥಳಗಳಲಿ** = ಸಮಸ್ತ ಕಾಲ ದೇಶಾದಿಗಳಲ್ಲಿ, **ಗೆಳೆಯನಂದದಲಿ** = ನಿನ್ನ ಪರಮಾಪ್ತ ಮಿತ್ರನಂತೆ, **ಸಂತೈಸುತಿಪ್ಪನು** = ದೈತ್ಯರಿಂದ ಬರುವ ಆಪತ್ತುಗಳನ್ನು ಪರಿಹರಿಸಿ, ಆಪದ್ಬಾಂಧವನಾಗಿ ಸದಾ ಸಂರಕ್ಷಿಸುತ್ತಿರುವನು ॥ ೩ ॥

# ವ್ಯಾಖ್ಯಾನಗಳು

## ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಇನ್ನೂ ದತ್ತಸ್ವಾತಂತ್ರ್ಯ ವಿಭಾಗವೇ ಹೇಳತಾರೆ.

ಮುಕ್ತಿಯೋಗ್ಯರು ಉತ್ತಮರು. ಪುರಂಜನ ಎಂಬುವ ನಿತ್ಯಸಂಸಾರಿಗಳಲ್ಲಿ ಶ್ರೇಷ್ಠನು. ಈ ಗಣದ ತೃಣಜೀವಾಪೇಕ್ಷಯಾ ನೀಚನು. ತಮೋಯೋಗ್ಯರು ಅಧಮರು. ಕಲಿ ಈ ಗಣದ ತೃಣಜೀವಾಪೇಕ್ಷಯಾ ನೀಚನು. ತಮೋಯೋಗ್ಯರಲ್ಲಿ ಶ್ರೇಷ್ಠನಾದಂಥಾ ಕಲಿಯೇ ಆರಂಭ ಮಾಡಿ, ತೃಣಾಂತದವರೆಗೂ ಭಗವದ್ದ್ವೇಷಿಗಳಾದ ದೈತ್ಯರು, ಸಮಸ್ತರಾದ ನಿತ್ಯಸಂಸಾರಿಗಳು, ತಮೋಯೋಗ್ಯರು ಈ ಉಭಯರೂ ಪರಮಾತ್ಮನ ದ್ವೇಷಿಗಳೇವೆ. ದೈತ್ಯರು ಪೂರ್ಣದ್ವೇಷಿಗಳು, ನಿತ್ಯಸಂಸಾರಿಗಳು ಮಿಶ್ರದ್ವೇಷಿಗಳು, ಅಂತೂ ಈ ಉಭಯರಲ್ಲಿ ಕಲಿ ಆರಂಭ ಮಾಡಿ ತೃಣಾಂತವರೆಗೂ, ಪುರಂಜನ ಆರಂಭ ಮಾಡಿ ತೃಣಾಂತವರೆಗೂ ಈ ಯಾವತ್ತರಲ್ಲೂ ನಾಲ್ವತ್ತೈದು ಗುಣ ಇಡೋವನಾದ, ಅಂತು ಮೊತ್ತ ವಿವರ, ನಿತ್ಯಸಂಸಾರಿಗಳ ವಿಭಾಗ ವಿಚಾರ ನಾಲ್ಕನೇ ಶ್ಲೋಕದಲ್ಲಿ ಅದೆ.

ದೇವರು ತನ್ನ ಸ್ವಾಖ್ಯಸ್ವಾತಂತ್ರ್ಯ ನಾನೂರುಗುಣ ಜೀವರಲ್ಲಿ ಇಡೋ ಕ್ರಮ.

| | |
|---|---|
| ದೇವರು ತನ್ನಲ್ಲಿ ಇಟ್ಟುಕೊಂಡಿರೋದು | ೧೩೨-೩/೪ |
| ಸೃಷ್ಟ್ಯಾದಿ ಕಾರ್ಯಗಳಿಗೆ ಕಾರಣವಾದದ್ದು | ೧೨೯-೩/೪ |
| ಸ್ವಗತ ಸ್ವಾತಂತ್ರ್ಯ ವಿಭಾಗಕ್ಕೆ | ೧ |
| ಸರ್ವ ಸ್ವಾತಂತ್ರ್ಯ ವಿಭಾಗಕ್ಕೆ | ೧ |
| ರಮಾದೇವಿಯರ ಕೂಡ ಅಂಗ ಸಂಗ ಕಾರ್ಯಕ್ಕೆ | ೧ |
| ಮೊತ್ತ | ೧೩೨-೩/೪ |

ರಮಾದೇವಿಯರಲ್ಲಿ ಸೃಷ್ಟಿಗೆ ಕಾರಣವಾದದ್ದು ೬೬-೧/೪
ರಮಾದೇವಿಯರು ಪರಮಾತ್ಮನಾದ ತನ್ನ ಅಂಗ ಸಂಗ
ವ್ಯಾಪಾರ ನಡಸತಕ್ಕ ಕಾರ್ಯಕ್ಕೆ ೧

ಒಟ್ಟು ೬೭-೧/೪

ಬ್ರಹ್ಮದೇವರಲ್ಲಿ ಸೃಷ್ಟ್ಯಾದಿ ಕಾರ್ಯಕ್ಕಾಗಿ ೫೭
(ಇದರ ಅಂಶವೇ ಸರಸ್ವತೀ ದೇವಿಯರಲ್ಲಿ)

ವಾಯುದೇವರಲ್ಲಿ ಇಟ್ಟದ್ದು ೪೮

ಬ್ರಹ್ಮದೇವರಲ್ಲಿ ೫೭ ಆದರೂ, ಬ್ರಹ್ಮದೇವರಿಗೂ ವಾಯುದೇವರಿಗೂ ಸಾಧನನ್ಯೂನಾಧಿಕ್ಯದಿಂದ ಬ್ರಹ್ಮದೇವರಕಿಂತಲೂ ವಾಯುದೇವರು ಪದ ಪ್ರಯುಕ್ತ ಕಿಂಚಿತ್ ಅಸ್ಪಷ್ಟದಿಂದ ಬ್ರಹ್ಮದೇವರ ೫೭ ಗುಣವು ವಾಯು ದೇವರ ೪೮ ಗುಣಕ್ಕೆ ಸಮವಾಗುತ್ತದೆ, ಆದ್ದರಿಂದ ೪೮ ಎಂತ ಪ್ರಯೋಗ. ಇದರ ಅಂಶವೇ ಭಾರತೀದೇವಿಯರಲ್ಲಿ, ಯವತ್ತೂ ಋಜುಗಳಿಗೆ, ಅವರ ಪತ್ನೇರಿಗೆ ವಾಯುದೇವರಲ್ಲಿ ಇಟ್ಟ ಗುಣದೊಳಗೆ ಅಂಶ ವಿಭಾಗ ಮಾಡಿ ತಾರತಮ್ಯಾನುಸಾರ ಇಡೋವನಾಗಿದ್ದಾನೆ.

ರುದ್ರಗಣದಲ್ಲಿ ೨೦

ರುದ್ರಶಬ್ದದಿಂದ ಶೇಷದೇವರೂ ಗ್ರಾಹ್ಯ. ಶೇಷಗಣ ಗರುಡಗಣ ಇವರಲ್ಲಿ ೨೦. ಈ ಗಣದವರ ಪತ್ನೇರು ಸಹಾ ಗ್ರಾಹ್ಯ. ಯಾವತ್ತೂ ಇವರಲ್ಲಿ ಇಪ್ಪತ್ತರ ಅಂಶವೇ ಇಡೋವನಾಗಿದ್ದಾನೆ. ತಾರತಮ್ಯಾನುಸಾರ ಸಾಧನೆ, ಅವಶಿಷ್ಟದಿಂದ ಸ್ಪಷ್ಟತ್ವದಲ್ಲಿ ಭೇದ. ಇಂದ್ರಕಾಮರ ಗಣದಲ್ಲಿ ವಿಭಾಗ ಪೂರ್ವೋಕ್ತ ಪ್ರಕಾರವೇ ಸಮನ್ವಯವು ೧೫

ತತ್ತ್ವದೇವತೆಗಳು ೧೦

ಅವರ ಪತ್ನಿಯರ ಸಹ ಎಂದರೆ, ಮ್ಯಾಲೆ ಹೇಳಿದ ಬ್ರಹ್ಮಾದಿಗಳ ಸಹಿತ ಒಂಬತ್ತು ಕೋಟಿ ತತ್ತ್ವದೇವತೆಗಳು. ಅವರಲ್ಲಿ ಉಕ್ತರು ಹೋಗತಾ ಉಳದವರಲ್ಲಿ ಹತ್ತು. ಈ ಹತ್ತರಲ್ಲೇ ಅಂಶವಿಭಾಗ ಮಾಡಿ ಇಡೋವ ನಾಗಿದ್ದಾನೆ. ಮುಕ್ತಿಯೋಗ್ಯರಲ್ಲಿ ೧೦

ಎಂದರೆ ೨೪ ಕೋಟಿ ಆಜಾನಜರು, ಅವರಲ್ಲಿ ಸೇರಿದ ನೂರು ಕಡಿಮೆ ನೂರು ಕೋಟಿ ಋಷಿಗಳು, ಮಾನುಷಗಂಧರ್ವರಾರಭ್ಯ ತೃಣಾಂತ ಏತಾದೃಶರಾದ ಮುಕ್ತಿಯೋಗ್ಯರಲ್ಲಿ ಈ ಹತ್ತರಲ್ಲೇ ಅಂಶವಿಭಾಗ ಮಾಡಿ ಇಡೋವನಾಗಿದ್ದಾನೆ.

ಕಲ್ಯಾದಿ ನಿತ್ಯಸಂಸಾರಿಗಳಲ್ಲಿ ೪೫

ಇದರನ್ನ ಅಂಶ ವಿಭಾಗ ಮಾಡಿ ಇಡೋವನಾಗಿದ್ದಾನೆ. ಒಟ್ಟು ೪೦೦

ಇದರಲ್ಲಿ ಸಂಪೂರ್ಣಾಂಶಕ್ಕೆ ಅಧಿಕಾರಿಗಳು ಕೆಲವರು, ಒಂದು ಗುಣಾಂಶಕ್ಕೆ ಅಧಿಕಾರಿಗಳು ಕೆಲವರು, ಎರಡಕ್ಕೆ ಅಧಿಕಾರಿಗಳು ಕೆಲವರು. ಈ ಪ್ರಕಾರ ಜೀವರ ಸ್ವರೂಪಗತ ಅನಾದಿಸ್ವಾತಂತ್ರ್ಯ ತಾರತಮ್ಯಾನುಸಾರ ಅಂಶ ವಿಭಾಗ ಮಾಡಿ ಇಡೋವನಾಗಿದ್ದಾನೆ. ಅದರಲ್ಲಿ ಸ್ವಪ್ಟತ್ವ ತಾರತಮ್ಯವು ಇರೋದಾಗಿ ಅದೆ. ಇದರ ವಿವರ ಶಕ್ಯವಲ್ಲ. ಅಂತು ಆಯಾ ಜೀವರ ಸ್ವರೂಪವಿವಕ್ಷಯಾ ದೇವರ ಸಹಿತ ೪೦೦ ಆಗತದೆ, ಅಧಿಕ ಆಗೋದಿಲ್ಲ. ೪೦೦ ವಿವಕ್ಷಯಾ ಎರಡು ಪ್ರಕಾರವು. ಪೂರ್ವೋಕ್ತ ಸ್ವಾತಂತ್ರ್ಯ ಸರ್ವಶಕ್ತಿ ಯುಳ್ಳದ್ದಾದ ಕಾಲಕ್ಕೂ ಅಧಿಷ್ಠಾನ ಯೋಗ್ಯತಾನುಸಾರ ಕಾರ್ಯ ನಡೆಸುತ್ತದೆ. ಈ ಪ್ರಕಾರ ತಿಳಿದು, ನಾನು ಅಸ್ವತಂತ್ರನಾದವ, ಈಶಾಧೀನನಾದವ, ಪ್ರತಿ ಕ್ಷಣದಲ್ಲಿ ಬಿಂಬಕ್ರಿಯಾದ್ವಾರಾ ಸರ್ವಕಾರ್ಯ ಮಾಡತಾನೆ ಎಂಬುವದು ನಿನ್ನಲ್ಲೇನು, ಅನ್ಯವಾದ ಚರಾಚರದಲ್ಲೇನು ಮರಿಯಧಾಂಗೆ ಅನುಸಂಧಾನ ಮಾಡತಾ ಅತ್ಯಂತ ಭಕ್ತಿಯಿಂದ ನಿನ್ನ ಹೃದಯಾಕಾಶದಲ್ಲಿ ಪರಮಾತ್ಮನ ಧ್ಯಾನೋಪಾಸನ ಮಾಡು. ರಮಾದೇವಿಯರಿಗೆ ಆಶ್ರಯಭೂತನಾದ ಪರಮಾತ್ಮನ್ನ ಸರ್ವಸ್ಥಳಗಳಲ್ಲಿ ಚಿಂತಿಸುತ್ತಾ (ಈ ಪರಮಾತ್ಮ) ನಮ್ಮನ್ನು

ಸಂರಕ್ಷಿಸಲಿ ಎಂದು ಪ್ರಾರ್ಥಿಸುತ್ತಾ, ಈ ಭರತಖಂಡ ಭೂಪ್ರದೇಶದಲ್ಲಿ ಸಂಚಾರ ಮಾಡೋವನಾಗು. ಈ ಪ್ರಕಾರ ಸಂಚರಿಸಿದರೆ ಸರ್ವತ್ರಗತನಾದ ಶ್ರೀಪರಮಾತ್ಮ ಆಯಾ ಸ್ಥಳಗಳಲ್ಲಿ ನಿನಗೆ ಬರತಕ್ಕ ಆಪತ್ತು ದೋಷಗಳ ಆಪತ್ಕಾಲದ ಸ್ನೇಹಿತನಂತೆ ಸರ್ವಪ್ರದೇಶದಲ್ಲಿ ರಕ್ಷಿಸತಾ ಇರತಾನೆ. ಇದರಲ್ಲಿ ನಾನಾಪ್ರಕಾರ ವಿಚಾರಗಳು ಇರೋವಾಗಿ ಅವೆ. ಮುಖ್ಯ, ಸ್ವಾತಂತ್ರ್ಯ ವಿಭಾಗ ಮಾಡಿ ಇಟ್ಟಿದ್ದಕ್ಕೆ ಪರಮಾತ್ಮ ಪೂರ್ಣಸ್ವತಂತ್ರ, ಜೀವರು ಅಸ್ವತಂತ್ರರೆಂಬ ಮುಖ್ಯತತ್ತ್ವಗಳು ಎರಡೂ ಅವಶ್ಯ ತಿಳಿಯಬೇಕು ಎಂತ ತಾತ್ಪರ್ಯ. ॥ ೩ ॥

## ಭಾವಪ್ರಕಾಶಿಕೆ

ಕಲಿ ಮೊದಲಾದ ದಾನವರಲ್ಲಿ ೪೫ ಭಾಗಗಳನ್ನು ಇಟ್ಟಿರುವನು. ಇದರ ಹಿಂದಿನ ಪದ್ಯದಲ್ಲಿ ಹೇಳಿದ ಪ್ರಕಾರ ಬ್ರಹ್ಮದೇವರು ಮೊದಲು ಎಲ್ಲಾ ಜೀವರಲ್ಲೂ ಇಟ್ಟ ಸ್ವಾತಂತ್ರ್ಯ ಭಾಗಗಳು ೧೫೫. ಈ ಪದ್ಯದಲ್ಲಿ ಹೇಳಿದ ಪ್ರಕಾರ ಕಲಿ ಮೊದಲಾದವರಲ್ಲಿ ೪೫ ಭಾಗಗಳು ಅಂತು ೨೦೦ ಭಾಗಗಳು. ಹೀಗೆ ಪರಮಾತ್ಮನೊಳಗೂ ಜೀವರೊಳಗೂ ಒಟ್ಟು ಸೇರಿಸಿ (೪೦೦) ನಾನೂರು ಭಾಗಗಳೆಂದು ತಿಳಿದು, ಮರೆಯದೆ ಪರಮಭಕ್ತಿಯಿಂದ ಉಪಾಸನೆ ಮಾಡು. ಪರಮಾತ್ಮನು ನನಗೆ ಸ್ವಾಮಿ, ನಾನು ಅವನಿಗೆ ಭೃತ್ಯನು ಎಂದು ಚಿಂತಿಸುತ್ತಾ ಭೂಮಿಯಲ್ಲಿ ಸಂಚರಿಸು. ಶ್ರೀಹರಿಯು ಸ್ನೇಹಿತನಂತೆ ನಿನ್ನನ್ನು ರಕ್ಷಿಸುವನು. ಈ ವಿಷಯದಲ್ಲಿ ವಿಷ್ಣುರಹಸ್ಯ ೨೧ನೆಯ ಅಧ್ಯಾಯದಲ್ಲಿ "ಸ್ವಾಸ್ಮಿನ್ನರ್ಧ ಸ್ವತಂತ್ರತ್ವಂ ಸಮಾಧಾಯ ತದರ್ಧಕಂ ॥ ವಿಭಜ್ಯ ಶತಧಾ ಭೂಯೋಽಷ್ಟಾ ಚತ್ವಾರಿಂಶದಂಶಕಾನ್ ॥ ೩೨ ॥ ಪ್ರಾಣೇ ಸ್ವಾತಂತ್ರ್ಯಮಾಧಾಯ ದ್ವಿಪಂಚಾಶತ್ತು ವೇಧಸಿ ॥ ಪಾದಂ ಚತುರ್ಥಂ ಶತಧಾ ವಿಭಜ್ಯ ದಶಭಾಗಕಾನ್ ॥ ೩೩ ॥ ಜೀವೇ ಸ್ವಾತಂತ್ರ್ಯಮಾಧಾಯ ತತೋ ವಿಂಶತಿ ಭಾಗಕಾನ್ ॥ ಅಹಂಕಾರಾತ್ಮಕೇ ರುದ್ರೇ ತಥಾ ಬುದ್ಧೌ ನಿಧಾಯ ಚ ॥ ॥ ೩೪ ॥ ಮನೋದೇವೇ ತತಃ ಶಕ್ರೇ ಭಾಗಾನ್ಪಂಚದಶೈವ ತು ॥ ತತ್ವದೇವೇ ದಶಾಂಶಾಶ್ಚ ಸ್ವಾತಂತ್ರ್ಯಂ ನಿದಧೇ ಹರಿಃ ॥ ೩೫ ॥ ಪಂಚಚತ್ವಾರಿಂಶದಂಶಾನ್ಕಲಿ ಮುಖ್ಯೇಷ್ವಧಾತ್ಸ್ವಯಂ ॥

ವಿಷ್ಣೋಃ ಪರೋ ನ ಚಾನ್ಯೋಽಸ್ತಿ ಸ್ವತಂತ್ರಃ ಕೋಽಪಿ ಚೇತನಃ ॥೩೬॥" ಇತ್ಯಾದಿ ವಾಕ್ಯಗಳು ಮೇಲೆ ಹೇಳಿದ ವಾಕ್ಯಗಳಿಗೆ ಆಧಾರವಾಗಿರುವವು. ಪದ್ಯಾರ್ಥವೇ ಶ್ಲೋಕಗಳಲ್ಲೂ ಇರುವುದರಿಂದ ಇದರರ್ಥವನ್ನು ಬೇರೆ ಬರೆಯುವ ಅವಶ್ಯಕ ವಿಲ್ಲ. ದಾಸರಾಯರು ೨೦೦ ಭಾಗಗಳಲ್ಲಿ ಲಕ್ಷ್ಮೀದೇವಿಯರಿಗೆ ೬೭। ಭಾಗ ಗಳನ್ನು ಕೊಟ್ಟು ತಾನು ೧೩೨।।। ಭಾಗಗಳನ್ನು ಇಟ್ಟುಕೊಂಡನೆಂದು ಹೇಳಿರು ವರು. ೬೭।, ೧೩೨।।। ಎಂಬ ಸಂಖ್ಯೆಗಳಲ್ಲಿರುವ ಕಾಲು, ಮುಕ್ಕಾಲು. ಎಂಬ ವಿಭಾಗಗಳೇನು ಎಂಬುದು ವಿಷ್ಣುರಹಸ್ಯದ ವಾಕ್ಯದಿಂದ ಪರಿಹಾರ ವಾಗುವದು. ಪರಮಾತ್ಮನು ೪೦೦ ಭಾಗ ಸ್ವಾತಂತ್ರ್ಯವನ್ನು ತೆಗೆದು ಅದರಲ್ಲಿ ಅರ್ಧವನ್ನು ತಾನು ಇಟ್ಟುಕೊಂಡು ಉಳಿದ ಅರ್ಧವಾದ ಒಂದು ನೂರರಲ್ಲಿ ಬ್ರಹ್ಮದೇವರಿಗೆ ೫೨, ವಾಯುದೇವರಿಗೆ ೪೮ ಹೀಗೆ ಇಬ್ಬರಿಗೆ ಕೊಟ್ಟನು. ಉಳಿದ ನೂರನ್ನು ಮೇಲಿನ ಪದ್ಯಾರ್ಥಗಳಲ್ಲಿ ಹೇಳಿದಂತೆ ರುದ್ರ ದೇವರಿಗೆ ೨೦, ಇಂದ್ರಕಾಮರಿಗೆ ೧೫, ಸಕಲ ಜೀವರಿಗೆ ೧೦, ಕಲ್ಯಾದಿಗಳಿಗೆ ೪೫, ಹೀಗೆ ೧೦೦ ಭಾಗಗಳನ್ನು ಕೊಟ್ಟನು. ತಾನು ಇಟ್ಟುಕೊಂಡಿದ್ದ ಅರ್ಧ ವಾದ ೨೦೦ ಭಾಗಗಳನ್ನು ಮೂರುಭಾಗ ಮಾಡಿದನು. "ತೌ ವಿಧಾಯ ತ್ರಿಧತ್ರ್ಯಂಶಂ ಮಾಯಯ್ಯೈ ಪ್ರದದೌ ಸ್ವಯಂ। ಶೇಷಭಾಗದ್ವಯಂ ಸ್ವಸ್ಮಿಸ್ಸ್ಥಾಪಯತ್ಸ ನಿಜೇಚ್ಛಯಾ" ಎಂಬ ವಾಕ್ಯದಿಂದ ಆ ಎರಡು ನೂರನ್ನು ಮೂರು ಭಾಗಗಳಾಗಿ ಮಾಡಿದರೆ ಭಾಗ ಒಂದಕ್ಕೆ ೬೬ ರಂತೆ ಮೂರು ಭಾಗ ಗಳಿಗೆ ೧೯೮ ಭಾಗಗಳಾದವು. ಮೂರರಲ್ಲಿ ಒಂದು ಭಾಗವನ್ನು ಲಕ್ಷ್ಮೀ ದೇವಿಯರಿಗೆ ಕೊಟ್ಟನು. ಅಂದರೆ ೬೬ ಭಾಗಗಳನ್ನು ಲಕ್ಷ್ಮೀದೇವಿಯರಿಗೆ ಇತ್ತನು. ಉಳಿದ ಎರಡು ಭಾಗಗಳನ್ನು ಅಂದರೆ ೧೩೨ ಭಾಗಗಳನ್ನು ತಾನು ಇಟ್ಟುಕೊಂಡನು. ಆದರೂ ೨೦೦ರಲ್ಲಿ ೧೯೮ ಹೋದರೆ ಇನ್ನೂ ೨ ಭಾಗ ಗಳು ಉಳಿದವು. ಆ ಎರಡರಲ್ಲಿ ತನ್ನೊಂದಿಗೆ ಸುಖಾನುಭವದ ಸ್ವಾತಂತ್ರ್ಯ ಕ್ಕಾಗಿ ಒಂದೂಕಾಲು ಭಾಗವನ್ನು ಲಕ್ಷ್ಮೀದೇವಿಯರಿಗೆ ಕೊಟ್ಟು ಉಳಿದ ಮುಕ್ಕಾಲು ಭಾಗವನ್ನು ತಾನೇ ಇಟ್ಟುಕೊಂಡನು. ಆದ್ದರಿಂದ ಲಕ್ಷ್ಮೀದೇವಿ ಯರಲ್ಲಿ ಒಟ್ಟು ೬೭। ಭಾಗವೂ, ಪರಮಾತ್ಮನಲ್ಲಿ ೧೩೨।।। ಭಾಗಗಳೂ ಆದ ವೆಂದು ತಾತ್ಪರ್ಯ. ॥ ೩ ॥

**ಭಾವದರ್ಪಣ**

ಕಲಿ ಮೊದಲು ಇತಿ. ಈಗ ಸ್ವಾತಂತ್ರ್ಯ ಕೊಟ್ಟ ವಿಷಯದಲ್ಲಿ ಪ್ರಮಾಣ. ತದುಕ್ತಂ ವಿಷ್ಣುರಹಸ್ಯೇ "ಸ್ವಸ್ಮಿನ್ನರ್ಧಂ ಸ್ವತಂತ್ರತ್ವಂ ಸಮಾಧಾಯತ ದರ್ಧಕಂ । ವಿಭಜ್ಯಶತಧಾ ಭೂಯೋಽಷ್ಟಾಚತ್ವಾರಿಂಶದಂಶಕಾನ್ । ಪ್ರಾಣೇ ಸ್ವಾತಂತ್ರ್ಯಮಾಧಾಯ ದ್ವಿಪಂಚಾಶತ್ತು ವೇಧಸಿ। ಪಾದಂ ಚತುರ್ಥಂ ಶತಧಾ ವಿಭಜ್ಯ ದಶಭಾಗಕಾನ್ । ಜೀವೇ ಸ್ವಾತಂತ್ರ್ಯಮಾಧಾಯ ತತೋ ವಿಂಶತಿ ಭಾಗಕಾನ್ । ಅಹಂಕಾರಾತ್ಮಕೇ ರುದ್ರೇ ತಥಾ ಬುದ್ಧೌ ನಿಧಾಯ ಚ। ಮನೋದೇವೇ ತತಃ ಶಕ್ರೇ ಭಾಗಾನ್ಪಂಚದಶೈವ ತು। ತತ್ವದೇವೇ ದಶಾಂಶಾಶ್ಚ ಸ್ವಾತಂತ್ರ್ಯಂ ನಿದಧೇ ಹರಿಃ। ಪಂಚಚತ್ವಾರ್ವಿಂಶ ದಂಶಾನ್ ಕಲಿಮುಖ್ಯಷ್ವಧಾತ್ಸ್ವಯಂ। ತಾನ್ವಿಧಾಯ ತ್ರಿಧಾತ್ರ್ಯಂಶಂ ಮಾಯಾಯೈ ಪ್ರದದೌ ಸ್ವಯಂ। ಶೇಷಭಾಗದ್ವಯಂ ಸ್ವಸ್ಮಿನ್ ಸ್ಥಾಪಯೇತ್ಸ ನಿಜೇಚ್ಛಯೇತಿ" ॥ ೩॥.

**ಶ್ರೀವ್ಯಾಸದಾಸಸಿದ್ಧಾಂತಕೌಮುದೀ**

" ಪಂಚಚತ್ವಾರಿಂಶದಂಶಾನ್ ಕಲಿಮುಖ್ಯೇಷ್ವಧಾತ್ ಸ್ವಯಮ್ " ಇತ್ಯಸ್ಯ ಅರ್ಥಂ ಆಹ "ಕಲಿ" ಇತಿ. ॥ ೩ ॥

**ಕನ್ನಡಾರ್ಥ**

"೪೫ ಭಾಗಗಳನ್ನು ಕಲಿ ಮುಂತಾದ ದೈತ್ಯರಲ್ಲಿ ಹಂಚಿ ಇಟ್ಟನು" ಎಂದು ಹೇಳುವ ಶ್ಲೋಕಾರ್ಥವನ್ನು ನಿರೂಪಿಸುತ್ತಾರೆ "ಕಲಿಮೊದಲು" ಎಂಬ ಪದ್ಯದಿಂದ. ॥ ೩ ॥

**ಶ್ರೀಗುರುಹೃದಯಪ್ರಕಾಶಿಕೆ**

ಕಲಿ ಮೊದಲಾದ ಸಕಲ ಅಸುರರಲ್ಲೂ ನಲತ್ತೈದು ಗುಣ ಸ್ವಾತಂತ್ರ್ಯ ಇಟ್ಟಿದ್ದಾನೆಂದು ತಿಳಿದು, ದೇವರ ಸ್ವಾತಂತ್ರ್ಯಗುಣಗಳನ್ನು ಮರೆಯದೆ ಪರಮ

ಭಕ್ತಿಯಿಂದ ಉಪಾಸನೆ ಮಾಡು ಎಂದರೆ, ದೇವರ ಸ್ವಾತಂತ್ರ್ಯಶಕ್ತಿಯೇ ಹೀಗೆ ಎಲ್ಲರಲ್ಲಿಯೂ ಇದ್ದು, ಅವರವರ ಸ್ವಯೋಗ್ಯಶಕ್ತಿ ವ್ಯಕ್ತಿ ಮಾಡಿ. ಪುಣ್ಯಪಾಪಗಳಿಗೆ ಜೀವರನ್ನು ಭಾಗಿಗಳನ್ನಾಗಿ ಮಾಡುತ್ತದೆಂದು ಭಾವಿಸುವುದೆಂದರ್ಥ. ಇಳೆ ಎಂಬ ಭೂಮಿಯಲ್ಲಿ ಸಂಚರಿಸುತ್ತಾ ಲಕ್ಷ್ಮೀ ನಿಲಯನಾದ ದೇವರ ಭೃತ್ಯ ನಾನೆಂದು ಭಾವಿಸುವವರನ್ನು, ಗೆಳೆಯನೆಂಬ ಸ್ನೇಹಿತನಂತೆ ದೇವರು ಸರ್ವಸ್ಥಳದಲ್ಲಿಯೂ ಸಂರಕ್ಷಿಸುವನು. ॥ ೩ ॥

## ಸರ್ವವ್ಯಾಖ್ಯಾನಸಾರಸಂಗ್ರಹ

ಕಲಿ ಮುಂತಾದ ತಮೋಯೋಗ್ಯಜೀವರಲ್ಲಿ ಇಟ್ಟಿರುವ ಸ್ವಾಂತತ್ರ್ಯದ ವಿಭಾಗವನ್ನು ತಿಳಿಸುತ್ತಾರೆ.

ತಮೋಯೋಗ್ಯ ಚೇತನರಲ್ಲಿ ಕಲಿಯು ನೀಚತಮನು. ಕಲಿಯಿಂದ ಪ್ರಾರಂಭಿಸಿ ತೃಣಾಂತ ತಮೋಯೋಗ್ಯಜೀವರ ಗುಂಪು ಒಂದು. ಅಂತೆಯೇ ಮಧ್ಯಮಜೀವರಾದ ರಾಜಸರು ನಿತ್ಯಸಂಸಾರಿಗಳು. ಆ ವರ್ಗದಲ್ಲಿ ಪುರಂಜನನೆಂಬುವನು ಶ್ರೇಷ್ಠನು. ಅವನಿಂದ ಪ್ರಾರಂಭಿಸಿ ತೃಣಾಂತ ನಿತ್ಯಸಂಸಾರಿಗಳ ಚೇತನವರ್ಗ ಇನ್ನೊಂದು. ತಮೋಯೋಗ್ಯರೂ ಭಗವದ್ದ್ವೇಷಿಗಳೂ ಹಾಗೂ ಭಗವದ್ಭಕ್ತರ ದ್ವೇಷಿಗಳೂ ಆದ ತಾಮಸರಲ್ಲಿ, ಜ್ಞಾನಾಜ್ಞಾನದಿಂದ ಕೂಡಿದ ಪಾಪಪುಣ್ಯಗಳೆಂಬ ಮಿಶ್ರಕರ್ಮಗಳ ಫಲಗಳಿಗೆ ಭಾಜನರಾದ ರಾಜಸರೆಂಬ ಮಿಶ್ರಜೀವರಲ್ಲೂ ಶ್ರೀಪರಮಾತ್ಮನು ಅವರವರ ದ್ವಾರಾ ವ್ಯಾಪಾರಗಳನ್ನು ಬಿಂಬಕ್ರಿಯಾರೂಪದಿಂದ ಮಾಡಿ ಮಾಡಿಸುವುದಕ್ಕಾಗಿ ಅವಶಿಷ್ಟ ೪೫ ಭಾಗಗಳನ್ನು ಇಟ್ಟನು.

ಈ ರಹಸ್ಯವನ್ನು ಮರೆಯದೆ ಪರಮಕಾರುಣಿಕನಾದ ಆ ಪರಮಾತ್ಮನಲ್ಲಿ ಪರಮಭಕ್ತಿಯನ್ನಿಟ್ಟು ಉಪಾಸನೆ ಮಾಡು. ಜೀವರ ಕರ್ತೃತ್ವಶಕ್ತಿಯನ್ನು ಅಭಿವ್ಯಕ್ತಿಗೊಳಿಸಲು ಬಿಂಬರೂಪನಾದ ಆ ಜಗದಂಬಾರಮಣನು ಈ ಡಿಂಬದೊಳಗಿದ್ದು, ಆಯಾಯ ಜೀವರ ಸ್ವರೂಪಯೋಗ್ಯತೆಗನುಗುಣವಾಗಿ ತನ್ನ ಸ್ವಾತಂತ್ರ್ಯಗುಣದಿಂದ ಪ್ರೇರಿಸುತ್ತಿರುವನು.

ಅಂತಹ ಲಕ್ಷ್ಮೀಪತಿಯಲ್ಲಿ ನಿನ್ನ ಲಕ್ಷ್ಯವನ್ನಿಟ್ಟು, ಅರಕ್ಷಣ ಬಿಡದೆ, ಅವನ ಬಿಂಬಕ್ರಿಯಾರೂಪವಾದ ಮಹಾಮಹಿಮೆಗಳನ್ನು ಧ್ಯಾನಿಸುತ್ತಾ ನಿನ್ನ ಕರ್ತೃತ್ವಶಕ್ತಿ ಭಗವದಧೀನವೆಂದರಿತು, ಅವನ ಸೇವಕರ ಸೇವಕನೆಂದು ನಿರ್ಭಯದಿ ಈ ಭೂಮಿಯಲ್ಲಿ ಸಂಚರಿಸುತ್ತಿರು.

ಅಹಂಕರ್ತೃತ್ವಾಭಿಮಾನರಹಿತರಾದ ಸ್ವೈಚ್ಯಾನುಸಂಧಾನವುಳ್ಳ ನಿಜ ಭಕ್ತರನ್ನು ಆ ನಿರಂಜನನು ಸರ್ವಸ್ಥಳ, ಕಾಲ, ಅವಸ್ಥಾದಿಗಳಲ್ಲಿ ಆಪ್ತನಾದ ಮಿತ್ರನು ನಮ್ಮ ಆಪತ್ಕಾಲಕೊದಗುವಂತೆ, ಸದಾ ಸಂತೈಸುತ್ತಾ ಸಂರಕ್ಷಿಸುವನು ಎಂದು ಪ್ರಸಕ್ತ ಪದ್ಯದ ತಾತ್ಪರ್ಯಾರ್ಥವು.

**ವಿಶೇಷ ವಿಚಾರ :-**

ಹಿಂದಿನ ಮೂರು ಪದ್ಯಗಳಿಂದ ಶ್ರೀಹರಿಯು ತನ್ನ ಅಪಾರಸ್ವಾತಂತ್ರ್ಯವೆಂಬ ಗುಣದಲ್ಲಿ ಕೇವಲ ೪೦೦ ಭಾಗಗಳನ್ನು ತೆಗೆದುಕೊಂಡು ವಿಭಾಗಿಸಿದರೆಂದು ತಿಳಿಸಿದರು.

೪೦೦ ಸಂಖ್ಯಾಕವಾದ ರಾಶಿಯನ್ನು ಎರಡು ಭಾಗಗಳಾಗಿ ವಿಭಾಗಿಸಿದನು.

ತದರ್ಧ ೨೦೦ ಭಾಗಗಳು.

ಅವಶಿಷ್ಟ ಅರ್ಧವಾದ ೨೦೦ ಭಾಗಗಳು.

ಪೂರ್ವಾರ್ಧ ೨೦೦ ಭಾಗಗಳಲ್ಲಿ ಪುನಃ ಎರಡು ಪ್ರಕಾರ ಹಂಚಿಕೆ.

ತನ್ನಲ್ಲಿಯೇ ಇಟ್ಟುಕೊಂಡ ಸ್ವಾಖ್ಯಸ್ವಾತಂತ್ರ್ಯ ಭಾಗಗಳು = ೧೩೨-೩/೪

ರಮಾದೇವಿಯರಲ್ಲಿ ಸೃಷ್ಟ್ಯಾದಿ ವ್ಯಾಪಾರಗಳಿಗೆ ಕಾರಣವಾದ ಭಾಗಗಳು = ೬೭-೧/೪

ಪೂರ್ವಾರ್ಧ = ೨೦೦ ಭಾಗಗಳು

ತನ್ನಲ್ಲಿಟ್ಟುಕೊಂಡ ೧೩೨-೩/೪ ಭಾಗಗಳಲ್ಲಿ ನಾಲ್ಕು ಪ್ರಕಾರ ವಿಂಗಡಿಸಿದನು.

| | | | |
|---|---|---|---|
| ಸೃಷ್ಟ್ಯಾದಿ ಕಾರ್ಯಗಳಿಗೆ ಕಾರಣವಾದದ್ದು | = | ೧೨೯-೩/೪ | ಭಾಗಗಳು |
| ಸ್ವಗತ ಸ್ವಾತಂತ್ರ್ಯ ವಿಭಾಗಕ್ಕೆ | = | ೧ | ಭಾಗ |
| ಸರ್ವಸ್ವಾತಂತ್ರ್ಯ ವಿಭಾಗಕ್ಕೆ | = | ೧ | ಭಾಗ |
| ರಮಾದೇವಿಯರೊಡನೆ ಅಂಗಸಂಗಕ್ಕಾಗಿ | = | ೧ | ಭಾಗ |
| **ಅಲ್ಲಿಗೆ ಒಟ್ಟು** | = | ೧೩೨-೩/೪ | ಭಾಗಗಳು |

ರಮಾದೇವಿಯರಲ್ಲಿ ಇಟ್ಟ ೬೭-೧/೪ ಭಾಗಗಳ ಹಂಚಿಕೆ.

| | | | |
|---|---|---|---|
| ರಮಾದೇವಿಯರಲ್ಲಿ ಸೃಷ್ಟಿಗೆ ಕಾರಣವಾದದ್ದು | = | ೬೬-೧/೪ | ಭಾಗಗಳು |
| ರಮಾದೇವಿಯರಲ್ಲಿ ಕಾರ್ಯನಿರ್ವಹಣೆಗಾಗಿ | = | ೧ | ಭಾಗ |
| ಅಲ್ಲಿಗೆ ಮೊತ್ತ | = | ೬೭-೧/೪ | ಭಾಗಗಳು |

ಅವಶಿಷ್ಟ ಉತ್ತರಾರ್ಧ ೨೦೦ ಭಾಗಗಳ ಹಂಚಿಕೆ :-

ಬ್ರಹ್ಮದೇವರಲ್ಲಿ ಸೃಷ್ಟ್ಯಾದಿ ಕಾರಣಕ್ಕಾಗಿ
(ಸರಸ್ವತೀ ದೇವಿಯರೂ ಸೇರಿ) — ೫೨ ಭಾಗಗಳು

ಶ್ರೀವಾಯುದೇವರಲ್ಲಿ ತತ್ತ್ವದೇವತೆಗಳ ನಿಯಮನ,
ಶ್ವಾಸಾದಿ ಕಾರ್ಯಗಳು ಇತ್ಯಾದಿ
(ಶ್ರೀಭಾರತೀ ದೇವಿಯರೂ ಗ್ರಾಹ್ಯ) — ೪೮ ಭಾಗಗಳು

ಮಹಾತತ್ತ್ವಾಭಿಮಾನಿಗಳಲ್ಲಿ ಒಟ್ಟು ೧೦೦ ಭಾಗಗಳು

ಉಳಿದ ೧೦೦ ಭಾಗಗಳ ಹಂಚಿಕೆ :-

ಅಹಂಕಾರತತ್ತ್ವಾಭಿಮಾನಿಗಳಾದ ರುದ್ರ ದೇವರಲ್ಲಿ, (ಗರುಡ-ಶೇಷರೂ ರುದ್ರಗಣಗಳೂ ಗ್ರಾಹ್ಯ). ಅಂತೆಯೇ ತತ್ಪತ್ನಿಯರಾದ ಪಾರ್ವತೀ, ಸೌಪರ್ಣೀ ಮತ್ತು ವಾರುಣಿಯರಲ್ಲಿ — ೨೦ ಭಾಗಗಳು

ಮನೋಭಿಮಾನಿಗಳಾದ ಇಂದ್ರ ಮತ್ತು ಕಾಮರಲ್ಲಿ
ಇದರಿಂದ ತತ್ಪತ್ನೀಯರಾದ ಶಚೀ ಮತ್ತು ರತೀ ಗ್ರಾಹ್ಯ ೧೫ ಭಾಗಗಳು

ಉಳಿದ ತತ್ತ್ವದೇವತೆಗಳಲ್ಲಿ ಹಾಗೂ ತತ್ಪತ್ನಿಯರಲ್ಲಿ ೧೦ ಭಾಗಗಳು

ಒಂಬತ್ತುಕೋಟಿ ತತ್ತ್ವದೇವತೆಗಳು ಮುಕ್ತಿಯೋಗ್ಯರಲ್ಲಿ,

೨೪ ಕೋಟಿ ಆಜಾನಜರು ಅವರಲ್ಲಿ ಸೇರಿದ ೧೦೦ ಕಡಿಮೆ ೧೦೦ ಕೋಟಿ ಋಷಿ ವರ್ಗ ಮಾನುಷಗಂಧರ್ವರಾರಭ್ಯ ತೃಣಾಂತ ಮುಕ್ತಿಯೋಗ್ಯರಲ್ಲಿ
೧೦ ಭಾಗಗಳು

ಕಲ್ಯಾದಿ ತೃಣಾಂತ ತಮೋಜೀವರಲ್ಲಿ, ಪುರಂಜನಾದಿ ತೃಣಾಂತ ರಾಜಸಜೀವರಲ್ಲಿ ೪೫ ಭಾಗಗಳು

ಒಟ್ಟು ೧೦೦ ಭಾಗಗಳು

ಅಲ್ಲಿಗೆ ನಾನೂರುಭಾಗಗಳು ಪೂರ್ಣವಾಯಿತು.

ಈ ಹಂಚಿಕೆಯ ವಿವರಣೆಯನ್ನು ಒಂದು ದೃಷ್ಟಾಂತದಿಂದ ತಿಳಿಸ ಬಹುದು.

**ವಿದ್ಯುತ್ತು** ಶಕ್ತಿಯ ರೂಪ. ಅದು ವಿವಿಧ ಸಾಮರ್ಥ್ಯವಿರುವ ಸೂಕ್ಷ್ಮ ತಂತಿಗಳಲ್ಲಿ ಹರಿಯುತ್ತಿರುವಾಗ, ಆ ತಂತಿಗಳ ಸ್ವಭಾವ, ಮಂದ, ಉದ್ದ, ತಾಪ ಇವುಗಳಿಗೆನುಗುಣವಾಗಿ ಪ್ರಕಾಶವು ಅಭಿವ್ಯಕ್ತಿಯಾಗುವುದು. ಒಂದೇ ಮಂದ ಮತ್ತು ಉದ್ದವಿರುವ ಬಾಕಿ ಬಾಕಿ ವಿದ್ಯುದ್ವಾಹಕಗಳ ಪ್ರಕಾಶಪ್ರದತ್ವಸಾಮರ್ಥ್ಯ ವಿಧ ವಿಧವಾಗಿರುವುದು. ಅಂತೆಯೇ ನೀಚೋಚ್ಚ ಭಾವದಿಂದ ಕೊಟ್ಟಿರುವ ಜೀವರುಗಳಲ್ಲಿ ಬಿಂಬಕ್ರಿಯಾರೂಪವಾದ ದತ್ತಸ್ವಾತಂತ್ರ್ಯ ವಿಭಾಗ. ॥ ೩ ॥

## ಪದ್ಯ ೪

**ಮೂಲ :-**

ಅವನಿಪ ಸ್ವಾಮಿತ್ವಧರ್ಮವ ।
ಸ್ವವಶವಮಾತ್ಯರಿಗಿತ್ತು ತಾ ಮ ।
ತ್ತವರ ಮುಖದಲಿ ರಾಜಕಾರ್ಯವ ಮಾಡಿಸುವ ತೆರದಿ ॥
ಕವಿಭಿರೀಡಿತ ತನ್ನ ಕಳೆಗಳ ।
ದಿವಿಜ ದಾನವ ಮಾನವರೊಳಿ ।
ಟ್ಟವಿರತ ಗುಣತ್ರಯಜ ಕರ್ಮವ ನೋಡಿ ಮಾಡಿಸುವ ॥
॥ ೪ ॥

**ಅವತರಣಿಕೆ :-**

ದತ್ತಸ್ವಾತಂತ್ರ್ಯವೆಂಬ ಸಿದ್ಧಾಂತದಲ್ಲಿ ಅತ್ಯಂತ ಪ್ರಮುಖವಾದ ತತ್ವಾರ್ಥಪ್ರಮೇಯವನ್ನು ದೃಷ್ಟಾಂತಪೂರ್ವಕ ಮನಮುಟ್ಟುವಂತೆ ತಿಳಿಸುತ್ತಾರೆ.

**ಪ್ರತಿಪದಾರ್ಥ :-**

**ಅವನಿಪ** = ಭೂಮಿಯನ್ನು ಆಳುವ ರಾಜನು, **ಸ್ವಾಮಿತ್ವಧರ್ಮವ** = ತನ್ನ ಯಜಮಾನ್ಯರೂಪವಾದ ಪ್ರಭುತ್ವವೆಂಬ ಧರ್ಮವನ್ನು (ಶಾಸನ ಮಾಡತಕ್ಕ ಅಧಿಕಾರ). **ಸ್ವವಶ** = ತನಗೆ ಆಧೀನರಾದ, ಅಂದರೆ ತನ್ನ ವಶದಲ್ಲಿರುವ, **ಅಮಾತ್ಯರಿಗೆ** = ಮಂತ್ರಿಗಳಿಗೆ (ಇದರಿಂದ ಅವರ ಕೈಕೆಳಗೆ ಕೆಲಸ ಮಾಡುವ ಇತರ ಎಲ್ಲಾ ಅಧಿಕಾರಿಗಳಿಗೂ ಎಂದು ಗ್ರಾಹ್ಯ), **ಇತ್ತು** = ಕೊಟ್ಟು (ಅಂದರೆ ಕಾರ್ಯ ನಿರ್ವಹಣಾಧಿಕಾರವನ್ನಿಟ್ಟು), **ತಾ** = ಸ್ವಯಂ ರಾಜನೇ, **ಮತ್ತವರ ಮುಖದಲ್ಲಿ** = ತನ್ನ ಭೃತ್ಯರಾದ ಅವರ ದ್ವಾರಾ, **ರಾಜಕಾರ್ಯವ** = ರಾಜ್ಯಭಾರದ ಕಾರ್ಯನಿರ್ವಹಣೆಯನ್ನು, **ಮಾಡಿಸುವ ತೆರದಿ** = ರಾಜಾಜ್ಞಾನುಸಾರ ಮಾಡಿಸುವಂತೆ, **ಕವಿಭಿರೀಡಿತ** = ಬ್ರಹ್ಮಾದಿ

ಜ್ಞಾನಿಗಳಿಂದ ಸಂಸ್ತೂಯಮಾನನಾದ ಶ್ರೀಪರಮಾತ್ಮನು, **ತನ್ನ ಕಳೆಗಳ** = ಸ್ವಕೀಯವಾದ ಸ್ವಾತಂತ್ರ್ಯವೆಂಬ ಕರ್ತೃತ್ವಸಾಮರ್ಥ್ಯಕ್ಕೆ ಪ್ರೇರಕವಾದ ಧರ್ಮಗಳನ್ನು ಅಂದರೆ, ತಾನೇ ಬಿಂಬರೂಪನಾಗಿ ಸಕಲಜೀವರಲ್ಲಿ ಅಂತ ರ್ಯಾಮಿಯಾಗಿದ್ದು, ಸಕಲ ಕ್ರಿಯಾಪ್ರೇರಕನಾಗಿ, **ದಿವಿಜ**= ಬ್ರಹ್ಮಾದಿ ತೃಣಾಂತ ದೇವತೆಗಳಲ್ಲಿ (ಮುಕ್ತಿಯೋಗ್ಯರಾದ ಸಾತ್ವಿಕ ಚೇತನರಲ್ಲಿ), **ದಾನವ**= ಕಲ್ಯಾದಿ ತೃಣಾಂತ ತಮೋಯೋಗ್ಯರಾದ ದೈತ್ಯರಲ್ಲಿ, **ಮಾನವ**= ಪುರಂಜನಾರಭ್ಯ ತೃಣಾಂತ ನಿತ್ಯಸಂಸಾರಿಗಳಾದ ರಾಜಸರಲ್ಲಿ, **ಇಟ್ಟು** = ಸ್ವಾತಂತ್ರ್ಯವನ್ನು ಬಿಂಬರೂಪನಾಗಿ ಇಟ್ಟು, **ಅವಿರತ = ಜೀವರಿಂದ** ವಿಯೋಗರಹಿತನಾಗಿ, **ಗುಣತ್ರಯಜ** = ಸತ್ತ್ವರಜಸ್ತಮೋಗುಣಗಳೆಂಬ ಮೂರು ಗುಣಗಳಿಂದ ಅಭಿವ್ಯಕ್ತವಾದ, **ಕರ್ಮವ**= ಶುಭ, ಮಿಶ್ರ, ಅಶುಭ ಮುಂತಾದ ಸಮಸ್ತ ಕ್ರಿಯೆಗಳನ್ನು, **ಮಾಡಿ ಮಾಡಿಸುವ** = ಬಿಂಬಕ್ರಿಯಾ ದ್ವಾರಾ ತಾನೇ ಮಾಡಿ ಜೀವನ ದ್ವಾರಾ ಮಾಡಿಸುತ್ತಾನೆ. ॥ ೪ ॥

## ವ್ಯಾಖ್ಯಾನಗಳು

### ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ

ಪರಮಾತ್ಮ ಸ್ವಾತಂತ್ರ್ಯ ವಿಭಾಗ ಮಾಡಿ ಇಟ್ಟದ್ದು, ದೇವರ ಸ್ವರೂಪ ಭೂತಗಳೆಂದು ಹೇಳತಾರೆ.

ಭೂಮಿಯನ್ನು ಪಾಲನೆ ಮಾಡತಕ್ಕ ರಾಜನ ರಾಜ್ಯಗತ ಸರ್ವ ಪ್ರಾಣಿ ಗಳು, ಅವರವರಿಗೆ ರಾಜ ಪ್ರತ್ಯೇಕ ಅಧಿಕಾರಗಳ ಕೊಡದೇ ಇದ್ದರೂ, ರಾಜನಾದವನಿಗೆ ಪ್ರಜೆಗಳು ವಶವರ್ತಿಗಳಾಗೇ ಇರತಾರೆ, ತನ್ನ ಆಧೀನರಲ್ಲ ಎಂದು ತಾತ್ಪರ್ಯವಲ್ಲ. ತನ್ನ ರಾಜ್ಯದಲ್ಲಿ ತನ್ನ ಯಜಮಾನತ್ವ ತನ್ನ ರಾಜ್ಯಗತ ಸರ್ವಪ್ರಾಣಿಗಳಲ್ಲಿ ನೈಜವಾಗಿ ಇರೋದಾಗಿ ಅದೆ. ರಾಜನಾದವ ಪೂರ್ವೋಕ್ತ ಪ್ರಕಾರ ತನ್ನಲ್ಲಿ ಇರತಕ್ಕ ಸ್ವಾಮಿತ್ವ ಎನತಕ್ಕ ಶಾಸನ ಮಾಡತಕ್ಕ ಧರ್ಮವನ್ನ, ಕೆಲವರನ್ನು ಮಂತ್ರಿಗಳನ್ನಾಗಿ ಮಾಡಿಕೊಂಡನೂ, ಕೆಲವರನ್ನು ಭೃತ್ಯರನ್ನಾಗಿ

ಮಾಡಿಕೊಂಡೂನೂ, ಅವರಿಗೆ ಪ್ರತ್ಯೇಕ ಪ್ರತ್ಯೇಕವಾಗಿ ತನ್ನಲ್ಲಿ ಇರತಕ್ಕ ಸ್ವಾಮಿತ್ವಾಧಿಕಾರವನ್ನು ವಾಕ್ಯಗಳೆಂಬ ಶಬ್ದದ್ವಾರಾ ಅವರಿಗೆ ತಿಳಿಸಿ, ಅವರ ಕರ್ಣಪುಟದಿಂದ ಒಳಗೆ ಪ್ರವೇಶ ಮಾಡಿಸಿ ಅವರಲ್ಲಿ ಇಡೋವನಾಗಿದ್ದಾನೆ. ಇವರು ತತ್ಪೂರ್ವದಲ್ಲಿ ರಾಜಾಧೀನರೇ. ಅಂಥಾವರಲ್ಲಿ ರಾಜನ ಧರ್ಮ ಪ್ರವೇಶವಾಗಿ ಅದೆ. ಆದರೂ ಅದರ ಮೇಲೆ ರಾಜನ ಕಾರ್ಯ ಮಾಡೋದ ಕ್ಕಾಗಿ ಎರಡನೇದಾದ ಸ್ವಾಮಿತ್ವಪ್ರವೇಶವು. ಈ ಪ್ರಕಾರ ತನ್ನ ಸ್ವಾಮಿತ್ವ ಹೊಂದಿದವರು ಅವರವರು ರಾಜಾಜ್ಞೆ ಇಲ್ಲದೆ ತಮ್ಮ ತಮ್ಮ ಇಚ್ಛಾನುಸಾರ ಪ್ರವರ್ತಿಸುತ್ತಾರಾ ಎಂದರೆ, ಈ ಪ್ರಕಾರ ಅವರವರಲ್ಲಿ ಅವರವರ ಯೋಗ್ಯ ತಾನುಸಾರ ತನ್ನ ಸ್ವಾಮಿತ್ವ ಇಟ್ಟ ರಾಜನಾದ ತಾನು, ಪ್ರತಿಕ್ಷಣದಲ್ಲಿ ಪ್ರತಿದಿನದಲ್ಲೂನೂ ಮತ್ತು ದಾವ ದಾವ ರಾಜಕಾರ್ಯಗಳ ಭೃತ್ಯರಾದವರು ಮಾಡೋ ಉದ್ದಿಶ್ಯ, ಪುನಃ ಆಗಾಗ್ಗೆ ತನ್ನ ಆಜ್ಞಾಶ್ರವಣೇಂದ್ರಿಯ ದ್ವಾರಾ ಅವರ ಹೃದಯ ಪ್ರವೇಶ ಮಾಡಿಸಿ, ಆ ಭೃತ್ಯರಾದವರ ದ್ವಾರಾ ತನ್ನ ರಾಜ್ಯಕ್ಕೆ ಸ್ವಾಮಿಯಾದ ರಾಜನು ಕಾರ್ಯವ ಅವರವರ ದೇಹೇಂದ್ರಿಯಗಳಿಂದ ವ್ಯಾಪಾರವ ಮಾಡಿಸೋವನಾಗತಾನೆ. ತದ್ವ್ಯತಿರಿಕ್ತ ಅಧಿಕಾರ ಹೊಂದಿದವ ದಾವ ಕಾರ್ಯ ಮಾಡೋದಕ್ಕೂ ಸಮರ್ಥನಲ್ಲದೆ ಅಧಿಕಾರ ಹೊಂದಿ ರಾಜಾಜ್ಞಾ ನಿರೀಕ್ಷಿಸುತ್ತಾ ಇರಬೇಕು. ರಾಜಾಜ್ಞಾ ಆಯಿತೆಂದರೆ ವ್ಯಾಪಾರ ಮಾಡತಾನೆ. ಈ ರಾಜ ಭೃತ್ಯರ ದೃಷ್ಟಾಂತದೋಪಾದಿಯಲ್ಲಿ, ಜ್ಞಾನಿಗಳಾದ ಬ್ರಹ್ಮಾದಿ ಗಳಿಂದ ಸ್ತುತ್ಯನಾದ, ಹದಿನಾಲ್ಕು ಲೋಕಕ್ಕೆ ರಾಜನಾದ ಶ್ರೀನಾರಾಯಣ ದೇವರು ಇವನ ರಾಜ್ಯದ ಹದಿನಾಲ್ಕುಲೋಕಗತ ಪ್ರಾಣಿಗಳಲ್ಲಿ ಇವನ ಸ್ವಾಮಿತ್ವ ನೈಜವಾಗಿ ಅದೆ. ಎಲ್ಲಿ ಎಂದರೆ, ಆಯಾ ಜೀವರ ಅನಾದಿಸ್ವರೂಪ ಗತ ಸ್ವಾತಂತ್ರ್ಯಗುಣ ಬಿಂಬವಾಗಿ ಅನಾದ್ಯನಂತ ಕಾಲಕ್ಕೂ ಅವಿಯೋಗವಾಗಿ ಅದೆ. ಇಂಥಾ ತನ್ನ ಸ್ವಾಮಿತ್ವ ಜೀವರಲ್ಲಿ ನೈಜವಾಗಿ ಇರೋದಾಗಿ ಅದೆ. ಆ ಸ್ವಾಮಿತ್ವದ ಕಾರ್ಯ ಜೀವರ ಸ್ವರೂಪಅಭಿವ್ಯಕ್ತಿಕಾಲದಲ್ಲಿ ಪ್ರಯೋಜಕವು. ತ್ರಿಗುಣಾತ್ಮಕ ಸ್ಥೂಲದೇಹ ಕಾರ್ಯಗಳಲ್ಲಿ ಅದು ಪ್ರಯೋಜನ ಮಾಡೋದಿಲ್ಲ. ಅದರ ನೇಮ ಹಾಂಗೇವೇ. ಆದ್ದರಿಂದ ಸ್ಥೂಲದೇಹ ಕಾರ್ಯಗಳ ಮಾಡೋ ನಿಮಿತ್ತ ನಾರಾಯಣನಾದ ತಾನು ತನ್ನ ಸ್ವಕೀಯವಾದ ಸ್ವಾತಂತ್ರ್ಯಶಕ್ತಿ ಕಳೆಗಳ ಎಂದರೆ, ಸ್ವತಂತ್ರ ವಿಭಾಗ ವಿಶೇಷಗಳು ಪೂರ್ವೋಕ್ತ ಪ್ರಕಾರ

ನಾನ್ನೂರು ಕಳೆಗಳ ತೆಗೆದು ತನ್ನಲ್ಲಿ ರಮಾದೇವಿಯರಲ್ಲಿ ಇನ್ನೂರು ಕಳಾ ಸಾಂಕೇತ ಗುಣಗಳು ಹೋಗತಾ ಉಳಿದ ಇನ್ನೂರು ಒಳಗೆ ನೂರೈವತ್ತೈದು ಬ್ರಹ್ಮಾದಿ ತೃಣಾಂತ ಮುಕ್ತಿಯೋಗ್ಯರಲ್ಲಿ, ನಲ್ವತ್ತೈದು ದೈತ್ಯರಲ್ಲಿ ನಿತ್ಯ ಸಂಸಾರಿಗಳಲ್ಲಿ ಈ ಉಭಯ ಸಮೂಹದೊಳಗೆ ಅಂತು ನಾನ್ನೂರು ಕಳೆಗಳ ಈ ತ್ರಿವಿಧರಲ್ಲಿ ಇಡೋವನಾಗಿ ಎಂದರೆ, ಜೀವನ ಸ್ವರೂಪಭೂತಸ್ವಾತಂತ್ರ್ಯ ಗತ ತನ್ನ ಸ್ವಾತಂತ್ರ್ಯಗುಣದಲ್ಲಿ ವಿಭಾಗ ಮಾಡಿದ್ದರನ್ನ ಇಟ್ಟು, ಎರಡ ರಿಂದಲೂ ಸಹಿತನಾಗಿ ಜೀವನಲ್ಲಿ ಇದ್ದು ವಿಯೋಗರಹಿತನಾಗಿ ಮೂಲಜಡ ಪ್ರಕೃತಿಯಾದ ಗುಣತ್ರಯಗಳಿಂದ ಜನಿತವಾದ ಸ್ಥೂಲದೇಹದಿಂದ ಆಗತಕ್ಕ ತ್ರಿಗುಣಜನಿತ ತ್ರಿವಿಧಕರ್ಮಗಳ ಸ್ಥೂಲದೇಹದಲ್ಲಿ, ತದಾಕಾರದಿಂದ ಪ್ರಕಾಶತೋವ್ಯಾಪ್ತನಾದ ಜೀವನಲ್ಲಿ ದೇಹದಲ್ಲಿ ತದಾಕಾರನಾದ ಬಿಂಬನಾಗಿ ಇದ್ದು ಬಿಂಬಕ್ರಿಯಾ ತಾನು ಮಾಡಿ, ತನ್ನ ಕ್ರಿಯಾದ್ವಾರಾ ದೇವತಾಕ್ರಿಯಾ, ತದ್ದ್ವಾರಾ ಜೀವನ ಕ್ರಿಯಾ, ತದ್ದ್ವಾರಾ ದೇಹಕ್ರಿಯಾ ಈ ಪ್ರಕಾರ ಮಾಡಿಸೋವನಾಗತಾನೆ. ಅಧಿಕಾರ ಹೊಂದಿದ ಭೃತ್ಯ, ರಾಜಾಜ್ಞಾ ಹೊರತು ರಾಜಕಾರ್ಯ ಕಿಂಚಿತ್ತಾದರೂ ಮಾಡೋದಕ್ಕೆ ಸಮರ್ಥನಲ್ಲ. ತದ್ವತ್ ಜೀವನಾದವನಲ್ಲಿ ಸ್ವತಂತ್ರಾಧಿಕಾರ ಪ್ರವೇಶ ಮಾಡಿ ಇದ್ದರೂ, ಸ್ವತಃ ಪ್ರವೃತ್ತಿ ಇಲ್ಲ ಎಂಬ ಮಾತ್ರಕ್ಕೆ ದೃಷ್ಟಾಂತವೆಂದು ತಾತ್ಪರ್ಯ.

**ಪ್ರಮಾಣ**

ಯಥಾ ರಾಜಾ ನಿಜಾಮಾತ್ಯಾನ್ದತ್ವಾ ಸ್ವಾತಂತ್ರ್ಯಮಾತ್ಮನಃ ।
ಕಾರ್ಯೇ ನಿಯೋಜ್ಯ ತತ್ರತ್ಯಾನ್ ಗುಣದೋಷಾಂಶ್ಚ ಪೃಚ್ಛತಿ ॥
ಬ್ರಹ್ಮಾಣಂ ಚ ತಥಾ ಪ್ರಾಣಂ ತಥಾನ್ಯಾನ್ ತತ್ತ್ವದೇವತಾಃ ।
ದೇಹೇ ನಿಯೋಜಯಾಂ ಚಕ್ರೇ ತಥಾ ಕಲ್ಯಾದಿಕಾನ್ ಸುರಾನ್ ॥
ತತ್ತತ್ಕಾರ್ಯ ಕೃತೌ ಶಕ್ತಿಃ ಸ್ವಾತಂತ್ರ್ಯಂ ಹಿ ಪುರಸ್ಕೃತಂ ।
ಶಕ್ತ್ಯೈ ಸ್ವದತ್ತಯಾಽಮಾತ್ಯೈಃ ಕೃತೇ ಕಾರ್ಯೇ ಸ ತುಷ್ಯತಿ ॥
ಸತ್ಯಾಂ ಶಕ್ತೌ ಕಾರ್ಯನಾಶೇ ಸ್ವಾಜ್ಞಾಮುಲ್ಲಂಘ್ಯ ವರ್ತತೇ ।
ಕುಪಿತ್ವಾ ದಂಡಯತ್ಯೇವಂ ತಥಾ ಕ್ರೀಡತ್ಯಯಂ ಹರಿಃ ॥

ನಿಯಂತೃತ್ವೇನ ಸರ್ವತ್ರ ತಿಷ್ಠನ್ ಜೀವೇಷು ಸರ್ವದಾ ।
ಸ್ವಸ್ಮಿನ್ನರ್ಧಂ ಸ್ವತಂತ್ರತ್ವಂ ಸಮಾಧಾಯ ತದರ್ಧಕಂ ॥
ವಿಭಜ್ಯ ಶತಧಾ ಭೂಯೋಽಷ್ಟಚತ್ವಾರಿಂಶದಂಶಕಾನ್ ।
ಪ್ರಾಣೇ ಸ್ವಾತಂತ್ರ್ಯಮಾದಾಯ ದ್ವಿಪಂಚಾಶಚ್ಚ ವೇಧಸಿ ॥
ಪಾದಂ ಚತುರ್ಥಂ ಶತಧಾ ವಿಭಜ್ಯ ದಶಭಾಗಕಾನ್ ।
ಜೀವೇ ಸ್ವಾತಂತ್ರ್ಯಮಾದಾಯ ತತೋ ವಿಂಶತಿಭಾಗಕಾನ್ ॥
ಅಹಂಕಾರಾತ್ಮಕೇ ರುದ್ರೇ ತಥಾ ಬುಧೌ ನಿದಾಯ ಚ ।
ಮನೋದೇವೇ ತತಶ್ಶಕ್ರೇ ಭಾಗಾನ್ ಪಂಚದಶೈವ ತು ॥
ತತ್ತ್ವದೇವೇ ದಶಾಂಶ್ಚ ಸ್ವಾತಂತ್ರ್ಯಂ ವಿದಧೇ ಹರಿಃ ।
ಪಂಚಚತ್ವಾರಿಂಶದಂಶಾನ್ ಕಲಿಮುಖ್ಯೇಷ್ವಧಾತ್ಸ್ವಯಂ ।
ಈಶಸ್ವಾತಂತ್ರ್ಯಭಾಗೇಷು ಮಾಯಾಭಾಗಸ್ತೃತೀಯಕಃ ।
ಸ ಹಿ ಸರ್ವಜಗನ್ಮಾತಾ ಮೂಲಪ್ರಕೃತಿದೇವತಾ ॥
ಬ್ರಹ್ಮಾದಿದೇವ ಪಾಪಾನಿ ತೂಲವದ್ದಹತೇ ಹರಿಃ ।
ತದಾಜ್ಞಯಾ ಪ್ರವೃತ್ತತ್ವಾನ್ನ ತೇಷಾಂ ಪರಾಭವಃ ॥
ಪುಣ್ಯಕರ್ಮ ಸಹಾಯಾ ಯೇ ಪುಣ್ಯಾತ್ಮಾ ನಸ್ತು ಮಾನವಾಃ ॥
ದೈತ್ಯಭಾಗಗತಾತ್ಪುಣ್ಯಾತ್ತೇಭ್ಯೋಂಶಂ ದದತೇ ಹರಿಃ ।
ಎಂತ ತಾತ್ಪರ್ಯ ॥ ೪ ॥

## ಭಾವಪ್ರಕಾಶಿಕೆ

ಜೀವರುಗಳಿಂದ ಅವರವರ ಯೋಗ್ಯತಾನುಸಾರ ಕರ್ಮಗಳನ್ನು ಮಾಡಿಸು ವುದಕ್ಕಾಗಿ ಜೀವರುಗಳಿಗೆ ಸ್ಥೂಲದೇಹಗಳನ್ನು ಕೊಡಿಸಿ ಬ್ರಹ್ಮದೇವರು, ವಾಯುದೇವರು ಮತ್ತು ತತ್ತ್ವಾಭಿಮಾನಿದೇವತೆಗಳು, ಕಲಿ ಮೊದಲಾದ ದೈತ್ಯರು ಇವರೆಲ್ಲರನ್ನೂ ಆ ಜೀವದ ಸ್ಥೂಲದೇಹದಲ್ಲಿರುವಂತೆ ಮಾಡಿ, ಈ ಬ್ರಹ್ಮಾದಿಗಳಿಗೂ ಜೀವರಿಗೂ ಕಲಿ ಮೊದಲಾದವರಿಗೂ ಅವರವರ ಯೋಗ್ಯ ತಾನುಸಾರ ತನ್ನ ಸ್ವಾತಂತ್ರ್ಯವನ್ನು ಹಂಚಿಕೊಟ್ಟು ಕಾರ್ಯಗಳನ್ನು ಮಾಡು

ವಂತೆಯೂ ಮಾಡಿಸುವಂತೆಯೂ ಮಾಡಿದನು. ಅದು ಹೇಗೆಂದರೆ ಮಹಾ ರಾಜನು ತನ್ನ ಮಂತ್ರಿ ಮೊದಲಾದವರಿಗೆ ಅವರವರ ಯೋಗ್ಯತಾನುಸಾರವಾಗಿ ಸ್ವಾತಂತ್ರ್ಯವನ್ನು ಹಂಚಿಕೊಟ್ಟು ಅಲ್ಲಲ್ಲಿ ಆ ಕಾರ್ಯಗಳನ್ನು ಮಾಡಿಸುವನು. ಅಂದರೆ ಸರ್ವದೇಶಕ್ಕೂ ಒಬ್ಬನನ್ನು ಅಧಿಪತಿಯನ್ನಾಗಿ ಮಾಡಿ, ಅವನ ಸ್ವಾಧೀನದಲ್ಲಿ ದೇಶಾಧಿಪತಿಗಳು, ಅವರ ಸ್ವಾಧೀನದಲ್ಲಿ ಪುರಾಧಿಪತಿ, ಅವನ ಕೆಳಗೆ ಗ್ರಾಮಾಧಿಪತಿ ಹೀಗೆ ಅವರುಗಳಿಗೆ ಅಧಿಕಾರಗಳನ್ನು ಕೊಟ್ಟು, ಪ್ರತಿ ಯೊಬ್ಬರೂ ತಮ್ಮ ತಮ್ಮ ಆಧೀನದಲ್ಲಿರುವವರಿಂದ ಸರಿಯಾಗಿ ಕೆಲಸ ಮಾಡಿಸುವಂತೆ, ಪರಮಾತ್ಮನು ಬ್ರಹ್ಮಾದಿದೇವತೆಗಳಿಗೂ ತಾರತಮ್ಯ ಪ್ರಕಾರ ಸ್ವಾತಂತ್ರ್ಯವನ್ನು ಹಂಚಿರುವನು. ಬ್ರಹ್ಮವಾಯುಗಳ ಸ್ವಾಧೀನದಲ್ಲಿ ರುದ್ರಾದಿಗಳು, ಅವರ ಸ್ವಾಧೀನದಲ್ಲಿ ತತ್ವೇಶರು. ಕಲಿಗೆ ದೈತ್ಯರ ಮೇಲಿನ ಸರ್ವಾಧಿಕಾರವು ಇರುವುದು. ಈ ದೇವತೆಗಳು, ಕಲಿ ಮೊದಲಾದ ದೈತ್ಯರು, ಇವರ ಸ್ವಾಧೀನದಲ್ಲಿ ಸಾಮಾನ್ಯ ಜೀವರೆಲ್ಲರೂ ಇರುವರು. ಪುಣ್ಯ ಮಾಡಿಸಲು ದೇವತೆಗಳು. ಪಾಪ ಮಾಡಿಸಲು ದೈತ್ಯರು. ಹೀಗೆ ಜೀವರು ತಮ್ಮ ತಮ್ಮ ಯೋಗ್ಯತಾನುಸಾರ ದೇವದೈತ್ಯರು ಮಾಡಿಸುವ ಪುಣ್ಯಪಾಪಾದಿಗಳನ್ನು ಮಾಡಬೇಕು. ಪರಮಾತ್ಮನು ಪುಣ್ಯಪಾಪಾದಿಗಳನ್ನು ಮಾಡಿಸುವ ಸ್ವಾತಂತ್ರ್ಯವನ್ನು ತತ್ತ್ವೇಶ ರಾದ ದೇವತೆಗಳಿಗೂ, ದೈತ್ಯರಿಗೂ ಸಹ ಕೊಟ್ಟಿರುವನು. "ತೇನ ವಿನಾ ತೃಣಮಪಿ ನ ಚಲತಿ" ಎಂಬ ನ್ಯಾಯದಿಂದ ಬ್ರಹ್ಮಾದಿದೇವತೆಗಳಿಗಾದರೂ ಪರಮಾತ್ಮನನ್ನು ಹೊರತು ತೃಣವನ್ನು ಚಲನ ಮಾಡಿಸುವ ಶಕ್ತಿಯು ಇರುವುದಿಲ್ಲ. ಇವರೆಲ್ಲರಿಗೂ ಅವರವರ ಯೋಗ್ಯತಾನುಸಾರವಾಗಿ ಇಚ್ಛಾ ಶಕ್ತಿಯು ಮಾತ್ರ ಇರುವುದು. ಅದನ್ನು ಪ್ರತಿಕ್ಷಣದಲ್ಲೂ ಪರಮಾತ್ಮನೇ ಇದ್ದು ಉದ್ಬೋಧನೆ ಮಾಡುತ್ತಿರುವನು. ಸ್ವಾತಂತ್ರ್ಯವಿದ್ದರೂ ಇಚ್ಛಾ ಮಾತ್ರ ಶಕ್ತಿಯೇ ಹೊರತು ಕಾರ್ಯಮಾಡುವ ಶಕ್ತಿಯು ಯಾರಿಗೂ ಇಲ್ಲ. ತತ್ವೇಶರಲ್ಲಿದ್ದು ಇಂದ್ರಿಯಗಳಿಂದ ಆಗಬಹುದಾದ ನೋಡಿಸುವುದು, ಕೇಳಿಸುವುದು. ಮೊದಲಾದ ಕಾರ್ಯವನ್ನು ಮಾಡಿಸುವನು. ಜೀವರೊಳಗಿದ್ದು ಮಾಡುವನು. ಹೀಗೆ ಸರ್ವಸ್ವತಂತ್ರನು ಒಬ್ಬನೇ ಹೊರತು ಮತ್ತಾರೂ ಸ್ವತಂತ್ರಕರ್ತರು ಇಲ್ಲ ಎಂದು ಹೇಳಿರುವರು. ಇದರಂತೆ ಪರಮಾತ್ಮನು

ದೇವತೆಗಳು, ದಾನವರು, ಮಾನವರು ಇವರುಗಳಲ್ಲಿ ತನ್ನ ಸ್ವಾತಂತ್ರ್ಯವನ್ನು ಅವರವರ ಯೋಗ್ಯತಾನುಸಾರ ಹಂಚಿಟ್ಟು ಸಾತ್ವಿಕ, ರಾಜಸ, ತಾಮಸ ಸಂಬಂಧವಾದ ಕರ್ಮಗಳನ್ನು ಮಾಡಿ ಮಾಡಿಸುವನು. ॥ ೪ ॥

ಭಾವದರ್ಪಣ

ಅವನಿಪೇತಿ "ಯಥೈವ ಲೋಕೇ ಭೂಪಾಲಾ" ಇತಿ ವಿಷ್ಣು ರಹಸ್ಯೋಕ್ತೇಃ/ ನಿಯಂತ್ರತ್ವೇನ ಸರ್ವತ್ರ ತಿಷ್ಠನ್ ಜೀವೇಷು ಸರ್ವದಾ। ತತ್ತತ್ಕಾರ್ಯಕೃತೌ ಶಕ್ತಿಃ ಸ್ವಾತಂತ್ರ್ಯಂ ಹಿ ಪರಂ ಸ್ಮೃತಮಿತಿ" ಪರಂ ಎಂದರೆ ಪರಮಾತ್ಮ ಸಂಬಂಧಿ ಸ್ವಾತಂತ್ರ್ಯ ಎಂಬರ್ಥ. ಇಂಥಾ ಸ್ವಾತಂತ್ರ್ಯಾಖ್ಯಕಲಾ ತ್ರಿವಿಧರಲ್ಲಿಟ್ಟು ಕಾರ್ಯ ನಡೆಸುತ್ತಾನೆಂದು ಹೇಳುತ್ತಾರೆ. ಕಳೆಗಳು ತನಗೂ ಈ ಕಳೆಗಳಿಗೂ ಅಭೇದ ಎಂಬರ್ಥ ಉಕ್ತಂ ಚ ಶ್ರೀಮದ್ಭಗವತ್ಪಾದಪೂಜ್ಯಚರಣೈಃ। ಅಭೇದೋ ಹರಿರೂಪಾಣಾಂ ಗುಣಾನಾಂ ಚ ಕ್ರಿಯಾಸು ಚ। ತಥೈವಾವಯ ವಾನಾಂ ಚೇತಿ" ಋಗ್ಭಾಷ್ಯೇ। ಕಾರ್ಯ ನಡೆಸತಕ್ಕ ವಿಷಯದಲ್ಲಿ ಪ್ರಮಾಣ। ಉಕ್ತಂ ಚ ಸರ್ವಜ್ಞಪೂಜ್ಯಪಾದೈಃ ಏಕಾದಶ ತಾತ್ಪರ್ಯೇ। "ಇದಂ ಮಯಾ ಕ್ರಿಯತೆ ಇದಂ ಮಯಾ ನ ಕ್ರಿಯತೆ ಇದಂ ಮಯಾ ವಿಪರೀತ ಕ್ರಿಯತ ಇತಿ ಯಃ ಬುದ್ಧಿಭೇದಃ ಸಃ ರಜಸ್ತಮೋಗುಣನಿಮಿತ್ತ ಭ್ರಮಃ। ಸರ್ವಂ ಹಿ ಪರಮೇಶ್ವರಃ ಕರೋತಿ। ಸ ಏವ ಚ ಮಯಿ ಸ್ಥಿತ್ವಾ ನಿಂದಾನಿಂದೇ ಕರೋತ್ಯಜಃ"। ಎಂಬ ಪ್ರಮಾಣದಿಂದ ಶ್ರೀಹರಿಯೇ ನನ್ನಲ್ಲಿ ನಿಂತು ಪುಣ್ಯ ಪಾಪ ಕರ್ಮ ಮಾಡುತ್ತಾನೆಂದು ಕಂಠ ರವೇಣ ಹೇಳಿದ್ದಾರೆ ಮತ್ತು ಮಾಡಿ ಮಾಡಿಸುವನೆಂಬುದಕ್ಕೆ ಹೊರಟ ಪ್ರಮಾಣ। ಕರ್ತಾ ಕಾರಯಿತಾ ವಿಷ್ಣು ರ್ಭೋಕ್ತಾ ಭೋಜಯಿತಾ ತಥಾ। ಶಿಕ್ಷಕಃ ಶಿಕ್ಷಣೀಯಶ್ಚ ಸೃಷ್ಟಃ ಸೃಜ್ಯಃ ಸ ಏವ ತತ್। ಇತ್ಯಾಗ್ನೇಯ ಪುರಾಣೋಕ್ತೇಃ। ಹೀಗೆ ಮಾನಗಳು ಇರೋಣ ದಿಂದ ದೇವರೇ ಮಾಡಿ ಮಾಡಿಸುತ್ತಾನೆಂದು ದಾರ್ಢ್ಯಮಾಡಬೇಕೆಂದು ದಾಸಾರ್ಯರ ತಾತ್ಪರ್ಯ। ಅಮಾತ್ಯರು-ಪ್ರಧಾನಿಗಳು, ಕವಿಭಿರೀಡಿತ-ಜ್ಞಾನಿ ಗಳಿಂದ ಸ್ತುತ್ಯ ॥ ೪ ॥

**ಶ್ರೀವ್ಯಾಸದಾಸಸಿದ್ಧಾಂತಕೌಮುದೀ**

"ಯಥಾರಾಜಾ ನಿಜಾಮಾತ್ಯಾನ್ ದತ್ವಾ ಸ್ವಾಮಿತ್ವಮಾತ್ಮನಃ ॥ ಕಾರ್ಯೇ ನಿಯೋಜ್ಯ ತತ್ರತ್ಯಾನ್ ಗುಣಾನ್ ದೋಷಾಂಶ್ಚ ಪೃಚ್ಛತಿ ॥ ಶಕ್ತ್ಯಾ ಸ್ವದತ್ತಯಾಮಾತ್ಯೈಃ ಕೃತೇ ಕಾರ್ಯೇ ಸ ತುಷ್ಯತಿ ॥ ಸತ್ಯಾಂ ಶಕ್ತೌ ಕಾರ್ಯನಾಶೇ ಸ್ವಾಜ್ಞಾಂ ಉಲ್ಲಂಘ್ಯ ವರ್ತನೇ ॥ ಕುಪಿತ್ವಾ ದಂಡಯೇತ್ ಏವಂ ತಥಾ ಕ್ರೀಡತ್ಯಯಂ ಹರಿಃ ॥" ಇತ್ಯಸ್ಯ ಅಭಿಪ್ರಾಯಂ ಆಹ-"ಅವನಿಪ" ಇತಿ ॥ "ರಾಜಾಂಗೈರಿವ ಭೂಮಿಪಃ" ಇತಿ ವಾಯುಪುರಾಣೇ ॥ ೪ ॥

## ಕನ್ನಡಾರ್ಥ

"ರಾಜನು ತನ್ನಲ್ಲಿರುವ ಒಡೆತನ (ಸ್ವಾಮಿತ್ವ)ವನ್ನು ಕೊಟ್ಟು ಅಮಾತ್ಯರನ್ನು ಕಾರ್ಯಗಳಲ್ಲಿ ನಿಯೋಜಿಸಿ ಅಲ್ಲಿರುವ ಗುಣದೋಷಗಳನ್ನು ವಿಚಾರಿಸಿ, ಅಮಾತ್ಯರು ತನ್ನಿಂದ ಕೊಡಲ್ಪಟ್ಟ ಶಕ್ತಿಯಿಂದ ಕಾರ್ಯವನ್ನು ಮಾಡಿದ್ದರೆ ಸಂತೋಷಪಡುತ್ತಾನೆ. ಶಕ್ತಿಯಿದ್ದರೂ ಕಾರ್ಯವನ್ನು ಮಾಡದಿದ್ದರೆ ಅಥವಾ ಕಾರ್ಯನಾಶವಾದರೆ ಮತ್ತು ತನ್ನ ಆಜ್ಞೆಯನ್ನು ಮೀರಿ ವರ್ತಿಸಿದರೆ ರಾಜನು ಸಿಟ್ಟಿಗೆದ್ದು ಅವರನ್ನು ದಂಡಿಸುತ್ತಾನೆ. ಹೀಗೆಯೇ ರಾಜಾದಿಗಳು ಅಮಾತ್ಯಮುಂತಾದವರೊಡನೆ ವರ್ತಿಸುವಂತೆ ಹರಿಯು ಜೀವರೊಡನೆ ತನ್ನ ಶಕ್ತಿಯನ್ನು ಅವರಿಗೆ ಇತ್ತು ಅವರಿಂದ ಕಾರ್ಯಗಳನ್ನು ಮಾಡಿಸಿ ಕ್ರೀಡಿಸುತ್ತಾನೆ" ಎಂದು ಹೇಳುವ ಪದ್ಯಗಳ ಅರ್ಥಗಳನ್ನು ವಿವರಿಸಿ ಹೇಳುತ್ತಾರೆ "ಅವನಿಪ" ಎಂಬ ಪದ್ಯದಿಂದ.

"ರಾಜನು ರಾಜಾಂಗರಾದ ಸಚಿವ ಮುಂತಾದವರೊಡನೆ ವರ್ತಿಸುವಂತೆ ಹರಿಯು ಜೀವರೊಡನೆ ಕ್ರೀಡಿಸುತ್ತಾನೆ" ಎಂದು ವಾಯುಪುರಾಣದಲ್ಲಿಯೂ ಹೇಳಲಾಗಿರುತ್ತದೆ. ॥ ೪ ॥

## ಶ್ರೀಗರುಹೃದಯಪ್ರಕಾಶಿಕೆ

ಅವನಿಪನೆಂಬ ದೊರೆಯು ಸ್ವಾಮಿತ್ವವೆಂಬ ತನ್ನ ಅಧಿಕಾರಶಕ್ತಿಯನ್ನು, ಸ್ವವಶರೆಂಬ ತನ್ನಧೀನ ಮಂತ್ರಿ ಮೊದಲಾದ ಜನರಿಗೆ ಕೊಟ್ಟು, ತಾನೇ ಅವರುಗಳ ಮುಖಾಂತರ ರಾಜಕಾರ್ಯ ನಡೆಸುವಂತೆ, ಕವಿಭಿರೀಡಿತ (ಎಂದರೆ ಜ್ಞಾನಿಸ್ತುತನಾದ ದೇವರು, ತನ್ನ ಸ್ವಾತಂತ್ರ್ಯ ಕಳೆಗಳನ್ನು ದಿವಿಜರೆಂಬ ಸಜ್ಜೀವರಲ್ಲೂ, ದಾನವರೆಂಬ ಅಸಜ್ಜೀವರಲ್ಲೂ, ಮಾನವರೆಂಬ ಮಿಶ್ರಜೀವರಲ್ಲೂ ಇಟ್ಟು ಅವಿರತ ಎಂದರೆ ಸದಾ, ತ್ರಿಗುಣಕಾರ್ಯ ವ್ಯಕ್ತಿ ಮಾಡಿಸುತ್ತಿರುವನು. ॥ ೩ ॥

## ಸರ್ವವ್ಯಾಖ್ಯಾನಸಾರಸಂಗ್ರಹ

ಸಕಲ ಜೀವರ ಕರ್ತೃತ್ವವೂ ಈಶಾಧೀನವಾದದ್ದು ಎಂಬ ತತ್ತ್ವವನ್ನು ರಾಜ-ಭೃತ್ಯರ ದೃಷ್ಟಾಂತದಿಂದ ತಿಳಿಸುತ್ತಾರೆ.

ಭೂಮಿಯನ್ನು ಪಾಲಿಸುವ ರಾಜನಿಗೆ ಅವನಿಪನೆಂದು ಹೆಸರು. ಅವನ ಆಡಳಿತಾಧಿಕಾರವು ಅವನ ವಶದಲ್ಲಿದೆ. ಈ ಅಧಿಕಾರವೇ ಸ್ವಾಮಿತ್ವವು. ಅವನ ಸ್ವಾಮಿತ್ವವೆಂಬ ಅಧಿಕಾರವು ರಾಜಾಜ್ಞೆಯ ರೂಪದಲ್ಲಿರುವುದು.

ರಾಜನು ತನ್ನ ಅಧೀನದಲ್ಲಿರುವ ಸ್ವಾಮಿತ್ವವೆಂಬ ಧರ್ಮವನ್ನು ತನ್ನ ಮಂತ್ರಿಗಳಿಗೆಕೊಟ್ಟು, ಅವರ ಮೂಲಕ ರಾಜ್ಯಾಧಿಕಾರ ನಡೆಯಿಸುವನು. ತನ್ನ ಅಧೀನದಲ್ಲಿರುವ ಅವರ ಕೈ ಕೆಳಗೆ ನಗರಾಧಿಕಾರಿಗಳು, ಪುರಾಧಿಕಾರಿಗಳು, ಗ್ರಾಮಾಧಿಕಾರಿಗಳು ಹೀಗೆ ಹಂತ ಹಂತವಾಗಿ ಕಾರ್ಯನಿರ್ವಹಣೆ

ಮಾಡುವರು. ರಾಜನ ಆಡಳಿತದ ಕಾರ್ಯವ್ಯಾಪ್ತಿಯು ಸ್ವವಶ ಅಧಿಕಾರಿ ವರ್ಗದಲ್ಲಿ ಅವರವರ ಅಂಶಸ್ತು, ಅಧಿಕಾರಕ್ಕನುಗುಣವಾಗಿ ಇಡಲ್ಪಟ್ಟಿದೆ. ರಾಜಾಜ್ಞೆಯಂತೆ ಅವರು ತಮ್ಮ ತಮ್ಮ ಪಾಲಿನ ಕಾರ್ಯಗಳನ್ನು ನಿರ್ವಹಿಸುವರು. ಇಲ್ಲಿ ಸ್ವಾಮಿತ್ವ ರಾಜನದು. ಅವನ ಅಧೀನತ್ವ ಅಮಾತ್ಯನೂ ಹಾಗೂ ಇತರ ಅಧಿಕಾರಿಗಳದ್ದು.

ಹೀಗೆ 'ರಾಜ–ಭೃತ್ಯನ್ಯಾಯದಂತೆ, ಸರ್ವತಂತ್ರಸ್ವತಂತ್ರನಾದ ಶ್ರೀಹರಿಯು ರಮಾಬ್ರಹ್ಮಾದಿ ಜ್ಞಾನಿಗಳಿಂದ ಸಂಸ್ತುತ್ಯಮಾನನು. ಕಮಲದಳಾಯತಾಕ್ಷನು ತನ್ನ ಸ್ವಾತಂತ್ರ್ಯವೆಂಬ ಅಂಶಗಳನ್ನು ಆಯಾಯ ಜೀವರಲ್ಲಿಟ್ಟು ಅವರಂತರ್ಯಾಮಿಯಾಗಿ ಬಿಂಬಕ್ರಿಯಾದ್ವಾರಾ, ಕಾರ್ಯಗಳನ್ನು ಮಾಡಿ ಮಾಡಿಸುತ್ತಿರುವನು. ತನ್ನ ಸನ್ನಿಧಾನ ವಿಶೇಷದಿಂದ ಜೀವರಲ್ಲಿ ಬಿಂಬರೂಪದಿಂದ ಇಟ್ಟಿರುವ ಪ್ರೇರಕಶಕ್ತಿಯೇ, ಅವನ ಸರ್ವತಂತ್ರ ಸ್ವತಂತ್ರಕರ್ತೃತ ಗುಣವು. ಇದೇ ಅವನ ಕಳೆಗಳು. ಜೀವರು ನಿಜೋಚ್ಚ ಭಾವಯುಕ್ತತೆಯಿಂದ ಅನಾದಿನಿತ್ಯರಾಗಿದ್ದಾರೆ. ಅಂತೆಯೇ ಈಶನೂ ಸಹ ಅನಾದಿ ಮತ್ತು ನಿತ್ಯನು. ಪ್ರತಿಬಿಂಬರಾದ ಜೀವರಲ್ಲಿ ಈಶನು ಪ್ರವೇಶಿಸಿ, ಬಿಂಬನಾಗಿ ತಾನು ಚೇಷ್ಟಾಪ್ರದನಾಗಿದ್ದು, ಪ್ರತಿಬಿಂಬದಮೂಲಕ ಆ ಕಾರ್ಯಗಳನ್ನು ಅಭಿವ್ಯಕ್ತಗೊಳಿಸುವನು. ಈ ಕ್ರಿಯಾಭಿವ್ಯಕ್ತಿಯು ಆಯಾಯ ಜೀವರ ಸ್ವರೂಪಯೋಗ್ಯತೆ, ಅವರನ್ನು ಬಾಧಿಸಿರುವ ಅನಾಧಿಕರ್ಮಗಳಿಗೆ ಅನುಗುಣವಾಗಿರುವುದು. "ಬಿಂಬ ಚಲಿಸಿದರೆ ಪ್ರತಿಬಿಂಬ ಚಲಿಸುವುದು" ಎಂಬ ಈಶ-ದಾಸ ಭಾವದಂತೆ ಸಕಲ ಜೀವರೂ ಈಶಾಧೀನರು. ಅವನ ಪ್ರೇರಣೆಯಿಲ್ಲದೆ ಜೀವರಲ್ಲಿ ಕ್ರಿಯಾಭಿವ್ಯಕ್ತಿಯಾಗಲು ಸಾಧ್ಯವಿಲ್ಲ. ಅವನು ಪ್ರೇರಕನು. ಜೀವರು ಪ್ರೇರ್ಯರು. ಈಶನು ನಿಯಾಮಕನು. ದಾಸರೆಲ್ಲರೂ ನಿಯಮ್ಯರು ಇದೇ ಭಾವವನ್ನು ದಾಸರಾಯರು ತಿಳಿಸುತ್ತಾರೆ. ಅನಾದಿಕಾಲದಿಂದಲೂ ಜೀವರು ತ್ರಿವಿಧವರ್ಗಕ್ಕೆ ಸೇರಿದ್ದಾರೆ. ಮುಕ್ತಿಯೋಗ್ಯ ಚೇತನರಾದ ಸಾತ್ವಿಕರು, ಮಿಶ್ರಗತಿಯನ್ನು ಹೊಂದುವ ನಿತ್ಯಸಂಸಾರಿಗಳಾದ ರಾಜಸಜೀವರು, ಇವರು ಮಾನವರು, ತಮೋಯೋಗ್ಯರಾದ ನಿತ್ಯದುಃಖ : ರೂಪವಾದ ಅಂಧಂತಮಸ್ಸೆಂಬ ದುರ್ಗತಿಯನ್ನು ಹೊಂದುವ ತಾಮಸರು, ಇವರು ದಾನವರು. ಹೀಗೆ ದಿವಿಜ

ಮಾನವ ದಾನವರೆಂಬ ತ್ರಿವಿಧಜೀವರಲ್ಲಿ ಬಿಂಬನಾಗಿ ತಾನು ಅನವರತ ಇದ್ದಾನೆ. ತ್ರಿವಿಧ ಜೀವರ ಸ್ವರೂಪ ಯೋಗ್ಯತೆಗನುಗುಣವಾಗಿ ಕರ್ಮಗಳು ಸಾತ್ವಿಕಗುಣದಿಂದ ಪುಣ್ಯಕರ್ಮ, ರಜೋಗುಣದಿಂದ ಮಿಶ್ರಕರ್ಮ, ತಮೋಗುಣದಿಂದ ಪಾಪಕರ್ಮ. ಹೀಗೆ ತ್ರಿವಿಧ ಜೀವರಲ್ಲಿ ಬಿಂಬನಾಗಿದ್ದು, ದೇಹಗತ ಇಂದ್ರಿಯಗಳಲ್ಲಿ ಪ್ರಕಾಶತೋವ್ಯಾಪ್ತನಾದ ಜೀವನದ್ವಾರಾ ಮಾಡಿಸುವನು. ॥ ೪ ॥

## ಪದ್ಯ ೫

ಮೂಲ :

ಪುಣ್ಯ ಪಾಪಗಳೀತೆರದಿ ಕಾ ।
ರುಣ್ಯ ಸಾಗರ ದೇವ ದಾನವ ।
ಮಾನವರೊಳಿಟ್ಟವರ ಫಲ ವ್ಯತ್ಯಾಸವನೆ ಮಾಡಿ ॥
ಬನ್ನಬಡಿಸುವ ಭಕ್ತಿಹೀನರ ।
ಸನ್ನುತ ಸುಕರ್ಮಗಳ ತೆಗೆದು ಪ್ರ ।
ಪನ್ನರಿಗೆ ಕೊಟ್ಟವರ ಸುಖಬಡಿಸುವನು ಸುಭುಜಾಕ್ಷ ॥ ೫ ॥

ಅವತರಣಿಕೆ :

ಪರಮಕಾರುಣಿಕನಾದ ಆ ಪರಮನು ತ್ರಿವಿಧಜೀವರಲ್ಲಿ ಅವರವರ ಸ್ವರೂಪಕ್ಕನುಗುಣವಾಗಿ ತನ್ನಿಂದಲೇ ಪ್ರವರ್ತಿತವಾಗುವ ಕರ್ಮಗಳ ಫಲಗಳಲ್ಲಿ ವ್ಯತ್ಯಾಸವನ್ನು ಮಾಡಿ, ಭಕ್ತಜನರಿಗೆ ಸುಖಪ್ರದನಾಗಿರುವನೆಂದು ತಿಳಿಸುತ್ತಾರೆ.

ಪ್ರತಿಪದಾರ್ಥ

**ಕಾರುಣ್ಯಸಾಗರ** = ದಯಾಸಮುದ್ರನಾದ ಶ್ರೀಪರಮಾತ್ಮನು, **ಈ ತೆರದಿ** = ಪೂರ್ವೋಕ್ತಪ್ರಕಾರ, **ಪುಣ್ಯಪಾಪಗಳ** = ಸ್ಥಿತಿಕಾಲದಲ್ಲಿ ಆಯಾಯ

ಜೀವನ್ನ ಅನಾದಿಜಡಕರ್ಮಗಳಿಗನುಸಾರವಾಗಿ, ಅವರ ಸ್ಥೂಲದೇಹಗತ ಇಂದ್ರಿಯಗಳ ದ್ವಾರಾ ಪುಣ್ಯಕಾರ್ಯಗಳೇನು, ಪಾಪಕಾರ್ಯಗಳೇನು (ಮಿಶ್ರ ಕಾರ್ಯಗಳೂ ಗ್ರಾಹ್ಯ) **ದೇವ**=ಬ್ರಹ್ಮಾದಾರಭ್ಯ ತೃಣಾಂತ ಮುಕ್ತಿಯೋಗ್ಯ ರಾದ ಸಾತ್ವಿಕಜೀವರಲ್ಲಿ, **ದಾನವ**=ಭಗವದ್ದ್ವೇಷ ಮಾಡುವ ಕಲ್ಯಾರಭ್ಯ ತೃಣಾಂತ ತಮೋಯೋಗ್ಯ ಚೇತನರಲ್ಲಿ, **ಮಾನವ**= ಪುರಂಜನಾದಿ ತೃಣಾಂತ ನಿತ್ಯಸಂಸಾರಿಗಳಾದ ರಾಜಸಜೀವರಲ್ಲಿ, **ಇಟ್ಟು**= ಅವರವರ ಕರ್ಮಾಭಿವ್ಯಕ್ತಿ ಗಾಗಿ ಸ್ವಾತಂತ್ರ್ಯ ವಿಭಾಗಗಳನ್ನು ಇಟ್ಟು, ಬಿಂಬನಾಗಿ ಇದ್ದು, **ಅವರ**= ಆಯಾಯಾ ತ್ರಿವಿಧ ಜೀವರುಗಳ, **ಫಲವ್ಯತ್ಯಾಸವನೆಮಾಡಿ**= ಕರ್ಮಜನಿತ ವಾದ ಫಲಗಳಲ್ಲಿ ವ್ಯತ್ಯಾಸಮಾಡಿ, ಭಕ್ತರಿಗೆ ಸುಖ, ದ್ವೇಷಿಗಳಿಗೆ ದುಃಖ ಮತ್ತು ಮಿಶ್ರರಿಗೆ ಮಿಶ್ರಫಲಗಳನ್ನು ಅವರವರ ಸ್ವರೂಪ ಯೋಗ್ಯತಾನುಸಾರ ಕೊಡುವನು. **ಭಕ್ತಿಹೀನರ** = ಪರಮಾತ್ಮನಲ್ಲಿ ಭಕ್ತಿ ಇಲ್ಲದ, ದ್ವೇಷಭಾವ ವುಳ್ಳ ತಮೋಯೋಗ್ಯರಾದ ತಾಮಸರ, **ಸುಕರ್ಮಗಳ**= ಅವರು ಮಾಡಿದ ಪುಣ್ಯಕರ್ಮಗಳ ಭಾಗಗಳನ್ನು, **ತೆಗೆದು** = ಅವರಿಗೆ ಕೊಡದೆ ಪ್ರತ್ಯೇಕಿಸಿ, **ಪ್ರಪನ್ನರಿಗೆ** = ಶರಣಾಗತರಾದ ತನ್ನ ಭಕ್ತರಿಗೆ, **ಕೊಟ್ಟು** = ಹಂಚಿ, **ಅವರ ಸುಖಬಡಿಸುವನು** = ಅವರನ್ನು ಆನಂದ ಪಡಿಸುತ್ತಾನೆ. **ಸುಭುಂಜಾಹ್ವ** = ವಿಷಯಗತ ಸ್ವಾಖ್ಯಗಳನ್ನು ತಾನು ಭುಂಜಿಸುವ ಎಂಬ ಹೆಸರಿನಿಂದ ಕರೆಸುವನು. ॥ ೫ ॥

## ವ್ಯಾಖ್ಯಾನಗಳು

### ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಸ್ಥಿತಿಕಾಲಾಪೇಕ್ಷಯಾ ಮೋಕ್ಷದಲ್ಲಿ ಫಲ ವ್ಯತ್ಯಾಸ ಮಾಡತಾನೆಂತ ಹೇಳತಾರೆ.

ಆಯಾಪ್ರಾಣಿಗಳು ಸಾಧನೆ ಪೂರ್ತಿ ಮಾಡಿಕೊಂಡು ಅವರವರ ಸ್ವರೂಪ ಗತಿ ಐದೋವದಕ್ಕೋಸ್ಕರ ಕರುಣಾಸಮುದ್ರನಾದ ನಾರಾಯಣದೇವರು ಈ ಪೂರ್ವೋಕ್ತ ಪ್ರಕಾರ, ಬ್ರಹ್ಮದೇವರಾರಭ್ಯ ತೃಣಾಂತ ಮುಕ್ತಿಯೋಗ್ಯ ಜೀವರು, ಭಗವಂತನ ದ್ವೇಷ ಮಾಡತಕ್ಕ ಸ್ವರೂಪಸ್ವಭಾವವುಳ್ಳ ದೈತ್ಯರು, ಪುರಂಜನ ಆರಂಭ ಮಾಡಿ ತೃಣಾಂತ ನಿತ್ಯಸಂಸಾರಿಜೀವರು–ಸ್ವರೂಪದಲ್ಲೇ ಸುಖ ದುಃಖ ಮಿಶ್ರವುಳ್ಳವರೆಂದು ತಾತ್ಪರ್ಯ-ಇವರುಗಳಲ್ಲಿ ತನ್ನ ಸ್ವಕೀಯವಾದ ಸ್ವಾತಂತ್ರ್ಯ ವಿಭಾಗ ಮಾಡಿ ಇವರೊಳಗೆ ಇಟ್ಟು, ಸ್ಥಿತಿಕಾಲದಲ್ಲಿ ಅವರವರ ಅನಾದಿ ಜಡಕರ್ಮಗಳ ಅನುಸರಿಸಿ, ಸ್ಥೂಲದೇಹದಿಂದ ಪುಣ್ಯ ಪಾಪ ಕರ್ಮಗಳನ್ನು ತ್ರಿವಿಧರಿಂದಲೂ ಮಾಡಿಸಿ, ಆಯಾ ತ್ರಿವಿಧ ಜೀವರ ಸ್ವರೂಪಕ್ಕೆ ಅನುಸರಿಸಿ ಫಲಗಳ ಸಾಧನೆ ಕಾಲದಲ್ಲೇ ಕೊಡದೆ, ಅವಕ್ಕೆ ಅನ್ಯಥಾವಾಗಿ ಮಾಡಿ, ತ್ರಿವಿಧ ಜೀವರನ್ನೂ ದುಃಖಬಡಿಸೋವನಾಗತಾನೆ. ಸ್ಥಿತಿಕಾಲದ ಕರ್ಮವನ್ನನುಸರಿಸಿದ ಸುಖದುಃಖಾದಿಗಳು ತ್ರಿವಿಧರಿಗೆ ಇರುತ್ತವೆ. ಲಿಂಗ ಭಂಗಾನಂತರ ಸ್ಥಿತಿಕಾಲದ ಕರ್ಮವನ್ನನುಸರಿಸಿದ ಸುಖಫಲದೋಷಾದಿಯಲ್ಲಿ ಫಲಗಳ ಕೊಡದೆ, ಅದರನ್ನ ವ್ಯತ್ಯಾಸಮಾಡಿ ಭಕ್ತರಿಗೆ ಸುಖ, ದ್ವೇಷಿಗಳಿಗೆ ದುಃಖ, ಮಿಶ್ರರಿಗೆ ಮಿಶ್ರಫಲ ಕೊಡತಾನೆ. ಸರ್ವೋತ್ತಮನೆಂದು ಭಕ್ತರಿಂದ ನುತನಾದ ನಾರಾಯಣದೇವರು ಸ್ಥಿತಿಕಾಲದಲ್ಲಿ ಪರಮಾತ್ಮನ್ನ ಸರ್ವೋತ್ತಮನೆಂದು ತಿಳಿಯದೆ ಇರುವ ತಮೋಯೋಗ್ಯ, ನಿತ್ಯಸಂಸಾರಿಗಳ ಅನಾದಿ ಕರ್ಮವನ್ನನುಸರಿಸಿ ಮಾಡಿದ ಪುಣ್ಯಕರ್ಮಗಳ ತೆಗೆದುಕೊಂಡು ತನ್ನ ಭಕ್ತರಾದ ಆಯಾಪ್ರಾಣಿಗಳ ಸ್ಥೂಲದೇಹಗತ ತತ್ತ್ವದೇವತೆಗಳಿಗೆ ಕೊಟ್ಟು, ಆ ತತ್ತ್ವ ದೇವತೆಗಳನ್ನ ಸುಖಬಡಿಸೋವನಾಗತಾನೆ. ತದ್ಗತ ಸಮೀಚೀನಗಳಾದ, ತನಗೆ ಭೋಜನಕ್ಕೆ ಯೋಗ್ಯಗಳಾದ ತನ್ನ ಸ್ವಾಖ್ಯಗಳ ತಾನು ಭುಂಜಿಸಿ ಸುಭುಜ ಎಂತ ಕರಸೋವನಾಗತಾನೆ. ತದ್ವತ್ ಭಕ್ತರ ಪಾಪಗಳ ದೈತ್ಯರಿಗೆ ಕೊಟ್ಟು ದುಃಖಬಡಿಸೋವನಾಗತಾನೆ. ದೈತ್ಯರಿಗೆ ಪುಣ್ಯ ಉಳಿಯೋದಿಲ್ಲವಾ ಎಂದರೆ, ಅದರನ್ನ ಮುಂದಿನ ಶ್ಲೋಕದಲ್ಲಿ ಹೇಳತಾನೆ ॥ ೫ ॥

ಭಾವಪ್ರಕಾಶಿಕೆ

ಕರುಣಾಸಮುದ್ರನಾದ ಶ್ರೀಹರಿಯು ದೇವತೆಗಳಿಂದ ಪುಣ್ಯವನ್ನು, ದಾನವರಿಂದ ಪಾಪವನ್ನು, ಮಾನವರಿಂದ ಪುಣ್ಯಪಾಪಗಳನ್ನು ಮಾಡಿಸಿ, ಫಲದಲ್ಲಿ ದೇವತೆಗಳಿಗೆ, ಮನುಷ್ಯೋತ್ತಮರಿಗೆ ಮುಕ್ತಿಯನ್ನೂ, ದಾನವರಿಗೆ ತಮಸ್ಸನ್ನೂ, ಮನುಷ್ಯರಿಗೆ ಮಿಶ್ರಲೋಕವನ್ನೂ ಕೊಡಿಸುವನು. ಅಭಕ್ತರಾದ ದಾನವರು ಮಾಡುವ ಯಜ್ಞದಾನಾದಿ ಫಲಗಳನ್ನು ತೆಗೆದು ದೇವತೆಗಳಿಗೆ ಕೊಡಿಸುವನು. ದೇವತೆಗಳು ಮಾಡುವ ಪಾಪಗಳನ್ನು ದೈತ್ಯರಿಗೆ ಕೊಡಿಸುವನು. ಇದರಿಂದ ಪರಮಾತ್ಮನಿಗೆ ವೈಷಮ್ಯ ಬಾರದೆ ಅಂದರೆ ದೇವತೆಗಳಲ್ಲಿ ಅಸುರಾವೇಶವಿದ್ದಾಗ, ಅವರು ದೈತ್ಯರ ಪ್ರೇರಣೆಯಿಂದಲೇ ಪಾಪಗಳನ್ನು ಮಾಡುವರು, ಆದ್ದರಿಂದ ಆ ಫಲವನ್ನು ದೈತ್ಯರಿಗೇ ಕೊಡಿಸುವನು. ದೈತ್ಯರು ಪುಣ್ಯವನ್ನು ಮಾಡಿದರೂ ಒಳಗಿರುವ ದೇವತೆಗಳ ಪ್ರೇರಣೆಯಿಂದಲೇ ಮಾಡುವರು. ಆದ್ದರಿಂದ ಆ ಪುಣ್ಯಫಲವನ್ನು ದೇವತೆಗಳಿಗೇ ಕೊಡಿಸುವನು. ದೇವತೆಗಳಿಗೆ ಕೆಲವು ಕಾಲ ಕಷ್ಟಕಂಡುಬಂದರೂ ಅದು ದೈತ್ಯಾವೇಶದಿಂದ ದೇವತೆಗಳ ಶರೀರಪ್ರವಿಷ್ಟರಾದ ದೈತ್ಯರಿಗೆ ಆಗುವವು. ಅಸುರರಿಗೆ ಸುಖಕಾಣುವದು ದೇವಾವೇಶದಿಂದಾಗುವದೆಂದು ಭಾಗವತ ಏಕಾದಶಸ್ಕಂಧದಲ್ಲಿ ಹೇಳಿರುವರು. ಆದ್ದರಿಂದ ಪರಮಾತ್ಮನಿಗೆ ವೈಷಮ್ಯಾದಿ ಗುಣಗಳು ಎಂದಿಗೂ ಇಲ್ಲವೆಂದು ಸಿದ್ಧಾಂತ. ಇದಲ್ಲದೆ ದೈತ್ಯರ ಪುಣ್ಯಭಾಗಗಳನ್ನು ದೇವತೆಗಳಿಗೆ ಮಾತ್ರವೇ ಕೊಡುತ್ತಾನೆಂತಲ್ಲ. ಭಕ್ತರಿಗೆಲ್ಲರಿಗೂ ಕೊಡುವನು. ವಿಷ್ಣು ರಹಸ್ಯದಲ್ಲಿ (ಅಧ್ಯಾಯ ೨೧) "ಪುಣ್ಯಕರ್ಮಗಳಿಗೆ ಸಹಾಯ ಮಾಡುವವರಿಗೂ ಪುಣ್ಯಾತ್ಮರಾಗಿರುವ ಮನುಷ್ಯರಿಗೂ ದೈತ್ಯರಲ್ಲಿರುವ ಪುಣ್ಯ ಭಾಗಗಳ ಫಲಾಂಶವನ್ನು ಕೊಡುವನು. ಪಾಪಕರ್ಮಕ್ಕೆ ಸಹಾಯ ಮಾಡುತ್ತಾ ಪಾಪಸ್ವಭಾವವುಳ್ಳವರಿಗೆ ದೇವತೆಗಳಲ್ಲಿರುವ ಪಾಪಭಾಗ ಫಲವನ್ನು ಕೊಡುವನು" ಎಂದು ಹೇಳಿರುವರು. ಅದೇ ಅಭಿಪ್ರಾಯವನ್ನೇ ದಾಸರಾಯರು ಇಲ್ಲಿ ಹೇಳಿರುವರು. ॥ ೫ ॥

**ಭಾವದರ್ಪಣ**

**ಪುಣ್ಯ ಪಾಪೇತಿ.** ಉಕ್ತಂ ಚ ವಿಜಯದಾಸರಾಜೈಃ । " ಸುಜನರ ಕೈಯಿಂದ ಪಾಪಾವ ಮಾಡಿಸಿ ನಿಜಬುದ್ಧಿಯನು ಕೊಟ್ಟು ಸದ್ಗತಿ ಪಾಲಿಪಾ । ಕುಜನರ ಕೈಯಿಂದ ಸತ್ಕರ್ಮವ ಮಾಡಿಸಿ ಭಜನೆಗೆಡಸಿ ಐದಿಸುವಾ ಪಾಪ ಮಾರ್ಗ । ಸುಜನಕ್ಕೆ ಕುಜನಕ್ಕೆ ದೃಷ್ಟಾಂತ ಉಂಟು । ತ್ರಿಜಗದೊಳಗೆ ಇದೇ ಸಿದ್ಧಾಂತವಯ್ಯಾ । ಅಜಮಿಳಾನ ನೋಡು । ಕೆಟ್ಟು ಹೋಗಿದ್ದಾರೂ ರಜದೂರಾನ ಮಾಡಿ ಹರಿ ಕಾಯಿದಾ । ಕುಜನಬುದ್ಧಾರು ಸನ್ಮಾರ್ಗ ದೊಳಿದ್ದಾರೂ । ದನುಜರಿಪು ಬುದ್ಧನಾಗಿ ಕಂಗೆಡಿಸಿದ ಗಜವರದ ಇಂತ್ಯಾಕೆ ಮಾಡಿದನೆನೆ ಅಜನಾಪಿತನ ಇಚ್ಛೆ ಅಂಥಾದೆ ಅಂಥಾದೆ ಅಜರಾವೈಚಿತ್ರಕಾ ಲೋಕವಿಲಕ್ಷಣ ವಿಜಯವಿಠ್ಠಲರೇಯಾ ನಿಜ ಇಚ್ಛೆ ನಿಜಕ್ರಿಯಾ" ಎಂತ ಸುಳಾದಿ ಅದೆ. ಮತ್ತು "ಧರ್ಮೋಽ ಭವತ್ಯಧರ್ಮೋಽಪಿ ಕೃತೋ ಭಕ್ತೈಸ್ತವಾ ಚ್ಯುತ । ಪಾಪಂ ಭವತಿ ಧರ್ಮೋಽಪಿ ಯೋ ನ ಭಕ್ತೈಃ ಕೃತಾ ಹರೇಃ" ಎಂತ ಶ್ರೀಸರ್ವಜ್ಞರಾಯರ ಉಕ್ತಿ ಇರೋಣದರಿಂದಲೂ ಸಜ್ಜನರ ಪಾಪ ದೈತ್ಯರಿಗೆ ಕೊಡುತ್ತಾನೆಂತಲೂ ದಾರ್ಢ್ಯದಿಂದ ನಂಬತಕ್ಕದ್ದೆಂದು ದಾಸಾರ್ಯರ ಹೃದಯ. ಪ್ರಪನ್ನರು = ಭಕ್ತರು. ॥ ೫ ॥

**ಶ್ರೀವ್ಯಾಸದಾಸ ಸಿದ್ಧಾಂತ ಕೌಮುದೀ**

"ಪುಣ್ಯ" ಇತಿ ॥ ೫ ॥

**ಕನ್ನಡಾರ್ಥ**

"ಪರಮಾತ್ಮನು ದೇವದಾನವ ಮಾನವರುಗಳಲ್ಲಿ ಪುಣ್ಯ ಹಾಗೂ ಪಾಪ ಕರ್ಮಗಳನ್ನು ಮಾಡಿಸಿ, ಪುಣ್ಯಪಾಪಗ ಫಲಭೋಗಗಳಲ್ಲಿ ವ್ಯತ್ಯಾಸಮಾಡಿ ಭಕ್ತಿಹೀನರ ಪುಣ್ಯಫಲವನ್ನು ತೆಗೆದು, ಭಕ್ತರಿಗೆ ಕೊಟ್ಟು, ಅವರನ್ನು ಸುಖ ಪಡಿಸುವನು" ಎಂದು ಈ ಪದ್ಯದ ಭಾವ ॥ ೫ ॥

## ಶ್ರೀಗುರುಕೃಪಾಪ್ರಕಾಶಿಕೆ

ಅಶಕ್ತರ ಶಕ್ತಿ ವ್ಯಕ್ತಿ ಮಾಡಿಕೊಡುವದ್ದರಿಂದ ಕರುಣಾಸಮುದ್ರನೆಂಬ ದೇವರು ಪುಣ್ಯಪಾಪವನ್ನು ಈ ತೆರದಿ, ಈ ರೀತಿಯಾಗಿ, ದೇವ ದಾನವ ಮಾನವರೊಳಿಟ್ಟು ಅಂದರೆ ಪುಣ್ಯಕರ್ತೃತ್ವ ಶಕ್ತಿ, ಪಾಪಕರ್ತೃತ್ವಶಕ್ತಿ, ಪುಣ್ಯ ಪಾಪ ಮಿಶ್ರಕರ್ತೃತ್ವಶಕ್ತಿ ಸಹ ತ್ರಿವಿಧ ಜೀವರಲ್ಲಿಟ್ಟು, ತನ್ನ ಭಕ್ತರಲ್ಲದವರ ಸನ್ಮತ ಸುಕರ್ಮ ಎಂಬ ಪುಣ್ಯಫಲಗಳನ್ನು ತಾನು ಅಪಹರಿಸಿ, ಪ್ರಪನ್ನರಾದ ತನ್ನ ಭಕ್ತರಿಗೆ ಕೊಟ್ಟು, ಅವರನ್ನು ಸುಖಪಡಿಸುವನಾದ್ದರಿಂದ ಸುಭಜ ಎಂದು ಹೆಸರುಳ್ಳವನು ದೇವರು, ಭಕ್ತಿಹೀನರಾದವರ ಫಲ ವ್ಯತ್ಯಾಸವನ್ನು ಮಾಡಿ, ಅಂದರೆ ತನ್ನ ಭಕ್ತರಲ್ಲಿದ್ದ ಪಾಪವನ್ನ ತನ್ನ ಭಕ್ತರಲ್ಲದವರಿಗೆ ಕೊಟ್ಟು ಬನ್ನಬಡಿಸುವ ಅಂದರೆ, ನಾನಾವಿಧ ಕ್ಲೇಶಪಡಿಸುವನು. ॥೫॥

## ಸರ್ವವ್ಯಾಖ್ಯಾನಸಾರಸಂಗ್ರಹ

ತ್ರಿವಿಧ ಜೀವರಲ್ಲಿ ಅಂತಸ್ಥಿತನಾಗಿದ್ದು ಬಿಂಬಕ್ರಿಯಾದ್ವಾರಾ, ಅವರವರ ಕರ್ಮಾಭಿವ್ಯಕ್ತಿ ಮಾಡುವ ವಿಷಯ ತಿಳಿಸುತ್ತಾರೆ.

ವಿಷ್ಣು ಭಕ್ತಿ, ವಿಷ್ಣು ಭಕ್ತರಲ್ಲಿ ಆದರ, ವ್ರತಾಚರಣೆ, ಋತು ಕಾಲ ಧರ್ಮಕ್ಕನುಗುಣವಾದ ವಿಧ್ಯುಕ್ತ ಸತ್ಕರ್ಮಗಳು ಇತ್ಯಾದಿ ಸತ್ಕರ್ಮಾನುಷ್ಠಾನದಿಂದ ಉಂಟಾಗುವ ಫಲವೇ ಪುಣ್ಯವು.

ವಿಷ್ಣು ದ್ವೇಷ, ಮಿಥ್ಯಾವಾದ ಪ್ರಚಾರ, ವಿಷ್ಣು ಭಕ್ತರಲ್ಲಿ ದ್ವೇಷ, ಸಜ್ಜನರಿಗೆ ಹಿಂಸೆ ಕೊಟ್ಟು ಅವರನ್ನು ಪೀಡಿಸುವಿಕೆ, ಅವರ ಸತ್ಕಾರ್ಮಾನುಷ್ಠಾನಕ್ಕೆ ಪ್ರತಿಬಂಧಕ ಒಡ್ಡುವುದು ಇತ್ಯಾದಿ, ದುಷ್ಕರ್ಮಗಳ ಫಲರೂಪವೇ

ಪಾಪಗಳು. ತಮೋಗುಣ ಪ್ರಾಚುರ್ಯದಿಂದ ಜನ್ಯವಾದ ದುಷ್ಕರ್ಮಗಳ ಫಲಾನುಭೋಗವೇ ಪಾಪವು. ಇದರಿಂದ ಪುಣ್ಯ-ಪಾಪಗಳ ಮಿಶ್ರಫಲವೂ ಗ್ರಾಹ್ಯ (ರಜೋಗುಣಜನ್ಯವಾದದ್ದು).

ಅಸೃಜ್ಯರಾಶಿಯಲ್ಲಿದ್ದ ಜೀವರನ್ನು ಸೃಷ್ಟಿಗೆ ತಂದು, ಅಂತ್ಯದಲ್ಲಿ ಲಿಂಗ ಭಂಗ ದ್ವಾರಾ ಸಕಲಕರ್ಮ ವಿಮೋಚನೆಗೈದು, ಪರಮಪುರುಷಾರ್ಥರೂಪವಾದ ನಿತ್ಯಾನಂದರೂಪವಾದ ಮೋಕ್ಷಾನಂದವನ್ನು ಕೊಡುವ ಕಾರುಣ್ಯಸಾಗರನು. ಕಂಜದಳಾಯತಾಕ್ಷನು ದೇವ, ದಾನವ, ಮಾನವರೆಂಬ ತ್ರಿವಿಧ ವರ್ಗದ ಜೀವರಲ್ಲಿ ಅಂತಸ್ಥಿತನಾಗಿದ್ದು ಪೂರ್ವೋಕ್ತಪ್ರಕಾರ, ಸ್ವಗತಸ್ವಾತಂತ್ರ್ಯವೆಂಬ ವಿಭಾಗಗಳ ಕಳೆಗಳನ್ನು ಅವರಲ್ಲಿಟ್ಟು, ಪುಣ್ಯ, ಪಾಪ, ಮಿಶ್ರ ಕರ್ಮಗಳನ್ನು ಮಾಡಿ ಮಾಡಿಸುತ್ತಿರುವನು.

ವಿಶೇಷ ವಿಚಾರ :-

ಕೆಲವು ಪ್ರಸಂಗ ವಿಶೇಷಗಳಲ್ಲಿ ಮುಕ್ತಿಯೋಗ್ಯ ಚೇತನರಾದ ದೇವತೆಗಳು ಅಜ್ಞಾನವಶದಿಂದಲಾಗಲೀ, ಕಲ್ಯಾವೇಶದಿಂದಲಾಗಲೀ, ಶಾಪನಿಮಿತ್ತದಿಂದಲಾಗಲೀ ಪಾಪಕರ್ಮಗಳನ್ನು ಮಾಡುವರು. ಪುರಾಣೇತಿಹಾಸಾದಿಗಳಲ್ಲಿ ಇಂತಹ ಪ್ರಸಂಗಗಳು ಹಲವಾರು. ನಂತರ ಅವರಿಗೆ ಪಶ್ಚಾತ್ತಾಪ ಮೂಡಿ ಆ ಶರ್ವವಂದಿತನಿಗೆ ಶರಣಾಗತರಾಗುವರು. ಆಗ ಆ ಕಾರುಣ್ಯ ಸಾಗರನು ಅವರ ಪಾಪಕರ್ಮಗಳ ಫಲವನ್ನು ದೈತ್ಯರಿಗೆ ಹಂಚುವನು. ದುರುದ್ದೇಶದಿಂದ ವಿಷ್ಣು, ವಿಷ್ಣುಭಕ್ತರ ದ್ವೇಷಿಗಳಾದ ದೈತ್ಯರು ಪ್ರಸಂಗ ವಶಾತ್ ಮಾಡುವ ಯಾಗ, ತಪಸ್ಸು ಇತ್ಯಾದಿ ಸತ್ಕರ್ಮಗಳಿಂದ ಉಂಟಾದ ಪುಣ್ಯ ಫಲವನ್ನು ಅವರಿಗೆ ದಕ್ಕದಂತೆ ದೇವತೆಗಳಿಗೆ ಹಂಚುವನು. ಇದರಿಂದ ಶ್ರೀಪರಮಾತ್ಮನಿಗೆ ವೈಷಮ್ಯ ಬರುವುದಿಲ್ಲವೇ ಎಂಬ ಸಂದೇಹ ಸಹಜವಾಗಿ ಹುಟ್ಟುವುದು.

## ಪದ್ಯ ೬

### ಮೂಲ

ಮಾಣಿಕವ ಕೊಂಡಂಗಡಿಯೊಳಜಿ ।
ವಾನ ಕೊಟ್ಟಾಪುರುಷನ ಸಮಾ ।
ಧಾನ ಮಾಡುವ ತೆರದಿ ದೈತ್ಯರು ನಿತ್ಯದಲಿ ಮಾಳ್ಪ ॥
ದಾನ ಯಜ್ಞಾದಿಗಳ ಫಲ ಯಜ ।
ಮಾನ ತಾನಪಹರಿಸಿ ಅಸಮೀ ।
ಚೀನ ಸುಖಗಳ ಕೊಟ್ಟು ಅಸುರರ ಮತ್ತರನು ಮಾಳ್ಪ ॥ ೬ ॥

### ಅವತರಣಿಕೆ :–

ದಾನ ಯಜ್ಞ ಯಾಗಾದಿ ಸತ್ಕರ್ಮಗಳನ್ನು ದುರುದ್ದೇಶದಿಂದ ಮಾಡುವ ಅಸುರರ ಪುಣ್ಯ ಫಲಗಳನ್ನು, ಅವರಿಂದ ತೆಗೆದು, ಆ ಸತ್ಕರ್ಮಗಳಿಗೆ ತಕ್ಕಂತೆ ಕ್ಷಣಿಕವಾದ ಸುಖೋಪಭೋಗಗಳನ್ನು ಅವರಿಗೆ ಕೊಟ್ಟು, ಆ ಅಸುರರನ್ನು ಇನ್ನೂ ಉನ್ಮತ್ತರನ್ನಾಗಿ ಮಾಡುತ್ತಾನೆಂದು, ದೃಷ್ಟಾಂತ ಪೂರ್ವಕ ತಿಳಿಸುತ್ತಾರೆ.

### ಪ್ರತಿಪದಾರ್ಥ

**ಅಂಗಡಿಯೊಳು** = ವಿಧ ವಿಧವಾದ ಸರಕುಗಳನ್ನು ವ್ಯಾಪಾರ ಮಾಡುವ ಅಂಗಡಿಯಲ್ಲಿ, **ಮಾಣಿಕವ ಕೊಂಡು** = ವ್ಯಾಪಾರಿಯು ಗಿರಾಕಿಯಿಂದ ಉತ್ತಮವಾದ ಮಾಣಿಕ್ಯವೆಂಬ ರತ್ನವನ್ನು ಕೊಂಡುಕೊಂಡು, **ಅಜಿವಾನ ಕೊಟ್ಟು** = ಆ ಮಾಣಿಕ್ಯಕ್ಕೆ ಪ್ರತಿಯಾಗಿ ಅಲ್ಪ ಬೆಲೆಯುಳ್ಳ ಓಮನ್ನು ಕೊಟ್ಟು, **ಆ ಪುರುಷನ** = ಮಾಣಿಕ್ಯವನ್ನು ಕೊಟ್ಟ ಆ ಗಿರಾಕಿಯನ್ನು,

**ಸಮಾಧಾನ ಮಾಡುವ ತೆರದಿ** = ಮಾತುಗಳಿಂದ ಸಮಾಧಾನಪಡಿಸುವಂತೆ, **ದೈತ್ಯರು** = ಭಗವದ್ದ್ವೇಷಿಗಳಾದ ದೈತ್ಯರು (ಗಿರಾಕಿಯ ಸದೃಶ), **ನಿತ್ಯದಲಿ ಮಾಳ್ಪ** = ಪ್ರತಿದಿನದಲ್ಲಿ ಆಚರಿಸುವ, **ದಾನ ಯಜ್ಞಾದಿಗಳ ಫಲ** = ವಿವಿಧವಾದ ದಾನಗಳೇನು, ಯಜ್ಞ ಯಾಗಾದಿ ಸತ್ಕರ್ಮಗಳೇನು, ಅವುಗಳಿಂದ ಜನಿತವಾದ ಫಲವನ್ನು (ಸತ್ಕರ್ಮಗಳ ಫಲರೂಪವಾದ ಪುಣ್ಯವು ಮಾಣಿಕ್ಯ ಸದೃಶ), **ಯಜಮಾನ** = ಜಗತ್ಪ್ರಭುವಾದ ಶ್ರೀಪರಮಾತ್ಮನು (ವರ್ತಕ ಸದೃಶನು), **ತಾನಪಹರಿಸಿ** = ದೈತ್ಯರಿಗೆ ಸಿಕ್ಕದಂತೆ ಮಾಡಿ, ತಾನು ಸ್ವೀಕರಿಸಿ, **ಅಸಮೀಚೀನ ಸುಖಗಳ ಕೊಟ್ಟು** = ಕ್ಷಣಿಕವಾದ, ದುಃಖಕ್ಕೆ ಕಾರಣವಾಗುವ ಅಲ್ಪಸುಖಗಳನ್ನು ನೀಡಿ, (ಅಮೂಲ್ಯವಾದ ಮಾಣಿಕ್ಯಕ್ಕೆ ಬದಲಾಗಿ ಅಲ್ಪ ಬೆಲೆಯುಳ್ಳ ಓಮನ್ನು ಕೊಟ್ಟಂತೆ), **ಅಸುರರ** = ಭಗವದ್ದ್ವೇಷಿಗಳಾದ ಅಂತಹ ತಮೋಯೋಗ್ಯರಾದ ದೈತ್ಯರನ್ನು, **ಮತ್ತರನು ಮಾಳ್ಪ** = ಉನ್ಮತ್ತರನ್ನಾಗಿ ಮಾಡಿ, ದುರಹಂಕಾರದಿಂದ ವರ್ತಿಸುವಂತೆ ಮಾಡಿ, ಅಜ್ಞಾನಾಂಧಕಾರದಲ್ಲಿ ಕೆಡವಿ, ದುರ್ಗತಿ ನೀಡುವನು. ॥೬॥

## ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಭಗವದ್ದ್ವೇಷಿಗಳು ಅಪಕ್ವದಶಾದಲ್ಲಿ ಮಾಡಿದ ಪುಣ್ಯದೊಳಗೆ ನಿಲ್ಲತಕ್ಕ ಪುಣ್ಯಭಾಗ ಹೇಳತಾರೆ.

ಅನೇಕ ವಿಧವಾದ ದಿನಸುಗಳ ಅಂಗಡಿಯಲ್ಲಿ ಇಟ್ಟುಕೊಂಡು ವ್ಯಾಪಾರ ಮಾಡತಕ್ಕ ಪುರುಷ, ಉತ್ತಮವಾದ ಮಾಣಿಕ್ಯವನ್ನು ಅನ್ಯಪುರುಷನಿಂದ ತಾನು ತೆಗೆದುಕೊಂಡು, ತನ್ನ ಅಂಗಡಿಯಲ್ಲಿರತಕ್ಕ ಅಲ್ಪ ಬೆಲೆಯುಳ್ಳ ಓಮವನ್ನು ಸ್ವಲ್ಪ ಕೊಟ್ಟು, ಮಾಣಿಕ್ಯವನ್ನ ಕೊಟ್ಟ ಪುರುಷನ್ನ ಮಾತುಗಳಿಂದ ಸಮಾಧಾನ ಮಾಡಿ ಅಲ್ಪವಾದ ಅಭಿಮಾನದಿಂದ ಪರಿಯವಸಾನ ಮಾಡೋವನಾಗತಾನೆ. ಈ ವರ್ತಕನೋಪಾದಿಯಲ್ಲಿ ಅಸುರರ ದೇಹವೆಂಬ ಅಂಗಡಿಮನಿಯಲ್ಲಿ ನಾನಾ ವಿಧವಾದ ಸುಖದುಃಖಗಳೆಂಬೋ ಸರಕುಗಳು ಇಟ್ಟುಕೊಂಡು ವ್ಯಾಪಾರ

ಮಾಡತಕ್ಕ ಧಣಿಯಾದ ಪರಮಾತ್ಮನೆಂಬೋ ವರ್ತಕನು, ವರ್ತಕಸದೃಶನಾದ ಪರಮಾತ್ಮಗೆ ಅನ್ಯರಾದ ದೈತ್ಯರು ಪ್ರತಿದಿನದಲ್ಲಿ ಮಾಡತಕ್ಕ ದಾನವೇನು, ಯಜ್ಞಾದಿ ಪುಣ್ಯಕರ್ಮಗಳೇನು ಇವುಗಳಿಂದ ಜನಿತಗಳಾದ, ರತ್ನಕ್ಕೆ ಸದೃಶವಾದ ಉತ್ತಮ ಫಲಗಳ ವರ್ತಕ ಸದೃಶನಾದ ಪರಮಾತ್ಮ ಪೂರ್ವೋಕ್ತ ರತ್ನದೋಷಾದಿಯಲ್ಲಿ ದೈತ್ಯರಲ್ಲಿ ಇದ್ದದ್ದು ಅವರಿಗೆ ದಕ್ಕಗೊಡದೆ ತಾನು ಸ್ವೀಕಾರ ಮಾಡಿ, ರತ್ನದ ಬೆಲೆಗೆ ಓಮು ಹ್ಯಾಂಗೆ ಯೋಗ್ಯವಲ್ಲವೋ ಹಾಂಗೆ, ದಾನ ಯಜ್ಞಾದಿಗಳಿಗೆ ಯೋಗ್ಯವಲ್ಲದ ಅಲ್ಪವಾದ ಅಸಮೀಚೀನಗಳಾದ, ತಾನು ಅಪಹರಿಸಿದ್ದಕ್ಕೆ ಪ್ರತ್ಯಾಮ್ನಾಯ ಅಲ್ಪಸುಖಗಳ ಕೊಟ್ಟು ಅಷ್ಟು ಮಾತ್ರದಿಂದ ಸಂತೋಷಪಟ್ಟ ಇಂಥಾ ದೈತ್ಯರನ್ನ ಮಹಾ ಉನ್ಮತ್ತರನ್ನ ಮಾಡಿ ಅಜ್ಞಾನಾಂಧಕಾರ ಅಧಿಕ ಮಾಡಿ, ಅವರ ಸ್ವರೂಪಯೋಗ್ಯತಾನುಸಾರ ಖೇದಪಡಿಸುವ. ಪುಣ್ಯ ಫಲ ಸಮಗ್ರ ಅಪಹರಿಸದೆ ಸ್ವಲ್ಪ ಉಳಿಸಿ ಭೋಗಕ್ಕೆ ಕೊಡತಾನೆ. ಅಪಹರಿಸೋಣ ಕೊಡೋಣ ಎಂಬುದು ವಾಯು, ಗಂಧ ಅಪಹಾರ ಮಾಡಿ ಸರ್ವ ಪ್ರಾಣಿಗಳ ನಾಸಿಕೇಂದ್ರಿಯಕ್ಕೆ ತಂದುಕೊಟ್ಟೋಪಾದಿಯಲ್ಲಿ ಎಂತ ತಾತ್ಪರ್ಯ. ॥ ೬ ॥

## ಭಾವಪ್ರಕಾಶಿಕೆ

ಮೂರ್ಖಪುರುಷನು ಸರಿಯಾದ ತಿಳಿವಳಿಕೆಯಿಲ್ಲದವನು ತನ್ನಲ್ಲಿರುವ ಮಾಣಿಕ್ಯದ ಯೋಗ್ಯತೆಯನ್ನರಿಯದ ಅಂಗಡಿಯಲ್ಲಿ ಕೊಡಲು, ಆ ಅಂಗಡಿಯ ಯಜಮಾನನು ಇವನನ್ನು ಮೋಸಗೊಳಿಸಿ ಸ್ವಲ್ಪ ಓಮುವನ್ನು (ಅಜಿವಾನವನ್ನು) ಕೈಯಲ್ಲಿ ಕೊಟ್ಟು ಸಮಾಧಾನಪಡಿಸಿದರೆ ಹೇಗೋ ಹಾಗೆ ಪರಮಾತ್ಮನು ಅಭಕ್ತರು ಈ ಪ್ರಪಂಚದ ಸುಖರೂಪವಾದ ಅಲ್ಪಫಲಾಪೇಕ್ಷೆಯಿಂದ ಮಾಡುವ ಯಾಗದಾನಾದಿ ಕರ್ಮಗಳಿಗಾಗುವ ಉತ್ತಮ ಫಲವನ್ನು ಅವರೊಳಗಿರುವ ದೇವತೆಗಳಿಗೆ ಕೊಟ್ಟು, ದೈತ್ಯರಿಗೆ ಅವರು ಬೇಡುವ ತುಚ್ಛವಾದ ವಿಷಯಾದಿಭೋಗವನ್ನೋ ಸ್ವರ್ಗಾದಿಗಳನ್ನೋ ಅಲ್ಪಕಾಲದವರೆಗೂ ಕೊಡುವನು. ಇದರಿಂದ ಅಂಗಡಿಯವನು ಮೋಸಮಾಡಿದಂತೆ ಪರಮಾತ್ಮನು ಮೋಸ ಮಾಡುವನೆಂದು ಶಂಕಿಸಬಾರದು. ಈ ಸಂಶಯವನ್ನು ಮೇಲಿನ

ಪದ್ಯದಲ್ಲೇ ಪರಿಹಾರ ಮಾಡಿರುತ್ತೆ. ದೇವತಾ ಪ್ರೇರಣೆಯಿಂದ ಇವರು ಈ ಕರ್ಮಗಳನ್ನು ಮಾಡುವದರಿಂದ ಆ ಫಲವು ದೇವತೆಗಳಿಗೆ ಸೇರುವದು ನ್ಯಾಯವೆಂದರ್ಥ. ಇವರೇ ಯಾಗಾದಿಗಳನ್ನು ನಿಷ್ಕಾಮುಕವಾಗಿ ಮಾಡಿದರೆ ಮಾಣಿಕ್ಯದಂತೆ ಶ್ರೇಷ್ಠವಾದ ಮುಕ್ತಿಗೆ ಸಾಧನವಾಗುತ್ತಿತ್ತು. ಕಾಮ್ಯ ಫಲಾಪೇಕ್ಷೆಯಿಂದ ಮಾಡಿದರೆ ಅಜಿವಾನದಂತೆ ಅಲ್ಪ ಫಲವೇ ಬರುವದು. ಆ ಫಲವನ್ನು ಅಸುರರೊಳಗಿರುವ ದೇವತೆಗಳೇ ಅನುಭವಿಸುವರೆಂದು ಮೇಲಿನ ಶ್ಲೋಕದಲ್ಲಿ ಉದಹರಿಸಿದ ತಾತ್ಪರ್ಯದಿಂದ ವ್ಯಕ್ತವಾಗುವದು. ವಿಷ್ಣು ರಹಸ್ಯದಲ್ಲಿ "ದೈತ್ಯರುಗಳಿಗೆ ಪುಣ್ಯದಲ್ಲಿ ಭಾಗವಿಲ್ಲ. ಅವರ ಪುಣ್ಯಭಾಗವನ್ನು ಪರಮಾತ್ಮನೇ ಅವರಿಗಿಲ್ಲದ ಹಾಗೆ ಮಾಡುತ್ತಾನೆ" ಎಂದು ಹೇಳಿರುವರು. ಈ ಅಭಿಪ್ರಾಯವನ್ನೇ ದಾಸರಾಯರು ಇಲ್ಲಿ ತಂದಿರುತ್ತಾರೆ. ॥೬॥

**ಭಾವದರ್ಪಣ**

ಪೂರ್ವ ಉಕ್ತಿದಾರ್ಢ್ಯಾರ್ಥವಾಗಿ ಪುನಃ ಹೇಳುತ್ತಾರೆ ಮಾಣಿಕೇತಿ. ಕೊಂಡ-ತೆಗೆದುಕೊಂಡರ್ಥ, ಅಂಗಡಿಯಲ್ಲಿ ॥೬॥

**ಶ್ರೀವ್ಯಾಸದಾಸಸಿದ್ಧಾಂತಕೌಮುದೀ**

"ಮಾಣಿಕವ" ಇತಿ ॥೬॥

## ಕನ್ನಡಾರ್ಥ

ಅಸುರರು ಮಾಡುವ ದಾನ, ಯಜ್ಞ ಮುಂತಾದ ಸತ್ಕರ್ಮಗಳ ಫಲಗಳನ್ನು ಅಪಹರಿಸಿ, ಸಜ್ಜನರಿಗೆ ಕೊಡುತ್ತಾನೆ. ಅಸುರರಿಗೆ ಮಾತ್ರ ಅಸಮೀಚೀನ = ಅತ್ಯಲ್ಪ, ಅಸಾರ ಕ್ಷಣಿಕವಾದ ವೈಷಯಿಕಸುಖಗಳನ್ನು ಕೊಟ್ಟು ಅವರಿಗೆ ಆ ಸತ್ಕರ್ಮಫಲಾಪಹಾರದ ಕಲ್ಪನೆಯಾಗದಂತೆ ಮೋಹಿಸಿ ಅವರನ್ನು ಸಮಾಧಾನಪಡಿಸುತ್ತಾನೆ ಎಂಬುದು ಈ ಪದ್ಯದ ಭಾವ. ॥೬॥

## ಶ್ರೀಗುರುಹೃದಯಪ್ರಕಾಶಿಕೆ

ಸಜ್ಜನರ ಪಾಪವನ್ನು ಅಸಜ್ಜನರಿಗೂ, ಅಸಜ್ಜನರ ಪುಣ್ಯವನ್ನು ಸಜ್ಜನರಿಗೂ ದೇವರು ಹೀಗೆ ವ್ಯತ್ಯಾಸ ಮಾಡಿಕೊಟ್ಟಾಗ್ಯೂ ವೈಷಮ್ಯವಿಲ್ಲವೆಂಬರ್ಥ ಸದೃಷ್ಟಾಂತ ಬೋಧಿಸುತ್ತಾರೆ, ಮಾಣಿಕ್ಯವೆಂದು. ಅಂಗಡಿಯುವನು ಮಾಣಿಕವೆಂಬ ರತ್ನ ಮೊದಲಾದ ದ್ರವ್ಯವನ್ನ ತೆಗೆದುಕೊಂಡು ವ್ಯಾಪಾರಕ್ಕೆ ಬಂದವರ ಇಚ್ಛಾನುಸಾರವಾಗಿ ಅಜಿವಾನವೆಂಬ ಓಮು, ಬಜೆ ಮೊದಲಾದ ದುರ್ವಾಸನೆ ಪದಾರ್ಥ ಕೊಟ್ಟು ಅಪರಿಷ್ಟ ಪೂರ್ತಿ ಮಾಡುವಂತೆ, ಯಜಮಾನನೆಂಬ ಸ್ವತಂತ್ರಕರ್ತೃ ಶ್ರೀಹರಿಯು, ದೈತ್ಯರೆಂಬ ಅಸಜ್ಜೀವರು ಮಾಡುವ ದಾನ ಯಜ್ಞ ಮೊದಲಾದ ಪುಣ್ಯಫಲಗಳನ್ನು ತಾನೇ ಅಪಹರಿಸಿ ಅಂದರೆ ತನ್ನ ವಶದಲ್ಲೇ ಇಟ್ಟುಕೊಂಡು, ಅಸಮಿಚೀನ ಅಂದರೆ ತಾಮಸಸುಖರೂಪ ಮದ್ಯ ಪಾನಾದಿ ದುರ್ಭೋಗ ಕೊಟ್ಟು, ಅಸುರರೆಂಬ ಅಯೋಗ್ಯರನ್ನ ಮದೋನ್ಮತ್ತರನ್ನಾಗಿ ಮಾಡುವನು. ॥ ೬ ॥

## ಸರ್ವವ್ಯಾಖ್ಯಾನಸಾರಸಂಗ್ರಹ

ಭಗವದ್ದ್ವೇಷಿಗಳಾದ ದುರ್ಜನರು ಕೇವಲ ಕಾಮಾರ್ಥಿಗಳಾಗಿ, ಯಜ್ಞ ಯಾಗಾದಿ ಸತ್ಕರ್ಮಗಳನ್ನು ಮಾಡುವರು. ಅವರ ಉದ್ದೇಶ ಕ್ಷಣಿಕ ಸುಖೋಪಭೋಗರೂಪವಾದ ಫಲಪ್ರಾಪ್ತಿಗಾಗಿ. ಈ ವಿಷಯವನ್ನು ದೃಷ್ಟಾಂತಪೂರ್ವಕವಾಗಿ ತಿಳಿಸುತ್ತಾರೆ.

ತನ್ನಲ್ಲಿರುವ ಅನರ್ಘ್ಯವಾದ ರತ್ನದ ಬೆಲೆಯನ್ನು ತಿಳಿಯದ ಮೂಢನೊಬ್ಬನು ಸರಕುಗಳನ್ನು ಮಾರುವ ವರ್ತಕನಲ್ಲಿಗೆ ಬರುತ್ತಾನೆ. ಅವನಿಗೆ ಓಮು ಎಂಬ ಅತ್ಯಲ್ಪ ಬೆಲೆಯ ವಸ್ತು ಬೇಕಾಗಿದೆ. ಅದಕ್ಕಾಗಿ ವ್ಯಾಪಾರಿಗೆ ತನ್ನಲ್ಲಿರುವ ಮಾಣಿಕ್ಯವನ್ನು ಕೊಟ್ಟು ಅದಕ್ಕೆ ಪ್ರತಿಯಾಗಿ ಓಮನ್ನು ಪಡೆಯುವನು. ಈ ದೃಷ್ಟಾಂತದಲ್ಲಿ ವ್ಯಾಪಾರಿಗೆ ಆ ಮಾಣಿಕ್ಯದ ನಿಜವಾದ

ಬೆಲೆ ಗೊತ್ತಿದೆ. ಆದರೆ ಮೂರ್ಖನಾದ ಗಿರಾಕಿಗೆ ಅದರ ಮೌಲ್ಯದ ಅರಿವಿಲ್ಲ. ಅವನಿಗೆ ಬೇಕಾಗಿರುವುದು ಅತ್ಯಲ್ಪ ಬೆಲೆಯು ಓಮು ಅಷ್ಟೇ. ಅಷ್ಟರಿಂದಲೇ ಆ ಮೂರ್ಖನು ತೃಪ್ತಿ ಹೊಂದುವನು.

ಅದರಂತೆ ಭಗವದ್ದ್ವೇಷಿಗಳಾದ ದೈತ್ಯರು ಪ್ರತಿ ದಿವಸದಲ್ಲೂ ಮಾಡುವ ವಿವಿಧ ದಾನಗಳು, ಯಾಗಯಜ್ಞಾದಿ ಸತ್ಕರ್ಮಗಳು, ಕೇವಲ ಕಾಮೋಪ ಭೋಗಕ್ಕಾಗಿ. ಕ್ಷಣಿಕವಾದ ವಿಷಯಗಳ ಸುಖ ಅವರಿಗೆ ಬೇಕು. ಸಮೀಚೀನ ವಾದ ಮುಕ್ತಿಯ ಆನಂದಾನುಭವ ಅವರು ಅಪೇಕ್ಷಿಸುವುದೇ ಇಲ್ಲ. ಶಾಶ್ವತ ಸುಖಪ್ರಾಪ್ತಿಗೆ ಅವರ ಸ್ವರೂಪಗತ ಗುಣವು ಪ್ರತಿಬಂಧಕವಾಗಿರುವುದು. ತತ್ತ್ವದೇವತೆಗಳು ದೈತ್ಯರಲ್ಲಿ ಪ್ರೇರಿಸಿ ಪುಣ್ಯಕಾರ್ಯಗಳನ್ನು ಮಾಡಿಸುವರು. ಅದರ ಶಾಶ್ವತ ಫಲಭೋಗ ದೇವತೆಗಳು ಹೊಂದುತ್ತಾರೆ. ಅದರ ಕ್ಷಣಿಕ ಸುಖ ಪ್ರಾಪ್ತಿ ದೈತ್ಯರಿಗೆ, ಅವರ ಅಪೇಕ್ಷಾನುಸಾರ ದಕ್ಕುವುದು.

ಪೂರ್ವೋಕ್ತ ದೃಷ್ಟಾಂತದಲ್ಲಿ ಶ್ರೀಪರಮಾತ್ಮನು ವರ್ತಕನ ಸದೃಶ. ಅಲ್ಪ ಫಲಾಪೇಕ್ಷಿಗಳಾದ ದೈತ್ಯರು ಮೂರ್ಖನಾದ ಗಿರಾಕಿಯ ಸದೃಶರು. ಅನರ್ಘ್ಯವಾದ ಮಾಣಿಕ್ಯವು ನಿಷ್ಕಾಮನದಿಂದ ಮಾಡುವ ದಾನ, ಯಜ್ಞ ಯಾಗಾದಿ ಸತ್ಕಾರ್ಯ ಸದೃಶವು. ವರ್ತಕನು ಗಿರಾಕಿಗೆ ಮಾಣಿಕ್ಯಕ್ಕೆ ಪ್ರತಿಯಾಗಿ ಕೊಡುವ ಅಜಿವಾನವು ಫಲಾಪೇಕ್ಷೆಯಿಂದ ಮಾಡುವ ಕರ್ಮಫಲ ವಾದ ಕ್ಷಣಿಕ ಸುಖಗಳ ಸದೃಶವು.

ಜಗತ್ಪ್ರಭುವಾದ ಶ್ರೀಪರಮಾತ್ಮನು ಯಜಮಾನನು. ಯಜಮಾನನು ದೈತ್ಯರಿಗೆ ದಕ್ಕಬೇಕಾದ ಪುಣ್ಯರೂಪವಾದ ಫಲಗಳನ್ನು ಅವರಿಗೆ ದಕ್ಕದಂತೆ ಮಾಡಿ, ಅವರಿಗೆ ಕ್ಷುಲ್ಲಕವಾದ, ಕ್ಷಣಿಕವಾದ ಸುಖಗಳನ್ನು ಕೊಡುವನು. ಆದರಿಂದ ಆ ದೈತ್ಯರು ಮತ್ತಷ್ಟು ಉನ್ಮತ್ತರಾಗಿ, ಹೇಯ ಕೆಲಸಗಳನ್ನು ಆಚರಿಸಿ, ಪಾಪಭಾಜನರಾಗುವರು. ಅವರ ಸತ್ಕರ್ಮಾಚರಣೆಯ ಗುರಿ, ಕ್ಷಣಿಕ ವಿಷಯ ಸುಖಗಳ ಪ್ರಾಪ್ತಿ, ಅದರಿಂದ ಉನ್ಮತ್ತರಾಗಿ ಸಜ್ಜನರ ಪೀಡೆ. ಈ

ನುರುದ್ದೇಶದಿಂದ ದೈತ್ಯರು ಸತ್ಕರ್ಮಗಳನ್ನು ಮಾಡಿದ್ದಾಗ್ಯೂ, ಆದರ ನಿಜವಾದ ಫಲ ಅವರಿಗೆ ದಕ್ಕುವುದಿಲ್ಲ. ಇದರಿಂದ ಸರ್ವಕರ್ಮ ಪ್ರೇರಕನೂ, ಕರ್ತೃವೂ ಆದ ಶ್ರೀಪರಮಾತ್ಮನಿಗೆ ವೈಷಮ್ಯಾದಿ ದೋಷಗಳು ಬರುವುದಿಲ್ಲ.

॥ ೬ ॥

### ಪದ್ಯ ೭

ಮೂಲ

ಏಣಲಾಂಛನನಮಲಕಿರಣ ಕ್ರ ।
ಮೇಣ ವೃದ್ಧಿಯನೈದಿ ಲೋಗರ ।
ಕಾಣಗೊಡದಿಹ ಕತ್ತಲೆಯು ಭಂಗಿಸುವ ತೆರದಂತೆ ॥
ವೈನತೇಯಾಂಸಗನ ಮೂರ್ತಿ ।
ಧ್ಯಾನವುಳ್ಳ ಮಹಾತ್ಮರಿಗೆ ಸು ।
ಜ್ಞಾನ ಭಕ್ತ್ಯಾದಿಗಳು ವರ್ಧಿಸಿ ಸುಖವ ಕೊಡುತಿಹವು ॥ ೭ ॥

ಅವತರಣಿಕೆ :–

ಉತ್ತಮವಾದ ಜ್ಞಾನಾನುಸಂಧಾನಪೂರ್ವಕವಾಗಿ ಭಕ್ತಿಯಿಂದ ಶ್ರೀಪರಮಾತ್ಮನನ್ನು ಧ್ಯಾನಿಸುವ ಭಗವದ್ಭಕ್ತರ ಜ್ಞಾನ ಭಕ್ತಿ ವೈರಾಗ್ಯಾದಿಗಳು ದಿನೇ ದಿನೇ ಶುಕ್ಲಪಕ್ಷದ ಚಂದ್ರನ ಕಳೆಗಳಂತೆ ವೃದ್ಧಿಯನ್ನು ಹೊಂದುತ್ತಾ ಅವರಿಗೆ ಸುಖವನ್ನು ಕೊಡುವುವೆಂದು ತಿಳಿಸುತ್ತಾರೆ.

**ಪ್ರತಿಪದಾರ್ಥ :-**

**ಏಣಲಾಂಛನನ**= ಜಿಂಕೆಯನ್ನು ಚಿಹ್ನೆಯನ್ನಾಗಿ ಉಳ್ಳ ಚಂದ್ರನ, **ಅಮಲಕಿರಣ**= ನಿರ್ಮಲವಾದ ಶೀತಲ ಕಿರಣಗಳು, **ಕ್ರಮೇಣ**= ಶುಕ್ಲ ಪಕ್ಷದ ಪ್ರತಿಪದಾರಭ್ಯ ಪೌರ್ಣಿಮಾ ಪರ್ಯಂತ, **ವೃದ್ಧಿಯನೈದಿ**= ದಿನೇ ದಿನೇ ತೇಜಸ್ಸಿನಿಂದ ಯುಕ್ತವಾಗಿ, **ಲೋಗರ ಕಾಣಗೊಡದಿಹ**= ಲೋಕವು ಗೋಚರವಾಗದಂತೆ ಪ್ರತಿಬಂಧಕವಾಗಿರುವ, **ಕತ್ತಲೆಯ**= ಆವರಿಸಿ ಕೊಂಡಿರುವ ಕತ್ತಲೆಯನ್ನು, **ಭಂಗಿಸುವ ತೆರದಂತೆ**= ಪರಿಹರಿಸುವಂತೆ, **ವೈನತೇಯಹಾಂಸಗನ** = ಗರುಡವಾಹನನಾದ ಶ್ರೀಪರಮಾತ್ಮನ (ವೈನತೇಯ- ವಿನತೆಯ ಪುತ್ರ ಗರುಡ, ಅಂಸ- ಹೆಗಲು, ಅಂಸಗನ- ಹೆಗಲಿನ ಮೇಲೆ ಕುಳಿತು ಸಂಚರಿಸುವ ಶ್ರೀಪರಮಾತ್ಮ) **ಮೂರ್ತಿ ಧ್ಯಾಸವುಳ್ಳ**= ಬಿಂಬಮೂರ್ತಿಯನ್ನು ತಮ್ಮ ಹೃತ್ಪದ್ಮದಲ್ಲಿ ಸ್ಥಾಪಿಸಿ ಅನವರತ ಧ್ಯಾನ ಮಾಡುತ್ತಿರುವ, **ಮಹಾತ್ಮರಿಗೆ**= ಭಗವದ್ಭಕ್ತಿ ಸ್ವರೂಪದಲ್ಲಿ ಉಳ್ಳ ಸಜ್ಜನರಿಗೆ, **ಸುಜ್ಞಾನ**= ಸಮೀಚೀನವಾದ ಭಗವತ್ಸಂಬಂಧವಾದ ಜಗತ್ಸತ್ಯತ್ವ ಹರಿ ಸರ್ವೋತ್ತಮತ್ವ, ಪಂಚಭೇದ ತಾರತಮ್ಯಾದಿ ಜ್ಞಾನಗಳು, **ಭಕ್ತ್ಯಾದಿಗಳು**= ಶ್ರೀಹರಿಯ ಪಾದಾರವಿಂದಗಳಲ್ಲಿ ನಿಶ್ಚಲವಾದ ಭಕ್ತಿ, ಆದಿಶಬ್ದದಿಂದ ವೈರಾಗ್ಯವೆಂಬ ಸಂಪತ್ತು ಇತ್ಯಾದಿಗಳು, **ವರ್ಧಿಸಿ**= ದಿನಕ್ರಮೇಣ ಹೆಚ್ಚಾಗುತ್ತಾ ಹೋಗಿ, **ಸುಖವ ಕೊಡುತಿಹವು**= ಇಹದಲ್ಲಿ ಸುಖ, ಪರದಲ್ಲಿ ಸ್ವರೂಪಗತ ಆನಂದದ ಆವಿರ್ಭಾವರೂಪವಾದ ನಿತ್ಯಾನಂದವೆಂಬ ಮುಕ್ತಿಸುಖವನ್ನು ನೀಡುವುವು. ॥ ೭ ॥

**ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ :**

ಅನುಸಂಧಾನಪೂರ್ವಕ ಭಗವದ್ಭಕ್ತರು ಕರ್ಮಗಳ ಮಾಡಿ, ಭಗವದರ್ಪಣ ಮಾಡಿದವರಿಗೆ ಆಗತಕ್ಕ ಫಲ ಹೇಳುತಾರೆ.

ಜಿಂಕೆಯೋಪಾದಿಯಲ್ಲಿ ಚಿಹ್ನೆ ಉಳ್ಳ ಚಂದ್ರನ ನಿರ್ಮಲವಾದಂಥ ಶಾಂತಕರವಾದಂಥಾ ಕಿರಣಗಳು, ಶುಕ್ಲಪಕ್ಷ ಪ್ರತಿಪದಾರಭ್ಯ ಪೌರ್ಣಿಮಾ

ದಿನದಲ್ಲಿ ಸಂಪೂರ್ಣ ತೇಜೋಯುಕ್ತವಾಗತವೆ. ತಮ್ಮ ಪ್ರಕಾಶದಿಂದ ದಿನಕ್ರಮದಿಂದ ತೇಜೋಬಾಹುಳ್ಯದಿಂದ **ಅಭಿವೃದ್ಧಿಯನ್ನೈದಿ ಪೌರ್ಣಿಮಾ ದಿನದಲ್ಲಿ ಸಂಪೂರ್ಣ ತೇಜೋಯುಕ್ತವಾಗತವೆ. ತಮ್ಮ ಪ್ರಕಾಶದಿಂದ ದಿನಕ್ರಮದಿಂದ ತೇಜೋಬಾಹುಳ್ಯದಿಂದ** ಯುಕ್ತವಾಗತಾ, ತಮ್ಮ ಉದಯಾದ್ಪೂರ್ವದಲ್ಲಿ ಇಬತಕ್ಕ ಪ್ರಾಣಿಗಳ ನೇತ್ರಕ್ಕೆ ದಾವದೂ ಕಾಣಿಸದೆ ಇರುವ, ಅಂಧಕಾರವನ್ನ ಪರಿಹಾರ ಮಾಡುವ ಈ ಚಂದ್ರನ ಕಿರಣಗಳೋಪಾದಿಯಲ್ಲಿ ಮುಕ್ತಿಯೋಗ್ಯರಲ್ಲಿ ವಿನತಾದೇವಿಯ ಪುತ್ರ ಗರುಡ ದೇವರ ವಾಹನವಾಗಿ ಉಳ್ಳ ಶ್ರೀನಾರಾಯಣ ದೇವರ, ಅಸಂಪ್ರಜ್ಞಾತ ಸಮಾಧಿಯುಕ್ತನಾಗಿ ಬಹಿಃ ದೃಷ್ಟಿ ಇಲ್ಲದೆ, ತನ್ನ ಹೃದಯಾಕಾಶದಲ್ಲಿ ಪರಮಾತ್ಮನ್ನ ಮನೋದೃಷ್ಟಿಯಿಂದ ನೋಡಿ, ಜೀವಾಂತರ್ಗತನಾದ ಬಿಂಬನ್ನ, ಸ್ವರೂಪದಲ್ಲಿ ನೈಜವಾಗಿ ಲಿಂಗಭಂಗವಾಗೋವರಿಗೂ, ಸ್ವರೂಪಸಿದ್ಧವಾದ ಈ ಉಪಾಸನಾ ಸ್ವರೂಪದಲ್ಲಿ ಮಾಡಸತಾ ಇರತಾನೆ. ಪ್ರತಿಬಂಧಕಸಾಮಗ್ರಿಯಿಂದ ಬಾಹ್ಯದಲ್ಲಿ ವ್ಯಕ್ತವಾಗೋದಿಲ್ಲ. ಇಂಥಾ ಜ್ಞಾನಸ್ವರೂಪ ಸ್ವಭಾವದಲ್ಲಿವುಳ್ಳವರಿಗೆ ಸ್ವರೂಪಗತ ಹರಿಸರ್ವೋತ್ತಮ ವಾಯುಜೀವೋತ್ತಮ ತಾರತಮ್ಯ ಪಂಚಭೇದ ಸತ್ಯ ಅನತಕ್ಕ ಸುಜ್ಞಾನವೇನು, ಭಕ್ತಿ ಏನು, ವೈರಾಗ್ಯವೇನು, ಚಂದ್ರಕಿರಣಗಳು, ದಿನದಿನ ಅಭಿವೃದ್ಧಿ ಆಗುವೋಪಾದಿಯಲ್ಲಿ ಬಿಂಬಮೂರ್ತಿ ಅಭಿವೃದ್ಧಿ ಮಾಡತಾ ಅಂಧಕಾರವೆಂಬ ಬಾಹ್ಯಪ್ರತಿ ಬಂಧಕದಿಂದ ಪ್ರಾಪ್ತವಾದ ಅಜ್ಞಾನಾಂಧಕಾರವನ್ನು ಕ್ರಮಾತ್ ಪರಿಹಾರ ಮಾಡಿ, ಚಂದ್ರಕಿರಣಗಳು ಹ್ಯಾಂಗೆ ಸುಖ ಕೊಡತವೋ ತದ್ವತ್ ಸ್ವರೂಪಭೂತ ಜ್ಞಾನ ಭಕ್ತ್ಯಾದಿಗಳು ಪರಮಾತ್ಮನಿಂದ ಅಭಿವೃದ್ಧಿಯಾಗಿ, ತದ್ದ್ವಾರಾ ಅಂಧಕಾರ ಪರಿಹಾರಮಾಡಿ, ಸ್ವರೂಪಸುಖ ವ್ಯಕ್ತಮಾಡಿ ಕೊಡೋವಾಗತವೆ. ತದ್ವ್ಯತಿರಿಕ್ತ ಭಗವದ್ದ್ವೇಷಿಗಳಿಗೆ ಕೃಷ್ಣಪಕ್ಷದ ಚಂದ್ರನೋಪಾದಿಯಲ್ಲಿ ಜ್ಞಾನ ಭಕ್ತಿಹೀನರನ್ನಾಗಿ ಮಾಡಿ ತಮೋದುಃಖ ಐದಿಸೋವಾಗತವೆ. ಪೂರ್ವೋಕ್ತ ಸುಜ್ಞಾನ ಅಭಿವ್ಯಕ್ತಿಯಾಗಿ ತದ್ದ್ವಾರಾ ಬಾಹ್ಯದಲ್ಲಿ ಸತ್ಕರ್ಮಾನುಷ್ಠಾನಗಳ ಮಾಡಿ, ಭಗವದರ್ಪಣ ಮಾಡಿ, ಚಂದ್ರಕಿರಣಗಳೋಪಾದಿಯಲ್ಲಿ ಲಿಂಗಭಂಗವಾಗೋವರಿಗೂ, ಅಜ್ಞಾನಪರಿಹಾರಪೂರ್ವಕ ಜ್ಞಾನಭಕ್ತಿಗಳಿಂದ ಅಭಿವೃದ್ಧಿಯಾಗುತ್ತಾ ಇರತಾರೆ. ॥ ೭ ॥

### ಭಾವಪ್ರಕಾಶಿಕೆ

ಶುಕ್ಲಪಕ್ಷದ ಚಂದ್ರನಕಳೆಗಳು ದಿನದಿನಕ್ಕೆ ಹೆಚ್ಚುತ್ತಾ ಬಂದು ಪ್ರಕಾಶವು ಅಧಿಕವಾಗಿ ಲೋಕದಲ್ಲಿ ಜನರು ಕತ್ತಲೆಯಲ್ಲಿ ಕಾಣಲಶಕ್ಯವಾದ ಪದಾರ್ಥಗಳನ್ನು ತನ್ನ ಪ್ರಕಾಶದಿಂದ ಕಾಣುವಂತೆ ಮಾಡುವದು. ಅದರಂತೆ ಪರಮಾತ್ಮನ ಭಕ್ತರು ಮಾಡುವ ಧ್ಯಾನಾದಿಗಳು ಹೆಚ್ಚುತ್ತ ಹೆಚ್ಚುತ್ತ ಪರಮಾತ್ಮನು ಹೃದಯಾಕಾಶದಲ್ಲಿ ಹೆಚ್ಚು ಪ್ರಕಾಶವನ್ನು ತೋರುವನು. ಆದರಿಂದ ಇವರ ಅಜ್ಞಾನಾಂಧಕಾರವು ಪರಿಹಾರವಾಗಿ ಜ್ಞಾನಭಕ್ತಿ ಮೊದಲಾದವು ವೃದ್ಧಿಯಾಗುವದು. ಈ ಉಪಮಾನದಲ್ಲಿ ಪರಮಾತ್ಮನನ್ನು ಚಂದ್ರನಂತೆ ತಿಳಿಯಬೇಕು. ಭಕ್ತರು ಮಾಡುವ ಧ್ಯಾನಾದಿಗಳೇ ಶುಕ್ಲಪಕ್ಷದ ಕಳೆಗಳು. ಇದರಿಂದ ಅವರ ಹೃದಯದಲ್ಲಿ ಭಗವತ್ಕಳಾವಿಶೇಷವು ಹೆಚ್ಚುವುದು. ಅದರಿಂದ ಅಜ್ಞಾನವೆಂಬ ಕತ್ತಲು ಪರಿಹಾರವಾಗಿ ಜ್ಞಾನಭಕ್ತಿ ವೃದ್ಧಿಯಾಗುವದೆಂಬ ಭಾವ. ॥ ೭ ॥

### ಭಾವದರ್ಪಣ

ಧ್ಯಾನಮಾಡೋ ಮಹಾತ್ಮರಿಗೆ ಜ್ಞಾನಭಕ್ತಿ ವೃದ್ಧಿಯಾಗತದೆಂದು ಸದೃಷ್ಟಾಂತ ಹೇಳುತ್ತಾರೆ, ಏಣಲಾಂಛನೇತಿ. ಚಿಗರಿ ಚಿನ್ಹ ಉಳ್ಳವ ಚಂದ್ರ ಎಂಬರ್ಥ. ಲೋಕರ = ಜನಗಳ ॥ ೭ ॥

### ಶ್ರೀವ್ಯಾಸದಾಸಸಿದ್ಧಾಂತಕೌಮುದೀ

"ಏಣ" ಇತಿ, 'ಏಣಲಾಂಛನ' – ಚಂದ್ರಃ ॥ ೭ ॥

## ಕನ್ನಡಾರ್ಥ

"ಶುಕ್ಲಪಕ್ಷದಲ್ಲಿ ಚಂದ್ರನ ಕಿರಣಗಳು ಕ್ರಮಿಕವಾಗಿ ಅಭಿವೃದ್ಧಿಯನ್ನು ಹೊಂದುವವು. ಮತ್ತು ನಿಬಿಡವಾದ ಕತ್ತಲೆಯನ್ನು ಕಳೆಯುವವು. ಅದರಂತೆ ಭಗವನ್ಮೂರ್ತಿಯ ಧ್ಯಾನದಿಂದ ಜ್ಞಾನಭಕ್ತಿ ಮುಂತಾದುವುಗಳು ಅಭಿವೃದ್ಧಿ

ಯನ್ನು ಹೊಂದುವವು. ಅದರಿಂದ ಅಜ್ಞಾನ ಮುಂತಾದುವುಗಳೂ, ಆಪತ್ತುಗಳೂ ನಾಶವಾಗಿ, ಧ್ಯಾನಿಸುವ ಜ್ಞಾನಭಕ್ತಿಗುಣಗಳುಳ್ಳ ಮಹಾತ್ಮರಿಗೆ ಸುಖವೃದ್ಧಿಯಾಗುತ್ತದೆ" ಎಂದು ಈ ಪದ್ಯದ ಭಾವ. ॥ ೭ ॥

## ಶ್ರೀಗುರುಹೃದಯಪ್ರಕಾಶಿಕೆ

ಸಜ್ಜನರಿಗೆ ಪುಣ್ಯಫಲ ಕೊಡುವ ಬಗೆಯನ್ನ ಸದೃಷ್ಟಾಂತ ತಿಳಿಸುತ್ತಾರೆ, ಏಣ ಎಂದು. ಏಣಲಾಂಛನನೆಂಬ ಜಿಂಕೇಗುರುತುಳ್ಳ ಚಂದ್ರನ ಅಮಲಕಿರಣ ವೆಂಬ ಒಳ್ಳೇ ಬೆಳದಿಂಗಳು ಶುಕ್ಲಪಕ್ಷದಲ್ಲಿ ಕ್ರಮವಾಗಿ ದಿನೇ ದಿನೇ ವೃದ್ಧಿಯಾಗಿ ಲೋಕದವರ, ಕಾಣಸದ ಹಾಗೆ ಇರುವ ಕತ್ತಲೆಯನ್ನಪಹರಿಸಿ ಸುಖ ಕೊಡುವಂತೆ, ವೈನತೇಯಾಂಸಗನೆಂಬ ಗರುಡನ ಹೆಗಲಮೇಲೆ ಶೋಭಿಸುವ ದೇವರ ಸ್ವಾತಂತ್ರ್ಯ, ಧ್ಯಾನವನ್ನು ಮಾಡುವ ಮಹಾತ್ಮರಿಗೆ ಪುಣ್ಯವು ಸುಜ್ಞಾನಭಕ್ತ್ಯಾದಿಗಳ ವೃದ್ಧಿಗೆ ಕಾರಣವಾಗಿ, ನಿತ್ಯಾನಂದಕ್ಕೆ ಕಾರಣ ವಾಗುವುದು (ಅವರಿಷ್ಟ ಪ್ರಕಾರ) ॥ ೭ ॥

## ಸರ್ವವ್ಯಾಖ್ಯಾನಸಾರಸಂಗ್ರಹ

ಭಗವನ್ಮೂರ್ತಿಯ ಧ್ಯಾನೋಪಾಸನೆಯಿಂದ ಹರಿಭಕ್ತರ ಅಜ್ಞಾನ ಪರಿಹಾರವಾಗಿ, ಜ್ಞಾನಭಕ್ತಿವೈರಾಗ್ಯಗಳು ದಿನೇ ದಿನೇ ಕ್ರಮೇಣ ಶುಕ್ಲಪಕ್ಷದ ಚಂದ್ರನ ಕಳೆಗಳಂತೆ ಅಭಿವೃದ್ಧಿ ಹೊಂದುವುವು ಎಂದು ತಿಳಿಸುತ್ತಾರೆ.

ಚಂದ್ರನಲ್ಲಿ ಜಿಂಕೆಯನ್ನು ಹೋಲುವ ಒಂದು ಕಳಂಕವಿದೆ. ಈ ಚಿಹ್ನೆ ಯಿಂದ ಯುಕ್ತನಾದ ಚಂದ್ರನಿಗೆ ಏಣಲಾಂಛನನೆಂದು ಹೆಸರು.

ಏಣಲಾಂಛನನ ಕಿರಣಗಳು ತಂಪಾಗಿ, ಆಹ್ಲಾದಕರವಾಗಿರುವುವು. ಹಾಲು ಚೆಲ್ಲಿದಂತೆ ಇರುವ ಪೂರ್ಣಿಮೆಯ ಚಂದ್ರನ ಬೆಳಕಿಗೆ ಬೆಳದಿಂಗಳು ಎಂದು ಹೆಸರು. ಚಂದ್ರನಿಗೆ ೧೬ ಕಳೆಗಳಿವೆ. ಅವುಗಳಲ್ಲಿ ಒಂದು ಅವನ

ಸ್ವರೂಪ ಕಳೆ. ಉಳಿದ ೧೫ ಕಳೆಗಳು ಶುಕ್ಲಪಕ್ಷದಲ್ಲಿ ಪ್ರತಿಪದದಿಂದ ಆರಂಭಿಸಿ ಹುಣ್ಣಿಮೆಯವರೆಗೆ ದಿನೇ ದಿನೇ ಹೆಚ್ಚುತ್ತಾ ಹೋಗುವುವು. ಪೌರ್ಣಿಮಾ ತಿಥಿಯಂದು ಪೂರ್ಣಚಂದಿರನ ಬೆಳಕು ಅಮೃತಮಯ ಕಿರಣಗಳಿಂದ ಕೂಡಿದ್ದು ಕತ್ತಲೆಯಲ್ಲಿ ಅಡಗಿದ್ದ ವಸ್ತುಗಳನ್ನು ಲೋಕದ ಜನರಿಗೆ ಸ್ಪಷ್ಟವಾಗಿ ಗೋಚರವಾಗುವಂತೆ ಮಾಡುವುವು.

ಇದೇ ರೀತಿಯಲ್ಲಿ ಗರುಡವಾಹನನಾದ ಶ್ರೀಹರಿಯ ಧ್ಯಾನವುಳ್ಳವರಿಗೆ ಜ್ಞಾನ, ಭಕ್ತಿ, ವೈರಾಗ್ಯಗಳು ಕ್ರಮೇಣ ವೃದ್ಧಿಯಾಗುವುವು. ಕಶ್ಯಪ ಋಷಿಗಳ ಪತ್ನಿ ವಿನತಾದೇವಿ. ಅವಳ ಪುತ್ರನೇ ಗರುಡನು. ಇದರಿಂದ ಗರುಡನಿಗೆ ವೈನತೇಯ ಎಂದು ಹೆಸರು.

ವೈಕುಂಠಪತಿಯನ್ನು ತಮ್ಮ ಹೃನ್ಮಂದಿರದಲ್ಲಿ ಸ್ಥಿರವಾಗಿ ನಿಲ್ಲಿಸಿಕೊಂಡು ಅನವರತ ಆ ಭಗವನ್ಮೂರ್ತಿಯ ಧ್ಯಾನಮಾಡತಕ್ಕ ಭಗವದ್ಭಕ್ತರೇ ಮಹಾತ್ಮರು. ಅಂತಹ ಮಹನೀಯರಿಗೆ ಭಗವದನುಗ್ರಹ ಪ್ರಾಪ್ತಿಗೆ ಸಾಧನ ಪರಿಕರಗಳಾದ ಸುಜ್ಞಾನ, ಭಕ್ತಿ, ವೈರಾಗ್ಯಗಳೆಂಬ ದೈವೀಸಂಪತ್ತುಗಳು ಶುಕ್ಲಪಕ್ಷದ ಚಂದ್ರನ ಕಳೆಗಳಂತೆ ದಿನೇ ದಿನೇ ಅಭಿವೃದ್ಧಿ ಹೊಂದುವುವು.

ಜಗತ್ಸತ್ಯತ್ವ, ಹರಿಸರ್ವೋತ್ತಮತ್ವ, ವಾಯುಜೀವೋತ್ತಮತ್ವ, ಪಂಚಭೇದ, ತಾರತಮ್ಯ ಈ ತತ್ವಗಳ ಅರಿವಿಗೆ ಸುಜ್ಞಾನವೆನ್ನುವರು. ಚಂದ್ರನ ಬೆಳಕಿನಲ್ಲಿ ಕತ್ತಲೆಯಲ್ಲಿ ಗೋಚರವಾಗದ ವಸ್ತುಗಳು ಸ್ಫುಟವಾಗಿ ಕಾಣಿಸುವುವು. ಅಂತೆಯೇ ಭಗವಂತನ ದರ್ಶನಕ್ಕೆ ಅಜ್ಞಾನವೆಂಬ ಕತ್ತಲೆಯು ಪ್ರತಿಬಂಧಕ. ಭಗವದ್ಧ್ಯಾನದಿಂದ, ಆ ಕತ್ತಲೆ ನಿವಾರಣೆಯಾಗಿ ಪೂರ್ಣ ಚಂದ್ರನಂತೆ ಹೃತ್ಕಂಜದಲ್ಲಿ ಬಿಂಬದರ್ಶನವಾಗುವುದು. ॥ ೭ ॥

## ಪದ್ಯ ೮

**ಮೂಲ :-**

**ಜನಪನರಿಕೆಯು ಚೋರ ಪಗಲೊಳು ।**
**ಧನವ ಕದ್ದೊಯ್ದೀಯಲವನ ।**
**ಗುಣಗಳೆಣಿಸದೆ ಪೊರೆವ ಕೊಡದಿರೆ ಶಿಕ್ಷಿಸುವ ತೆರದಿ ॥**
**ಅನುಚಿತೋಚಿತ ಕರ್ಮ ಕೃಷ್ಣಾ ।**
**ರ್ಪಣವೆನಲು ಕೈಗೊಂಡು ತನ್ನರ ।**
**ಮನೆಯೊಳಿಟ್ಟಾನಂದ ಬಡಿಸುವ ಮಾಧವಾನತರ ॥ ೮ ॥**

**ಅವತರಣಿಕೆ :-**

ಯಾವ ಭಕ್ತನು ದ್ವಂದ್ವ ಕರ್ಮಗಳನ್ನು ಆ ಜಗದ್ವಂದ್ಯನ ಪಾದಾರವಿಂದಗಳಿಗೆ ಅರ್ಪಿಸುತ್ತಾನೆಯೋ, ಅವನನ್ನು ಮುಕ್ತಿಧಾಮಗಳಲ್ಲಿಟ್ಟು ಆನಂದಪಡಿಸುವನೆಂದು ದೃಷ್ಟಾಂತಪೂರ್ವಕ ತಿಳಿಸುತ್ತಾರೆ.

**ಪ್ರತಿಪದಾರ್ಥ :-**

**ಜನಪನ** = ಪ್ರಜಾಪಾಲಕನಾದ ರಾಜನ, **ಅರಿಕೆಯು** = ರಾಜಾಜ್ಞಾರೂಪವಾದ ಶಾಸನವನ್ನು, **ಚೋರ** = ಶಿರಸಾವಹಿಸಿ ಒಬ್ಬ ಕಳ್ಳನು, **ಪಗಲೊಳು** = ಹಗಲು ಹೊತ್ತಿನಲ್ಲಿ, **ಧನವ ಕದ್ದು** = ಅನ್ಯರಿಂದ ದ್ರವ್ಯವನ್ನು ಅಪಹರಿಸಿ, **ಒಯ್ದು** = ಆ ಧನವನ್ನು ತೆಗೆದುಕೊಂಡು ಹೋಗಿ, **ಈಯಲು** = ರಾಜನಿಗೆ ಕೊಟ್ಟರೆ, **ಅವನ** = ಆ ಚೋರನ, **ಅವಗುಣಗಳೆಣಿಸದೆ** = ಚೌರ್ಯರೂಪವಾದ ಅಪರಾಧವನ್ನು ಗಮನಿಸದೆ, **ಪೊರೆವ** =

ಆ ಚೋರನನ್ನು ಸಂರಕ್ಷಿಸುವನು, **ಕೊಡದಿರೆ** = ಆ ಧನವನ್ನು ರಾಜಾಜ್ಞೆಯಂತೆ ರಾಜನಿಗೆ ಒಪ್ಪಿಸದಿದ್ದರೆ, **ಶಿಕ್ಷಿಸುವ ತೆರದಿ** = ಶಿಕ್ಷೆಗೆ ಗುರಿಪಡಿಸುವಂತೆ, **ಅನುಚಿತ** = ಉಚಿತವಲ್ಲದ ಪಾಪ ಕರ್ಮಗಳೇನು, **ಉಚಿತಕರ್ಮ** = ವಿಧಿರೂಪವಾದ ಪುಣ್ಯಕರ್ಮಗಳೇನು, ಈ ದ್ವಂದ್ವರೂಪವಾದ ಸಕಲ ಕರ್ಮಗಳನ್ನೂ, **ಕೃಷ್ಣಾರ್ಪಣವೆನಲು** = ಶ್ರೀಶನಿಂದ ಪ್ರೇರಿತವಾದ ಕರ್ಮಗಳು ಅವನಿಗೇ ಸೇರಿದ್ದು ಎಂಬ ನೈಚ್ಯಾನುಸಂಧಾನದಿಂದ (ಅಹಂಕರ್ತೃತ್ವಾಭಿಮಾನ ರಹಿತವಾಗಿ) ಅರ್ಪಿಸಿದರೆ, **ಕೈಗೊಂಡು** = ಅವುಗಳನ್ನು ಸ್ವೀಕರಿಸಿ, **ತನ್ನರಮನೆಯೊಳಿಟ್ಟು** = ತನ್ನ ವೈಕುಂಠಾದಿ ಮುಕ್ತಧಾಮಗಳಲ್ಲಿಟ್ಟು, **ಮಾಧವ** = ಶ್ರೀಲಕ್ಷ್ಮೀಪತಿಯು, **ಅನಂತರ** = ಸರ್ವವನ್ನೂ ತನಗೇ ಅರ್ಪಿಸಿದ ಶರಣಾಗತರಾದ ನಿಜಭಕ್ತರನ್ನು, **ಆನಂದಬಡಿಸುವ** = ಲಿಂಗಭಂಗ ಮಾಡಿಸಿ, ಕರ್ಮ ವಿಮೋಚನಾ ದ್ವಾರಾ ಅವರವರ ಸ್ವರೂಪಗತ ನಿತ್ಯಾನಂದ ರೂಪವಾದ ಮುಕ್ತಿಸುಖವನ್ನು ಕೊಡುವನು. ॥ ೭ ॥

## ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ದ್ವಂದ್ವಕರ್ಮಗಳನ್ನ ಅರ್ಪಿಸಿದವರನ್ನ ರಕ್ಷಿಸತಾನೆ ಎಂತ ಹೇಳತಾರೆ.

ತನ್ನ ರಾಜ್ಯಗತ ಜನಗಳ ತನ್ನ ಶಾಸನದಿಂದ ಪಾಲನೆ ಮಾಡತಕ್ಕ ರಾಜನ ವಶವರ್ತಿಗಳಾದ ಚೋರಜನರು, ರಾಜ ತನ್ನ ಆಜ್ಞಾದಿಂದ ಚೋರತ್ವ ಮಾಡಿ ಧನ ತಂದು ಕೊಡೆಂದು ಆಜ್ಞಾ ಮಾಡತಾನೆ. ಇಂಥಾ ಆಜ್ಞಾದಿಂದ ಚೋರನು ಹಗಲಿನಲ್ಲಿ ನಿರ್ಭಯನಾಗಿ ಕಳ್ಳತನ ಮಾಡತಕ್ಕ ಪುರುಷ, ಅನ್ಯರಲ್ಲಿ ಇರತಕ್ಕ ಧನವನ್ನ ಚೌರ್ಯಮಾಡಿ, ಆ ಧನವನ್ನ ತೆಗೆದುಕೊಂಡು ಹೋಗಿ ರಾಜನಾದವನಿಗೆ ಕೊಟ್ಟರೆ ಆ ಚೌರ್ಯ ಮಾಡಿದ ಪುರುಷನ, ರಾಜಾಜ್ಞಾದಿಂದ ಮಾಡಿದ ಕಾರ್ಯಗಳ ದೋಷತ್ವೇನ ಎಣಿಸದೆ ಒಳ್ಳೇ ಕಾರ್ಯವೆಂತ ತಿಳಿದು ಸಂರಕ್ಷಣೆ ಮಾಡೋವನಾಗತಾನೆ, ಶಿಕ್ಷಿಸೋದಿಲ್ಲ. ರಾಜಾಜ್ಞಾದಿಂದ ಚೋರತ್ವ ಮಾಡಿ ತಂದ ದ್ರವ್ಯವನ್ನ ರಾಜಗೆ ಕೊಡದೇ ಇದ್ದರೆ, ಚೋರತ್ವ ಮಾಡಿದ್ದು ದೋಷ ಎಂತ ತಿಳಿದು ಶಿಕ್ಷೆ ಮಾಡತಾನೆ. ಈ ರಾಜನೋಪಾದಿಯಲ್ಲಿ ಈ

ಹದಿನಾಲ್ಕು ಲೋಕಕ್ಕೆ ರಾಜನಾದವ ಪರಮಾತ್ಮ. ಅವನ ವಶವರ್ತಿಗಳು ಸರ್ವಪ್ರಾಣಿಗಳು. ಸ್ಥೂಲದೇಹಾಖ್ಯ ಪ್ರತಿ ಪಟ್ಟಣದಲ್ಲೂ ವಿದ್ಯಮಾನರಾದ ಪ್ರತಿಯೊಂದು ಜೀವರಲ್ಲೂ ಬಿಂಬನಾಗಿ ಒಂದೊಂದೇ ರೂಪದಿಂದ ಅವರವರಿಗೆ ರಾಜನಾಗಿದ್ದಾನೆ. ಆ ಜೀವರು ರಾಜಾಜ್ಞಾಧಾರಕರಾಗಿ ಇದ್ದಾರೆ. ಇವರ ಅಂತರ್ಗತನಾದ ಬಿಂಬಸಾಂಕೇತನಾದ ರಾಜನ ಕ್ರಿಯಾದಿಂದ ಪ್ರತಿಬಿಂಬನಾದ ಜೀವನ ಕ್ರಿಯಾ ಜೀವನ ದ್ವಾರಾ ಸ್ಥೂಲದೇಹದಿಂದ ಕ್ರಿಯಾ ಆಗತದೆ. ಭವದಾಜ್ಞಾದಿಂದ ತನಧೀನನಾದ ಪ್ರತಿಬಿಂಬ ಮಾಡಿದ ಪಾಪಕರ್ಮಗಳು, ಪುಣ್ಯಕರ್ಮಗಳು ಈ ಉಭಯಕರ್ಮಗಳು, ಚೋರ ಕಳ್ಳತನ ಮಾಡಿದ ದ್ರವ್ಯ ರಾಜಗೆ ಕೊಟ್ಟಂತೆ, ಮಹಾರಾಜನಾದ ಬಿಂಬನ ಆಜ್ಞಾದಿಂದ ಮಾಡಿದ ಧನಸಾಂಕೇತವಾದ ಕರ್ಮಗಳ, ಕೃಷ್ಣಸಾಂಕೇತ ಬಿಂಬಗೆ 'ಅರ್ಪಣೆ' ಎಂತ ಅಂದು ಅವಗೆ ಕೊಟ್ಟರೆ, ಅದರನ್ನ ಸ್ವೀಕಾರ ಮಾಡಿ, ಲಕ್ಷ್ಮೀಪತಿಯಾದ ಶ್ರೀನಾರಾಯಣದೇವರು, ಸ್ವರೂಪಸ್ವಭಾವದಲ್ಲಿ ಚಂದಾಗಿ ಸರ್ವೋತ್ತಮನೆಂದು ತಿಳಿದು ವಂದನ ಮಾಡತಕ್ಕ ಅನಾದಿ ಸ್ವಭಾವವುಳ್ಳ, ದಂದ್ವಕರ್ಮ ಅರ್ಪಿಸತಕ್ಕ ತನ್ನ ಭಕ್ತರ ತನ್ನ ವೈಕುಂಠಾದಿ ಧಾಮತ್ರಯದೊಳು ಲಿಂಗಭಂಗ ಐದಿಸಿ ಇಟ್ಟು, ಆಯಾ ಜೀವರ ಸ್ವರೂಪಾನಂದದಿಂದ ಅವರವರನ್ನ ಸುಖ ಪಡಿಸತಾನೆ. ಚೌರ್ಯದ್ರವ್ಯ ಕೊಡದವನ ರಾಜ ಹ್ಯಾಂಗೆ ಶಿಕ್ಷಿಸತಾನೋ ತದ್ವತ್ ಕರ್ಮಗಳ ಅರ್ಪಿಸದಂಥಾ ತಮೋಯೋಗ್ಯ, ನಿತ್ಯಸಂಸಾರಿಗಳನ್ನ ಅಧಂತಮಾನಸ್ಸಿನಲ್ಲಿಟ್ಟು, ಹಾಂಗೆ ಸಾಂತಾನಿಕ ಲೋಕದಲ್ಲಿಟ್ಟು, ಅವರವರ ಸ್ವರೂಪವನುಸರಿಸಿ ದುಃಖ ಹಾಂಗೂ ಸುಖದುಃಖ ಮಿಶ್ರಫಲಗಳಿಂದ ದುಃಖ ಬಡಿಸೋವನಾಗತಾನೆ ಎಂತ ತಾತ್ಪರ್ಯ. ॥ ೮ ॥

**ಭಾವಪ್ರಕಾಶಿಕೆ**

ಊರೊಳಗೆ ಕಳ್ಳತನ ಮಾಡಿದ ಕಳ್ಳನು ಇವನು ಕಳ್ಳನೆಂದು ರಾಜನ ತಿಳಿವಳಿಕೆಗೆ ಬಂದಕೂಡಲೇ ತಾನು ಕಳ್ಳತನಮಾಡಿ ತಂದ ದ್ರವ್ಯಗಳನ್ನು ವಂಚಿಸದೆ ರಾಜನ ಮುಂದಿರಿಸಿ "ಪ್ರಭೋ, ನಾನು ಕುಟುಂಬಿ, ದರಿದ್ರದೋಷದಿಂದ ಇಂತಹ ಕಾರ್ಯವನ್ನು ಮಾಡಿಬಿಟ್ಟೆನು. ನನ್ನ ಅಪರಾಧವನ್ನು ಕ್ಷಮಿಸಿ

ನನ್ನನ್ನುದ್ಧರಿಸಬೇಕೆಂದು ಬೇಡಿಕೊಂಡರೆ ರಾಜನು ಕರುಣದಿಂದ ಅವನ ಅಪರಾಧವನ್ನು ಮನ್ನಿಸಿ ಅವನನ್ನು ರಕ್ಷಿಸುವನು. ಕಳ್ಳನು ನಿಜವನ್ನು ಹೇಳದೆ ಕದ್ದ ಪದಾರ್ಥಗಳನ್ನು ಮರೆಮಾಡಿದ್ದರೆ ಅವನನ್ನು ಶಿಕ್ಷಿಸುವನು. ಇದರಂತೆ ನಾವು ಮಾಡುವ ಪುಣ್ಯಪಾಪಗಳು ಪರಮಾತ್ಮನ ತಿಳಿವಳಿಕೆಗೆ ಬಾರದೆ ಇರುವವೆ ? ನಮ್ಮ ಯೋಗ್ಯತಾನುಸಾರ ನಮ್ಮೊಳಗಿದ್ದು ಮಾಡಿಸುವವನೇ ಅವನು. ಇಂತಹ ಕರ್ಮಗಳನ್ನು ತಾನೇ ಮಾಡಿದುದಾಗಿ ತಿಳಿದು ಪರಮಾತ್ಮನಿಗೆ ಒಪ್ಪಿಸದಿದ್ದರೆ ಶಿಕ್ಷಿಸುವನು. ಹಾಗಲ್ಲದೆ ಪರಮಭಕ್ತಿಯಿಂದ ಅಸ್ವತಂತ್ರನಾದ ನಾನು ಮಾಡಿದುದು ನಿನ್ನ ಪ್ರೇರಣೆಯಿಂದಲೇ ಮಾಡಿರುವೆನು. ನೀನು ಅನುಗ್ರಹವೋ ನಿಗ್ರಹವೋ ಯಾವುದು ಮಾಡುವುದಕ್ಕೂ ಸ್ವತಂತ್ರನು ಎಂದು ಪ್ರಾರ್ಥಿಸಿ ವಿನಯದಿಂದ ನಾವು ಮಾಡಿದ ಪುಣ್ಯಪಾಗಗಳೆಲ್ಲವನ್ನೂ ಪರಮಾತ್ಮನಿಗೆ ಅರ್ಪಿಸಿದರೆ ಕರುಣಾಸಮುದ್ರನಾದ ಹರಿಯು ನಮ್ಮ ಪಾಪಗಳನ್ನು ಭಸ್ಮಮಾಡಿ ಪುಣ್ಯಗಳನ್ನು ಇಮ್ಮಡಿ ಮಾಡಿ ಅದಕ್ಕೆ ಫಲರೂಪವಾಗಿ ತನ್ನಂತಃಪುರದಲ್ಲಿಟ್ಟು ತನ್ನ ರೂಪವನ್ನು ಅಭಿವ್ಯಕ್ತಿ ಮಾಡಿಸಿ ಕೊಡುವನು.

॥ ೮ ॥

## ಭಾವದರ್ಪಣ

ರಾಜಗೆ ಪೂರ್ವದಲ್ಲೇ ತಿಳಿಸಿ ಚೌರ್ಯಲಬ್ಧಧನ ಕೊಡೋಣದರಿಂದ ಹ್ಯಾಗೆ ಸಂತುಷ್ಟನಾಗುತ್ತಾನೋ ಹಾಗೆ ಪಾಪಪುಣ್ಯಾರ್ಪಣೆಯಿಂದ ಸಂತುಷ್ಟನಾಗಿ ತನ್ನ ಲೋಕದಲ್ಲಿಟ್ಟು ಪೊರೆವನೆಂದು ಹೇಳುತ್ತಾರೆ ಜನಪೇತಿ, ಅರಿಕಿ– ತಿಳಿಸಿ, ಪೊಳಲೊಳು–ಪುರದಲ್ಲಿ, ಆನತರ–ಛಂದಾಗಿನಮ್ರರಾದವರ. ॥ ೮ ॥

## ಶ್ರೀವ್ಯಾಸದಾಸಸಿದ್ಧಾಂತಕೌಮುದೀ

"ಜನಪ" ಇತಿ "ಪೊಳಲು"–ಊರು ॥ ೮ ॥

## ಕನ್ನಡಾರ್ಥ

ಕಳ್ಳನ ಕಳ್ಳತನವು ರಾಜನಿಗೆ ತಿಳಿದುಬಂದ ಕೂಡಲೇ, ಕಳ್ಳನು ರಾಜನ ಮುಂದೆ ಕಳ್ಳತನದ ಧನವನ್ನು ಇಟ್ಟು ಒಪ್ಪಿಸಿ, ಅಪರಾಧವಾಯಿತೆಂದು ಬೇಡಿಕೊಂಡರೆ ರಾಜನು ಆ ಕಳ್ಳನನ್ನು ಕ್ಷಮಿಸುತ್ತಾನೆ. ಆದರೆ ಹಾಗೆ ಮಾಡ ದಿದ್ದರೆ ಮಾತ್ರ ರಾಜನು ಉಗ್ರವಾಗಿ ಶಿಕ್ಷಿಸುತ್ತಾನೆ. ಇದರಂತೆ ಸಾಧು ಅಸಾಧುಕರ್ಮಗಳನ್ನು ಹರಿಗೆ ಭಕ್ತಿಯಿಂದ ಸಮರ್ಪಿಸಲು, ಅದನ್ನು ಸ್ವೀಕರಿಸಿ ಭಕ್ತರಿಗೆ ಸುಖವನ್ನಿತ್ತು ಸಲಹುವನು. ಹೀಗೆ ಅರ್ಪಣೆಯನ್ನು ಮಾಡದಿದ್ದ ಆ ಭಕ್ತರನ್ನು ಘೋರವಾಗಿ ದಂಡಿಸುವನು. "ಪರಮಾತ್ಮನು ನನ್ನ ಯೋಗ್ಯತಾ, ಸ್ವಭಾವ, ಕರ್ಮಗಳಿಗನುಸಾರವಾಗಿ ಈ ಕರ್ಮವನ್ನು ಮಾಡಿಸಿದ್ದಾನೆ"–ಎಂದು ಸರ್ವಕರ್ಮಗಳಲ್ಲಿ ಪರಮಾತ್ಮನ ಅಧೀನತಾಚಿಂತನ ವೆಂಬುದಾಗಿ ತಿಳಿಯಬೇಕು ॥೮॥

## ೫. ಶ್ರೀಗುರುಹೃದಯಪ್ರಕಾಶಿಕೆ

ಪಾಪಗಳನ್ನು ದೇವರಿಗೆ ಸಮರ್ಪಿಸಿದಾಗ್ಯೂ, ಸಜ್ಜನರಿಗೆ ಪುಣ್ಯವೇ ಬರುವುದೆಂಬರ್ಥದಲ್ಲಿ ಸದೃಷ್ಟಾಂತ ತಿಳಿಸುತ್ತಾರೆ, **ಜನಪ** ಎಂದು. ಜನಪ ನರಿಕೆಯು ಚೋರ ಎಂದರೆ–ದೊರೆಗೆ ತಿಳಿದಹಾಗೆ ಕಳ್ಳತನವನ್ನು ಮಾಡುವ ಜನರು ಪೊಳಲೊಳು ಎಂದರೆ ಊರೊಳಗೆ ಕದ್ದದ್ದನ್ನೆಲ್ಲಾ ದೊರೆಗೆ ಒಪ್ಪಿಸು ತ್ತಿರಲು,ಅವನ ಕಳ್ಳತನದ ದೋಷ ಎಣಿಸದೇ ದೊರೆಯು ಹಣವನ್ನೂ ಕೊಟ್ಟು ರಕ್ಷಿಸುವಂತೆಯೂ, ಸರ್ವವನ್ನೂ ಒಪ್ಪಿಸದಿದ್ದರೆ ಶಿಕ್ಷಿಸುವಂತೆಯೂ ಸಹ ಸರ್ವಕರ್ಮಾರ್ಪಣೆಗೆ ತಕ್ಕವರಾದ ತತ್ವೇಶ ಮೊದಲಾದ ಸಜ್ಜನರು ಅನು ಚಿತೋಚಿತ ಎಂಬ ಪುಣ್ಯಪಾಪಾದಿ ಸಮಸ್ತಕರ್ಮವನ್ನು ಶ್ರೀಕೃಷ್ಣನೇ ಸರ್ವವೂ ನಿನ್ನಧೀನ, ಈ ಎರಡರ ಸಂಪರ್ಕವು ನನಗೆ ಇಲ್ಲದಂತೆ ರಕ್ಷಿಸೆಂದು ಭಾವಿಸಿದರೆ, ಅಂಗೀಕರಿಸಿ, ಲಕ್ಷ್ಮೀಪತಿಯಾದ ದೇವರು ಸದಾ ತನ್ನರಮನೆ ಎಂಬ ವೈಕುಂಠಾದಿ ಲೋಕದಲ್ಲಿ ಅವರನ್ನು ಆನಂದಪಡಿಸುವನು ॥೮॥

# ಸರ್ವವ್ಯಾಖ್ಯಾನಸಾರಸಂಗ್ರಹ

ಅನುಚಿತೋಚಿತ-ಎಂಬ ದ್ವಂದ್ವಕರ್ಮಗಳನ್ನು ಶ್ರೀಹರಿಯು ತನ್ನಲ್ಲಿ ನಿಂತು, ತನ್ನ ಕರ್ಮಾನುಸಾರ ಮಾಡಿ ಮಾಡಿಸಿದ್ದಾನೆಂಬ ಉತ್ತಮ ಜ್ಞಾನಾನುಸಂಧಾನಪೂರ್ವಕವಾಗಿ ಶ್ರೀಹರಿಯ ಚರಣಾರವಿಂದಗಳಿಗೆ ಅರ್ಪಿಸುವ ಭಗವದ್ಭಕ್ತರ ಅಪರಾಧಗಳನ್ನು ಮನ್ನಿಸಿ, ಮಾಧವನು ತನ್ನ ಅರಮನೆಯಲ್ಲಿಟ್ಟು ಸುಖಪ್ರದನಾಗುತ್ತಾನೆಂದು ತಿಳಿಸುತ್ತಾರೆ.

ಪ್ರಜಾಪಾಲಕನಾದ ರಾಜನಿಗೆ **ಜನಪ** ನೆಂದು ಹೆಸರು. ಅಂತಹ ಜನಪನ ಪ್ರಜೆಗಳೆಲ್ಲರೂ ರಾಜಾಧೀನರು. ರಾಜಾಜ್ಞೆಯಂತೆ ನಡೆಯುವವರು. ರಾಜಾಜ್ಞೆಯನ್ನು ಉಲ್ಲಂಘಿಸಿದ ಪ್ರಜೆಗಳಿಗೆ ಶಿಕ್ಷೆ ಉಂಟಾಗುವುದು. ಇದು ರಾಜನ ಶಾಸನದ ನಿಯಮ.

ಒಬ್ಬ ಕಳ್ಳನು ರಾಜಾಜ್ಞೆಯಂತೆ ಅನ್ಯರಿಂದ ಹಣವನ್ನು ಅಪಹರಿಸುವನು. ಚೋರನು ರಾಜನಲ್ಲಿಗೆ ಹೋಗಿ, ನಮಸ್ಕಾರ ಮಾಡಿ, ತಾನು ಕದ್ದಿದ್ದ ದ್ರವ್ಯವನ್ನು ರಾಜನಿಗೆ ಒಪ್ಪಿಸಿದಾಗ, ಆ ರಾಜನು ಸಂತುಷ್ಟನಾಗಿ ಆ ಚೋರನ ಅಪರಾಧವನ್ನು ಮನ್ನಿಸಿ, ಅವನನ್ನು ಪೊರೆವನು. ಆ ಚೋರನ ಪಶ್ಚಾತ್ತಾಪದಿಂದಾಗಿ, ರಾಜನು ಅವನ ಅವಗುಣಗಳನ್ನು ಎಣಿಸುವುದಿಲ್ಲ. ಆದರೆ ಆ ಚೋರನು ತಾನು ಕದ್ದಿರುವ ಹಣವನ್ನು ರಾಜನಿಗೆ ಒಪ್ಪಿಸದಿದ್ದರೆ ರಾಜಶಾಸನರೀತ್ಯಾ ಅವನಿಗೆ ಉಗ್ರಶಿಕ್ಷೆ ವಿಧಿಸುವನು.

ಇದರಂತೆ ವಿಶ್ವಪ್ರಭುವಾದ ಶ್ರೀಪರಮಾತ್ಮನು ಜನಪನ ಸದೃಶನು. ಪಾಪಕರ್ಮಗಳನ್ನು ಮಾಡಿದ ಜೀವನು, ರಾಜಾಜ್ಞೆಯಂತೆ ಹಣವನ್ನು ಕದ್ದು ಅಪರಾಧವೆಸಗಿರುವ ಚೋರನ ಸದೃಶನು. ಚೋರನು ರಾಜನಿಗೆ ದ್ರವ್ಯವನ್ನು ಒಪ್ಪಿಸಿದರೆ, ರಾಜನು ರಕ್ಷಿಸುವನು. ಅದರಂತೆ ಜಗತ್ಪ್ರಭುವಾದ ಶ್ರೀಪರಮಾತ್ಮನಿಗೆ, ಭಕ್ತನಾದವನು– "ಎಲೈ ಮಹಾಪ್ರಭುವೇ, ನೀನೇ ಸರ್ವತಂತ್ರಸ್ವತಂತ್ರನು. ನಾನು ನಿನ್ನ ಅಧೀನನು. ನೀನೇ ನನ್ನಲ್ಲಿ

ನಿಂತು, ನನ್ನ ಅನಾದಿಕರ್ಮಾನುಸಾರ ಪಾಪಕರ್ಮಗಳನ್ನು ಮಾಡಿ, ಮಾಡಿಸಿದ್ದೀಯೆ ? ಅದನ್ನು ನಿನಗೆ ಅರ್ಪಿಸಿದ್ದೇನೆ. ನನ್ನ ಅಪರಾಧವನ್ನು ಕ್ಷಮಿಸು-ಎಂಬ ಉತ್ತಮ ಅನುಸಂಧಾನದಿಂದ, ಪುಣ್ಯಕರ್ಮಗಳನ್ನೂ, ಪಾಪಕರ್ಮಗಳನ್ನೂ, ಶ್ರೀಹರಿಯೇ ಸರ್ವಕರ್ತೃವೆಂದು ಅರಿತು, ಅಹಂಕರ್ತೃತ್ವಾಭಿಮಾನ ರಹಿತನಾಗಿ ಅರ್ಪಿಸಿದರೆ, ಪರಮಕರುಣಾಸಾಗರನಾದ ಕಮಲಾಪತಿಯು ಜೀವಕೃತಕರ್ಮಗಳನ್ನು ತಾನು ಸ್ವೀಕರಿಸಿ, ಅವನ ದೋಷಗಳನ್ನು ಎಣಿಸದೆ ಸಂರಕ್ಷಿಸುವನು.

ಮಾಧವನು ಅಂತಹ ಭಗವದ್ಭಕ್ತರನ್ನು ವೈಕುಂಠಾದಿ ತನ್ನ ಅರಮನೆಯಲ್ಲಿ ಅಂದರೆ-ಮುಕ್ತಿಧಾಮಗಳಲ್ಲಿ ಇಟ್ಟು, ಸ್ವರೂಪನಂದಾವಿರ್ಭಾವರೂಪವಾದ ನಿತ್ಯಾನಂದಸುಖವನ್ನು ಕೊಡುವನು-ಎಂದು **ದ್ವಂದ್ವಕರ್ಮಸಮರ್ಪಣೆಯ** ರಹಸ್ಯ ತಿಳಿಸುತ್ತಾರೆ ॥೮॥

## ಪದ್ಯ ೯

**ಮೂಲ**

**ಅನ್ನದನ್ನಾದನ್ನನಾಮಕ ।**
**ಮುನ್ನೆ ಪೇಳ್ದ ಪ್ರಕಾರ ಜೀವರೊ ।**
**ಳನ್ನರೂಪಪ್ರವೇಶಗೈದರವರ ವ್ಯಾಪಾರ ।**
**ಬನ್ನ ಬಡದೆಲೆ ಮಾಡಿ ಮಾಡಿಸಿ**
**ಧನ್ಯರಿವರಹುದೆಂದೆನಿಸಿ ತ್ರೈ ।**
**ಗುಣ್ಯವರ್ಜಿತ ತತ್ತದಾಹ್ವಯನಾಗಿ ಕರೆಸುವನು ॥೯॥**

**ಅವತರಣಿಕೆ**

ಅನ್ನ-ಅನ್ನದ-ಅನ್ನಾದನಾಮಕನಾದ ಅನಂತಮಹಿಮಾಪರಿಪೂರ್ಣನು ಸ್ಥೂಲಶರೀರಗತನಾಗಿ **ಮಾಡಿಸುವ** ವ್ಯಾಪಾರವಿಶೇಷವನ್ನು ತಿಳಿಸುತ್ತಾರೆ.

## ಪ್ರತಿಪದಾರ್ಥ

**ಅನ್ನದ** = ಸ್ಥೂಲದೇಹಕ್ಕೆ ಉಪಚಯರೂಪವಾದ **ಅನ್ನ**ವನು (ವಿಷಯಗಳನ್ನು) ಕೊಡುವವನು (ಅನಿರುದ್ಧರೂಪದಿಂದ). **ಅನ್ನಾದ** = ಸ್ಥೂಲಶರೀರದ ಮುಖದ್ವಾರಗತನಾಗಿ ಅನ್ನವನ್ನು ಭಕ್ಷಿಸುವ (ಪ್ರದ್ಯುಮ್ನ ರೂಪದಿಂದ) (ಆದ–ಭಕ್ಷಣೇ-ಎಂಬ ಪ್ರಯೋಗರೀತ್ಯಾ), **ಅನ್ನನಾಮಕ** = ಅನ್ನಶಬ್ದವಾಚ್ಯನಾದ ಶ್ರೀಪರಮಾತ್ಮನು, **ಮುನ್ನ** = ಪೂರ್ವೋಕ್ತಪದ್ಯ ಗಳಲ್ಲಿ, **ಪೇಳ್ದ ಪ್ರಕಾರ** = ವಿವರಿಸಿದೋಪಾದಿಯಲ್ಲಿ, **ಜೀವರೊಳು** = ತ್ರಿವಿಧ ಜೀವರಲ್ಲಿ, **ಅನ್ನರೂಪ** = ಅನ್ನದಲ್ಲಿ ಅನ್ನರೂಪನಾಗಿ, **ಪ್ರವೇಶಗೈದು** = ಜೀವರ ಸ್ಥೂಲದೇಹಗತ ಮುಖದ್ವಾರ ಸ್ಥೂಲಶರೀರದ ಸರ್ವಾಂಗಗಳಲ್ಲೂ ಪ್ರವೇಶ ಮಾಡಿ (ರಸವಿಭಾಗದ್ವಾರಾ). **ಅವರವರ ವ್ಯಾಪಾರ** = ಆಯಾಯಾ ಜೀವರ ಸ್ಥೂಲದೇಹದ್ವಾರಾ ಕ್ರಿಯಾವಿಶೇಷ ಗಳನ್ನು, **ಮಾಡಿ** = ಸ್ವಾಖ್ಯರಸಸ್ವೀಕಾರಪೂರ್ವಕ ಬಿಂಬಕ್ರಿಯಾದ್ವಾರಾ, ತಾನೇ ಪ್ರೇರಿಸಿ, **ಮಾಡಿಸಿ** = ತತ್ತ್ವದೇವದೈತ್ಯರ ದ್ವಾರಾ ಮಾಡಿಸಿ ತಜ್ಜನ್ಯವಾದ ತೃಪ್ತಿ ಎಂಬ ಫಲವನ್ನು ಜೀವರಿಗೆ ಉಣಿಸುತ್ತಾ, **ಇವರು** = ವಿಷಯ ಭೋಗಗಳನ್ನು ಉಣ್ಣುವ ಜೀವರು. **ಧನ್ಯರು** = ಕೃತಾರ್ಥ ರೆಂದು, **ಎಂದೆನಿಸಿ** = ಎನಿಸುವವನಾಗಿ (ಆ ಕೀರ್ತಿಯನ್ನು ಜೀವರಿಗೆ ಕೊಡುವವನು. ಪ್ರೇರಕ–ತಾನು ಪ್ರತಿಬಿಂಬಭೂತರಾದ ಸಕಲಜೀವರೂ ಪ್ರೇರ್ಯರು). **ತ್ರೈಗುಣ್ಯವರ್ಜಿತ** = ಪ್ರಾಕೃತಗುಣತ್ರಯಗಳಿಂದ ದೂರನಾದ ಶ್ರೀಪರಮಾತ್ಮನು (ತ್ರಿಗುಣಾತೀತನು). **ತತ್ತದಾಹ್ವಯನಾಗಿ** = ಆಯಾಯಾ ಇಂದ್ರಿಯನಾಮಗಳಿಂದ ಇಂದ್ರಿಯಾಕಾರನಾಗಿದ್ದು ತತ್ತ ಚ್ಛಬ್ದವಾಚ್ಯನಾಗಿ, **ಕರೆಸುವನು** = ಜ್ಞಾನಿಗಳಿಂದ ಕರೆಸಲ್ಪಡುತ್ತಾನೆ ॥೯॥

# ವ್ಯಾಖ್ಯಾನಗಳು

## ೧. ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ

ದ್ವಂದ್ವಕರ್ಮಗಳ, ಬಿಂಬನೇ ಸ್ಥೂಲದೇಹದಿಂದ ಮಾಡಿಸತಾನೆಂದು ಹೇಳತಾರೆ.

ಸ್ಥೂಲದೇಹಕ್ಕೆ ಉಪಚಯವಾಗತಕ್ಕ ಅನ್ನವನ್ನ ಅನಿರುದ್ಧ ಆನ್ನಾಧಿಷ್ಠಾನವಲ್ಲಿದ್ದು ಕೊಡತಕ್ಕವ. 'ಆದ ಭಕ್ಷಣೇ' ಸ್ಥೂಲದೇಹದ ಮುಖದ್ವಾರಗತನಾಗಿ ಅನ್ನ ಭಕ್ಷಿಸತಕ್ಕವ ಪ್ರದ್ಯುಮ್ನ. ಇದಕ್ಕೆ ಪೂರ್ವದಲ್ಲಿ ಪಿತೃಗಣ ಸಂಧಿಯಲ್ಲಿ ಪೇಳಿದೋಪಾದಿಯಲ್ಲಿ ಅನ್ನನಾಮದಿಂವ ಇದ್ದಾನೆ. ಆದರ ವಿವರ–

೧. ದೇವತೆಗಳಿಗೆ **ಸ್ವಾಹಾಖ್ಯ** ಅನ್ನ, **ವಾಸುದೇವ** ಸ್ವಾಹಾನಾಮದಿಂದ ಇದ್ದಾನೆ.

೨. **ಪಿತೃ**ದೇವತೆಗಳಿಗೆ **ಸ್ವಧಾಖ್ಯ** ಅನ್ನ, **ಸಂಕರ್ಷಣ** ಸ್ವಧಾನಾಮದಿಂದ ಇದ್ದಾನೆ.

೩. ಮಾನುಷರಿಗೆ **ಫಲಾಖ್ಯ** ಅನ್ನ, **ಪ್ರದ್ಯುಮ್ನ** ಫಲನಾಮದಿಂದ ಇದ್ದಾನೆ.

೪. ಪಶುಗಳಿಗೆ **ತೃಣಾಖ್ಯ** ಅನ್ನ, **ಅನಿರುದ್ಧ** ತೃಣನಾಮದಿಂದ ಇದ್ದಾನೆ.

ಈ ಪ್ರಕಾರ ಅನ್ನನಾಮದಿಂದ ಪರಮಾತ್ಮ ಇರೋವನಾಗಿ ಇದ್ದಾನೆ. ಪೂರ್ವೋಕ್ತ ಸ್ಥೂಲದೇಹಕ್ಕೆ ಸೇರತಕ್ಕ ಚತುರ್ವಿಧಅನ್ನವನ್ನ ಸ್ಥೂಲದೇಹ ದ್ವಾರಾ ಭೋಜನ ಮಾಡತಕ್ಕ, ಸ್ಥೂಲದೇಹಾಕಾರದಂತೆ ವ್ಯಾಪ್ತರಾದ ತ್ರಿವಿಧರೊಳು ಬಿಂಬನಾಗಿದ್ದು, ಭೋಜನಾದಿ ಇಚ್ಛಾಗಳ ಪ್ರೇರಿಸಿ, ಅನ್ನದಲ್ಲಿ

ಅನ್ನರೂಪನಾಗಿ, ಅನ್ನದಿಂದ ಅವಿಯೋಗನಾಗಿ, ಜಡಾನ್ನಸಹಿತನಾಗಿ ತನ್ನ ಕ್ರಿಯಾದ್ವಾರಾ, ಜೀವನ ಕ್ರಿಯಾದ್ವಾರಾ, ಆ ಜೀವರ ಸ್ಥೂಲದೇಹದ ಮುಖ ದ್ವಾರದಿಂದ ಸ್ಥೂಲದೇಹದ ಒಳಗೆ ಪ್ರವೇಶ ಮಾಡಿ, ಆಯಾ ಸ್ಥೂಲದೇಹ ಗಳಿಗೆ ಜಡರಸ ಉಪಚಯ ಮಾಡಿ, ತನ್ನ ಸ್ವಾಖ್ಯ ತಾನು ಸ್ವೀಕಾರ ಮಾಡಿ, ಜಡರಸ ಜೀವರಿಗೆ ಉಪಚಯವಲ್ಲವ ಕಾಲಕ್ಕೂ, ದೇಹಾಭಿಮಾನದಿಂದ ನಾನು ಉಂಡೆ, ಎಂಬ ಜ್ಞಾನ ಪ್ರೇರಿಸಿ, ತದ್ವಾರಾ ಅವರ ಸಂತೋಷಪಡಿಸಿ, ಈ ಪ್ರಕಾರದಿಂದ ಅನ್ನರೂಪದಿಂದ ಪ್ರವೇಶ ಮಾಡಿ, ಸ್ಥೂಲೇಂದ್ರಿಯಾದಿ ಗಳಲ್ಲಿ ಬಿಂಬನಾಗಿದ್ದು, ಆಯಾ ಪ್ರಾಣಿಗಳ ಸ್ಥೂಲದೇಹೇಂದ್ರಿಯಾದಿಗಳಿಂದ ಮಾಡತಕ್ಕ ಕೆಲಸಗಳ ಅವರ ದ್ವಾರಾ ಬಿಂಬನಾದ ಪರಮಾತ್ಮ ಆಯಾಸಪಡ ದಲೆ, ಪ್ರಾಕೃತತ್ರಿಗುಣಗಳಿಂದ ದೂರನಾದ ಶ್ರೀದೇವರು ಆಯಾ ಇಂದ್ರಿಯ ನಾಮದಿಂದ, ಇಂದ್ರಿಯಾಕಾರದಿಂದ ಸ್ಥೂಲೇಂದ್ರಿಯಗಳಲ್ಲಿದ್ದು, ಬಿಂಬ ಕ್ರಿಯಾದ್ವಾರಾ ಸ್ಥೂಲದೇಹೇಂದ್ರಿಯಾದಿಗಳಿಂದ ದ್ವಂದ್ವಕರ್ಮಗಳ ಮಾಡಿ ಮಾಡಿಸಿ, ಈ ಪ್ರಕಾರ ಬಿಂಬಕ್ರಿಯಾದ್ವಾರಾ ಪ್ರತಿಬಿಂಬಕ್ರಿಯಾ ಆಗತದೆಂದು ತಿಳಿದು, ಅಹಂಮಮತಾದಿಗಳ ತ್ಯಜಿಸಿ, ಪೂರ್ವೋಕ್ತ ಪ್ರಕಾರ ದ್ವಂದ್ವಕರ್ಮ ಗಳ ಅರ್ಪಿಸತಕ್ಕ ಈ ಅಧಿಕಾರಿಗಳು ಸಂಸಾರಸಮುದ್ರ ದಾಟಿ ಕೃತಾರ್ಥರು ಎಂತಲೂ, ನಿಶ್ಚಯವೆಂತಲೂ, ದೇಹಗತತತ್ತ್ವದೇವತೆಗಳಿಂದಲೂ ಭಗ ವದ್ಭಕ್ತರುಗಳಿಂದಲೂ ಅನಿಸಿದವನಾಗಿ, ದೇಹಾಂತರ್ಗತನಾಗಿ ಬಿಂಬ ಎಂತ ಹೇಳಿಸಿಕೊಳ್ಳಲ್ಪಡುತ್ತಾನೆ, ಮತ್ತು ಇಂಥಾ ಅಧಿಕಾರಿ ದೇವತೆಗಳಿಂದಲೂ ಜ್ಞಾನಿಗಳಿಂದಲೂ ಮಾನುಷರಿಂದಲೂ ಧನ್ಯ–ಎಂತ ಕರಸೋವನಾಗುತಾನೆ ಎಂತ ತಾತ್ಪರ್ಯ ॥೯॥

## ೨. ಭಾವಪ್ರಕಾಶಿಕೆ

"ಅನ್ನಂ ದದಾತೀತಿ ಅನ್ನದಃ" ಎಂಬ ನಿರ್ವಚನದಿಂದ ಅನ್ನವನ್ನು ಕಲ್ಪಿಸುವವನಾದುವರಿಂದ **ಅನ್ನದ**ನೆಂದು ಹೆಸರು. "ಅನ್ನಮತ್ತೀತಿ ಅನ್ನಾದಃ" ಅನ್ನವನ್ನು ಭಕ್ಷಿಸುವವನಾದುದರಿಂದ **ಅನ್ನಾದನು**, ತೈತ್ತರೀಯ ಉಪನಿಷತ್ತಿ ನಲ್ಲಿ "ಅದ್ಯತೇತ್ತಿ ಚ ಭೂತಾನಿ ತಸ್ಮಾದನಂ ತದುಚ್ಯತೇ ಇತಿ" ಎಂದು ನಿರ್ವಚನ

ಮಾಡಿರುವರು. ಅದರ ಪ್ರಕಾರ "ಅದ್ಯತ ಇತ್ಯನ್ನಂ, ಸರ್ವಮತ್ತೀತ್ಯನ್ನಂ" ಪ್ರಪಂಚದಲ್ಲಿ ತಾನು ಅನ್ನರೂಪದಿಂದ ಚೇತನರಿಗೆ ಉಪಜೀವ್ಯನಾಗಿರುವದ ರಿಂದಲೂ ಅನ್ನನೆಂದು ಹೆಸರು. ಪ್ರಳಯಕಾಲದಲ್ಲಿ ಎಲ್ಲಾ ಪ್ರಪಂಚವನ್ನೂ ನುಂಗುವುದರಿಂದ ಅನ್ನನೆಂದು ಹೆಸರು. ಆದ್ದರಿಂದ ಹೀಗೆ ಅನ್ನಾದ, ಅನ್ನದ, ಅನ್ನ–ಎಂಬ ಹೆಸರುಗಳಿಂದ ಹಿಂದೆ ಪಿತೃಗಣಸಂಧಿಯಲ್ಲಿ ಸಪ್ತಾನ್ನಪ್ರಕರಣ ದಲ್ಲಿ ಈ ವಿಷಯವನ್ನು ವಿಸ್ತಾರವಾಗಿ ಹೇಳಿರುವವರು ಮತ್ತು ಅಭ್ಯಾಸ ಶ್ಲೋಕಸ್ಕರ ಇಲ್ಲಿ ಸಂಕೋಚವಾಗಿಯೂ ಸೂಚಿಸಿರುವರು. ಸಪ್ತಾನ್ನಪ್ರಕರಣ ದಲ್ಲಿ ಹೇಳಿರುವಂತೆ ಜೀವರೊಳಗೆ ರೂಪಾಂತರಗಳಿಂವ ಪ್ರವೇಶಮಾಡಿ ಅವರವರು ಮಾಡಬೇಕಾದ ಕೃತ್ಯಗಳನ್ನು ಸ್ವಲ್ಪವಾದರೂ ಆಯಾಸವಿಲ್ಲದೆ ತಾನು ಮಾಡಿ ಅವರಿಂದ ಮಾಡಿಸುವನು. ಪರಮಾತ್ಮನು ರಾಜನಲ್ಲೂ, ಭೃತ್ಯ ನಲ್ಲೂ, ಭಾಗ್ಯವಂತನಲ್ಲೂ, ದರಿದ್ರನಲ್ಲೂ, ಕುರೂಪಿ ಸುರೂಪಿಗಳಲ್ಲಿದ್ದು ತಾನು ಪ್ರಾಕೃತಗುಣರಹಿತನಾದರೂ, ಪ್ರಾಕೃತರಲ್ಲಿ ವಾಸಮಾಡುವುದರಿಂದ ರಾಜನೆಂತಲೂ, ಭೃತ್ಯನೆಂತಲೂ, ಭಾಗ್ಯವಂತ ಮೊದಲಾದ ಹೆಸರಿನಿಂದ ಕರೆಸಿಕೊಂಡು, ರಾಜ, ಭೃತ್ಯ ಮೊದಲಾದ ಹೆಸರನ್ನು ಜೀವರಿಗೆ ಕೊಡಿ ಸುವನು ॥೯॥

## ೩. ಭಾವದರ್ಪಣ

ಈ ಪದ್ಯಾರ್ಥ ನಾಲ್ಕನೇ ಸಂಧಿಯಲ್ಲಿ ವಿವರಿಸಿದೆ. ಅಲ್ಲೇ ನೋಡ ತಕ್ಕದ್ದು. ಅನ್ನೇತಿ. ಅತ್ತೀತ್ಯನ್ನಂ-ಸರ್ವವೂ ಭಕ್ಷಣ ಮಾಡತಕ್ಕವ ಎಂಬರ್ಥ ಅಥವಾ ಅದ್ಯತ ಇತ್ಯನ್ನಂ-ಪಉಜೀವ್ಯ ಎಂಬರ್ಥ. ಈ ವಿಷಯದಲ್ಲಿ ತೈತ್ತ ರೇಯುಶ್ರುತಿ ಪ್ರಮಾಣ. "ಅದ್ಯತೇತ್ತಿ ಚ ಭೂತಾನಿ ತಸ್ಮಾದನ್ನಂ ತದುಚ್ಯತೇ" ಇತಿ ಅನ್ನ ಕೊಡತಕ್ಕವ ಅನ್ನಾದ ಅದ್ ಭಕ್ಷಣೇ–ಎಂಬ ಧಾತು ರೀತ್ಯಾ ಅನ್ನ ಭೋಜನ ಮಾಡತಕ್ಕವ ಎಂಬರ್ಥ. ಅನ್ನ–ಅನ್ನನಾಮಕ, ಮುನ್ನೆ– ಮುಂಚೆ ॥೯॥

## ೪. ಶ್ರೀವ್ಯಾಸದಾಸಸಿದ್ಧಾಂತಕೌಮುದೀ

"ಅನ್ನದ" ಇತಿ॥ ಮುನ್ನ–ಹಿಂದೆ॥ ತ್ರೈಗುಣ್ಯವರ್ಜಿತ ॥೯॥

### ಕನ್ನಡಾರ್ಥ

ತ್ರೈಗುಣ್ಯವರ್ಜಿತ ಈ ನಾಮವು ಗುಣಭೃನ್ನಿರ್ಗುಣ–ಎಂಬ ವಿಷ್ಣು ನಾಮಸಹಸ್ರಾಂತರ್ಗತವಾದ ನಾಮದ ಅರ್ಥವಿವರಣರೂಪವಾಗಿ ಹೊರ ಟಿರುತ್ತದೆ. ಪ್ರಾಣ ಮೊದಲಾದವರಿಗೆ ಆಧಾರನೂ ದೇಹ ಮುಂತಾದುವು ಗಳನ್ನು ದೂರಗೊಳಿಸುವವನೂ ಆದುದರಿಂದ ಗುಣಭೃನ್ನಿರ್ಗುಣವೆನ್ನುತ್ತಾರೆ. ಇದರಲ್ಲಿ ದೇಹ ಮುಂತಾದ ಪ್ರಾಕೃತಗುಣಸಂಬಂಧ ರಹಿತನೆಂಬುವ ಅರ್ಥವು ತ್ರೈಗುಣ್ಯವರ್ಜಿತ ಪದದಲ್ಲಿ ಅಡಕವಾಗಿರುತ್ತದೆ–ಎಂದು ತಿಳಿಯಬೇಕು ॥೯॥

## ೫. ಶ್ರೀಗುರುಹೃದಯಪ್ರಕಾಶಿಕೆ

ಭೋಕ್ತೃತ್ವಶಕ್ತಿ ಸಹಾ ದೇವರಧೀನವೆಂದು ಭಾವಿಸುವ ಬಗ್ಗೆ ಪುನಃ ಬೋಧಿಸುತ್ತಾರೆ, ಅನ್ನದ ಎಂದು. ಅನ್ನದ ಎಂಬ ಅನ್ನವನ್ನು ಕೊಡುವ ರೂಪ ಶ್ರೀಹರಿ. ಅನ್ನಾದ ಎಂದರೆ ಅನ್ನ ತಿನ್ನುವನಲ್ಲಿ ಶಕ್ತಿವ್ಯಕ್ತಿ ಮಾಡುವ ದೇವರು ಅನ್ನ ತಿನ್ನುವನೆಂದು ಹೆಸರುಳ್ಳವ. ಅನ್ನ ಎಂದರೆ ಅನ್ನಗತರೂಪ. ಈ ಮೂರು ರೂಪದಿಂದ ಪ್ರವೇಶಿಸಿ ಶಕ್ತಿವ್ಯಕ್ತಿ ಮಾಡಿ ಅವರವರಖಿಳಕರ್ಮಗಳನ್ನು ಬನ್ನಬಡದಲೆ ಎಂದರೆ, ದೇಹ ವಿಕಾರರೂಪ ಶ್ರಮಾದಿಗಳನ್ನು ಹೊಂದದೇ ವ್ಯಕ್ತಿಮಾಡಿ ಮಾಡಿಸಿ ಅಂದರೆ, ಕ್ರಿಯಾ ವ್ಯಕ್ತಿ ಮಾಡಿಸಿ, ಧನ್ಯರಿವರಹುದೆಂದೆನಿಸಿ ಅಂದರೆ, ಇವರೇ ಪುಣ್ಯ ಸಾಧನ ಮಾಡಿದವರು–ಎನ್ನಿಸಿ ತ್ರೈಗುಣ್ಯವರ್ಜಿತ ಅಂದರೆ–ತ್ರಿಗುಣವರ್ಜಿತ ನಾದ ದೇವರು ಆಯಾಯಾ ಹೆಸರುಗಳಿಂದ ಕರೆಸಿಕೊಳ್ಳುವನು ॥೯॥

ನಾಲ್ಕುನೂರು ಗುಣ ಸ್ವಾತಂತ್ರ್ಯ ವಿಭಾಗ ಹೇಳುವ ವಿಷ್ಣುರಹಸ್ಯ ದಲ್ಲಿರುವ ಪ್ರಮಾಣ ಶ್ಲೋಕಗಳ ವಿವರ–

ಯಥಾರಾಜ ನಿಜಾಮಾತ್ಯಾನ್ ದತ್ವಾಸ್ವಾತಂತ್ರ್ಯಮಾತ್ಮನಃ ।
ಕಾರ್ಯೇ ನಿಯೋಜ್ಯ ತತ್ರತ್ಯಾನ್ ಗುಣದೋಷಾಂಶ್ಚ ಪೃಚ್ಛತಿ ॥

ತತ್ತತ್ಕಾರ್ಯಕೃತೌ ಶಕ್ತಿ ಸ್ವಾತಂತ್ರ್ಯಂ ಹಿ ಪರಂ ಸ್ಮೃತಂ ।
ಶಕ್ತ್ಯಾ ಸ್ವದತ್ತಯಾಮಾತ್ಯೈಃ ಕೃತೇ ಕಾರ್ಯೇ ಸತುಷ್ಯತಿ ॥

ಸತ್ಯಾಂ ಶಕ್ತೌ ಕಾರ್ಯನಾಶೇ ಸ್ವಾಜ್ಞಮುಲ್ಲಂಘ್ಯವರ್ತತೇ ।
ಕುಪಿತ್ವಾ ದಂಡಯತ್ಯೇವಂ ತಥಾ ಕ್ರೀಡತ್ಯಯಂ ಹರಿಃ ॥

ನಿಯಂತೃತ್ವೇನ ಸರ್ವತ್ರ ತಿಷ್ಠನ್ ಜೀವೇಷು ಸರ್ವದಾ ।
ಸ್ವಸ್ಮಿನ್ನರ್ಧಂ ಸ್ವತಂತತ್ವಂ ಸಮಾಧಾಯತದರ್ಧಕಂ ॥

ವಿಭಜ್ಯ ಶತಧಾ ಭೂಯೋಽಷ್ಟೌ ಚತ್ವಾರಿಂಶತಿ ಅಂಶಕಾನ್ ।
ಪ್ರಾಣೇ ಸ್ವಾತಂತ್ರ್ಯಮಾಧಾಯ ದ್ವಿಪಂಚಾಶತ್ತು ವೇದಸಿ ॥

ಪಾದಂ ಚತುರ್ಥಂ ಶತಧಾ ವಿಭಜ್ಯ ದಶ ಭಾಗಕಾನ್ ।
ಜೀವೇ ಸ್ವಾತಂತ್ರ್ಯಮಾಧಾಯ ತತೋ ವಿಶಂತಿ ಭಾಗಕಾನ್ ॥

ಅಹಂಕಾರಾತ್ಮಕೇ ರುದ್ರೇ ತಥಾ ಬುದ್ಧೌ ನಿಧಾಯ ಚ ।
ಮನೋದೇವೇ ತತಶ್ಯಕ್ರೇ ಭಾಗಾನ್ ಪಂಚದಶೈವ ತು ॥

ತತ್ತ್ವದೇವೇ ದಶಾಂಶಾಶ್ಚ ಸ್ವಾತಂತ್ರ್ಯಂ ನಿಧಧೇ ಹರಿಃ ।
ಪಂಚಚತ್ವಾರಿಂಶದಶಾಂನ್ ಕಲಿಮುಖ್ಯೇಷ್ವಧಾಯತ್ಸ್ವಯಂ ॥

ಈಶಸ್ವಾತಂತ್ರ್ಯಭಾಗೇಷುಮಾಯಾಭಾಗೇಸ್ತ್ರೀಯುಕಃ ।
ಸಾಹಿ ಸರ್ವಜಗನ್ಮಾತಾ ಮೂಲಪ್ರಕೃತಿದೇವತಾ ॥

ಬ್ರಹ್ಮಾದಿದೇವ ಪಾಪಾನಿ ತೂಲವದ್ದಹತೇ ಹರಿಃ ।
ತದಾಜ್ಞಯಾ ಪ್ರವೃತ್ತತ್ವಾನ್ನತೇಷಾಮಪರಾಧನಂ ॥

ಪುಣ್ಯ ಕರ್ಮ ಸಹಾಯಾಯ ಪುಣ್ಯಾತ್ಮಾನಸ್ತು ಮಾನವಾಃ ।
ದೈತ್ಯಭಾಗಗತಾತ್ಪುಣ್ಯಾತ್ತೇಭ್ಯೋಂಶಂ ದದತೇ ಹರಿಃ ॥

ಪಾಪಕರ್ಮ ಸಹಾಯಾಯ ಪಾಪಾತ್ಮಾನಸ್ತು ಯೇ ನರಾಃ ।
ದೇವಭಾಗಗತಾತ್ಪಾಪಾತ್ತೇಭ್ಯೋಂಶಂ ದದತೇ ಹರಿಃ ॥

# ಸರ್ವವ್ಯಾಖ್ಯಾನಸಾರಸಂಗ್ರಹ

ಅಪ್ರಾಕೃತಸ್ವರೂಪಿಯಾದ ಶ್ರೀಪರಮಾತ್ಮನು ತ್ರಿವಿಧಜೀವರಲ್ಲಿ ಅಂತಸ್ಥಿತನಾಗಿದ್ದು, ಅವರವರ ಸಾಮರ್ಥ್ಯ, ಸ್ವರೂಪಯೋಗ್ಯತೆಗನುಸಾರವಾಗಿ, ಅವರ ಸ್ವರೂಪಗತ ಧರ್ಮಗಳಲ್ಲಿ ಬಿಂಬನಾಗಿ ಪ್ರವೇಶಿಸಿ, ಸಕಲವ್ಯಾಪಾರಗಳನ್ನು ಮಾಡಿ, ಮಾಡಿಸಿ ಅವರನ್ನು ಕೃತಾರ್ಥರೆಂದೆನಿಸುತ್ತಾನೆ –ಎಂದು ತಿಳಿಸುತ್ತಾರೆ,

"**ಅನ್ನಂದದಾತೀತಿ ಅನ್ನದಃ**"– ಎಂಬ ನಿರ್ವಚನರೀತ್ಯಾ, ಸರ್ವಜೀವರಿಗೂ ಅವರವರ ಆಹಾರರೂಪವಾದ ಅನ್ನವನ್ನು (ಆಹಾರವನ್ನು) ಕೊಡುವುದರಿಂದ ಶ್ರೀ ಪರಮಾತ್ಮನಿಗೆ– **ಅನ್ನದ**– ಎಂದು ಹೆಸರು.

**ಅನ್ನಮತ್ತೀತಿ ಅನ್ನಾದ**–ಎಂಬ ವಚನ ರೀತ್ಯಾ, ಅನ್ನವನ್ನು ಭಕ್ಷಿಸುವನಾದ್ದರಿಂದ, ಶ್ರೀಪರಮಾತ್ಮನು **ಅನ್ನಾದನು.** ಪ್ರಳಯಕಾಲದಲ್ಲಿ ತನಿಂದ ಸೃಷ್ಟರಾದ ಚರಾಚರಾತ್ಮಕವಾದ ಜಗತ್ತನ್ನೇ ನುಂಗುವುದರಿಂದ, ಅವನಿಗೆ **ಅನ್ನಾದ** ನೆಂದು ಹೆಸರು.

"**ಅದ್ಯತೇತ್ತಿಚ ಭೂತಾನಿ, ತಸ್ಮಾದನ್ನಂ ತದುಚ್ಯತೇ ಇತಿ**" –ಎಂಬ ತೈತ್ತಿರೀಯ ಉಪನಿಷದ್ವಚನದಂತೆ, ಜಗತ್ತಿನಲ್ಲಿ ತಾನು ಅನ್ನರೂಪದಿಂದ ಇದ್ದು, ಸಕಲ ಜೀವರಿಗೆ ಉಪಜೀವ್ಯನಾಗಿರುವುದರಿಂದ, ಶ್ರೀ ಪರಮಾತ್ಮನಿಗೆ **ಅನ್ನ**– ಎಂದು ಹೆಸರು, ಆಹಾರಗತ ರಸಾಂತರ್ಗತ

ನಾಗಿದ್ದು ಸ್ವಾಖ್ಯರಸ ಸ್ವೀಕಾರ ದ್ವಾರಾ ಬಿಂಬಕ್ರಿಯಾ ನಡೆಸಿ, ತದ್ವಾರಾ ಚೇತನರಿಗೆ ತೃಪ್ತಿಯನ್ನು ಕೊಡುವುದರಿಂದ, ಶ್ರೀಪರಮಾತ್ಮನೇ **ಅನ್ನ** ನಾಮಕನು.

ದೇವತೆಗಳಿಗೆ ಸ್ವಾಹಾಖ್ಯ ಅನ್ನರೂಪದಿಂದ, ಸ್ವಾಹಾನಾಮಕವಾಗಿ **ವಾಸುದೇವ.**

ಪಿತೃದೇವತೆಗಳಿಗೆ ಸ್ವಧಾಖ್ಯ ಅನ್ನರೂಪದಿಂದ ಸ್ವಧಾನಾಮಕನಾಗಿ **ಸಂಕರ್ಷಣ.**

ಮಾನವರಿಗೆ ಫಲಾಖ್ಯ ಅನ್ನರೂಪದಿಂದ, ಫಲನಾಮಕನಾಗಿ **ಪ್ರದ್ಯುಮ್ನ.**

ಪಶುಗಳಿಗೆ ತೃಣಾಖ್ಯ ಅನ್ನರೂಪದಿಂದ, ತೃಣನಾಮಕನಾಗಿ **ಅನಿರುದ್ಧ.**

–ಈ ಪ್ರಕಾರ ಅನ್ನನಾಮಕನಾಗಿದ್ದಾನೆ.

ಈ ರೀತಿ, ಅನ್ನದ– ಅನ್ನಾದ– ಅನ್ನನಾಮಕನಾದ ಆ ಅಪರಿಮಿತ ಮಹಿಮಾಸಂಪನ್ನನು ಅನ್ನರೂಪನಾಗಿ, ಜೀವರಲ್ಲಿ ಪ್ರವೇಶಗೈದು, ಸ್ಥೂಲದೇಹಕ್ಕೆ ಉಪಚಯರೂಪವಾದ ಕಾರ್ಯವನ್ನು ಮಾಡುವನು. ಆಗ ಜೀವನಿಗೆ ತೃಪ್ತಿಯುಂಟಾಗಿ, ತಾನೇ ಅನ್ನವನ್ನುಂಡು, ಜೀರ್ಣಿಸಿಕೊಂಡು ತೃಪ್ತಿಹೊಂದಿದ್ದೇನೆಂದು ತಿಳಿಯುವನು.

## ಪದ್ಯ-೧೦

**ಮೂಲ:–**

**ಸಲಿಲ ಬಿಂದು ಪಯೋಬ್ಧಿಯೊಳು ಬೀ ।**
**ಳಲು ವಿಕಾರವನೈದಬಲ್ಲುದೆ ।**
**ಜಲವು ತದ್ರೂಪವನೆ ಐದುವುದೆಲ್ಲ ಕಾಲದಲಿ ॥**

**ಕಲಿಮಲಾಪಹನರ್ಚಿಸಿರುವ ಸ ।**
**ತ್ಕುಲಜರ ಕುಕರ್ಮಗಳು ತಾ ನಿ ।**
**ಷ್ಕಲುಷಕರ್ಮಗಳಾಗಿ ಪುರುಷಾರ್ಥಗಳ ಕೊಡುತಿಹವು**
**॥೧೦॥**

**ಅವತರಣಿಕೆ:-**

ಭಗವದ್ಭಕ್ತರು ಮಾಡುವ ದುಷ್ಕರ್ಮಗಳು ಶ್ರೀ ಹರಿಯ ಪರಮಾನುಗ್ರಹದಿಂದ ಸುಕರ್ಮಗಳಾಗಿ, ಅವರಿಗೆ ಪುರುಷಾರ್ಥ ಪ್ರದವಾಗುವವು- ಎಂದು ದೃಷ್ಟಾಂತ**ಪೂರ್ವ**ಕವಾಗಿ ತಿಳಿಸುತ್ತಾರೆ ॥೧೦॥

**ಪ್ರತಿಪದಾರ್ಥ:-**

**ಸಲಿಲಬಿಂದು** = ನೀರಿನ ಒಂದು ತೊಟ್ಟು, **ಪಯೋಬ್ಧಿಯೊಳು** = ಅಪಾರವಾದ ಕ್ಷೀರಸಮುದ್ರದಲ್ಲಿ, **ಬೀಳಲು** = ಬಿದ್ದಾಗ, **ವಿಕಾರವನು** = ಕ್ಷೀರಸಮುದ್ರಗತ ಕ್ಷೀರವು ಆ ಒಂದು ಹನಿ ನೀರಿನಿಂದ **ವಿಕಾರ** ಹೊಂದಿ, ತನ್ನತನವನ್ನು ಕಳೆದುಕೊಳ್ಳುವುದೇ ? ಅಂದರೆ, ಒಂದು ತೊಟ್ಟು ನೀರಿನ ಮಿಶ್ರಣದಿಂದ ಕ್ಷೀರವು ವ್ಯತ್ಯಾಸವಾಗದೆ, ಕ್ಷೀರವಾಗಿಯೇ ಇರುವುದು, **ಜಲವು** = ಆದರೆ ಆ ಒಂದು ಹನಿ ನೀರು, **ತದ್ರೂಪವನೆ** = ಆ ಕ್ಷೀರದ ರೂಪವನ್ನೇ (ಅದರೊಡನೆ ಸೇರಿ) **ಐದುವುದು** = ಹೊಂದುವುದು. **ಎಲ್ಲಾ ಕಾಲದಲ್ಲಿ** = ಸರ್ವಕಾಲಗಳಲ್ಲಿ, **ಕಲಿಮಲಾಪಹನ** = ಸಮಸ್ತದೋಷಗಳನ್ನೂ ಪರಿಹರಿಸುವ ನಿರ್ದೋಷನಾದ ಆ ಪರಮಾತ್ಮನನ್ನು. **ಅರ್ಚಿಸುವ** = ಉತ್ತಮಜ್ಞಾನಸಂಧಾನದಿಂದ ದ್ವಂದ್ವ ಕರ್ಮಗಳ ಸಮರ್ಪಣಾಪೂರ್ವಕ ಪೂಜಿಸುವ, **ಸತ್ಕುಲಜರ** = ಶ್ರೀಮನ್ಮಧ್ವಮುನಿಗಳ ಶಾಸ್ತ್ರಾಧ್ಯಯನದಿಂದ ಸಂಶಯರಹಿತರಾದ ಜ್ಞಾನವುಳ್ಳ ಸಜ್ಜನರ (ಇಲ್ಲಿ ಸತ್ಕುಲಜರು-ಎಂದರೆ-ಉತ್ತಮ ವಂಶದಲ್ಲಿ ಸಂಜಾತರು ಎಂದು ತೆಗೆದುಕೊಳ್ಳಕೂಡದು ಏಕೆಂದರೆ, ದುರ್ಜನರೂ ಸಹ ಸತ್ಕುಲ

ಸಂಜಾತರಾಗಿರುತ್ತಾರೆ). **ಕುಕರ್ಮಗಳು** = ಪಾಪಯುಕ್ತವಾದ ದೋಷ ಕರ್ಮಗಳು. **ತಾ** = ಭಗವದನುಗ್ರಹದಿಂದ. **ನಿಷ್ಕಲುಷಕರ್ಮಗಳಾಗಿ** = ದೋಷರಹಿತವಾಗಿ ಪುಣ್ಯಕರ್ಮಗಳೆಂದೆನಿಸಿ, **ಪುರುಷಾರ್ಥಗಳ** = ಇಹದಲ್ಲಿ ಧರ್ಮ, ಅರ್ಥ, ಕಾಮಗಳನ್ನು ಕೊಡುವುದಲ್ಲದೇ, ಪರದಲ್ಲಿ ಪರಮಪುರುಷಾರ್ಥರೂಪವಾದ ಮೋಕ್ಷವನ್ನೂ ಸಹ **ಕೊಡುತಿಹವು** = ನೀಡುವುವು. ॥೧೦॥

## ವ್ಯಾಖ್ಯಾನಗಳು

### ೧. ಶ್ರೀ ಸಂಕರ್ಷಣಒಡೆಯರ ವ್ಯಾಖ್ಯಾನ

ಭಗವದ್ಭಕ್ತರ ದುಷ್ಕರ್ಮಗಳು ಸುಕರ್ಮಗಳಾಗತವೆ-ಎಂತ ಹೇಳತಾರೆ.

ಉದಕಬಿಂದು ಕ್ಷೀರಸಮುದ್ರದೊಳಗೆ ಬಿದ್ದರೆ, ಉದಕ ಬಿಂದು ಸಂಬಂಧದಿಂದ ಕ್ಷೀರಸಮುದ್ರಗತ ಕ್ಷೀರ ವಿಕಾರವು ಎಂದರೆ, ತನ್ನ ಶುಭ್ರ ವರ್ಣಹೋಗಿ ಜಲಬಿಂದು ವತವರ್ಣದೋಪಾದಿಯಲ್ಲಿ ವಿಕಾರವ ಐದೋದಕ್ಕೆ ಅರಿಯೋದೆ ? ಅರಿಯಲಾರದು. ಜಲಬಿಂದುವತ್ ವರ್ಣವಿಶಿಷ್ಟವಾಗದೆ ಶುಭ್ರವರ್ಣವಾಗೇ ಇರತದೆ ಎಂತ ತಾತ್ಪರ್ಯ. ಕ್ಷೀರಸಮುದ್ರಗತ ಕ್ಷೀರದಲ್ಲಿ ಬಿದ್ದ ಬಿಂದೋದಕವು, ಆ ಕ್ಷೀರದೋಪಾದಿಯಲ್ಲಿ ತಾನೂನೂ ಶುಭ್ರವಾದ ರೂಪ ಐದೋದಾಗತದೆ. ಇದರೋಪಾದಿಯಲ್ಲ ಕ್ಷೀರಸಮುದಲ್ಲಿ ಬಿದ್ದ ಜಲವನ್ನ ಆ ಕ್ಷೀರ, ತದ್ದೋಷಪರಿಹಾರ ಮಾಡಿ ಕ್ಷೀರವನ್ನ ಮಾಡಿದಂತೆ, ಕಲಿಮಲ ತನತಕ್ಕೆ ಉದಕಬಿಂದು ಸದೃಶವಾದ ದೋಷಗಳ ಅಪಹರಿಸತಕ್ಕ ಕ್ಷೀರಸಮುದ್ರ ಸದೃಶನಾದ ಪರಮಾತ್ಮ ಸರ್ವಕಾಲದಲ್ಲಿ ಮರಿಯದೆ ಸರ್ವ ಶುಭಾಶುಭಕರ್ಮಗಳನಲ್ಲಿ ಕರ್ಮಕ್ಕೆ ಕಾರಣಭೂತವಾದ ದೇಹೇಂದ್ರಿಯಾದಿಗಳಲ್ಲಿ ಭಗವಂತನ ಚಿಂತಿಸುತಾ, ಬಿಂಬಕ್ರಿಯಾ-ಪ್ರತಿಬಿಂಬಕ್ರಿಯಾ ತಿಳಿಯುತಾ, ಹೃದಯಗತ ಬಿಂಬನಲ್ಲಿ ಪೂರ್ವೋಕ್ತಅಧಿಷ್ಠಾನಗತಭಗವದ್ರೂಪಗಳ ಐಕ್ಯಚಿಂತನಾರೂಪದಿಂದ ನಿಸ್ಪೃಹನಾಗಿ ಅರ್ಚನಿ ಮಾಡುವ ನಿರ್ದುಷ್ಟ

ಗಳಾದ ಶ್ರೀಮಧ್ವಾಚಾರ್ಯರ ಶಾಸ್ತ್ರವೋಹದಿಂದ ಉತ್ಪನ್ನವಾದ ಜ್ಞಾನವುಳ್ಳವರು ದಾರೋ ಅವರು ಸತ್ಕುಲಜರೆಂದು ತಾತ್ಪರ್ಯ. ಉಕ್ತಪ್ರಕಾರ ಅರ್ಚನೆ ಮಾಡುವ ಇಂಥಾ ಭಗವದ್ಭಕ್ತರ ದೋಷಕರ್ಮಗಳು ತಾನು ಮಾಡಿದ ಅನುಸಂಧಾನಬಲದಿಂದ ಕ್ಷೀರಸಮುದ್ರದಲ್ಲಿ ಬಿದ್ದ ಉದಕ ಹ್ಯಾಂಗೆ ಕ್ಷೀರತ್ವ ಐದಿತೋ ಹಾಂಗೆ, ಕ್ಷೀರಸಮುದ್ರಕ್ಕೆ ಸದೃಶವಾದ ಪರಮಾತ್ಮಗೆ ಪಾಪಕರ್ಮಗಳೆಂಬ ಉದಕಬಿಂದುಗಳು ಸೇರಿಸೋಣದರಿಂದ ಇವೂನೂ ದೋಷರಹಿತ ಪುಣ್ಯಕರ್ಮಗಳಾಗಿ ಅಧಿಕಾರಿಯಾದ ಪುರುಷಗೆ ಭಗವದ್ದರ್ಶನಾಖ್ಯ ಪ್ರಯೋಜನಕ್ಕೆ ನಿರ್ಮಲವಾಗಿ ಮಾರ್ಗಗಳ ತೋರಿಸಿ ಕೋಡತಾ ಇರೋವಾಗತವೆ. ॥೧೦॥

## ೨. ಭಾವಪ್ರಕಾಶಿಕೆ :–

ಕ್ಷೀರಸಮುದ್ರದಲ್ಲಿ ನೀರಿನ ತೊಟ್ಟು ಬಿದ್ದರೆ, ಹಾಲಿಗೇ ಹೆಪ್ಪು ಕೊಟ್ಟರೆ, ವಿಕಾರಹೊಂದಿ ಮೊಸರು ಆಗುವಂತೆ, ಕ್ಷೀರಸಮುದ್ರದ ಕ್ಷೀರವು ಏನಾದರೂ ವಿಕಾರಹೊಂದಿ ಕೆಡುವುದೆ ? ಎಂದಿಗೂ ಇಲ್ಲ. ಈ ನೀರಿನ ತೊಟ್ಟು ಮಾತ್ರ ಕ್ಷೀರದಲ್ಲಿ ಸೇರಿ ತಾನೂ ಕ್ಷೀರವೇ ಆಗುವುದು. ವಿಷ್ಣುರಹಸ್ಯ ೨೧ನೆಯ ಅಧ್ಯಾಯ "ಕ್ಷೀರಾಬ್ಧೌ ಪತಿತಂ ತೋಯಂ ಯಥಾಕ್ಷೀರತ್ವಮಶ್ನುತೇ ॥ ಜೀವಕರ್ಮ ಕೃತಂ ತದ್ವತ್ ಹರೌ ಆನಂದತಾಂ ವ್ರಜೇತ್ ॥" ಕ್ಷೀರಸಮುದ್ರದಲ್ಲಿ ಬಿದ್ದ ಉದಕವು ಹೇಗೆ ಕ್ಷೀರತ್ವವನ್ನೇ ಹೊಂದುವುದೋ ಹಾಗೆ, ಪರಮಾತ್ಮನಲ್ಲಿ ಸಮರ್ಪಿಸಿದ ಜೀವನ ಕರ್ಮವು ಆನಂದಸ್ವರೂಪವೇ ಆಗುವುದೆಂದು ಹೇಳಿರುವರು. ಅದೇ ಅಭಿಪ್ರಾಯವನ್ನೇ ಇಲ್ಲಿ ದಾಸರಾಯರು ಹೇಳಿರುತ್ತಾರೆ. ಜೀವನು ಮಾಡುವ ಕರ್ಮಗಳನ್ನು ಪರಮಾತ್ಮನಿಗರ್ಪಿಸಿ, ಸದಾ ಪರಮಾತ್ಮನೇ ಗತಿ ಎಂದು ನಂಬಿ ಅವನನ್ನು ಆರಾಧಿಸಿದರೆ, ಇವನು ಸಮರ್ಪಿಸಿದ ಶುಕರ್ಮವು ಕ್ಷೀರಸಮುದ್ರದಲ್ಲಿ ಬಿದ್ದ ಉದಕಬಿಂದುವಿನಂತೆ ಪರಮಾನಂದಸ್ವರೂಪವನ್ನು ಹೊಂದುವುದು. ಆದ್ದರಿಂದ ಈ ಭಕ್ತನಿಗೆ ಶ್ರೀಹರಿಯು ಪ್ರೀತನಾಗಿ ಪುರುಷಾರ್ಥಗಳನ್ನು ಕೊಟ್ಟು ಉದ್ಧರಿಸುವನು. ॥೧೧॥

**ಭಾವದರ್ಪಣ :–**

ಈಗ ಕ್ಷೀರಸಮುದ್ರದಲ್ಲಿ ಬಿದ್ದಂಥ ಉದಕ ಹ್ಯಾಗೆ ಪ್ರತ್ಯೇಕ ತೋರೋದಿಲ್ಲವೋ ಹಾಗೆ ಸಜ್ಜನರು ಮಾಡಿದ ಪಾಪಾರ್ಪಣೆಯು ಪುಣ್ಯವೇ ಆಗುತ್ತದೆಂದು ಹೇಳುತ್ತಾರೆ. ಸಲಿಲೇತಿ. "ಕ್ಷೀರಾಬ್ಧೌ ಪತಿತಂ ತೋಯಂ ಯಥಾ ಕ್ಷೀರತ್ವಮಶ್ನುತೇ । ಜೀವಕರ್ಮ ಕೃತಂ ತದ್ವತ್ ಹರೌ ಆನಂದತಾಂ ಪ್ರಜೇತ್" ವಿಷ್ಣುರಹಸ್ಯೋಕ್ತೇಃ ॥ ॥೧೦॥

**೪. ಶ್ರೀವ್ಯಾಸದಾಸ ಸಿದ್ಧಾಂತ ಕೌಮುದೀ :–**

"ಸಲಿಲ" ಇತಿ ॥ ಭಕ್ತಾರ್ಪಿತಕರ್ಮಸುಖಂ ಭಗವತ್ಸುಖೇ ಅಂತರ್ಭವತಿ ಇತ್ಯತ್ರ ದೃಷ್ಟಾಂತಃ "ಕ್ಷೀರಾಬ್ಧೌ ಪತಿತೋ ಬಿಂದುಃ ಯಥಾ ಕ್ಷೀರತ್ವಮಶ್ನುತೇ ॥ ಏವಂ ಕರ್ಮಫಲಂ ತದ್ವತ್ ಹರೌ ಆನಂದತಾಂ ಪ್ರಜೇತ್" ॥ ಇತಿ ವಿಷ್ಣು ರಹಸ್ಯೇ ॥ ॥೧೦॥

## ಕನ್ನಡಾರ್ಥ

ಭಕ್ತರಿಂದ ಹರಿಯಲ್ಲಿ ಸಮರ್ಪಿತವಾದ ಕರ್ಮಗಳಿಂದಾಗುವ ಸುಖವು ಪುರುಷಾರ್ಥರೂಪವಾದ ಭಗವತ್ಸುಖ ಸದೃಶವಾದ ನೈಜಸುಖದಲ್ಲಿ ಅಂತರ್ಗತವಾಗುವುದು. ಈ ವಿಷಯದಲ್ಲಿ ದೃಷ್ಟಾಂತವನ್ನು "ಸಲಿಲ ಬಿಂದು" ವೆಂಬ ಪದ್ಯವು ತಿಳಿಸುತ್ತದೆ. ವಿಷ್ಣುರಹಸ್ಯದಲ್ಲಿ ಕ್ಷೀರಸಮುದ್ರದಲ್ಲಿ ಪತಿತವಾದ ನೀರು ಕ್ಷೀರದಲ್ಲಿ ಅಂತರ್ಗತವಾಗುವಂತೆ, ಕ್ಷೀರಸದೃಶವಾದ ವಿಕಾರಾಂತರವನ್ನು ಹೊಂದದೆ ಇರುವಂತೆ, ಹರಿಯಲ್ಲಿ ಸಮರ್ಪಿತವಾದ ಜೀವಕರ್ಮಸುಖಗಳು ಹರಿಯ ಆನಂದಸದೃಶವಾದ ಸ್ವಯೋಗ್ಯನೈಜಸುಖ ಸುಖದಲ್ಲಿ ಅಂತರ್ಗತವಾಗುವುವು"–ಎಂದು ಹೇಳಲಾಗುತ್ತದೆ. ॥೧೦॥

**೫. ಶ್ರೀಗುರುಹೃದಯ ಪ್ರಕಾಶಿಕೆ**

ಸಜ್ಜೀವಕೃತ ಸರ್ವಕರ್ಮವೂ ಪುಣ್ಯವಾಗುವ ಬಗೆ ತಿಳಿಸುತ್ತಾರೆ-ಸಲಿಲ ಎಂದು. ಪಯೋಬ್ಧಿ ಎಂಬ ಕ್ಷೀರಸಮುದ್ರದಲ್ಲಿ ಮಳೇ ಹನಿ ಬಿದ್ದರೆ, ಸಮು

ದ್ರವು ನೀರಿನ ವಿಕಾರ ಹೊಂದದಂತೆ ಜಲವೆಲ್ಲಾ ಕ್ಷೀರರೂಪವೇ ಆಗುವ ಹಾಗೆ ಸದಾ ಕಲಿಕಲ್ಮಷ ಪರಿಹಾರಕನಾದ ದೇವರನ್ನು ಸರ್ವಕರ್ಮಪ್ರೇರಕ ನೆಂದು ನಿಷ್ಕಪಟಧಾರಢ್ಯದಿಂದ ಭಜಿಸುವ ಸತ್ಪುರುಷರ ಪಾಪಕರ್ಮ ಸಹ ಪುಣ್ಯರೂಪವಾಗಿ ಮೋಕ್ಷಕ್ಕೆ ಕಾರಣವಾಗುವುದು. ಧರ್ಮೋ ಭವತ್ಯಧರೋ ಅಚ್ಯುತ ಎಂಬುದರ ಅರ್ಥ ವಿವರಿಸಿದಂತಾಯಿತು. ॥೧೦॥

## ಸರ್ವವ್ಯಾಖ್ಯಾನಸಾರಸಂಗ್ರಹ

ಸಜ್ಜೀವ ಕೃತಸರ್ವಕರ್ಮಗಳೆಲ್ಲವೂ (ಅಶುಭವಾಗಲೀ, ಮಿಶ್ರಕರ್ಮ ಗಳಾಗಲೀ) ಪುಣ್ಯರೂಪಕರ್ಮಗಳೇ ಆಗುತ್ತವೆ ಎಂಬ ತತ್ತ್ವಾರ್ಥವನ್ನು ಸದೃಷ್ಟಾಂತ ತಿಳಿಸುತ್ತಾರೆ.

ಕ್ಷೀರಸಮುದ್ರದಲ್ಲಿ ಒಂದು ತೊಟ್ಟು ನೀರು ಬಿದ್ದಾಗ, ಆ ಸಲಿಲ ಬಿಂದುವು ಸಮುದ್ರಗತ ಅಪಾರಕ್ಷೀರರಾಶಿಯಲ್ಲಿ ಸೇರಿಹೋಗಿ ಕ್ಷೀರವೇ ಆಗುವುದು. ಅದರಿಂದ ಕ್ಷೀರಕ್ಕೆ ಯಾವವಿಧವಾದ ವಿಕಾರವೂ ಉಂಟಾಗು ವುದಿಲ್ಲ. ನೀರಿನ ಹನಿಯು ಮಾತ್ರ ತನ್ನತ್ವವನ್ನು ಕಳೆದುಕೊಂಡು, ಅಂದರೆ ಕ್ಷೀರರೂಪವಾಗಿ ವಿಕಾರಹೊಂದುವುದು.

ಇದರಂತೆಯೇ, ಸಜ್ಜನರ ಸರ್ವಪಾಪಗಳನ್ನು ಪರಿಹಾರಮಾಡು ವುದರಿಂದ ಆ ಕರುಣಾಸಾಗರನಿಗೆ ಕಲಿಮಲಾಪಹನೆಂದು ಹೆಸರು. ಇಲ್ಲಿ ಕಲಿ–ಎಂದರೆ ದೈತ್ಯರಿಂದ ಬಿಂಬಕ್ರಿಯಾದ್ವಾರಾ ಪ್ರೇರಿತವಾದ ಪಾಪಕರ್ಮ ಗಳು. ಆ ಪಾಪಗಳೇ ಮಲಗಳು. ಅಂತಹ ಮಲಗಳನ್ನು ಪರಿಹರಿಸು ವುದರಿಂದ, ಮಲಾಪಹನು. ಸರ್ವಕಾಲಗಳಲ್ಲಿ ಕಲಿಮಲಾಪಹನ ಪದಕಮಲ ಗಳಲ್ಲಿ ಏಕಾಗ್ರ ಚಿತ್ತದಿಂದ ನ್ಯಸ್ತಮನಸ್ಕರಾದ ಸರ್ವಸಚ್ಚೇತನನು ಅಜ್ಞಾನ

ದಿಂದಾಗಲೀ,ಕಲ್ಯಾವೇಶದಿಂದಾಗಲೀ,ಶಾಪನಿಮಿತ್ತದಿಂದಲಾಗಲೀ ಆಚರಿಸುವ ಪಾಪಕರ್ಮಗಳು ಕ್ಷೀರಸಮುದ್ರಗತ ಸಲಿಲಬಿಂದುವಿನಂತೆ, ಪುಣ್ಯಕರ್ಮಗಳಾಗಿಯೇ ಪರಿವರ್ತಿಸಲ್ಪಟ್ಟು, ಅವರ ಸತ್ಸಾಧನೆಗೆ ಪ್ರತಿಬಂಧಕವಾಗುವುದಿಲ್ಲ. ಅಷ್ಟಲ್ಲದೇ, ಆ ಕುಕರ್ಮಗಳೇ ನಿಷ್ಕಲುಷಕರ್ಮಗಳಾಗಿ ಇಹದಲ್ಲಿ ಧರ್ಮ, ಅರ್ಥ, ಕಾಮರೂಪವಾದ ಪುರುಷಾರ್ಥಗಳನ್ನು ಕೊಡುವುದಲ್ಲದೇ, ಪರದಲ್ಲಿ ನಿತ್ಯಾನಂದರೂಪವಾದ ಪರಮಪುರುಷಾರ್ಥರೂಪವಾದ ಮುಕ್ತಿಸುಖವನ್ನೂ ಕೊಡುವುದಕ್ಕೆ ಸಹಕಾರಸಾಮಗ್ರಿಗಳಾಗುವುವು.

ಈ ದೃಷ್ಟಾಂತದಲ್ಲಿ ಸಲಿಲಬಿಂದುವು ಕುಕರ್ಮ ಸದೃಶ. ಅಪಾರ ಮಹಿಮಾಸಂಪನ್ನನಾದ ಆ ಅಪ್ರಮೇಯನು, ಕ್ಷೀರಸಮುದ್ರ ಸದೃಶ. ಸಲಿಲ ಬಿಂದುವು ವಿಕಾರ ಹೊಂದುವುದು. ಕ್ಷೀರದಲ್ಲಿ ಸೇರಿ ಕ್ಷೀರವೇ ಆಗುವುದು. ಕ್ಷೀರಕ್ಕೆ ವಿಕಾರವಿಲ್ಲ. ಅಂತೆಯೇ ಕುಕರ್ಮಗಳು ನಿಷ್ಕಲ್ಮಷಕರ್ಮಗಳಾಗುವುವು ॥೧೦॥

## ಪದ್ಯ—೧೧

**ಮೂಲ :–**

**ಮೊಗದೊಳಗೆ ಮೊಗವಿಟ್ಟು ಮುದ್ದಿಸಿ ।**
**ಮಗುವಿನಿಂ ಬಿಗಿದಪ್ಪಿ ಸ್ನೇಹದಿ ।**
**ತೆಗೆದು ತನ್ನ ಸ್ತನಗಳುಣಿಸುವ ಜನನಿಯಂದದಲಿ ॥**
**ಅಗಣಿತಾತ್ಮನು ತನ್ನ ಪಾದಾ ।**
**ಬ್ಜಗಳ ಧೇನಿಪ ಭಕ್ತ ಜನರಿಗೆ ।**
**ಪ್ರಘಟಕನು ತಾನಾಗಿ ಸೌಖ್ಯಗಳೀವ ಸರ್ವತ್ರ ॥ ॥೧೧॥**

**ಅವತರಣಿಕೆ :-**

ತನ್ನ ಭಕ್ತರಿಗೆ, ಶ್ರೀಹರಿಯು ಸರ್ವತ್ರ ಸುಖಗಳ ಅಭಿವ್ಯಕ್ತಿ ಮಾಡುವನೆಂದು ತಾಯಿ-ಮಗು ಸಂಬಂಧರೂಪದ ದೃಷ್ಟಾಂತದಿಂದ ತಿಳಿಸುತ್ತಾರೆ. ॥೧೧॥

**ಪ್ರತಿಪದಾರ್ಥ :-**

**ಮೊಗದೊಳು** = ಶಿಶುವಿನ ಮುಖದಲ್ಲಿ. **ಮೊಗವಿಟ್ಟು** = ತನ್ನ ಮುಖವನ್ನಿಟ್ಟು. **ಮುದ್ದಿಸಿ** = ಮುದ್ದುಮಾಡುತ್ತಾ. **ಮಗುವಿನಂ** = ತನ್ನ ಶಿಶುವನ್ನು. **ಬಿಗಿದಪ್ಪಿ** = ವಾತ್ಸಲ್ಯದಿಂದ ಆಲಂಗಿಸಿಕೊಂಡು. **ಸ್ನೇಹದಿ** ಅಂತಃಕರಣಪೂರಿತವಾದ ವಾತ್ಸಲ್ಯದಿಂದ. **ತೆಗೆದು** = ಆ ಮಗುವನ್ನು ಕೈಯ್ಯಿಂದ ಎತ್ತಿಕೊಂಡು. **ತನ್ನ ಸ್ತನಗಳುಣಿಸುವ** = ತೊಡೆಯ ಮೇಲೆ ಮಲಗಿಸಿಕೊಂಡು ಕ್ಷೀರಪಾನ ಮಾಡಿಸುವ. **ಜನನಿಯಂದದಲಿ** = ತಾಯಿಯಂತೆ, **ಅಗಣಿತಾತ್ಮನು** = ಅಪರಿಮಿತ ಗುಣ ಹಾಗೂ ಮಹಿಮಾಸಂಪನ್ನನಾದ ಶ್ರೀಪರಮಾತ್ಮನು, **ತನ ಪಾದಾಬ್ಜಗಳ** = ತನ್ನ ಚರಣಾರವಿಂದಗಳನ್ನು, **ಧೇನಿಪ** = ಭಕ್ತಿಭಾವದಿಂದ ಪರವಶರಾಗಿ ಮನಸಾಧ್ಯಾನ ಮಾಡುವ, **ಭಕ್ತಜನರಿಗೆ** = ತನ್ನ ಅಂತರಂಗದ ಭಕ್ತರಿಗೆ, **ಪ್ರಘಟಿಕನು ತಾನಾಗಿ** = ಸ್ವಯಂ ಅಪರೋಕ್ಷದ್ವಾರಾ ದರ್ಶನಭಾಗ್ಯವನ್ನು ನೀಡುತ್ತಾ, **ಸರ್ವತ್ರ** = ಸರ್ವಾವಸ್ಥೆ, ಸರ್ವದೇಶ, ಕಾಲಾದಿಗಳಲ್ಲಿ, **ಸೌಖ್ಯಗಳ ಈವ** = ಆನಂದರೂಪವಾದ ಅಭಿವ್ಯಕ್ತಿ ಮಾಡಿ, ಅವರನ್ನು ಸುಖಪಡಿಸುವನು. ॥೧೧॥

# ವ್ಯಾಖ್ಯಾನಗಳು

## ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಪೂರ್ವೋಕ್ತಪ್ರಕಾರ ಅರ್ಚಿಸತಕ್ಕವರಿಗೆ ತನ್ನ ಅಪರೋಕ್ಷ ಕೊಡತಾನೆ-ಎಂತ ಹೇಳತಾರೆ.

ತಾಯಿಯಾದವಳು ತನ್ನಲ್ಲಿ ಅತ್ಯಂತ ಪ್ರೀತಿಯಲ್ಲಿರುವ ತನ್ನ ಗರ್ಭದಲ್ಲಿ ಜನನವಾದ ಶಿಶುವನ್ನು ಕರಗಳಿಂದ ಎತ್ತಿಕೊಂಡಂಥಾವಳಾಗಿ, ಶಿಶುವಿನ ಮುಖದಲ್ಲಿ ತನ್ನ ಮುಖವನ್ನಿಟ್ಟು, ಮುದ್ದಿಟ್ಟುಕೊಂಡವಳಾಗಿ ಸಂತೋಷ ದಿಂದ ತಾಯಿ ಆಲಿಂಗನ ಮಾಡಿ, ಕ್ಷೀರಯುಕ್ತವಾದ ಸ್ತನಗಳ, ಶಿಶುವಿಗೆ ಕ್ಷೀರಸ್ತನಗಳ ದ್ವಾರಾ ಉಣಿಸತಾಳೆ. ಆ ತಾಯಿಯೋಪಾದಿಯಲ್ಲಿ ಗಣಿತ ದಿಂದ ರಹಿತವಾದ ಜೀವರ ಸೃಷ್ಟಿ ಮಾಡಿದ, ಶ್ರೀಪರಮಾತ್ಮನು ಜನನಿ ಸಾಂಕೇತನು. ಪರಮಾತ್ಮನಾದ ತನ್ನ ಗರ್ಭದಿಂದ ಪಡೆದ ತಾಯಿಯೆಂದು ತಿಳದು, ದಾರಾ ಪುತ್ರ ಧನ ಧಾನ್ಯಾದಿಗಳಲ್ಲಿ ಅಭಿಮಾನ ಬಿಟ್ಟು, ದೇವರ ಪಾದಕಮಲಗಳ, ಗುರುಮುಖದಿಂದ ಕೇಳಿದ ಪರಮಾತ್ಮನ ಆಕಾರ, ವಾಸನಾ ದಿಂದ ಮನಸಾ ಪ್ರತಿಮಾನಿರ್ಮಾಣ ಮಾಡಿ ಧ್ಯಾನ ಮಾಡತಕ್ಕ ಭಕ್ತರಾದ ಜನರಿಗೆ ತನ್ನ ವಿಷಯುಕವಾದ ಜ್ಞಾನ ಭಕುತಿಗಳೆಂಬ ಸ್ತನಗಳ ದ್ವಾರಾ ಆನಂದಾಖ್ಯಕ್ಷೀರ ಉಣಿಸಿ, ದೇಹೇಂದ್ರಿಯಾದಿ ಸರ್ವತ್ರವ್ಯಾಪ್ತನಾದ ಪರಮಾತ್ಮನು, ಚಂದಾಗಿ ಘಟಸಾಂಕೇತವಾದ ದೇಹದಲ್ಲಿ ವಿದ್ಯಮಾನನಾದ ಪರಮಾತ್ಮನು ತನಗೆ ತಾನೇ ಪ್ರತ್ಯಕ್ಷನಾಗಿ ಆಲಿಂಗನ ಕೊಟ್ಟು ಮುಕ್ತಸ್ಥಾನ ದಲ್ಲಿ, ಸ್ವರೂಪೇಂದ್ರಿಯಗಳಿಂದ ಭೋಗ ಮಾಡತಕ್ಕ ಸೌಖ್ಯಗಳ ಅಭಿವ್ಯಕ್ತಿ ಮಾಡಿಕೊಡೋವನಾಗತಾನೆ ॥೧೧॥

## ೨. ಭಾವಪ್ರಕಾಶಿಕೆ

ತಾಯಿಯಾದವಳು ಮಗುವಿನಲ್ಲಿ ವಾತ್ಸಲ್ಯದಿಂದ ಅದನ್ನೆತ್ತಿ ಮುದ್ದಾಡಿ ಸ್ತನ್ಯಪಾನ ಮಾಡಿಸಿ, ಸಂರಕ್ಷಿಸುವಂತೆ, ಪರಮಾತ್ಮನು ತನ್ನ ಭಕ್ತರಲ್ಲಿ

ಅಂತಹ ವಾತ್ಸಲ್ಯದಿಂದ, ಧ್ಯಾನ ಮಾಡುವವರ ಹೃದಯಾಕಾಶದಲ್ಲಿ ಅಪರೋಕ್ಷದಲ್ಲಿ ಕಾಣಿಸಿಕೊಂಡು, ಮುಕ್ತಿಯಲ್ಲಿ ಸದಾ ತನ್ನ ಸಮೀಪದಲ್ಲಿಟ್ಟುಕೊಂಡು ಸುಖವನ್ನು ಕೊಟ್ಟು ಸಂರಕ್ಷಿಸುವನು. ತಾಯಿಯು ಮಗುವನ್ನು ಮುದ್ದಿಸಿ ಸ್ತನ್ಯಪಾನ ಮಾಡಿಸಿದ ವಿಷಯದಲ್ಲಿ "ನಹಿ ದೃಷ್ಟಾಂತೇ ಸರ್ವಂ ಸಾಮಾನ್ಯಂ" ಎಂಬ ನ್ಯಾಯದಿಂದ ದೃಷ್ಟಾಂತದಲ್ಲಿ ಸರ್ವಸಾಮ್ಯ ಕೂಡುವುದಿಲ್ಲ. ತಾಯಿಗೆ ಮಗುವನ್ನು ಮುದ್ದಿಟ್ಟು ಸ್ತನ್ಯಪಾನ ಮಾಡಿಸುವಾಗ ಎಷ್ಟು ವಾತ್ಸಲ್ಯ (ಪ್ರೀತಿ) ಇರುವುದೋ ಅಷ್ಟು ವಾತ್ಸಲ್ಯವನ್ನು ಭಕ್ತವತ್ಸಲನೆಂಬ ಬಿರುದಾಂಕಿತನಾದ ಶ್ರೀಹರಿಯು ಭಕ್ತರಲ್ಲಿ ಮಾಡುವನೆಂಬ ವಿಷಯದಲ್ಲಿ ಉಪಮಾನವೆಂದು ತಿಳಿಯಬೇಕು ॥೧೧॥

೩. ಭಾ[illegible] ಸ್ಪರ್ಶಣ

ಮೇ[illegible]ದ ರೀತಿಯಿಂದ ಉಪಾಸನೆ ಮಾಡತಕ್ಕವರಿಗೆ ತಾಯಿಯ ಹಾಗೆ ಒಲಿವನೆಂದು ಹೇಳುತ್ತಾರೆ. ಮೊಗದೊಳಗೆ ಇತಿ. ತದುಕ್ತಂ ವಿಷ್ಣು ರಹಸ್ಯೇ. ಮೊಗ–ಮುಖ. ಅಗಣಿತಾತ್ಮನು ಅನೇಕರೂಪ ಉಳ್ಳವನು ॥೧೧॥

೪. ಶ್ರೀವ್ಯಾಸದಾಸ ಸಿದ್ಧಾಂತ ಕೌಮುದೀ

"ಮೊಗ" ಇತಿ॥ "ಮೊಗ"–ಮುಖ ॥೧೧॥

## ಕನ್ನಡಾರ್ಥ

"ಹಸುಗೂಸಿನನ್ನು ಹೆತ್ತವಳು ಪ್ರೀತಿಸುವಂತೆ ಭಕ್ತಜನರನ್ನು ಪರಮಾತ್ಮನು ಪ್ರೀತಿಸುತ್ತ, ಅವರಿಗೆ ಯಾವಾಗಲೂ ಪ್ರಕಟನಾಗಿ ತೋರಿ ಸುಖವನ್ನೀಯುವನು" ಎಂಬುದು–ಈ ಪದ್ಯದ ಸಾರಾರ್ಥ ॥೧೧॥

## ೧೧. ಶ್ರೀಗುರುಹೃದಯ ಪ್ರಕಾಶಿಕೆ

ಕೇವಲ ದೇವರ ಸಹಾಯದಿಂದಲೇ ಸಜ್ಜೀವರಿಗೆ ಸುಖಲಾಭವನ್ನು ದೃಷ್ಟಾಂತದಿಂದ ತಿಳಿಸುತ್ತಾರೆ, ಮೊಗವೆಂದು. ಶಿಶುವಿನ ಮುಖದಲ್ಲಿ ತನ್ನ ಮುಖ ಇಟ್ಟು ಮುದ್ದಿಸಿ ಬಿಗಿದು ತಬ್ಬಿಕೊಂಡು, ಸ್ನೇಹದಿಂದ ತನ್ನ ಸ್ತನಗಳನ್ನು ತೆಗೆದು ಅಲ್ಲಿರುವ ಕ್ಷೀರವನ್ನು ಉಣಿಸಿ ಶಿಶುವನ್ನು ರಕ್ಷಿಸುವ ತಾಯಿಯು ಹಾಗೆ ಅನಂತರೂಪನಾದ ಶ್ರೀಹರಿಯು ತನ್ನ ಪಾದಗಳನ್ನೇ ನಂಬಿ ಧೇನಿಸುವ ಭಕ್ತಜನಕ್ಕೆ ತಾನೇ ಸರ್ವ ಸಹಾಯ ಮಾಡಿ ಸೌಖ್ಯಗಳನ್ನು ಸರ್ವತ್ರ ಕೊಡುವನು.

**ಅನನ್ಯಾಶ್ಚಿಂತಯಂತೋ ಮಾಂ ಯೇ ಜನಾಃ ಪರ್ಯುಪಾಸತೇ ।**
**ತೇಷಾಂ ನಿತ್ಯಾಭಿಯುಕ್ತಾನಾಂ ಯೋಗಕ್ಷೇಮಂ**
**ವಹಾಮ್ಯಹಂ ॥ ಎಂಬ ಗೀತಾರ್ಥ ವಿವರಿಸಲ್ಪಟ್ಟಿತು ॥೧೧॥**

## ಸರ್ವವ್ಯಾಖ್ಯಾನಸಾರಸಂಗ್ರಹ

ತನ್ನ ಮಗುವಿನ ಮೇಲೆ ತಾಯಿಗಿರುವ ಸಹಜವಾದ ವಾತ್ಸಲ್ಯದ ದೃಷ್ಟಾಂತದಿಂದ ಜಗದ್ರಕ್ಷಕನಾದ ಆ ಜಗದೀಶನ ಕಾರುಣ್ಯವಿಶೇಷವನ್ನು ತಿಳಿಸುತ್ತಾರೆ.

ತಾಯಿಗೆ ತನ್ನ ಮಗುವಿನ ಮೇಲೆ ಇರುವ ಅಂತಃಕರಣಪೂರ್ವಕವಾದ ವಾತ್ಸಲ್ಯವು ಸಹಜವಾದುದು. ತನ್ನ ಶಿಶುವಿನ ಮುಖದಲ್ಲಿ [illegible] ಮುಖವನ್ನಿಟ್ಟು, ಅದನ್ನು ಮುದ್ದಿಸಿ ರಂಬಿಸುವಳು. ವಾತ್ಸಲ್ಯಪೂರ್ಣವಾದ ಭಾವದಿಂದ, ಆ ಮಗುವನ್ನು ಎತ್ತಿಕೊಂಡು, ತನ್ನ ತೊಡೆಯ ಮೇಲೆ ಮಲಗಿಸಿಕೊಂಡು, ಮೊಲೆಯೂಡಿಸುವಳು. ಅದರಿಂದ ಆ ಶಿಶುವು ಆನಂದದಿಂದ ತೃಪ್ತಿಯನ್ನು ಹೊಂದುವುದು.

ಅಂತಹ ಜನನಿಯೋಪಾದಿಯಲ್ಲಿ, ಅಪಾರಗುಣಸಂಪನ್ನನಾದ ತನ್ನ ಪಾದಾರವಿಂದಗಳನ್ನು ನಂಬಿ, ಅನವರತ ನಿಶ್ಚಲವಾದ ಭಕ್ತಿಭಾವದಿಂದ ತನ್ನನ್ನು ಧ್ಯಾನಿಸುತ್ತಿರುವ ಅಂತರಂಗಭಕ್ತರಿಗೆ ಒಲಿಯುವನು. ಭಗವದನುಗ್ರಹಕ್ಕೆ ಪಾತ್ರರಾದ ಆ ಭಗವದ್ಭಕ್ತರಿಗೆ ತನ್ನ ಅಪರೋಕ್ಷರೂಪವಾದ ದರ್ಶನಭಾಗ್ಯವನ್ನು ಕರುಣಿಸಿ, ಅವರ ಸಕಲದುರಿತಗಳನ್ನು ಪರಿಹರಿಸಿ, ಪವಿತ್ರರನ್ನಾಗಿ ಮಾಡಿ, ಅವರನ್ನು ಎಡಬಿಡದೆ ಸರ್ವದೇಶ, ಕಾಲ, ಅವಸ್ಥಾ ವಿಶೇಷಗಳಲ್ಲಿ ಆಪದ್ಬಂಧುವಿನಂತೆ ಭಕ್ತರ ಸಂರಕ್ಷಕನಾಗಿರುವನು–ಎಂದು ತಿಳಿಸುತ್ತಾರೆ–ಪ್ರಸಕ್ತ ಪದ್ಯದಿಂದ. ॥೧೧॥

## ಪದ್ಯ—೧೨

**ಮೂಲ :—**

**ತೋಟಿಗನು ಭೂಮಿಯೊಳು ಬೀಜವ ।**
**ನಾಟಬೇಕೆಂದೆನುತ ಹಿತದಲಿ ।**
**ಮೋಟೆಯಿಂ ನೀರೆತ್ತಿ ಸಸಿಗಳ ಸಂತೈಸುವಂತೆ ॥**
**ಪಾಟು ಬಡದಲೆ ಜಗದಿ ಜೀವರ ।**
**ಘೋಟಿಕಾಸ್ಯನು ಸೃಜಿಸಿ ಯೋಗ್ಯತೆ ।**
**ದಾಟಗೊಡದಲೆ ಸಲಹುತಿಪ್ಪನು ಸರ್ವಕಾಲದಲಿ ॥ ॥೧೨॥**

**ಅವತರಣಿಕೆ :–**

ಶ್ರೀಪರಮಾತ್ಮನು ಅವರವರ ಯೋಗ್ಯತಾನುಸಾರ ಸರ್ವಕಾಲಗಳಲ್ಲಿ ಜೀವರನ್ನು ಸಂರಕ್ಷಿಸುವನು–ಎಂದು ರೈತನು ಕಪಿಲೆಯಿಂದ ನೀರನ್ನೆತ್ತಿ ಗದ್ದೆಗೆ ಹಾಯಿಸಿ, ಬೀಜಗಳನ್ನು ನಾಟುವ ದೃಷ್ಟಾಂತದಿಂದ ತಿಳಿಸುತ್ತಾರೆ. ॥೧೨॥

**ಪ್ರತಿಪದಾರ್ಥ :–**

**ಕೋಟಿಗನು** = ಗದ್ದೆಯಲ್ಲಿ ಪೈರು ಬೆಳೆಯುವ ರೈತನು. **ಭೂಮಿಯೊಳು** = ಭೂಮಿಯಲ್ಲಿ, **ಬೀಜವ ನಾಟಬೇಕೆಂದು** = ಧಾನ್ಯಗಳ ಬೀಜವನ್ನು ಬಿತ್ತುವ ಉದ್ದೇಶದಿಂದ, **ಹಿತದಲಿ** = ಆಸಕ್ತಿಯಿಂದ, **ನೋಟಿಯಿಂ** = ಏತದಿಂದ, **ನೀರೆತ್ತಿ** = ಕಪಿಲೆಬಾವಿಯಿಂದ ನೀರನ್ನು ಎತ್ತಿ, **ಸಸಿಗಳ** = ಬೀಜಗಳಿಂದ ಉತ್ಪನ್ನವಾದ ಪೈರನ್ನು, **ಸಂತೈಸುವಂತೆ** = ಸಂರಕ್ಷಿಸುವಂತೆ, **ಪಾಟು ಬಿಡದಲೆ** = ಶ್ರಮದಿಂದ ಪಾಡುಪಡದೆ, ಅಂದರೆ, ನಿರಾಯಾಸವಾಗಿ, **ಘೋಟಕಾಸ್ಯನು** = ಶ್ರೀಹಯಗ್ರೀವನು (ಘೋಟ–ಕುದುರೆ, ಆಸ್ಯ–ಮುಖ). **ಜಗದಿ** = ಬ್ರಹ್ಮಾಂಡವೆಂಬ ಈ ಭೂಮಿಯಲ್ಲಿ, **ಜೀವರ** = ಸಾಧನೆಯಾಗತಕ್ಕ, ಅವಶಿಷ್ಟ ಸಾಧನೆ ಉಳ್ಳ ಜೀವರಾಶಿಗಳನ್ನು (ನಾಟೋ ಬೀಜಕ್ಕೆ ಸದೃಶ), **ಸೃಜಿಸಿ** = ಸೃಷ್ಟಿಗೆ ತಂದು, **ಯೋಗ್ಯತೆ** = ಅವರವರ ಸ್ವರೂಪ ಸಾಮರ್ಥ್ಯವನ್ನು, **ದಾಟಗೊಡದಲೆ** = ಮೀರದಂತೆ, ಆದರ್ಕೆ ಆಯಾಯಾ ಜೀವರ ಯೋಗ್ಯತಾನುಸಾರ, **ಸರ್ವಕಾಲದಲಿ** = ಸೃಷ್ಟಿಯಿಂದ ಆರಂಭಿಸಿ, ಮುಕ್ತಿಪರ್ಯಂತ, ಅನಂತರವೂ, **ಸಲಹುತಿಪ್ಪನು** = ಸಂರಕ್ಷಿಸುತ್ತಿರುವನು. ॥೧೨॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಸೃಷ್ಟಿ ಮಾಡಿದ ಪರಮಾತ್ಮ ಯೋಗ್ಯತಾನುಸಾರ ಕಾಪಾಡತಾನಂತ–ಹೇಳತಾರೆ.

ಪೈರು ಮಾಡತಕ್ಕವನು ಪ್ರೇಮದಿಂದ ಭೂಮಿಯಲ್ಲಿ ಧಾನ್ಯಬೀಜಗಳ ಬಿತ್ತಿ ಪೈರುಗಳನ್ನು ನಾಟಿ, ಪೈರು ಅಭಿವೃದ್ಧಿಗೆ ಬರಬೇಕಂತ ಬಾವಿ

ಯಲ್ಲಿರುವ ಜಲವನ್ನ ಕಪಿಲೆಯಿಂದ ಅಥವಾ ಏತದಿಂದ ಮ್ಯಾಲಕ್ಕೆ ತಂದ್ದು ಆ ಪೈರುಗಳಿಗೆ ಆಹಾರರೂಪವಾದ ಉದಕವನ್ನ ಕೊಟ್ಟಂಥಾವನಾಗಿ, ಪೈರುಗಳನ್ನು ತೋಟಿಗನಾದವನು ಸಂರಕ್ಷಣೆ ಮಾಡುವ್ರೋಪಾದಿಯಲ್ಲಿ ಶ್ರೀಹಯಗ್ರೀವದೇವರು ನಾನಾ ಪ್ರಕಾರ ತೋಟಿಗನೋಪಾದಿಯಲ್ಲಿ ಪ್ರಯಾಸಪಡಧಾಂಗೆ ಹದಿನಾಲ್ಕು ಲೋಕಗಳೆಂಬೋ ಭೂಮಿಯಲ್ಲಿ, ಪೂರ್ವದಲ್ಲೇ ಅವರವರ ಆಹಾರವೆಂಬ ಉದಕಸದೃಶವಾದ ಆಹಾರವನ್ನು ಕಲ್ಪಿಸಿ, ಬೀಜ ಬಿತ್ತ್ರೋದಕ್ಕೇ ನೀರನ್ನ ಭೂಮಿಯಲ್ಲಿ ಇಟ್ರೋಪಾದಿಯಲ್ಲಿ ಇಟ್ಟು, ಬೀಜಸದೃಶರಾದ ಜೀವರು, ಆ ಕಲ್ಪದಲ್ಲಿ ಅಸೃಜ್ಯರಾಶಿಯಿಂದ ತೆಗೆದವರು, ನಾಟೋ ಪೈರಿಗೆ ಸದೃಶರಾದ ಇದುವರಿವಿಗೆ ಸೃಜ್ಯರಾದ, ಕೆಲವು ಸಾಧನೆ ಆಗಿ ಅವಶಿಷ್ಟ ಸಾಧನಿ ಉಳ್ಳವರು ಇಂಥಾ ಉಭಯವಿಧ ಜೀವರ, ನಾಟೋಣ ಬಿತ್ತ್ರೋಣ ಸದೃಶವಾದ ಭೂಮಿಯಲ್ಲಿ ಸೃಷ್ಟಿ ಮಾಡಿ, ಪೈರಿನ ಯೋಗ್ಯತಾ ತಾರತಮ್ಯ ಹ್ಯಾಂಗೋ, ಹಾಂಗೆ ಯೋಗ್ಯತಾನೂ ಇರೋದಾಗಿದೆ, ಈ ಅನಾದಿ ಜೀವರ ಯೋಗ್ಯತಾವನ್ನು ದಾಟಿ ಹೋಗಧಾಂಗೆ ಅವರವರ ಯೋಗ್ಯತಾನುಸಾರ ಪರಮಾತ್ಮ ಅವರವರ ಸ್ವರೂಪಕ್ಕೆ ಅನುಸರಿಸಿದ, ಅವರವರಿಗೆ ಹೇತುವಾದ, ತ್ರಿವಿಧ ಜೀವರಲ್ಲಿ ತ್ರಿವಿಧವಾದ ಜ್ಞಾನದಲ್ಲಿ ತಾನಿದ್ದು, ಪ್ರಾಕೃತಾನ್ನಗಳಿಂದ ದೇಹವನ್ನು ಕಾಪಾಡುತ್ತಾ, ಸದಾ ಸರ್ವಕಾಲದಲ್ಲಿ ಅವಿಯೋಗನಾದ ಜೀವಾಂತರ್ಗತನಾದ ಬಿಂಬರೂಪಿ ಪರಮಾತ್ಮ, ತೋಟಿಗನು ಪೈರುಗಳ ಯೋಗ್ಯತಾನುಸಾರ ಸಲಹಿದೋಪಾದಿಯಲ್ಲಿ ಸಂರಕ್ಷಣಿ ಮಾಡತಾನೆಂದು ತಾತ್ಪರ್ಯ ॥೧೨॥

## ೨. ಭಾವಪ್ರಕಾಶಿಕೆ

ತೋಟವನ್ನು ಮಾಡುವವನು ಭೂಮಿಯನ್ನು ಹದಮಾಡಿ ಬೀಜವನ್ನು ಬಿತ್ತಿ ಕಪಿಲೆ ಮೊದಲಾದವುಗಳ ಸಹಾಯದಿಂದ ನೀರು ಚೆಲ್ಲಿ ಹುಟ್ಟಿದ ಸಸಿಗಳನ್ನು ವೃದ್ಧಿಮಾಡಿ ಸಂರಕ್ಷಣೆ ಮಾಡುವಂತೆ, ಪರಮಾತ್ಮನು ಜೀವರನ್ನು ಸೃಷ್ಟಿಸಿ ಸಂರಕ್ಷಿಸುವನು. ತೋಟಿಗನು ಭೂಮಿಯ ಯೋಗ್ಯತೆಯನ್ನನುಸರಿಸಿ ಬೀಜವನ್ನು ಚೆಲ್ಲಿ ಸಸಿಗಳನ್ನು ಸಂರಕ್ಷಿಸುವಂತೆ

ಪರಮಾತ್ಮನು ಜೀವರ ಯೋಗ್ಯತೆಯನ್ನನುಸರಿಸಿ, ದೇವಮಾನವಾದಿ ಯೋನಿಗಳಲ್ಲಿ ಹುಟ್ಟಿಸಿ ಯಾವ ಯಾವ ಜೀವರನ್ನು ಯಾವ ಯಾವ ರೀತಿಯಲ್ಲಿ ಸಂರಕ್ಷಿಸಬೇಕೋ ಆ ಪ್ರಕಾರ ಮಾಡುವನು. ತೋಟ ಮಾಡುವವನಿಗೆ ನೀರು ಮೊದಲಾದುವು ಚೆಲ್ಲಿ ಸಸಿಗಳನ್ನು ರಕ್ಷಿಸುವುದರಿಂದ ಬಹಳ ಆಯಾಸವಾಗುವುದು. ಹಾಗೆ ಪರಮಾತ್ಮನಿಗೆ ಸೃಷ್ಟ್ಯಾದಿ ಕಾರ್ಯಗಳಲ್ಲಿ ಆಯಾಸವಾಗುವುದೆನೋ ಅಂದರೆ, ಪಾಟುಬಡದಲೆ–ಎಂಬ ಪದದಿಂದ ಆ ಸಂಶಯವನ್ನು ಪರಿಹರಿಸಿರುವರು. ಆದರೆ ತೋಟಿಗನು ಮಾಡುವುದು ಮುಂದಿನ ಫಲಾಪೇಕ್ಷೆಯಿಂದ. ಪರಮಾತ್ಮನು ನಿರಪೇಕ್ಷೆಯಿಂದಲೇ ಮಾಡುವನು. ಆದುದರಿಂದಲೇ ಪರಮಾತ್ಮನು ಸರ್ವೋತ್ತಮನು. ಕರುಣಾಸಮುದ್ರನು–ಎಂದು ತಾತ್ಪರ್ಯ. ॥೧೨॥

೩. **ಭಾವದರ್ಪಣ:–**

ಆಯಾಸವಿಲ್ಲದೇ ಸಂರಕ್ಷಿಸುವ–ಎಂತ ಹೇಳುತ್ತಾರೆ. ತೋಟಿಗೇತಿ. **ತೋಟಿಗ** = ತೋಟಮಾಡತಕ್ಕ, **ನೋಟೆ** = ಕಪ್ಪನಿ, **ಪಾಟು** = ಕಷ್ಟ, **ಘೋಟಕಾಸ್ಯ** = ಹಯವದನ, **ಸಸಿ** = ಎಳೆಪೈರು. ॥೧೨॥

೪. **ಶ್ರೀ ವ್ಯಾಸದಾಸ ಸಿದ್ಧಾಂತ ಕೌಮುದೀ,**

"ತೋಟಿಗನು" ಇತಿ॥ "ಯಥಾ ಶಾಲ್ಯಾ (ಲ್ವಾದಿ) ಬೀಜಾನಿ ಗೃಹೀತ್ವಾ ಬೀಜಜಾಂಕುರಾನ್ ॥ ವಪಂತಿ ಕರ್ಷಕಾಃ ತದ್ವತ್ ಅನಿರುದ್ಧೋಽಸೃಜಜ್ಜಗತ್ ॥" ಇತಿ ॥೧೨॥

## ಕನ್ನಡಾರ್ಥ

ಶಾಲಿ (ಭತ್ತ) ಮುಂತಾದುವುಗಳನ್ನು (ಬೀಜಗಳನ್ನು) ತೆಗೆದುಕೊಂಡು, ಅವುಗಳನ್ನೂ, ಅವುಗಳಿಂದ ಹುಟ್ಟಿರುವ ಸಸಿಗಳನ್ನೂ, ಕೃಷಿಕರ್ಮವನ್ನು ಮಾಡುವವನು ನಾಟುವಂತೆ, ಅನಿರುದ್ಧರೂಪಿಯಾದ ಶ್ರೀಹರಿಯು ಈ ಜಗತ್ತನ್ನು ಸೃಷ್ಟಿಮಾಡಿದನು, ಸೃಜಿಸುತ್ತಾನೆ. ॥೧೨॥

## ೫. ಶ್ರೀ ಗುರುಹೃದಯಪ್ರಕಾಶಿಕೆ

ದೇವರು ಜಗದ್ರಕ್ಷಕನು. ಆದರೂ ಆಯಾಸರಹಿತನೆಂದು ವ್ಯತಿರೇಕ ದೃಷ್ಟಾಂತದಿಂದ ತಿಳಿಸುತ್ತಾರೆ, ತೋಟಿಗನು/ಎಂದು. ತೋಟವನ್ನು ಮಾಡುವವನು. ಭೂಮಿಯಲ್ಲಿ ಬೀಜ ನೆಟ್ಟು ತನಗೆ ಹಿತವೃದ್ಧಿ ಮಾಡಬೇಕೆಂದು, ಮೋಟೆ ಎಂಬ ಬಾನಿಯಿಂದ ನೀರೆತ್ತಿ ಸಸಿಗಳನ್ನು ಸಂರಕ್ಷಿಸಿ, ಪಾಟು ಎಂಬ ಆಯಾಸವನ್ನು ಹೊಂದುವಂತೆ. ಘೋಟಕಾಸ್ಯನುನೆಂಬ ಹಯವದನ ರೂಪದೇವರು, ಪಾಟು ಎಂಬ ಕ್ರಿಯಾನಿಮಿತ್ತ ಶ್ರಮವನ್ನು ಪಡದೆ ಇಚ್ಛಾಮಾತ್ರದಿಂದ ಜಗತ್ತಿನಲ್ಲಿ ಸರ್ವಜೀವರನ್ನು ಸೃಷ್ಟಿ ಸ್ಥಿತಿ ಸಂಹಾರ ನಿಯಮನಾದಿಗಳನ್ನು ಮಾಡಿ, ಈ ಅನಾದಿಜೀವರಯೋಗ್ಯತಾವನ್ನು ದಾಟಗೊಡದಲೆ ಅಂದರೆ ತ್ರಿವಿಧಜೀವರನ್ನು ಅವರವರ ಯೋಗ್ಯತಾನುಸಾರ ಪರಮಾತ್ಮನು ಸರ್ವಕಾಲದಲ್ಲಿಯೂ ಸಂರಕ್ಷಣೆ ಮಾಡುತ್ತಿರುವನು– ಎಂದು ತಾತ್ಪರ್ಯ. ಹಯಗ್ರೀವರೂಪದಿಂದ ವೇದವನ್ನು ಬೋಧಿಸಿದನೆಂಬ ಶಾಸ್ತ್ರಪ್ರಾಮಾಣ್ಯದಿಂದ ಅಘಟಿತಘಟಕಶಕ್ತಿ ತಿಳಿಸಲ್ಪಟ್ಟಿತು.

**ಯಥಾ ಭ್ರಾಮ್ಯತ್ಯಯೋ ಬ್ರಹ್ಮನ್ ಸ್ವಯಮಾಕರ್ಷ ಸನ್ನಿಧೌ ।**
**ತಥಾ ಮೇ ಭಿದ್ಯತೇ ಚೇತಃ ಚಕ್ರಪಾಣೌ ಯದೃಚ್ಛಯಾ ॥**
–ಎಂಬ **ಭಾಗವತಾರ್ಥ** ವಿವರಿಸಲ್ಪಟ್ಟಿತು ॥೧೨॥

## ಸರ್ವವ್ಯಾಖ್ಯಾನಸಾರಸಂಗ್ರಹ

ಸೃಷ್ಟಿಗೆ ತಂದ ಸಕಲ ಜೀವರನ್ನು ಅವರವರ ಯೋಗ್ಯತಾನುಸಾರ ಪಾಲನೆಮಾಡಿ ಸಂರಕ್ಷಿಸುವನೆಂದು ತೋಟಿಗನ ದೃಷ್ಟಾಂತದಿಂದ ತಿಳಿಸುತ್ತಾರೆ.

ತೋಟಿಗನು ಮೊದಲು ಭೂಮಿಯನ್ನು ಉತ್ತು ಹದ ಮಾಡುವನು. ನಂತರ ಭೂಗುಣಕ್ಕನುಗುಣವಾಗಿ ತಾನು ಯಾವ ಬೆಳೆಯನ್ನು ಅಲ್ಲಿ ಬೆಳೆಯಲು ಇಷ್ಟಪಡುವನೋ ಅಂತಹ ಧಾನ್ಯದ ಬೀಜಗಳನ್ನು, ಆ ನೆಲದಲ್ಲಿ ಚೆಲ್ಲಿ, ಗೊಬ್ಬರ ನೀರನ್ನು ಕೊಡುವನು. ಬೀಜಗಳು ಸಣ್ಣ ಸಣ್ಣ ಸಸಿಗಳಾಗಿ ಪರಿವರ್ತನ ಹೊಂದುವುವು. ಆ ಪೈರು ಹುಲುಸಾಗಿ ಬೆಳೆಯುವ ಉದ್ದೇಶದಿಂದ, ಕಪಿಲೆ ಬಾವಿಯಿಂದ ನೀರನ್ನು ಎತ್ತಿ, ನೆಲಕ್ಕೆ ಹಾಯಿಸುವನು. ಈ ರೀತಿಯಿಂದ ಆ ತೋಟಿಗನು ಪೈರನ್ನು ಸಂರಕ್ಷಿಸಿ, ಅವರಿಂದ ಫಲರೂಪವಾದ ಧಾನ್ಯಗಳನ್ನು ಪಡೆಯುವನು.

ಅಂತೆಯೇ, ಅಸೃಜ್ಯರಾಶಿಯಲ್ಲಿರುವ ಜೀವರಾಶಿಗಳಿಗೆ ಅನಾದಿಯಿಂದ ಆವರ್ಕರೂಪದಲ್ಲಿರುವ ಲಿಂಗದೇಹದ ಉಪಚಯ ಮಾಡುವನು. ಆಗ ಅನಾದಿಲಿಂಗಗತ ಕರ್ಮಸಂಬಂಧವು ಜೀವರಿಗೆ ಉಂಟಾಗುವುದು. ತದ್ವಾರಾ ಜೀವರನ್ನು ಸೃಷ್ಟಿಗೆ ತರುವನು.

ತುರಗವದನನಾದ ಶ್ರೀ ಪರಮಾತ್ಮನಿಗೆ **ಘೋಟಕಾಸ್ಯ**ನೆಂದು ಹೆಸರು. **ಘೋಟಕ** = ಎಂದರೆ, ಕುದುರೆ ಎಂದರ್ಥ. **ಅಸ್ಯ** = ಎಂದರೆ, ಮುಖವೆಂದರ್ಥ. ಅಂತಹ ಘೋಟಕಾಸ್ಯನು ತಾನು ಸೃಷ್ಟಿಗೆ ತಂದ ಜೀವರಾಶಿಗಳನ್ನು, ಅವರವರ ಸ್ವರೂಪಯೋಗ್ಯತಾನುಸಾರ, ಸಾಧನಗಳನ್ನು ಮಾಡಿ ಮಾಡಿಸಿ, ನಾನಾ ಯೋನಿಗಳಲ್ಲಿ ಜನ್ಮಗಳನ್ನು ಹೊಂದಿಸಿ, ಕರ್ಮಾನುಭವದ್ವಾರಾ ಕರ್ಮಕ್ಷಯಗೈಸಿ. ಸರ್ವಕಾಲಗಳಲ್ಲಿ ಅವರನ್ನು ಪಾಲಿಸುತ್ತಾ ಸಂರಕ್ಷಿಸುವನು.

ಸರ್ವಕಾಲದಲಿ–ಎಂದರೆ ಅಶೃಜ್ಯರಾಶಿಲ್ಲಿ ಸೃಷ್ಟಿದೆಶೆಯಲ್ಲಿ ಮೋಕ್ಷಸ್ಥಿತಿಯಲ್ಲಿ ಆ ಜೀವರನ್ನು ಸಲಹುತಿಪ್ಪನು. ತೋಟಿಗನಿಗೆ ಪೈರು ಬೆಳೆಸಲು ದೇಹಾಯಾಸರೂಪವಾದ ಶ್ರಮವಾಗುವುದು. ಆದರೆ ಆ ನಿರ್ಮಲಾತ್ಮಕನು ಸೃಷ್ಟ್ಯಾದಿಸರ್ವವ್ಯಾಪಾರಗಳನ್ನು ಲೀಲಾಜಾಲವಾಗಿ ನಿರಾಯಾಸವಾಗಿ ಮಾಡುವನು.

ಈ ದೃಷ್ಟಾಂತದಲ್ಲಿ ಶ್ರೀಪರಮಾತ್ಮನು ತೋಟಿಗನ ಸದೃಶ. ಜೀವರು ಬೀಜಸದೃಶ. ಜಗತ್ತೇ ಭೂಮಿಸದೃಶ. ಜೀವರ ಅನಾದಿಯೋಗ್ಯತೆ, ಆಯಾಯಾ ಬೀಜಗಳ ಶಕ್ತ್ಯಾತ್ಮಕ ಗುಣಧರ್ಮಗಳ ಸದೃಶ. ॥೧೨॥

## ಪದ್ಯ-೧೩

ಮೂಲ:-

**ಭೂಮಿಯೊಳು ಜಲವಿರೆ ತೃಷಾರ್ತನು ।**
**ತಾ ಮರೆದು ಮೊಗವೆತ್ತಿ ಎಣ್ದೆಸೆ ।**
**ವ್ಯೋಮಮಂಡಲದೊಳಗೆ ಕಾಣದೆ ಮಿಡುಕುವಂದದಲಿ ॥**
**ಶ್ರೀಮನೋರಮ ಸರ್ವರಂತ ।**
**ರ್ಯಾಮಿಯಾಗಿರೆ ತಿಳಿಯದನುದಿನ ।**
**ಭ್ರಾಮಕರು ಭಜಿಸುವರು ಭಕುತಿಯಲನ್ಯದೇವತೆಯ ॥**
॥೧೩॥

ಅವತರಣಿಕೆ:-

ಭ್ರಾಮಕ ಜನರು, ಕ್ಷಿಪ್ರಫಲಪ್ರಾಪ್ತಿಗೋಸುಗ, ಅನ್ಯರಾದ ಕ್ಷುದ್ರ ದೇವತೆಗಳನ್ನು ಉಪಾಸನೆ ಮಾಡುತ್ತಾರೆಂದು, ದೃಷ್ಟಾಂತ ಸಹಿತ ತಿಳಿಸುತ್ತಾರೆ.

ಪ್ರತಿಪದಾರ್ಥ:-

**ತೃಷಾರ್ತನು** = ನೀರಡಿಕೆಯನ್ನು ಹೊಂದಿರುವವನು (ಬಾಯಾರಿದವನು) **ಭೂಮಿಯೊಳು** = ಭೂಮಿಯಲ್ಲಿ. **ಜಲವಿರೆ** = ದಾಹೋಪಶಮನ ಮಾಡುವ ದಿವ್ಯನೀರು ಇರುತ್ತಿರಲಾಗಿ. **ತಾ ಮರೆದು**

= ಜಲವಿರಿ ತಕ್ಕ ಪ್ರದೇಶವನ್ನು ಮರೆತು, **ಮೊಗವೆತ್ತಿ** = ತನ್ನ ಮುಖವನ್ನು ಮೇಲಕ್ಕೆ ಎತ್ತಿಕೊಂಡು, **ಎಣ್ದೆಸೆ** ಎಂಟು ದಿಕ್ಕುಗಳನ್ನೂ (ಎಂಟು + ದೆಸೆ), **ವ್ಯೋಮ ಮಂಡಲದೊಳಗೆ** = ಸುತ್ತಲೂ ವ್ಯಾಪ್ತಿಸಿರುವ ಆಕಾಶ ಮಂಡಲದಲ್ಲಿ, **ಕಾಣದೆ** = ನೀರನ್ನು ಅರಸುತ್ತಾ, ಅದು ಗೋಚರವಾಗದೇ, **ಮಿಡುಕುವಂದದಲಿ** ದಾಹದಿಂದ ಕಣ್ಣು ಬಿಡುವ ನೋಪಾಯದಲ್ಲಿ, **ಶ್ರೀಮನೋರಮ** = ಶ್ರೀನಾಮಕಳಾದ ಲಕ್ಷ್ಮೀದೇವಿಯ ಮನಸ್ಸನ್ನು ಸಂತೋಷಪಡಿಸುವ (ರಮಿಸುವ) ಶ್ರೀ ಪರಮಾತ್ಮನು (ಇಲ್ಲಿ ಪರಮಾತ್ಮ ಉದಕ ಸದೃಶ) **ಸರ್ವರಂತರ್ಯಾಮಿಯಾಗಿರೆ** = ಸರ್ವಜೀವರಲ್ಲಿ ಅಂತಸ್ಥಿತನಾಗಿ ನಿಂತು, ಅಂತರ್ಯಾಮಿ ರೂಪದಿಂದ ಇರುತ್ತಿರಲಾಗಿ (ತೃಷಾರ್ಥಸಿಗೆ ಜಲವು ಸಮೀಪದಲ್ಲಿಯೇ ಇದೆ. ಅದನ್ನು ಕಾಣದೆ ಅನ್ಯತ್ರ ಹುಡುಕುತ್ತಾನೆ) **ತಿಳಿಯದೆ** = ಜೀವರಿಗೆ ನಿತ್ಯಾವಿಯೋಗಿಯಾದ ಬಿಂಬನ ಇರವನ್ನು ಅರಿಯದೇ, **ಅನುದಿನ** = ಪ್ರತಿದಿನದಲ್ಲೂ, **ಭ್ರಾಮಕರು** = ಅಹಂ ಮಮತಯುಕ್ತರಾದ ಅಜ್ಞಾನಿಗಳು **ಅನ್ಯದೇವತೆಯ** = ಪುರುಷೋತ್ತಮನಾದ ಪರಮಾತ್ಮನನ್ನು ಬಿಟ್ಟು, ಅನ್ಯರಾದ ಕ್ಷುದ್ರದೇವತೆಗಳನ್ನು (ಅಂತೆಯೇ, ಇಂದ್ರ, ಚಂದ್ರ, ಸೂರ್ಯ, ಗಣಪತಿ, ರುದ್ರ, ಬ್ರಹ್ಮ ಇತರರನ್ನು ಸರ್ವೋತ್ತಮರೆಂದು ತಿಳಿದು) **ಭಕುತಿಯಲಿ** = ಪರಮಾತ್ಮನನ್ನು ಬಿಟ್ಟು, ಅನ್ಯತ್ರ ಅಧಿಷ್ಠಾನಗಳಲ್ಲಿ ಭಕ್ತಿದಸ್ಯರವಾಗಿ. **ಭಜಿಸುವರು** = ಭಜಿಸುತ್ತಾರೆ. ॥೧೩॥

# ವ್ಯಾಖ್ಯಾನಗಳು

## ೧. ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ

**ಉತ್ತಮಾಧಿಷ್ಠಾನದಲ್ಲಿ ಭಗವತ್ಪೂಜಾ ಮಾಡಬೇಕೆಂದು ಹೇಳುತ್ತಾರೆ.**

ನೀರಡಿಕೆಯಿಂದ ಯುಕ್ತನಾದ ಪುರುಷನು, ಭೂಮಿಯಲ್ಲಿ ದಾಹಶಮನ ಮಾಡತಕ್ಕ ದಿವ್ಯವಾದ ಉದಕವಿರಲಾಗಿ, ಜಲವಿರತಕ್ಕ ಪ್ರದೇಶ

ವನ್ನು ಮರೆತು, ತನ್ನ ಮುಖವನ್ನೇ ಮ್ಯಾಲಕ್ಕೆ ಎತ್ತಿದವನಾಗಿ ಅಷ್ಟ ದಿಕ್ಕುಗಳ, ಆಕಾಶಮಂಡಲ ಅಂತು ಒಂಬತ್ತು ದಿಕ್ಕುಗಳ ನೋಡುತಾ, ಅಲ್ಲಿ ಉದಕವನ್ನು ಹುಡುಕುತಾ, ಒಂಭತ್ತು ದಿಕ್ಕಿನೊಳಗೂ ಕಾಣದೆ, ದಾಹದಿಂದ ಅತ್ಯಂತ ಪೀಡಿತನಾಗಿ ದುಃಖಿಸೋವನಾಗತಾನೆ. ಇದರೋಪಾದಿಯಲ್ಲಿ, ಲಕ್ಷ್ಮೀದೇವರಿಗೆ ಮನೋಹರನಾದ ಉದಕಸದೃಶನಾದ ಪರಮಾತ್ಮ ಉದಕಕ್ಕೆ ಆಶ್ರಯಭೂತವಾದ ಭೂಮಿ ಸದೃಶರಾದ ಸಮಸ್ತರಾದ ಎಂದರೆ, ಜೀವೋತ್ತಮನಾದ ಬ್ರಹ್ಮಾದಿದೇವತೆಗಳಾದ ಸರ್ವರ ಅಂತರ್ಯಾಮಿಯಾಗಿರಲಾಗಿ, ಸಂಸಾರ ದುಃಖ್ಯಾಖ್ಯದಾಹದಿಂದ ಪೀಡಿತನಾವ ಪುರುಷ, ಏತಾದೃಶ ದಾಹಶಾಂತಿಗಾಗಿ ಉದಕ ಸದೃಶನಾದ ಪರಮಾತ್ಮ. ಇರತಕ್ಕ ಸ್ಥಾನವನ್ನು ಹುಡುಕದೆ, ಅಜ್ಞಾನರೂಪವಾದ ಅಹಂಮಮತ್ವ ಎಂಬ ಚಕ್ರದಲ್ಲಿ ತಗುಲಿ ಸಂಚರಿಸತಕ್ಕವರು, ಸಂಸಾರ ದುಃಖಾಖ್ಯ ದಾಹ ಪೀಡಾ ಪರಿಹಾರಕ ಉದಕಸದೃಶನಾದ ಪರಮಾತ್ಮನ ಬಿಟ್ಟು ಪ್ರತಿದಿನದಲ್ಲೂ ಜಲವಿರತಕ್ಕ ಭೂಮಿಯನ್ನು ಬಿಟ್ಟು, ಜಲವಿಲ್ಲದ ಪೂರ್ವೋಕ್ತ ಅನ್ಯವಾದ ದಿಕ್ಕುಗಳು, ತೃಷಾರ್ಥ ಜಲವನ್ನು ಹುಡುಕಿದಂತೆ, ಅನ್ಯದೇವತೆ ದೇವತೆಗಳಾವ ಬ್ರಹ್ಮಾದಿ ಉತ್ತಮದೇವತೆಗಳ ಅಂತರ್ಯಾಮಿಯಾದ ಪರಮಾತ್ಮನ್ನ ಬಿಟ್ಟು, ನವದಿಕ್ಕು ಸದೃಶರಾದ ಬ್ರಹ್ಮಾದಿದೇವತೆಗಳ ಅತ್ಯಂತ ಭಕುತಿಯಿಂದ ಭಜಿಸೋವರಾಗತಾರೆ.

**ವಿಶೇಷಾರ್ಥ.**— ಸರ್ವಕಾಲದಲ್ಲಿ ಎಂದರೆ ಸೃಷ್ಟಿ, ಸ್ಥಿತಿ, ಮೋಕ್ಷ ಈ ಕಾಲತ್ರಯದಲ್ಲಿ ಎಂತ ತಾತ್ಪರ್ಯ. ಮುಕ್ತಿಯೋಗ್ಯರು, ತಮೋಯೋಗ್ಯರು, ನಿತ್ಯಾಸಂಸಾರಿಗಳು ಎಂತ ಜೀವರು ತ್ರಿವಿಧರಾಗಿ ಇರೋವರಾಗಿದ್ದಾರೆ. ಮುಕ್ತಿಯೋಗ್ಯರ ಸ್ವರೂಪ ಸುಖಸ್ವರೂಪ. ಇದು ಸರ್ವರಿಗೂ ಸಮಾನವಾಗಿ ಇಲ್ಲ. ತಾರತಮ್ಯಾನುಸಾರ ಅಧಿಕ ನ್ಯೂನಗಳಾಗಿ ಅದೆ. ಅದರಂತೆ ಸುಖಭೋಗವೂನೂ ಅಧಿಕ ನ್ಯೂನಗಳಾಗಿ ಕೊಟ್ಟು ಪಾಲಿಸುತಾನೇ ಹೊರ್ತು, ಎಲ್ಲರಿಗೂ ಸಮಾನವಾಗಿ ಸುಖ ಕೊಟ್ಟು ಪಾಲಿಸೋದಿಲ್ಲ. ತದ್ವತ್ ದುಃಖಸ್ವರೂಪವುಳ್ಳ ತಮೋಯೋಗ್ಯರಿಗೂ, ನಿತ್ಯಸಂಸಾರಿಗಳಿಗೂ

ಆತ ಎವ ಎಕ ಪ್ರಕಾರ ಪಾಲನೆ ಮಾಡದೆ ಭಿನ್ನಭಿನ್ನವಾಗಿ ಪಾಲನೆ ಮಾಡ ತಾನೆಂದು ತಿಳಿಯಬೇಕು,

**ತಾತ್ಪರ್ಯ:**–ಭೂಮಿಸದೃಶ ಚರಾಚರವು. ಉದಕ ಸದೃಶ ಪರಮಾತ್ಮ ಆದರೂ, ಭೂಮಿಯಲ್ಲಿ ಉದಕ ಎಂಬುದು ಸರ್ವತ್ರ ಅದೆ. ಲೋಗರು ಆ ಎಲ್ಲಾ ಉದಕವನ್ನೂ ಪಾನ ಮಾಡೋದಿಲ್ಲ. ಚಂಡಾಲನ ಮನಿಯಲ್ಲಿ ದಿವ್ಯ ಗಂಧೋಧಕವದೆ, ಬ್ರಾಹ್ಮಣ ಪಾನ ಮಾಡೋದಕ್ಕೆ ಯೋಗ್ಯವಲ್ಲ· ಬ್ರಾಹ್ಮಣನ ಮನಿಗತ ಉದಕ ಪಾನಕ್ಕೆ ಯೋಗ್ಯ ಹ್ಯಾಂಗೋ, ಹಾಂಗೆ ಭಗವದ್ಭಕ್ತರಾದ ದೇವತಾಂತರ್ಗತನಾದ, ಉದಕಸದೃಶನಾದ ಪರಮಾತ್ಮ ಗ್ರಾಹ್ಯ. ತದನ್ಯಗ್ರಾಹ್ಯವಲ್ಲವೆಂದು ತಾತ್ಪರ್ಯ. ಉತ್ತಮಾಧಿಷ್ಠಾನದಲ್ಲಿ ಭಗವಂತನ ತಿಳಿದು ಪೂಜಿಸಿದರೆ, ತದ್ದ್ವಾರಾ ಸಂಸಾರಾಖ್ಯ ದುಃಖ ರೂಪದ ಶಾಂತಿ ಮಾಡತಾನೆ. ನೀಚಾಧಿಷ್ಠಾನದಲ್ಲ ಅಂತರ್ಗತನ್ನ ತಿಳಿದೂ ಭಜಿಸಕೂಡದು ಎಂತ ತಾತ್ಪರ್ಯ.

**ವಿಶೇಷಾರ್ಥ:**– ಫಲ ಕೊಡತಕ್ಕ ಪರಮಾತ್ಮ ನೀಚನಲ್ಲವಾದ್ದರಿಂದ, ನೀಚಾಧಿಷ್ಠಾನದಲ್ಲಿ ಪರಮಾತ್ಮನ ಭಜಿಸಿವರೆ ಉತ್ತಮ ಫಲ ಕೊಡಲಿ-ಎಂದರೆ ಪರಮಾತ್ಮನ ಫಲ ಕೊಡ ಬೇಕಾದರೆ ತಾನು ಸಾಕ್ಷಾತ್ತಾಗಿ ಕೊಡೋದಿಲ್ಲಿ, ಅಧಿಷ್ಠಾನ ದ್ವಾರಾನೇ ಫಲಕೊಡತಾನಾದ್ದರಿಂದ, ಅಧಿಷ್ಠಾನ ನೀಚವಾವರೆ ಫಲವೂ ನೀಚವೇ ಆದ ಕಾರಣ ನೀಚಾಧಿಷ್ಠಾನಗತ ಪರಮಾತ್ಮನ ಪೂಜಾ ಕೂಡದು. ಪರಮಾತ್ಮ ಇದ್ದಾನೆ ಎಂದು ಮಾತ್ರ ತಿಳಿಯಬೇಕು. ವಿಷ್ಣು ಭಕ್ತರಾದ ಅನ್ಯದೇವತೆಗಳ ಅಂತರ್ಗತನ ತಿಳಿಯದೆ ಆ ದೇವತೆಗಳನ್ನು ಮಾತ್ರಾ ಭಜಿಸಿದರೆ, ತೃಷಾರ್ಥನೋಪಾದಿಯಲ್ಲಿ ಇಷ್ಟಾರ್ಥ ಸಿದ್ಧಿಸೋದಿಲ್ಲ ಎಂತ ತಾತ್ಪರ್ಯ.

ತೃಷಾರ್ತಗೆ ಸದೃಶ ಅಧಿಕಾರಿ, ಆಕಾಶದೋಪಾದಿಯಲ್ಲಿ ವಿಷ್ಣುಭಕ್ತರಾದ ದೇವತೆಗಳು, ಭೂಮಿಯಲ್ಲಿ ವಿದ್ಯಮಾನವಾದ ಜಲಕ್ಕೆ ಸದೃಶನಾದವ ಪರಮಾತ್ಮ–ಈ ಪ್ರಕಾರ ಸರ್ವೋತ್ತಮ ಪರಮಾತ್ಮನೆಂದು ತಿಳಿದು, ವಿಷು

ಭಕ್ತರ ಅಂತರ್ಗತ ಪರಮಾತ್ಮನ ಚಿಂತಿಸಿ, ಭಜನ ಮಾಡಬೇಕಂತ ತಾತ್ಪರ್ಯ. ॥೧೩॥

## ೨. ಭಾವಪ್ರಕಾಶಿಕೆ

ಮಣ್ಣು ಉದಕ ಮೇಳನದಿಂದ ಕೆಸರು ಮಾಡಿ, ಆ ಕೆಸರಿನಿಂದ ಗಡಿಗೆಗಳ ಮಾಡಿ, ಆದರನ್ನ ಕೇವಲ ತೀಕ್ಷ್ಣವಾದ ದಿನಗಳ ಬಿಸಿಲಿನಾಗೆ ಇಟ್ಟು ಚಂದಾಗೆ ಒಣಗಿಸಿದರೆ ಆ ಗಡಿಗಿ ಒಣಗಿ ಗಟ್ಟಿ ಆಗತದೆ. ಅದರನ್ನ ಅಗ್ನಿಯಲ್ಲಿ ಸುಟ್ಟು ಚಂದಾಗಿ ಘಟ್ಯಾಗಿ ಮಾಡದೆ, ಮೇಘದಿಂದ ಪ್ರಾಪ್ತವಾದ ಉದಕವನ್ನ ತುಂಬಿದರೆ ಘಟ ನಷ್ಟವಾಗಿ, ತದ್ಗತ ಉದಕವೂ ಹೋಗೋದಾಗಿ ಘಟ ಮಾಡಿದ ಪ್ರಯಾಸವೂ, ನೀರು ತುಂಬಿದ ಪ್ರಯಾಸವೂ ವೃಥಾ ನಷ್ಟವಾಗೋದಾಗತದೆ. ತದ್ವತ್ ಒಣಗಿದ ಘಟವನ್ನು ಅಗ್ನಿಸಂಸ್ಕಾರವಿಲ್ಲದೇನೇ, ಘಟ ಕರಗಧಾಂಗೂನೂ, ಘಟದಲ್ಲಿ ನೀರು ನಿಲ್ಲೋ ಹಾಂಗೂನೂ ಮಾಡತೇನೆ ಎಂದು ಅಗ್ನಿಸಂಸ್ಕಾರವನ್ನು ಬಿಟ್ಟು, ಹಸೀ ಗಡಿಗ್ಯಾಗೆ ನೀರು ತುಂಬೋಣದರಿಂದ ದಾವ ಫಲ ಪ್ರಾಪ್ತಿಯೋ ಅದರಂತೆ, ಅಗ್ನಿಸದೃಶವಾದ ಪರಮಾತ್ಮ ಚರಾಚರ ನಿರ್ವಾಹದಲ್ಲಿ ಸ್ವತಂತ್ರನೆಂಬೋದು

ಮರೆತು, ಸರ್ವತಂತ್ರಸ್ವತಂತ್ರನಾದ ಪರಮಾತ್ಮನ ಅನ್ಯಾಧೀನವಲ್ಲದ ಸ್ವಾತಂತ್ರ್ಯ ತನ್ನಲ್ಲಿ ಆರೋಪಣೆ ಮಾಡಿಕೊಂಡು, ಅಹಂ ಮಮತಾದಿಂದ ಯುಕ್ತನಾಗಿ, ದೇಹೇಂದ್ರಿಯಾದಿಗಳಿಂದ ಮಾಡತಕ್ಕ ಸರ್ವಕರ್ಮಗಳನ್ನೂ ಪರಮಾತ್ಮ ತನ್ನ ಕ್ರಿಯಾದ್ವಾರಾ ಮಾಡಸತಾನೆಂತ, ತಿಳಿಯದೆ, ತಾನೇ ಮಾಡತೇನೆ ಎಂತ ಅನ್ನುವವ ದನಗಳನ್ನು ಮೇಯಿಸತ್ಕ ಮೂಢ ಮತ್ತು ಅವನೇ ಅಜ್ಞಾನಿ ಎಂತಲೂ ಅರ್ಥ. ಇದರಿಂದ ನರಕಾದ್ಯನರ್ಥಗಳ ಅನುಭವ ಮಾಡತಕ್ಕವ. ಇಂಥಾ ಮನುಷ್ಯ ಏನೇನು ಮಾಡತಕ್ಕ ಅನ್ನದಾನ ವೇನು, ಪದಸಂಧಿ ಪ್ರಯುಕ್ತ ಅನಶನವ್ರತವೇನು, ಸತ್ಪಾತ್ರರಲ್ಲಿ ದಾನ ಗಳೇನು, ಅನೇಕ ತೀರ್ಥಸ್ನಾನಗಳೇನು, ತಥಾ ಭಗವತ್ಪೂಜಾದಿಗಳೇನು, ಇನ್ನೂ ಅನೇಕ ಸತ್ಕರ್ಮಗಳೇನು (ಇವುಗಳೆಲ್ಲ), ಪೂರ್ವೋಕ್ತ ಘಟನಿರ್ಮಿತ ದೇಹಾಯಾಸವತ್ ಪ್ರಯಾಸಪಟ್ಟು ಮಾಡಿದ ಕರ್ಮಗಳು ದೇಹಕ್ಕೆ ಬಹಳ ಕಷ್ಟವನ್ನು ಕೊಟ್ಟು ಫಲವಿಲ್ಲದೆ ಬರಿದಾಗಿ ಹಸಿ ಗಡಗಿಗತ ನೀರೇ ಹೋಗಿ, ಗಡಗಿ ವ್ಯರ್ಥವಾಗಿ ಹೋದಂತೆ ಹೋಗೋವಾಗತವೆ. ಆದ್ದರಿಂದ ಅಹಂ ಮಮತಾದಿಗಳ ತ್ಯಜಿಸಿ, ಅಲ್ಪಕರ್ಮ ಮಾಡಿದರೂ ಮಹತ್ತರಫಲ ಕೊಡೋವಾಗತವೆ. ಅಹಂಬುದ್ಧಿಯಿಂದಲೂ ಸರ್ವಕರ್ಮಕರ್ತೃ ನಾನೆಂಬ ಜ್ಞಾನದಿಂದಲೂ ಮಾಡಿದ ಕರ್ಮ, ಘಟ ನೀರೂ ಎರಡೂ ಹೋದಂತೆ ಫಲ ವಿಲ್ಲದೇನೇ ದುಃಖ ಪ್ರಾಪ್ತಿಯಾಗತದೆ ಎಂತ ತಾತ್ಪರ್ಯ.

**ವಿಶೇಷಾರ್ಥ–**

ಹಸೀಗಡಿಗಿ ಒಳಗಿನ ನೀರು ಸೋರಿ ಹೋದಂತೆ, ಇವ ಮಾಡಿದ ಸತ್ಕರ್ಮಕ್ಕೆ ಫಲಗಳು ಪ್ರಾಪ್ತವಾಗದೆ ದೇಹಾಯಾಸ ಉಳಿ ಯುತ್ತದೇ ಹೊರ್ತು, ಮಾಡಿದ ಸತ್ಕರ್ಮ ಬರೀದಾಗೋಣವಲ್ಲದೆ, ಪರಮಾತ್ಮನಲ್ಲಿ ಇರತಕ್ಕ ಸರ್ವಸ್ವಾತಂತ್ರ್ಯ ತನ್ನಲ್ಲಿ ಆರೋಪಣೆ ಮಾಡಿ ಕೊಂಬೋಣದರಿಂದ ಸತ್ಕರ್ಮ ದುಷ್ಕರ್ಮ ಎರಡೂ ಪಾಪಫಲವೇ ಕೊಡೋ ವಾಗತವೆ. ಸತ್ಕರ್ಮವೇ ಶೇಷ ಉಳಿಯದ ಮ್ಯಾಲೆ ಫಲಹ್ಯಾಂಗೆ ಕೊಡತದೆ– ಎಂದರೆ, ಭೂಮಿಯಲ್ಲಿ ವಿದ್ಯಮಾನವಾದ ಕೆಂಡವನ್ನು ಅಲ್ಲಿ ಇಲ್ಲದಂತೆ

ಮಾಡಿದರೆ ಅದರ ಶಾಖ ಭೂಮಿಯನ್ನು ಆಶ್ರಯ ಮಾಡಿ ಇರ್ತದೆ. ತದ್ವತ್ ಪುಣ್ಯಗಳು ಸ್ರವಿಸಿ ಹೋದರೂ, ಈ ದೃಷ್ಟಾಂತದಿಂದ ಕ್ವಚಿತ್ ಇರೋದಾಗಿ ಇರ್ತದೆ. ಅದು ಫಲ ಕೊಡೋದಾಗತದೆ. ಕರ್ಮ ಜಡ. ತತ್ಫಲಗಳ ಉಣಿಸತಕ್ಕ ಪರಮಾತ್ಮ ಪಾಪಫಲವೇ ಉಣಿಸತಾನೆ. ಅಸ್ವತಂತ್ರ ಜೀವನಾದ ಮ್ಯಾಲೆ ಅಂಥಾ ಪ್ರೇರಣೆ ಏಕೆ ಮಾಡಬೇಕೆಂದರೆ, ಈಶ್ವರನಿಂದ ರಚಿತವಲ್ಲದ ಅನಾದಿಕರ್ಮವನ್ನನುಸರಿಸಿ, ಅಂಥಾ ಪ್ರೇರಣೆ ಮಾಡತಕ್ಕ ಕರ್ಮವನ್ನನುಸರಿಸಿ ಪ್ರೇರಣೆಮಾಡತಾನೆ. ಹೀಂಗೆ ಹೇಳಿದರೆ ಕರ್ಮಾಧೀನತ್ವ ಪರಮಾತ್ಮಗೆ ಬಂತು. ಅನ್ಯಾಧೀನತ್ವ ಪರಮಾತ್ಮಗೆ ದೋಷವಾಯಿತಲ್ಲ–ಎಂದರೆ ಕರ್ಮ ಜಡ, ಪರಮಾತ್ಮ ಚೇತನ. ಜಡಪದಾರ್ಥ ಚೇತನನ ಅಧೀನಮಾಡಿಕೋತದೆ ಎಂಬೋದು ಅಸಂಭಾವಿತವಲ್ಲವೇ ? ಆದ್ದರಿಂದ ಕೂಡೋದಿಲ್ಲ. ಆದಕಾರಣ ಪರಮಾತ್ಮ ತಾನಾಗೆ ಅದರ ಅಧೀನನಾಗಿ ಇದ್ದಾನೆ ಎಂತ ಹೇಳಬೇಕು. ಆ ಪ್ರಕಾರ ಜಡಕರ್ಮಾಧೀನನಾಗಿ ಇರೋದಕ್ಕೆ ಸ್ವಪ್ರಯೋಜನ ಏನೂ ಕಾಣೋದಿಲ್ಲ. ಆ ಜಡಕರ್ಮಕ್ಕಾದರೂ ಏನಾದರೂ ಪ್ರಯೋಜನವು ಉಂಟಾ ಎಂದರೆ, ಜಡವಾದ್ದರಿಂದ ಅದಕ್ಕೆ ಏನೂ ಪ್ರಯೋಜನವಿಲ್ಲ. ದಾವವಿಧದಿಂದಲೂ ಪರಮಾತ್ಮ ದೋಷಿ ಆಗೋದಿಲ್ಲ. ಆದರ ಅನಾದಿಕರ್ಮವನ್ನನುಸರಿಸಿ ಪ್ರೇರಿಸೋದಕ್ಕೆ ಕಾರಣವೇನೆಂದರೆ, ಆಯಾ ಜೀವರ ಅನಾದಿಕರ್ಮ ಎಂಬುದು 'ಅವಶ್ಯಮನುಭೋಕ್ತವ್ಯಂ ಕೃತಂ ಕರ್ಮ ಶುಭಾಶುಭಂ' ಎಂಬ ಪ್ರಮಾಣಾನುಸಾರ ಆಯಾ ಜೀವರ ಅನಾದಿಕರ್ಮ ಆಯಾ ಜೀವರ ಭೋಜನಾನಂತರವೇ ಸ್ವರೂಪವ್ಯಕ್ತವಾಗಿ ವೈಕುಂಠ ಸೇರಬೇಕು. ತದ್ವ್ಯತಿರಿಕ್ತ ಕೂಡೋದಿಲ್ಲ. ಆಯಾ ಜೀವರು ಆಯಾ ಕರ್ಮಗಳ ಸ್ವತಂತ್ರತ್ವೇನ ಭೋಜನಮಾಡಿ ಪರಿಹಾರ ಮಾಡಿಕೊಳ್ಳ ಬಹುದಲ್ಲಾ–ಎಂದರೆ, ಜೀವರು ಅಸ್ವತಂತ್ರರು, ಅಂದರೆ ಪರಾಧೀನ ಸ್ವಾತಂತ್ರ್ಯವುಳ್ಳವರು. ಸ್ವಾಧೀನ ಸ್ವಾತಂತ್ರರು ಎಂತ ಹೇಳೋಣವೆಂದರೆ ಈಶಸಾಮ್ಯ ಬರೋದಾಗತದೆ. ಮತ್ತು ಅಸ್ವಾತಂತ್ರ್ಯ ಸ್ವಾಧೀನದಿಂದ ಭೋಜನ ಮಾಡಿದರೂ, ಅಹಂ ಕರ್ತಾ ಎಂಬ ಕರ್ಮ ಕೆಲವು ಕಾಲದವರೆಗೂ ಭೋಜನ ಮಾಡಿಯೇ ತೀರಬೇಕು. ಅನಾದಿಕರ್ಮದಲ್ಲಿ ಅಂಥಾದ್ದು ಒಂದು

ದುಷ್ಕರ್ಮ ಇರೋದಾಗಿ ಅದೆ. ಹಾಂಗೆ ಇರೋಣದರಿಂದ ಹ್ಯಾಂಗಾದರೂ ಅಹಂಕರ್ತಾ ಎಂಬ ಜ್ಞಾನ ಉಂಟುಮಾಡಿಕೊಡತಕ್ಕ ಕರ್ಮ ಜೀವನನ್ನ ಬಿಟ್ಟಿದ್ದಲ್ಲ. ಆ ಕರ್ಮ ಜೀವಗೆ ಭೋಜನ ಮಾಡಿಸತಾನೆ, ಅಸ್ವತಂತ್ರ ನಾದಕಡಿಯಿಂದ ಅನಾದಿಕರ್ಮಭೋಗಕ್ಕೆ ಕೊಡದೇನೇ ಉದ್ಧಾರ ಯಾಕೆ ಮಾಡಬಾರದು–ಎಂದರೆ, ತೃಣಜೀವನ್ನ ಚತುರ್ಮುಖಬ್ರಹ್ಮನನ್ನಾಗಿ ಯಾಕೆ ಮಾಡಬಾರದು ? ಎಂತ ಪ್ರಶ್ನೆ ಮಾಡಿದರೆ ಉತ್ತರ ಉಂಟೆ ? ಅಧಿಕ ಪ್ರಸಂಗವಾಗಲಿಲ್ಲವೆ ? ಮತ್ತು ಅನಾದಿಸ್ವರೂಪ ಕುದುರಿಯಾಗಿರತಕ್ಕ ಜೀವನ್ನ ಮನುಷ್ಯಜೀವನನ್ನಾಗಿ ಯಾಕೆ ಮಾಡಬಾರದು-ಎಂತ ಪ್ರಶ್ನೆ ಮಾಡಿದರೆ ಉತ್ತರ ಉಂಟೆ ? ಇದೂ ಸಹ ಹಾಂಗೇ ಅಸಂಭಾವಿತ ಪ್ರಶ್ನೆಯಲ್ಲವೆ ? ಮತ್ತು ಪರಮಾತ್ಮ ತನ್ನ ಆನಂದಕ್ಕೆ ಸಮನಾದ ಆನಂದ ಮೋಕ್ಷದಲ್ಲಿ ಯಾವತ್ತೂ ಪ್ರಾಣಿಗಳಿಗೆ ಕೊಡಬಾರದ್ಯಾಕೆ ? ಎಂಬ ಈ ತರಹದ ಪ್ರಶ್ನೆ ಮಾಡಬಹುದೆ ? ಇವೆಲ್ಲಾ ಪರಮಾತ್ಮನಲ್ಲಿ ದೋಷಗಳಾಗೋವೆ ? ಎಂದೆಂದಿಗೂ ಆಗಲಾರವು. ಅನಾದಿಯಿಂದ ಅದರದರಲ್ಲಿ ಕ್ಲೃಪ್ತಗಳು ಅಂಥಾವೇ. ಜೀವನೇನು, ಜೀವದ ಅನಾದಿಕರ್ಮವೇನು, ಜೀವನ ಯೋಗ್ಯತಾ ಏನು ಇವು ಯಾವತ್ತೂ ಈಶ್ವರಿನಿಂದ ರಚಿತವಲ್ಲ. ಅವು ಅನಾದಿಯಿಂದ ಹಾಂಗೇ ಇರತಕ್ಕವೇ, ಅನ್ಯಥಾ ಮಾಡೋ ಸಾಮರ್ಥ್ಯ ಪರಮಾತ್ಮಗೆ ಇದ್ದ ಕಾಲಕ್ಕೆ ಅಂಥಾ ಇಚ್ಛಾ ಮಾಡೋದಿಲ್ಲ. ಜೀವಗೆ ಸಾಧೀನಕರ್ತೃತ್ವ ಇದ್ದರೆ ಬೇಕಾದ್ದು ಮಾಡಿಕೊಂಬ. ಅಂಥಾದ್ದು ಇಲ್ಲದೇ ಇರೋಣದರಿಂದಲೇ ಅನಾದಿಕರ್ಮಭೋಗಕ್ಕೆ ಸಂಬಂಧಪಡೋವನಾಗಿದ್ದಾನೆ. ಆದ್ದರಿಂದಲೆ ಜೀವ ಅಸ್ವತಂತ್ರ, ಪರಮಾತ್ಮ ಸ್ವತಂತ್ರ–ಎಂಬುದು ಸಿದ್ಧವು.

ಉದಕ ಸಾಮ್ಯ, ಪುಣ್ಯ; ಹಸೀ ಘಟಕ್ಕೆ ಸಾಮ್ಯ, ಸ್ವತಂತ್ರ ಕರ್ತೃ ಎಂಬುದು; ಮೃತ್ತಿಕೆಗೆ ಸಾಮ್ಯ, ಅಧಿಕಾರಿ; ಕುಲಾಲಗೆ ಸಾಮ್ಯ, ಪರಮಾತ್ಮ; ಬಿಸಿಲಿಗೆ ಸಾಮ್ಯ, ಅನಾದಿ ಕರ್ಮ; ಉದಕ ಸ್ರವಿಸೋದಕ್ಕೆ ಸಾಮ್ಯ ಪುಣ್ಯ ಸ್ರವಿಸಿ ಹೋಗೋಣ ಎಂತ ತಿಳಿಯಬೇಕು. ಜೀವ

ಅಸ್ವತಂತ್ರ, ಪರಮಾತ್ಮ ಸ್ವಾಧೀನಸ್ವತಂತ್ರ ಎಂಬುದಕ್ಕೂ ಬಿಂಬಕ್ರಿಯಾ ವ್ಯತಿರಿಕ್ತ ಪ್ರತಿಬಿಂಬಕ್ರಿಯಾ ಆಗೋದಿಲ್ಲ ಎಂಬುದಕ್ಕೂ **ಶಾಂಡಿಲ್ಯತತ್ತ್ವ** ಪ್ರಮಾಣ–

ಪ್ರಕೃತಿಸ್ಥಾ ಇಮೇ ಜೀವಾಃ ಸ್ವಾನುರೂಪಗುಣೈರಿತಾಃ ।
ಸ್ವಾನುರೂಪಕ್ರಿಯಾಃ ಕೃತ್ವಾ ಪ್ರಪದ್ಯಂತೇ ನಿಜಾಂಗತಿಮ್ ॥

ತತ್ರಯಃ ಸದ್ಗತಿಂ ಪ್ರಾಪ್ತುಂ ಪುಮಾನಿಚ್ಛತಿ ಚೇತ್ತದಾ ।
ವರ್ಣಾಶ್ರಮೋಚಿತೇಷ್ವೇವ ಪ್ರಯತೇತ ಸುಕರ್ಮಸು ॥

ಕರ್ತಾ ಕಾರಯಿತಾ ವಿಷ್ಣುರಿತಿ ಯದ್ಯಪಿ ಸಮ್ಮತಮ್ ।
ಸ್ವಾತಂತ್ರ್ಯಾತ್ಸರ್ವಕರ್ತೃತ್ವಾತ್ ಹರಿರ್ಯತ್ನವತಾಂ ನೃಣಾಮ್ ॥

ಕಾರಯಿತ್ವಾ ಪ್ರೇರಯಿತ್ವಾ ಕೃತ್ವಾ ಕರ್ಮ ಚ ತತ್ಫಲಮ್ ।
ದದಾತಿ ಸದೃಶಾಕಾರಂ ನಾನ್ಯಥಾ ತು ಕಥಂಚನ ॥

ಕರ್ತುಮಿಚ್ಛೋಃ ಸದಾ ವಿಷ್ಣುಃ ಕರ್ತಾ ಕಾರಯಿತಾ ಸದಾ ।
ಸ್ವಯಂ ಗಂತುಮಶಕ್ತಸ್ಯ ಪಾತುಮಿಚ್ಛೋಃ ಸ್ತನಂ ಶಿಶೋಃ ॥

ಕರ್ತೃತ್ವಂ ಮಾತರೇವಾಸೀತ್ ತದಧೀನಸ್ತದಾತ್ರಯಃ ।
ತತ್ಕರ್ತೃತಾ ತದಾಧೀನ ತಥಾ ಜೀವಸ್ಯ ಕರ್ತೃತಾ ॥

ಯಥಾ ಪ್ರಕೃತಿ ಜೀವನಾಂ ಇಚ್ಛಾ ಸಂಜಾಯತೇ ತದಾ ।
ಯಥೇಚ್ಛತಿ ತಥಾ ವಿಷ್ಣುಃ ಜೀವಂ ಕಾರಯತೇ ಧ್ರುವಮ್ ॥

ಪಿಪೀಲಿಕಾಂತ ಬ್ರಹ್ಮಾದ್ಯಾ ಜೀವಾ ಯೇಚಾಂಡಗೋಚರಾಃ ।
ತೇಷು ಕೇಪಿ ಕ್ವಚಿತ್ಕ್ವಾಪಿ ನ ಕರ್ತುಂ ಕ್ಷಮತೇ ನರಃ ॥

ಯದಾಶ್ನಾತಿ ತದಾಶ್ನಾತಿ ಯದಾವಕ್ತಿ ತದೈವ ಸಃ ॥
ಯದಾ ಜಿಘ್ರತಿ ಜಿಘ್ರಾತಿ ತದಾ ಜೀವಃ ಪರಾನುಗಃ ॥

ಯದಾ ಗಚ್ಛತಿ ವಾ ದೇವಸ್ತದಾ ಗಚ್ಛತಿ ದೇಹಭೃತ್ ।
ಶೃಣೋತಿ ಚ ಯದಾ ಬ್ರಹ್ಮಾ ತದಾ ಜೀವಃ ಶೃಣೋತಿ ಚ ॥

ಯದ್ಯೈವಂ ಸ್ಪೃಶ್ಯತೇ ಕಿಂಚಿತ್ ತದಾಽಯಂ ಸ್ಪೃಶ್ಯತೇ ಜನಃ ।
ಕಿಮತ್ರ ಬಹುನೋಕ್ತೇನ ನಾಕೃತಂ ಕ್ರಿಯತೇ ಜನೈಃ ॥

ಏವಂ ಕರ್ತರಿ ದೇವೇಶೇ ಕರ್ತಾಹಮಿತಿ ಮನ್ಯತೇ ।
ತೇನ ಸಂಸರತೇ ಜೀವೋ ದುಃಖೀ ಜನ್ಮಸು ಜನ್ಮಸು ॥

ಏವಂ ವಿದ್ವಾನ್ ವಿನೀತಃ ಸನ್ ನಿಃಸ್ಪೃಹಶ್ಚ ಫಲೇಷು ಚ ।
ಅನುಧ್ಯಾಯನ್ ಸದಾ ವಿಷ್ಣೋಃ ಸ್ವಾತಂತ್ರ್ಯಂ ಸರ್ವಕರ್ತೃತಾಮ್॥

ಫಲದತ್ವಂ ತದೀಶತ್ವಂ ಕುರ್ಯಾತ್ ಕರ್ಮ ವಿಚಕ್ಷಣಃ ।
ಅನಪ್ತಾತಾ ತಪಸ್ವೀ ಚ ಸರ್ವಧರ್ಮಪರೋಽಪಿ ವಾ ॥

ವಿನಾ ಯದರ್ಪಣಂ ಸಮ್ಯಕ್ ಫಲಂ ನಾಪ್ನೋತ್ಯಸಂಶಯಮ್ ।
ದೇಹಿನಾಂ ಯಾಃ ಪ್ರವರ್ತಂತೇ ಪ್ರಾತರಾರಭ್ಯ ಯಾಃ ಕ್ರಿಯಾಃ ॥

ತಾಶ್ಚ ವಿಷ್ಣ್ವರ್ಪಣಂ ಕುರ್ವನ್ ಕರ್ಮಪಾಶೈರ್ವಿಮುಚ್ಯತೇ ।
ಸೇವಾರ್ಥಂ ಭಗವಾನ್ ವಿಷ್ಣುಃ ದೇಶಕಾಲಾಕ್ರಿಯಾಶ್ರಯಾನ್ ॥

ಸೃಷ್ಟವಾನ್ ಭಗವಾನಾದೌ ತಸ್ಮಾತ್ ಪರಿಚರೇನ್ನಿಜಮ್ ।
ಇತಿ ಸಂಕಲ್ಪ್ಯ ಚೋತ್ಥಾಯ ಸರ್ವಕರ್ಮ ಸಮಾಚರೇತ್ ॥

ವಿಷ್ಣೋರರ್ಥೇ ಕರಿಷ್ಯಾಮಿ ಜುಹೋಮಿ ದದಾಮಿ ಚ ।
ನಾತ್ಮಾರ್ಥಮಿತಿ ವ್ಯೈಕ್ಯಾಪಿ ವದೇತ್ಕರ್ಮ ಕರೋತಿ ಯಃ ॥

—ಇತಿ **ಶಾಂಡಿಲ್ಯತಂತ್ರೇ**—ಪಂಚದಶಾಧ್ಯಾಯೇ ।

ಪರಮಾತ್ಮ ಸ್ವತಂತ್ರ, ಜೀವ ಅಸ್ವತಂತ್ರ. ಆದ್ದರಿಂದ ಪರಮಾತ್ಮನ ಕ್ರಿಯಾದ್ವಾರಾ ಜೀವನ ಕ್ರಿಯಾ ನಡಿಯುತದೆ. ಇಲ್ಲದಿದ್ದರೆ ಇಲ್ಲಾ ಎಂತ ತಿಳದು, ಪ್ರಾತಃಕಾಲದಾರಭ್ಯ ಮಾಡಿದ ಯಾವತ್ತೂ ಕರ್ಮಗಳ ಭಗವದರ್ಪಣೆ

ಮಾಡಿ ಅಹಂ ಮಮತಾದಿಗಳ ತ್ಯಾಗಮಾಡಿ ನಿರ್ಲಿಪ್ತನಾಗಿ ಇರಬೇಕೆಂಬ ತಾತ್ಪರ್ಯ.

ಬ್ಯಾಸಗಿ ಬಿಸಿಲು ಸದೃಶ ಜೀವ; ಅಗ್ನಿ ಸದೃಶ ಪರಮಾತ್ಮ. ಘಟ ಸದೃಶ ಸ್ವಾತಂತ್ರ್ಯಗಳು ಎರಡು—

೧. ಜೀವಸದೃಶ ಬ್ಯಾಸಿಗಿ ಬಿಸಿಲಲ್ಲಿ ಒಣಗಿಸಿದ ಘಟ ಒಂದು.

೨. ಪರಮಾತ್ಮ ಸದೃಶ ಅಗ್ನಿಯಿಂದ ಸುಡಲ್ಪಟ್ಟ ಘಟ ಇನ್ನೊಂದು.

ಜೀವಸದೃಶ ಬ್ಯಾಸಗೀ ಬಿಸಿಲಲ್ಲಿ ಒಣಗಿದ ಸ್ವಾತಂತ್ರ್ಯ ಸದೃಶ ಘಟದ ಸಾಮರ್ಥ್ಯ ಉದಕ ಸಂಬಂಧವಾದರೆ ಕರಗತದೆ.

ಪರಮಾತ್ಮ ಸದೃಶವಾದ ಅಗ್ನಿಸಂಬಂಧವಾದ ಸ್ವಾತಂತ್ರ್ಯ ಸದೃಶವಾದ ಘಟ ಉದಕ ಸಂಬಂಧವಾದರೆ ಕರಗೋದಿಲ್ಲ.

ಇದರಿದರ ಸಾಮರ್ಥ್ಯ ಅನಾದಿಯಿಂದ ಇಂಥಾದ್ದಾಗಿಯದೆ. ಇದ ನರಿಯದೆ ಪರಮಾತ್ಮನ ಸ್ವಾತಂತ್ರ್ಯಕ್ಕೆ ಸದೃಶವಾದ ಘಟದಂತೆ, ಜೀವನ ಸ್ವಾತಂತ್ರ್ಯಕ್ಕೆ ಸದೃಶವಾದ ಘಟವೂನೂ ಎಂತ ತಿಳದು, ಸುಡಲ್ಪಟ್ಟ ಘಟ ವಲ್ಲಿ ಉದಕ ತುಂಬಿದಂತೆ ಸುಡದೆ ಒಣಗಿಸಿದ ಘಟವನ್ನ ಇದೂನೂ ಸುಟ್ಟ ಘಟವೇ ಅಂತ ಆರೋಪಣೆ ಮಾಡಿಕೊಂಡು ನೀರು ತುಂಬಿದರೆ, ಆ ಘಟದಲ್ಲಿ ಸುಕರ್ಮವೆಂಬ ಉದಕ ನಿಲ್ಲಲಾರದು ಎಂತ ತಾತ್ಪರ್ಯ. ಸುಕರ್ಮ ಏನೇನೂ ನಿಲ್ಲೋದಿಲ್ಲವಾ ಎಂದರೆ ಇದಕ್ಕೆ ಸಮಾಧಾನ. ಭೂಮಿ ಆಕ್ರಮಿಸಿದ ಅಗ್ನಿಶಾಖದೋಪಾದಿಯಲ್ಲಿ ಕ್ವಚಿತ್ ನಿಂತಿರ್ತದೆ, ಎಂತ ಹಿಂದೆ ಹೇಳಿದ್ದೇವೆ.

ಅಹಂ ಕರ್ತಾ ಎಂತ ಮಾಡಿದ ದುಷ್ಕರ್ಮ ಕೂಡಾ ಇರದೇ ಸ್ರವಿಸಿ ಹೋಗಬೇಕಾಯಿತಲ್ಲಾ ಎಂದರೆ, ಸುಕರ್ಮ ದುಷ್ಕರ್ಮ ಎಂತ ಎರಡು. ಸುಕರ್ಮ ಫಲಕ್ಕೆ ಉದಕ ದೃಷ್ಟಾಂತ ಕೊಟ್ಟು ಇರೋಣದರಿಂದ, ದುಷ್ಕರ್ಮಕ್ಕೆ ತದನ್ಯ ದೃಷ್ಟಾಂತವೇ ತೆಗೆದುಕೋಬೇಕು. ತದನ್ಯಗಳು ಸ್ರವಿಸಿ ಹೋಗದೇ

ಇರತಕ್ಕ ಧಾನ್ಯಾದಿ ದ್ರವ್ಯಗಳು ಹಸೀ ಘಟದಲ್ಲಿ ಹಾಕೋಣದರಿಂದ ಪ್ರವಿಸಿ ಹೋಗೋದಿಲ್ಲ. ತದ್ವತ್ ಪಾಪಕರ್ಮ ಫಲ ಪ್ರವಿಸಿಹೋಗದೇ ನಿಲ್ಲೋ ದಾಗತದೆ ಎಂತ ತಿಳಿಯಬೇಕು. ಆದ್ದರಿಂದ ಅಹಂ ಸ್ವಾಧೀನ ಕರ್ತಾ ಎಂತ ತಿಳಿಯದೆ, ಪರಾಧೀನಕರ್ತಾ ಎಂತ ತಿಳಿಯಬೇಕು. 'ನ ಹಿ ದೃಷ್ಟಾಂತೇ ಸರ್ವಸಾಮ್ಯಂ' ಎಂಬ ಪ್ರಮಾಣವನ್ನ ಅನುಸರಿಸಬೇಕಾದ ಮಟ್ಟಿಗೆ ದೃಷ್ಟಾಂತ ತೆಗೆದುಕೋಬೇಕು-ಎಂತ ತಾತ್ಪರ್ಯ ॥೧೭॥

೨. ಭಾವಪ್ರಕಾಶಿಕೆ :-

ಮಣ್ಣಿನಿಂದ ಘಟವನ್ನು ಮಾಡಿ ಬಿಸಿಲಿನೊಳಗೆ ಒಣಗಿಸಿ ನೀರು ತುಂಬಿದರೆ ಅದರಲ್ಲಿನ ನೀರೆಲ್ಲವೂ ಸೋರಿ ಹೋಗುವುದು. ಅದೇ ಘಟವನ್ನು ಚೆನ್ನಾಗಿ ಸುಟ್ಟು, ನೀರು ತುಂಬಿದರೆ ನಿಲ್ಲುವುದು. ಅದರಂತೆ ದೇಹವೆಂಬ ಘಟದಲ್ಲಿರುವ ಪುರುಷನು, ತಾನೇ ಸ್ವತಂತ್ರದಿಂದ ಕರ್ಮಮಾಡುತ್ತೇನೆಂದರೆ ಈ ದೇಹವು ಹುಟ್ಟಿದ್ದು ಹುಟ್ಟಿದಂತೆಯೋ ಇದ್ದು, ಮಾಡಿದ ಪುಣ್ಯವೆಲ್ಲವೂ ನಿಷ್ಫಲವಾಗಿ ಹೋಗಿಬಿಡುವುದು. ಘಟವನ್ನು ಬೆಂಕಿಯಲ್ಲಿ ಸುಟ್ಟಂತೆ, ಶರೀರಕ್ಕೆ, ಭಗವಂತನೇ ಸ್ವತಂತ್ರಕರ್ತನು, ಸರ್ವೋತ್ತಮನು ಎಂಬ ಜ್ಞಾನವೇ ಅಗ್ನಿಪ್ರಾಯವು. ಆದರಿಂದ ಸುಟ್ಟ ಘಟವು ಹೇಗೆ ನೀರನ್ನು ಹೊರಗೆ ಬಿಡಲಾರದೋ ಹಾಗೆ ದೇಹವು ಮಾಡಿದ ಪುಣ್ಯವನ್ನು ಹೊರಗೆ ಬಿಡದೆ ಕಾಪಾಡುವುದು. ಆದ್ದರಿಂದ ಸ್ವತಂತ್ರಕರ್ತನು ಪರಮಾತ್ಮನು-ಎಂದು ಮಾಡಿದ ಪುಣ್ಯಪಾಪಗಳನ್ನು ಪರಮಾತ್ಮನಿಗೆ ಸಮರ್ಪಿಸದೆ, ತಾನೇ ಸ್ವತಂತ್ರಕರ್ತನೆಂದು ಭಾವಿಸುವ ಪಶುಪ್ರಾಯನಾದ ಮನುಷ್ಯನು ಮಾಡುವ ಸ್ನಾನ ದಾನಾದಿ ಕರ್ಮಗಳೆಲ್ಲಾ ಬರೇ ದೇಹಾಯಾಸಮಾಡಿ ನಿಷ್ಫಲವಾಗುವ ದೆಂಬ ಭಾವ ॥೧೭॥

೩. ಭಾವದರ್ಪಣ :-

ಯಾವ ಯಾವ ರೀತಿಯಿಂದ ಕರ್ಮ ಮಾಡಿದರೆ ತನಗೆ ಕರ್ಮ ದಕ್ಕೀತೋ ಅಂಥ ಬೀಜವಾದಂಥಾ ಮರ್ಮ ಗುರುಮುಖದಿಂದ ತಿಳಿಯದೇ

ಇದ್ದವ ಏನು ಮಾಡಿದರೂ ವ್ಯರ್ಥವೆಂದು ತಿಳಿಸಿಕೊಡುತ್ತಾರೆ. ಕೇಸರೇತಿ, ಉಕ್ತಂಚ ಗಾರುಡೇ "ತಸ್ಯೈವ ಸರ್ವ ಕತೃತ್ವಂ ತದಧೀನಂ ಚ ಗಾತ್ರಕಂ। ತಸ್ಮಿನ್ ಮಮತ್ವಂಚ ತ್ಯಾಜ್ಯಮೇವ ನ ಸಂಶಯಃ" ಇತಿ॥೧೭॥

೪. ಶ್ರೀವ್ಯಾಸದಾಸ ಸಿದ್ಧಾಂತ ಕೌಮುದೀ :–

"ಕೇಸರ" ಇತಿ ॥ "ಘಟಕಿರಾಟ ಇವ" ಇತ್ಯುಕ್ತೇಃ ॥೧೭॥

## ಕನ್ನಡಾರ್ಥ

"ನಾನು ಸ್ವತಂತ್ರನು, ಮಾಡುವೆನು" ಎಂಬ ಅಹಂಕಾರದಿಂದ ಮಾಡಿದ ಯಾವದೇ ಸ್ನಾನ ದಾನ ಮುಂತಾದ ಕರ್ಮಗಳು ವಿಫಲವಾಗುವವೆಂಬ ವಿಷಯವನ್ನು ಸದೃಷ್ಟಾಂತವಾಗಿ ತಿಳಿಸುತ್ತಾರೆ. 'ಕೇಸರ' ಎಂಬ ಪದ್ಯದಿಂದ.

ಸುಡದೇ ಇರುವ, ಬರೇ ಬಿಸಿಲಿಗೆ ಮಾತ್ರ ಒಣಗಿದ ಮಣ್ಣಿನ ಕೊಡದಲ್ಲಿ ನೀರು ಹೇಗೆ ನಿಲ್ಲದೆ ಸೋರಿ ಹೋಗುತ್ತದೆಯೋ ಹಾಗೆ ಅಹಂಕಾರದಿಂದ ಮಾಡಿದ ಕರ್ಮಗಳು ವಿಫಲವಾಗುವವು.

ಭಾಗವತ ಪಂಚಮಸ್ಕಂಧದಲ್ಲಿ ಜ್ಞಾನಿಗಳು "ಯಾದೃಚ್ಛಿಕವಾಗಿ ಬಂದಿರುವ ಯೋಗೈಶ್ವರ್ಯಗಳನ್ನು ಅಭಿನಂದಿಸುವುದಿಲ್ಲ. ಯೋಗೈಶ್ವರ್ಯ ಪ್ರದರ್ಶನದಲ್ಲಿ ಜ್ಞಾನಿಗಳು ಪ್ರವರ್ತಿಸಿದರೆ ಅವರ ಮನಸ್ಸು ವಿಷಯಾಂತರದಲ್ಲಿ ಆಸಕ್ತಿಯನ್ನು ಹೊಂದಬಹುದು. ಆಗ ಅವರ ಮನಸ್ಸು ಭಗವತ್ತತ್ತ್ವವನ್ನು ಬಿಡಬಹುದು. ವಿಷಯಾಂತರದಲ್ಲಿ ಆಸಕ್ತವಾದ ಮನಸ್ಸು ಭಗವತ್ತತ್ತ್ವದಲ್ಲಿ ಸ್ಥಿರವಾಗಿ ನಿಲ್ಲಲಾರದು. ಈ ವಿಷಯದಲ್ಲಿ ಸುಡದಿರುವ ಹೊಸ ಗಡಿಗೆಯಲ್ಲಿ ನೀರು ಹೇಗೆ ನಿಲ್ಲಲಾರದೋ, ಹಾಗೆ ಮನಸ್ಸು ನಿಲ್ಲಲಾರದು" ಎಂದು ದೃಷ್ಟಾಂತವನ್ನು ಹೇಳಿದ್ದಾರೆ. ಅದನ್ನೇ ಇಲ್ಲಿ ತೋರಿಸಿದ್ದಾರೆ ॥೧೭॥

೫. ಶ್ರೀಗುರುಹೃದಯಪ್ರಕಾಶಿಕೆ :

ಹೀಗೆ ದುಃಖಾದ್ಯನುಭವಾದಿಗಳಿಂದ ಸರ್ವಜೀವರೂ ದೇವರಧೀನ ವೆಂದು ತಿಳಿಯು ಬಂದಾಗ್ಯೂ, ಸರ್ವಸ್ವತಂತ್ರನಾದ ದೇವರ ಅಂಶವೇ ಜೀವ, ದೇವರಿಗೂ ಜೀವನಿಗೂ ಬೇಧವಿಲ್ಲವೆಂಬ ಪಶುಜ್ಞಾನಿಗೆ ಪುಣ್ಯ ಲೇಶವೂ ಇಲ್ಲವೆಂದು ತಿಳಿಸುತ್ತಾರೆ, ಕೆಸರೆಂದು. ಕೆಸರಿನಿಂದ ಗಡಿಗೆ ಮಾಡಿ, ಬೇಸಿಗೆ ಬಿಸಿಲಿನಲ್ಲಿ ಇಟ್ಟು ಒಣಗಿಸಿದರೆ, ಆ ಕೆಸರುಗಡಿಗೆಯಲ್ಲಿ ಘನರಸವೆಂಬ ಉದಕವನ್ನು ತುಂಬುವುದಕ್ಕೆ ಹೇಗೆ ಆಗುವುದಿಲ್ಲವೋ, ಹಾಗೆಯೇ ಸರ್ವ ಸ್ವತಂತ್ರನಾದ ಬ್ರಹ್ಮವಸ್ತುವೇ ತಾನೆಂದು ಅವಿದ್ಯವೆಂಬ ಅಜ್ಞಾನ ಮೂಲಕ ಆ ಬ್ರಹ್ಮವಸ್ತುವೇ ಜೀವವೆಂದು ಕರೆಸುವುದು, ಜೀವೇಶ್ವರರಿಗೆ ಬೇಧವಿಲ್ಲ ವೆಂಬ ಪಶುಸದೃಶ ಮನುಷ್ಯನು, ಸ್ನಾನ ಅನಶನ ಅಂದರೆ, ಉಪವಾಸ ವ್ರತ ಮೊದಲಾದ ಸಮಸ್ತ ಪುಣ್ಯಕರ್ಮಗಳೇನು ಮಾಡಿದಾಗ್ಯೂ ಒಸರಿ ಪೋವುವು ಅಂದರೆ, ವ್ಯರ್ಥವಾಗಿ ಹೋಗುತ್ತವೆ. ದೇಹಾಯಾಸವನ್ನು ಕೊಟ್ಟು ಅಂದರೆ ದೇವರಲ್ಲಿ ಭಕ್ತಿ ಇಲ್ಲದೇ ವಿಪರೀತಜ್ಞಾನದಿಂದ ಮಾಡಿದ ಪುಣ್ಯವೆಲ್ಲಾ ದೇಹಾಯಾಸವನ್ನು ಕೊಟ್ಟದ್ದಲ್ಲದೆ ಮಹಾಅನರ್ಥಕ್ಕೆ ಕಾರಣವಾಗುವು ದೆಂದರ್ಥ.

ಪಾಪಂ ಭವತಿ ಧರ್ಮೋಽಪಿ । ಯೋ ನ ಭಕ್ತ್ಯಾಃ ಕೃತೋ ಹರೇಃ ॥ ಎಂತಲೂ,

ಧರ್ಮಸ್ಸ್ವನುಷ್ಠಿತಃ ಪುಂಸಃ ವಿಷ್ವಕ್ಸೇನ ಕಥಾ ಸು ಯಃ ।
ನೋತ್ಪಾ ದಯೇದ್ಯವಿರತಿಂ ಶ್ರಮ ಏವ ಹಿ ಕೇವಲಂ ॥

ಎಂಬ ಭಾಗವತಾರ್ಥ ಸಹ ವಿವರಿಸಿತು. ॥೧೭॥

## ಸರ್ವವ್ಯಾಖ್ಯಾನಸಾರಸಂಗ್ರಹ

ಗಡಿಗೆಯನ್ನು ತಯಾರಿಸುವುದಕ್ಕೆ ಮೂಲಭೂತವಾದ ದ್ರವ್ಯವಸ್ತು ಜೇಡಿಮಣ್ಣು. ಕುಂಬಾರನು ಜೇಡಿಮಣ್ಣನ್ನು ತಂದು, ಗಡಿಗೆಯನ್ನು

ನಿರ್ಮಿಸುವನು. ಅದನ್ನು ಸುಡುವ ಬೇಸಿಗೆಯ ಬಿಸಿಲಿನಲ್ಲಿ ಇಟ್ಟು ಚೆನ್ನಾಗಿ ಒಣಗಿಸಿ, ಆದರಲ್ಲಿ ನೀರನ್ನು ತುಂಬಿದರೆ, ಸೋರಿಹೋಗುವುದು. ಮಳೆಯ ನೀರು ಮೇಘಗಳಿಂದ ಸುರಿಯುವುದು. ಇದಕ್ಕೆ ಘನರಸವೆಂದು ಕರೆದಿದ್ದಾರೆ. ಕೇವಲ ಬಿಸಿಲಿನಲ್ಲಿ ಗಡಿಗೆಯನ್ನು ಒಣಗಿಸಿದರೆ, ಅದರಲ್ಲಿ ಸೂಕ್ಷ್ಮ ರಂಧ್ರಗಳಿದ್ದು, ಅದರ ಮೂಲಕ ತುಂಬಿದ ನೀರು ಒಸರಿಹೋಗುವುದು. ಹಸೀಗಡಿಗೆಯಲ್ಲಿ ನೀರನ್ನು ತುಂಬಿದ ದೃಷ್ಟಾಂತ.

ಅದೇ ಗಡಿಗೆಯನ್ನು ಬೆಂಕಿಯಲ್ಲಿ ಚೆನ್ನಾಗಿ ಸುಡುವುದರಿಂದ, ಹಸೀ ಮಣ್ಣು ಗಟ್ಟಿಯಾಗಿ, ನೀರು ಸೋರುವುದಿಲ್ಲ. ಅದರಂತೆಯೇ, ಶ್ರೀಪರಮಾತ್ಮನೇ ಜೀವಾಂತರ್ಯಾಮಿಯಾಗಿದ್ದು, ಶರೀರಗತ ಸಕಲೇಂದ್ರಿಯಗಳಲ್ಲಿ ವ್ಯಾಪ್ತನಾಗಿದ್ದು, ತಾನೇ ಮಾಡಿ ಮಾಡಿಸುತ್ತಿರುವನು. ಶ್ರೀಹರಿಯ ಬಿಂಬ ಕ್ರಿಯಾರೂಪವಾದ ವ್ಯಾಪಾರವಿಶೇಷಗಳನ್ನು ಅರಿಯದೇ, ದೇಹಗತ ಜೀವನು ಸಕಲಕ್ರಿಯೆಗಳನ್ನೂ ತಾನೇ ಸ್ವತಂತ್ರನಾಗಿ ಮಾಡುತ್ತಿದ್ದೇನೆಂದು ತಿಳಿದರೆ, ಅವನು ದೇಹದ ದ್ವಾರಾ ಮಾಡುವ ಉಪವಾಸಾದಿ ವ್ರತ ನಿಯಮಗಳೇನು, ತೀರ್ಥಕ್ಷೇತ್ರಾದಿ ಸಂದರ್ಶನಗಳೇನು, ಇತ್ಯಾದಿ ಸತ್ಕಾರ್ಯಗಳೆಲ್ಲವೂ ಹಸೀಗಡಿಗೆಯಲ್ಲಿ ತುಂಬಿದ ನೀರಿನಂತೆ ಸೋರಿಹೋಗುವುವು. ದೇಹಾದಿಷ್ಠಾನದಲ್ಲಿ ನಡೆಯುವ ಸತ್ಕಾರ್ಯಗಳು ಗಡಿಗೆಯಲ್ಲಿ ತುಂಬಿದ ಘನೋದಕ ಸದೃಶ. ಅಹಂಕರ್ತೃತ್ವಾಭಿಮಾನವುಳ್ಳ ಮಾನವನು ಪಶುಸದೃಶನಾದ ಅಜ್ಞಾನಿಯು. ಪಶುಪನರನೇನು. ಸರ್ವತಂತ್ರ ಸ್ವತಂತ್ರನಾದ ಶ್ರೀಹರಿಯ ವ್ಯಾಪಾರವನ್ನು ಅರಿಯದ, ಮಾನವನ ಅಹಂಕರ್ತೃತ್ವಾಭಿಮಾನವಾದ ಅಜ್ಞಾನವೇ ಅಗ್ನಿಸಂಸ್ಕಾರವಿಲ್ಲದ ಹಸೀಗಡಿಗೆಯ ಸದೃಶ. ಸರ್ವತಂತ್ರ ಸ್ವತಂತ್ರನಾದ ಸರ್ವೇಶನ ಜ್ಞಾನವು ಅಗ್ನಿಸದೃಶ. ಹಸೀಗಡಿಗೆಯನ್ನು ಅಗ್ನಿಯಲ್ಲಿ ಸುಟ್ಟಾಗ, ಅದು ಫಲಪ್ರದವಾಗುವುದು. ಅಂತೆಯೇ, ಬಿಂಬ ಕ್ರಿಯಾಭಾವವನ್ನರಿತ ಮಾನವನ ಸತ್ಕಾರ್ಯಗಳೆಲ್ಲವೂ ಫಲಪ್ರದವಾಗುವುವು. ಇಲ್ಲದಿದ್ದರೆ, ಅವು ಸತ್ಕರ್ಮಗಳಾದರೂ, ಕೇವಲ ದೇಹಾಯಾಸವನ್ನುಂಟುಮಾಡುವುವು. ಸೋರುವ ನೀರಿನಂತೆ ನಿಷ್ಫಲವಾಗಿ ವ್ಯರ್ಥವಾಗಿ ಹೋಗುವುವು–ಎಂಬುದೇ ಪ್ರಸಕ್ತಪದ್ಯದ ತಾತ್ಪರ್ಯಾರ್ಥವು ॥೧೭॥

## ಪದ್ಯ—೧೮

**ಮೂಲ :—**

**ಎರಡು ದೀಕ್ಷೆಗಳಿಹವು ಬಾಹ್ಯಾಂ ।**
**ತರವೆನಿಪ ನಾಮದಲಿ ಬುಧರಿಂ ।**
**ದರಿತು ದೀಕ್ಷಿತನಾಗು ಧೀರ್ಘದ್ವೇಷಗಳ ಬಿಟ್ಟು ॥**
**ಹರಿಯೆ ಸರ್ವೋತ್ತಮ ಕ್ಷರಾಕ್ಷರ ।**
**ಪುರುಷಪೂಜಿತಪಾದ ಜನ್ಮಾ ।**
**ದ್ಯರವಿದೂರ ಸುಖಾತ್ಮ ಸರ್ವಗನೆಂದು ಸ್ಮರಿಸುತಿರು ॥**
**॥೧೮॥**

**ಅವತರಣಿಕೆ :—**

ಬಾಹ್ಯ ಮತ್ತು ಅಂತರ ಎಂಬ ಎರಡು ಪ್ರಕಾರವಾದ ದೀಕ್ಷೆಗಳಿವೆ-ಎಂದು ತಿಳಿಸುತ್ತಾ, ಸಕಲದೋಷವಿದೂರನಾದ ಶ್ರೀಹರಿಯೇ ಸರ್ವೋತ್ತಮನೆಂದು ಸ್ಮರಿಸುತ್ತಿರಬೇಕೆಂದು ಹೇಳುತ್ತಾರೆ. ॥೧೮॥

**ಪ್ರತಿಪದಾರ್ಥ :—**

**ಬಾಹ್ಯ** = ಸರ್ವರ ದೃಷ್ಟಿಗೆ ಹೊರಗೆ ಕಾಣಿಸುತ್ತಿರುವ, **ಅಂತರವು** = ಗೂಢವಾಗಿ ಅಂತರ್ಮುಖವಾಗಿರುವ, **ಎನಿಪ** = ಎಂದು ಕರೆಯಲ್ಪಡುವ, **ನಾಮದಲಿ** = ಹೆಸರಿನಿಂದ, **ಎರಡು ದೀಕ್ಷೆಗಳಿಹವು** = ಎರಡು ಪ್ರಕಾರವಾದ ದೀಕ್ಷೆಗಳಿರುವುವು. **ಬುಧರಿಂದ** = ಈ ಉಭಯವಿಧವಾದ ದೀಕ್ಷೆಗಳನ್ನು ಜ್ಞಾನಿಗಳಿಂದ, **ಅರಿತು** = ಉಪದೇಶ ದ್ವಾರಾ ತಿಳಿದು, **ದೀರ್ಘದ್ವೇಷಗಳ ಬಿಟ್ಟು** = ವಿಷ್ಣು ದ್ವೇಷ. ವೈಷ್ಣವದ್ವೇಷಗಳನ್ನು ತ್ಯಜಿಸಿ, **ಹರಿಯೆ** = ಸರ್ವಪಾಪಪರಿಹಾರಕ

ನಾದ ಶ್ರೀಮನ್ನಾರಾಯಣನೇ, **ಸರ್ವೋತ್ತಮ** = ಸರ್ವ ವಿಧಗಳಲ್ಲಿಯೂ ಉತ್ತಮೋತ್ತಮನು, **ಕ್ಷರ** = ರಮಾವ್ಯತಿರಿಕ್ತ ಬ್ರಹ್ಮಾದಿ ದೇವತಾ ವರ್ಗದಿಂದಲೂ, **ಅಕ್ಷರ** = ನಿತ್ಯಮುಕ್ತಳೂ, ನಿರ್ವಿಕಾರಳೂ ಆದ ಅಕ್ಷರನಾಮಕಳಾದ ಶ್ರೀಲಕ್ಷ್ಮೀದೇವಿಯಿಂದಲೂ, **ಪುರುಷಪೂಜಿತ ಪಾದ** = ಪೂಜೆ ಮಾಡಿಸಿಕೊಳ್ಳಲ್ಪಟ್ಟ ಚರಣಾರವಿಂದಗಳುಳ್ಳ ಪುರುಷ ನಾಮಕ ಶ್ರೀಪರಮಾತ್ಮನು, **ಜನ್ಮಾದಿ** = ಜನನ ಮರಣಗಳಿಂದ, **ಅರ ವಿದೂರ** = ಸಮಸ್ತ ದೋಷಗಳಿಂದ ದೂರನಾದವನೆಂತಲೂ, **ಸುಖಾತ್ಮ** = ಅಪ್ರಾಕೃತ ಜ್ಞಾನ ಆನಂದಾದಿಗಳೇ ಸ್ವರೂಪವುಳ್ಳವನೆಂತಲೂ (ನಿತ್ಯಾನಂದ ಸ್ವರೂಪನೆಂದು). **ಸರ್ವಗನು** = ಸರ್ವತ್ರವ್ಯಾಪ್ತನು, **ಎಂದು** = ಈ ರೀತಿ ತಿಳಿದು, **ಸ್ಮರಿಸುತಿರು** = ಮಾನಸಿಕವಾಗಿ ಚಿಂತಿಸುತ್ತಿರು ॥೧೮॥

# ವ್ಯಾಖ್ಯಾನಗಳು

## ೧. ಶ್ರೀ ಸಂಕರ್ಷಣಒಡೆಯ ವ್ಯಾಖ್ಯಾನ

ಅನುಗ್ರಹ ಪಡೆಯಬೇಕಾದ ಅಧಿಕಾರಿಗಳಿಗೆ ದೀಕ್ಷಾದ್ವಯಗಳು ಇರಬೇಕಂತ ಹೇಳತಾರೆ.

ಬಹಿಃ, ಸರ್ವರ ದೃಷ್ಟಿಗೆ ಕಾಣತಾ ಇರತಕ್ಕ ದೀಕ್ಷಾ ಎಂತಲೂ, ಗೂಢವಾಗಿ ತನ್ನ ಮನಸ್ಸಿನಲ್ಲಿ ಇರತಕ್ಕ ದೀಕ್ಷಾ ಎಂತಲೂ ಎನತಕ್ಕ ಹೆಸರಿನಿಂದ ಎರಡು ವಿಧವಾದ ನೇಮಗಳು ಇರೋವಾಗಿ ಅವೆ. ಈ ಎರಡು ವಿಧವಾದ ದೀಕ್ಷಾ ಮಾಡತಕ್ಕ ಕರ್ಮವನ್ನ ಜ್ಞಾನಿಗಳಿಂದ ತಥಾ ಜ್ಞಾನೋಪದ್ವಾರಾ ಗುರುಗಳಿಂದ ಚಂದಾಗಿ ಅರಿತವನಾಗಿ ನೇಮದಿಂದ ಯುಕ್ತನಾಗು. ಬಾಹ್ಯದೀಕ್ಷಾ ಯಾವದೆಂದರೆ, ಶ್ರೀಮದಾಚಾರ್ಯರ ಸಚ್ಛಾಸ್ತ್ರಕ್ಕೆ ವಿರುದ್ಧವಾದ ಸೋಹಂ ಉಪಾಸಕವಾದ, ಇನ್ನೂ ಅನೇಕ ದುಶ್ಶಾಸ್ತ್ರ ಪ್ರವಚನಾಧಿಕಾರಿಗಳಾದ ತಪೋಯೋಗ್ಯರ ಸಹವಾಸಾದಿಗಳು, ವ್ರತಾನುಷ್ಠಾನಾದಿ ಕರ್ಮಗಳಿಗೆ

ವಿರುದ್ಧವಾದ ದುಷ್ಕರ್ಮಗಳು, ಸ್ನಾನ ನಾಮಧಾರಣಾದಿ ಸತ್ಕರ್ಮರಹಿತವಾದ ಅಶುಚಿಯಿಂದ ಯುಕ್ತರಾದವರ ಸಹವಾಸಾದಿಗಳು ಮಾಡದೆ ಬಿಟ್ಟು, ಅಂತರದೀಕ್ಷಾ ವಾಪದೆಂದರೆ, ಸೃಷ್ಟ್ಯಾದ್ಯಷ್ಟ ಕರ್ತೃತ್ವವುಳ್ಳ ಶ್ರೀನಾರಾಯಣ ದೇವರು ಬ್ರಹ್ಮಾದಿ ತೃಣಾಂತ ತ್ರಿವಿಧಜೀವರಾಪೇಕ್ಷಯಾ ಉತ್ತಮನೆಂತಲೂ, ಈ ಪರಮಾತ್ಮ ರಮಾಬ್ರಹ್ಮಾದಿಗಳಿಂದ ಪೂಜಾ ಮಾಡಿಸಿಕೊಳ್ಳಲ್ಪಟ್ಟ ಪಾದಗಳು ಉಳ್ಳವನೆಂತಲೂ, ಇನ್ನೂ ಶ್ರೀನಾರಾಯಣ ದೇವರು ಜನನಮರಣದೋಷದೂರನೆಂತಲೂ, ಜ್ಞಾನಾನಂದಾದಿಗಳೇ ಸ್ವರೂಪವಾಗಿ ಉಳ್ಳವನೆಂತಲೂ, ಸರ್ವಸ್ಥಳದಲ್ಲೂ ವ್ಯಾಪ್ತನೆಂತಲೂ, ಇನ್ನೂ ಶ್ರೀಭಾರತೀಶರಾದ ವಾಯುದೇವರು ಜೀವೋತ್ತಮರೆಂತಲೂ, ತಾರತಮ್ಯ ಪಂಚಭೇದ ಸತ್ಯವೆಂತಲೂ, ಅಹಂಜ್ಞಾನರಹಿತನಾಗಿ ಜ್ಞಾನ ಭಕುತಿ ವೈರಾಗ್ಯದಿಂದ ಯುಕ್ತನಾಗಿ, ವಿಷಯಾದಿಗಳಲ್ಲಿ ನಿಸ್ಪೃಹನಾಗಿ, ಹೃದಯಾಕಾಶದಲ್ಲಿ ವಾಸನಾಮಯ ಪ್ರತೀಕವನ್ನ ನಿಲ್ಲಿಸಿ, ಮಾನಸ ಪೂಜಾ ಮಾಡತಾ, ಶ್ರೀಹರಿಯ ಕರುಣಾರಸವನ್ನ ಪಾನಮಾಡತಾ, ತಾನು ಅಸ್ವತಂತ್ರ ಜ್ಞಾನವುಳ್ಳವನಾಗಿ **'ದಾರಾನ್ ಸುತಾನ್ ಪ್ರಿಯಾನ್ ಪ್ರಾಣಾನ್ ಪರಸ್ಮೈ ಸನ್ನಿವೇದಯೇತ್'** ಎಂತ ಅನುಸಂಧಾನಯುಕ್ತವಾದ ಜನ್ಮ ಸಾರ್ಥಕ್ಯ ಜ್ಞಾನವೇ ಅಂತರದೀಕ್ಷಾ ಎಂತ ಕರಸೋದಾಯಿತು. ಈ ಎರಡು ದೀಕ್ಷಾವುಳ್ಳ ಅಧಿಕಾರಿಗೆ ಶ್ರೀಪರಮಾತ್ಮನ ಅನುಗ್ರಹವಾಗುತ್ತದೇ ಹೊರ್ತು, ಅನ್ಯರಿಗೆ ಆಗೋದಿಲ್ಲ ಎಂತ ತಾತ್ಪರ್ಯ.

ಪರಮಾತ್ಮ ದೋಷದೂರ ಎಂತಲೂ, ಜೀವ ದೋಷಬದ್ಧ ಎಂತಲೂ ಉಕ್ತವಾಗಿ ಅದೆ. ಪರಮಾತ್ಮ ಚಿದಾನಂದ ಸ್ವರೂಪವುಳ್ಳವನು. ಜೀವನೂ ಚಿದಾನಂದ ಸ್ವರೂಪವುಳ್ಳವನೇ. ಉಭಯರೂ ಚಿದಾನಂದರಾದಮ್ಯಾಲೆ ಪರಮಾತ್ಮ ದೋಷದೂರ ಎಂತಲೂ, ಜೀವ ದೋಷಯುಕ್ತನೆಂತಲೂ ಹೇಳೋಣ ಹ್ಯಾಂಗೆ ಕೂಡತದೆ ಮತ್ತು ಕರ್ಮ ಎಂಬುದು ಜೀವ ಪರಮಾತ್ಮರು ಉಭಯರೂ ಸೇರಿ ಮಾಡಿದ ಕರ್ಮವು ಉಭಯರಿಗೂ ಲೇಪವಾಗಬೇಕು. ಜೀವಗೆ ಮಾತ್ರ ಲೇಪ ಹ್ಯಾಂಗೆ, ಪರಮಾತ್ಮಗೆ ಏಕೆ ಇಲ್ಲದೆ ಹೋಯಿತು ? ಉಭಯತ್ರರೂ ಚಿದಾನಂದಸ್ವರೂಪರೇವೇ, ಮತ್ತು

ಜೀವ ಅಸ್ವತಂತ್ರನಾದಕಡಿಯಿಂದ ಲೇಪ ಉಂಟು–ಎಂದರೆ, ದುರ್ಬಲನಾದ ಅಸ್ವತಂತ್ರನಾದ ಜೀವಗೆ, ಸ್ವತಂತ್ರನಾದ ಬಲಿಷ್ಠನಾದ ಪರಮಾತ್ಮ ದುಃಖಾದಿಗಳು ಉಣಸತಾನೆ ಎಂತ ಹೇಳಬೇಕು. ಏಕೆಂದರೆ, ಬಲಿಷ್ಠನಾದ ಪ್ರಯುಕ್ತ ಉಣಸತಾನೆ ಎಂತ ಹೇಳಬೇಕು. ಬಲಿಷ್ಠನಾದವ ದುರ್ಬಲನ ದುಃಖಬಡಿಸೋಣ ಸಾಮರ್ಥ್ಯವಿಶೇಷದಲ್ಲಿ ಸೇರಲಿಲ್ಲ. ತನ್ನ ಸಮಾನೀಕನ್ನ ತಾನು ದುಃಖಬಡಿಸಿದರೆ ಅವ ಸಾಮರ್ಥ್ಯವಂತ ಅಂತ ಕರಸತಾನೆ. ಆದ್ದರಿಂದ ಈ ಜೀವನ್ನ ದುಃಖಬಡಿಸೋಣ ಪರಮಾತ್ಮಗೆ ಸಾಮರ್ಥ್ಯದಲ್ಲಿ ಸೇರಲಿಲ್ಲ. ಪರಮಾತ್ಮನಲ್ಲಿ ದೋಷ ಪ್ರಾಪ್ತವಾಗತದೆ. ಮತ್ತು ಜೀವನೂ ನಿತ್ಯ. ಪರಮಾತ್ಮನೂ ನಿತ್ಯ. ಉಭಯರೂ ಚಿದಾನಂದರು. ಆದ್ದರಿಂದ ನಿತ್ಯತ್ವದಲ್ಲಿ ಸಾಮ್ಯ ಬರೋದಾಯಿತು. ಪರಮಾತ್ಮ ಅಸದೃಶವಸ್ತು ಆಗಲಿಲ್ಲ. ನಿರ್ದೋಷವಸ್ತೂನೂ ಆಗಲಿಲ್ಲ – ಎಂತ ಆಕ್ಷೇಪ ಬಂದರೆ ಸಮಾಧಾನಾ — ಪರಮಾತ್ಮ ದೋಷದೂರ, ಜೀವ ದೋಷಯುಕ್ತ. ಹ್ಯಾಗೆಂದರೆ ತೃಣಜೀವ ಆರಂಭಮಾಡಿ ಬ್ರಹ್ಮಾಂತವರಿಗೂ ಜೀವರೇನು, ಅವರಿಗೆ ಸುತ್ತ ಕಟ್ಟಲ್ಪಟ್ಟ ಅನಾದಿಲಿಂಗಶರೀರವೇನು, ತದ್ಗತ ಅನಾದಿ ಕರ್ಮವೇನು ಇವು ಈಶ್ವರನಿಂದ ರಚಿತವಲ್ಲ. ಅವರವರಿಗೆ ಅನಾದಿಯಿಂದ ಇದ್ದದ್ದೇ ಸರಿ. ಜೀವನ ಸ್ವರೂಪಕ್ಕೇ ಅನ್ಯಥಾವಾದ ಪೂರ್ವೋಕ್ತದೋಷ ದಿಂದ ಜೀವ ಕಟ್ಟಿಸಿಕೊಳ್ಳಲ್ಪಟ್ಟಿದ್ದಾನೆ. ಆದ್ದರಿಂದ ಜೀವ ಅನಾದಿಯಿಂದ ದೋಷಯುಕ್ತನಾದ, ದೋಷಬದ್ಧನಾದ ಪ್ರಯುಕ್ತ, ಇಂಥಾ ದೋಷ ಪರಮಾತ್ಮಗೆ ಅನಾದಿಯಿಂದ ಇಲ್ಲವಾದ ಕಡಿಯಿಂದ ಪರಮಾತ್ಮ ನಿರ್ದೋಷಿ ಎಂತಲೂ, ಜೀವ ದೋಷಿ-ಎಂತಲೂ ಕರಸಿದವರಾದರು.

**ಆಕ್ಷೇಪ :–** ಲಿಂಗದೇಹಾಖ್ಯದೋಷ ಇರೋವರಿಗೂ ಜೀವ ದೋಷಿಯೇ ಖರೆ. ಪರಮಾತ್ಮನಂತೆ ನಿರ್ದೋಷಿ ಆಗಬ್ಯಾಡ. ದೋಷ ವೆನತಕ್ಕ ಲಿಂಗದೇಹ, ತತ್ಕರ್ಮ ಭಂಗವಾದಮ್ಯಾಲೆ ನಿರ್ದೋಷಿ ಎಂತ ಕರಸ ತಾನೆ. ಆಗ್ಗೆ ಪರಮಾತ್ಮಗೆ ಸದೃಶವಾದ ನಿರ್ದೋಷತ್ವ ಉಂಟಾಗಲಿ– ಎಂದರೆ ಆಗ್ಗೆ ನಿರ್ದೋಷಿ ಆಗಲಾರ. ದಾವಾಗ್ಯೂ ದೋಷಯುಕ್ತನೇವೇ. ಹ್ಯಾಂಗೆಂದರೆ, ಜೀವನು ಪರಮಾತ್ಮನಂತೆ ನಿರ್ದೋಷಸ್ವರೂಪ ಉಳ್ಳವನಲ್ಲ.

ಯದ್ಯಪಿ ವಿವಕ್ಷಾಭೇದದಿಂದ ಜೀವ ನಿರ್ದೋಷಿ ಎಂಬುದು ಖರೇವೇ. ಆದರೂ ಪರಮಾತ್ಮನ ನಿರ್ದೋಷ ಸ್ವರೂಪಕ್ಕೂ, ಜೀವನ ನಿರ್ದೋಷ ಸ್ವರೂಪಕ್ಕೂ ತಾರತಮ್ಯ ಉಂಟು. ಜೀವನಾದವ ವಿವಕ್ಷಾಭೇದದಿಂದ ನಿರ್ದೋಷಸ್ವರೂಪವುಳ್ಳವ. ಆ ವಿವಕ್ಷಾಭೇದ ಎಂಥಾದ್ದೆಂದರೆ, ಪರ ಮಾತ್ಮನಂತೆ ಜೀವ ನಿರ್ದೋಷಿಯಾಗಿದ್ದಲ್ಲಿ ದೋಷಯುಕ್ತವಾದ ಲಿಂಗದೇಹ ದಿಂದಲೂ, ತದ್ಗತದೋಷಯುಕ್ತವಾದ ಅನಾದಿಕರ್ಮದಿಂದಲೂ ವಶನಾಗಿ ಇರಲಾರ. ಯದ್ಯಪಿ ನಿರ್ದೋಷಸ್ವರೂಪವೇ ಆದರೂ, ಇಂಥಾ ಒಂದು ದೋಷ ಇರೋದಾಗಿ ಅದೆ. ಇಂಥಾದ್ದು ಪರಮಾತ್ಮಗೆ ಇಲ್ಲವಾದ ಕಡಿ ಯಿಂದ, ಜೀವನ ನಿರ್ದೋಷತ್ವಕ್ಕೆ ಪರಮಾತ್ಮನ ನಿರ್ದೋಷತ್ವಕ್ಕೆ ವೈಲಕ್ಷಣ್ಯ ವದೆ. ಆದ್ದರಿಂದ ಲಿಂಗಭಂಗಾನಂತರದಲ್ಲಿ ಕೂಡಾ ಜೀವ ಪರಮಾತ್ಮಗೆ ಸಾಮ್ಯವಾದ ನಿರ್ದೋಷಿ ಆಗೋದಿಲ್ಲ.

ಜೀವನಲ್ಲಿ ಜೀವಶಬ್ದವಾಚ್ಯನಾಗಿನ್ನೂ, ಕರ್ಮದಲ್ಲಿ ಕರ್ಮಶಬ್ದವಾಚ್ಯ ನಾಗಿನ್ನೂ, ಲಿಂಗದಲ್ಲಿ ಲಿಂಗಶಬ್ದವಾಚ್ಯನಾಗಿನ್ನೂ ಅದರದರಲ್ಲಿ ಪರಮಾತ್ಮ ತನ್ನ ಅಭಿನ್ನವಾದ ರೂಪಗಳಿಂದ ತದಾಕಾರನಾಗಿ ವ್ಯಾಪ್ತನಾಗಿ ಇರೋವ ನಾಗಿದ್ದಾನೆ. ಕರ್ಮಾಂತರ್ಗತ, ಜೀವಾಂತರ್ಗತ, ಲಿಂಗಾಂತರ್ಗತ ಭಗ ದ್ರೂಪಗಳಿಗೆ ಪರಸ್ಪರ ಅಭೇದವು. ಜೀವಭುಕ್ತ ಕರ್ಮದಲ್ಲಿ. ಪರಮಾತ್ಮನ ಸ್ವರೂಪಭೂತಕರ್ಮ ಏವಂ ರೀತಿಯಾಗಿ ಬಿಂಬರೂಪಿಯಾಗಿ ಪರಮಾತ್ಮ ಇರೋವನಾಗಿದ್ದಾನೆ. ಪರಮಾತ್ಮ ಉಣಸತಾನೆ ಅಂದರೆ, ತನ್ನ ಸ್ವಾಭಿನ್ನ ಕರ್ಮ ತಾನುಂಡು ಜೀವಗೆ ಜಡಕರ್ಮ ಭೋಜನ ಮಾಡಸತಾನೆ. ಮೋಕ್ಷದಲ್ಲಿ ಜೀವನ ಸ್ವರೂಪಭೂತಕರ್ಮ ಭೋಜನ ಮಾಡಿಸಿ ತದ್ಗತ ಸ್ವಾಖ್ಯಕರ್ಮ ತಾನೇ ಭೋಜನ ಮಾಡತಾನೆ. ಇದೇವೇ ಪರಮಾತ್ಮ ಉಂಡು ಉಣಿಸತಾನೆ– ಎಂಬುದರ ತಾತ್ಪರ್ಯ. ಬಿಂಬಕ್ರಿಯಾದ್ವಾರಾ ಪ್ರತಿಬಿಂಬಕ್ರಿಯಾ–ಎಂತ ತಿಳಿಯಬೇಕು. ಅಷ್ಟೇ ಹೊರ್ತು, ಜೀವಭುಕ್ತ. ಪರಮಾತ್ಮಗೆ ಭುಕ್ತವಿಲ್ಲ.

ಬಲಿಷ್ಠನಾದ ಪರಮಾತ್ಮ ದುರ್ಬಲನಾದ ಜೀವಗೆ ಪ್ರಾಕೃತಕರ್ಮ ಭೋಜನ ಮಾಡಿಸಿ ದುಃಖಬಡಿಸೋಣವೆಂಬುದು ಪರಮಾತ್ಮಗೆ ದೋಷ

ವಲ್ಲವೆ ಎಂದರೆ ದೋಷವಲ್ಲ. ಅನಾದಿಕರ್ಮಗ್ರಂಥಿ ಎಂಬುದು ಬಿಚ್ಚಬೇಕಾದರೆ ಜೀವ ಕಡಿಯಿಂದ ಬಿಚ್ಚಿಸಬೇಕು. ಬಹುಗಂಟುಗಳಿಂದ ಯುಕ್ತವಾಗಿ ಇರೋದಾಗಿದೆ. ಕರ್ಮಗ್ರಂಥಿಗಳು ಅನೇಕವಾದ ಕಡಿಯಿಂದ,ಜೀವನ ದ್ವಾರಾ ಒಂದೊಂದೇ ಬಿಂಬಕ್ರಿಯೊದ್ವಾರಾ ಬಿಚ್ಚಿಸೋವನಾಗತಾನೆ. ಆ ಬಿಚ್ಚೋಣ ಎಂಬುದು ಅನಾದಿಯಿಂದ ಜೀವನ ಕಡಿಯಿಂದ ಪರಮಾತ್ಮ ಬಿಚ್ಚಿಸತಕ್ಕದ್ದು-ಎಂತ ಸಿದ್ಧವು. ಆ ನೇಮವೂ ಈಶ್ವರನಿಂದ ರಚಿತವಲ್ಲ. ಅದೂ ಅನಾದಿ ಸಿದ್ಧವೇ. ಆದ್ದರಿಂದ, ಭೋಗರೂಪದಿಂದ ಕರ್ಮದ ಗ್ರಂಥಿಯನ್ನು ಜೀವನ ಕಡಿಯಿಂದ ಪರಮಾತ್ಮ ಬಿಚ್ಚಿಸೋವನಾಗತಾನೆ. ಅಷ್ಟೇ ಹೊರ್ತು, ಪರಮಾತ್ಮ ತಾನು ಬಲಿಷ್ಠನಾದ್ದರಿಂದ, ದುರ್ಬಲರನ್ನು ದುಃಖಬಡಿಸಬೇಕೆಂದು ಕರ್ಮಭೋಗ ಕೊಟ್ಟವನಲ್ಲ. ಮತ್ತು ಬಿಂಬಕ್ರಿಯಾದ್ವಾರಾ, ಜೀವನಕ್ರಿಯಾ ದ್ವಾರಾ ಜೀವನ ಕರ್ಮಗಂಟುಗಳನ್ನು ಜೀವನ ಕಡಿಯಿಂದ ಬಿಚ್ಚಿಸಿ, ಮೋಕ್ಷವನ್ನು ಕೊಡತಾನಾದ ಕಡಿಯಿಂದ ನಿರ್ದೋಷತ್ವವೂ, ದಯಾಳುತ್ವವೂ ಪರಮಾತ್ಮಗೆ ಸಿದ್ಧಿಸೋದಾಯಿತು.

ಜೀವ ನಿತ್ಯ, ಪರಮಾತ್ಮ ನಿತ್ಯ-ಎಂತ ನಿತ್ಯತ್ವಕ್ಕೆ ಸಾಮ್ಯ ಬಂತಲ್ಲಾ-ಎಂದರೆ, ಬರಲಿಲ್ಲ. ಜೀವಾಂತರ್ಗತನಾದ ಪರಮಾತ್ಮ ಜೀವನು ಬಿಟ್ಟು ಪ್ರತ್ಯೇಕನಾಗದರೆ,ಜೀವನ ನಿತ್ಯತ್ವಕ್ಕೆ ಹಾನಿ ಬರೋದಾಗತದೆ. ಆದ್ದರಿಂದ ಜೀವಾಂತರ್ಗತನಾಗಿ ಇರತಕ್ಕ ಪರಮಾತ್ಮ ಜೀವನ್ನ ಬಿಟ್ಟು ವಿಯೋಗನಾಗದೆ ಅವಿಯೋಗನಾಗಿ ಇರೋದಕ್ಕೆ ಇದು ಕಾರಣವು. ಆದ್ದರಿಂದ ಜೀವನ ನಿತ್ಯತ್ವ ಈಶಾಧೀನವಾದ್ದರಿಂದ ಪರಮಾತ್ಮನ ನಿತ್ಯತ್ವಕ್ಕೂ ಜೀವನ ನಿತ್ಯತ್ವಕ್ಕೂ ಸದೃಶವಾಗಲಾರದು. ಜೀವನ ನಿತ್ಯತ್ವಾಪೇಕ್ಷಯಾ ಪರಮಾತ್ಮನ ನಿತ್ಯತ್ವ ಅಧಿಕವಾದದ್ದು-ಎಂತ ಈ ರೀತ್ಯಾ ತಿಳಿಯಬೇಕು. ಜೀವನ್ನ ಬಿಟ್ಟು ಇರತಕ್ಕ ಪರಮಾತ್ಮನ ರೂಪಗಳು ಅನೇಕವವೆ. ಪರಮಾತ್ಮನ್ನ ಬಿಟ್ಟು ಇರತಕ್ಕ ಜೀವರುಗಳು ದಾರೂ ಇಲ್ಲ. ಆದ್ದರಿಂದ ಜೀವ ಪರಮಾತ್ಮರ ನಿತ್ಯತ್ವದಲ್ಲಿ ಪರಮಾತ್ಮನ ನಿತ್ಯತ್ವವೇ ಶ್ರೇಷ್ಠವಾಯಿತು. ಪರಮಾತ್ಮ ನಿತ್ಯತ್ವ ಎಂಬುದು ಇನ್ನೊಂದರಿಂದ ಸ್ಥಾಪನವಾದದ್ದಲ್ಲ. ಸ್ವತಃ ವಾಗಿ ಸ್ವಾಧೀನನಿತ್ಯತ್ವ ಉಳ್ಳದ್ದು. ತದ್ವತ್, ಜೀವನ ಚಿದಾನಂದ

ವೆಂಬುದು ಪರಮಾತ್ಮನ ಚಿದಾನಂದದಿಂದ ಸ್ಥಾಪಿತವಾಗಬೇಕೇ ಹೊರತು, ತದ್ವ್ಯತಿರಿಕ್ತ ಕೂಡೋದಿಲ್ಲ. ಆದ್ದರಿಂದ ಜೀವನ ಚಿದಾನಂದತ್ವಕ್ಕಿಂತಲೂ ಪರಮಾತ್ಮನ ಚಿದಾನಂದತ್ವ ಅತ್ಯಂತ ಶ್ರೇಷ್ಠ. ತದ್ವತ್ ಜೀವನ ಸ್ವರೂಪ ಭೂತಗಳು ಯಾವತ್ತೂ ಪರಮಾತ್ಮನ ಸ್ವರೂಪಭೂತಗಳಪೇಕ್ಷಯಾ ದುರ್ಬಲ ಗಳಾದವು. ಅವರತ್ವ ಉಳ್ಳವು ಎಂತ ತಿಳಿಯಬೇಕು. ಈ ಪ್ರಕಾರ ಜೀವ ಪರಮಾತ್ಮರಿಗೆ ಸರ್ವವಿಷಯಗಳಿಂದಲೂ ನ್ಯೂನಾಧಿಕ್ಯಗಳು ತಿಳಿಯಬೇಕು. ಇತ್ಯಾದಿ ಕಾರಣಗಳಿಂದ ಪರಮಾತ್ಮ ಸ್ವತಂತ್ರ, ಸರ್ವೋತ್ತಮ–ಎಂತ ಕರ ಸಿದ. ಜೀವನಾದರೂ ಅಸ್ವತಂತ್ರ, ಅವರ ಎಂತ–ಕರಸೋವನಾದ. ಈ ಕ್ರಮ ತೃಣಜೀವರಿಂದ ಆರಂಭ ಮಾಡಿ ಲಕ್ಷ್ಮ್ಯಂತವರಿಗೂ ತಾರತಮ್ಯಾನು ಸಾರ ಇದೇ ರೀತಿಯಿಂದ ತಿಳಿಯಬೇಕು. ಆದ್ದರಿಂದ ಪರಮಾತ್ಮ ನಿರ್ದೋಷಿ, ಜೀವ ದೋಷಿ–ಎಂತ ಕರಸತಾನೆ. ಜೀವರಲ್ಲಿ ಇರತಕ್ಕ ಅಸ್ವಾತಂತ್ರ್ಯಾದಿ ದೋಷಗಳು ಪರಮಾತ್ಮನಲ್ಲಿ ಇಲ್ಲ. ಪರಮಾತ್ಮನಲ್ಲಿ ಇರತಕ್ಕ ಸ್ವಾಧೀನಸ್ವಾತಂತ್ರ್ಯಾದಿಗಳು ನಿರ್ದೋಷಗಳು. ಇಂಥಾದ್ದು ಜೀವನಲ್ಲಿ ಇಲ್ಲವಾದ್ದರಿಂದಲೇ ಜೀವ ದೋಷಿ, ಪರಮಾತ್ಮ ನಿರ್ದೋಷಿ ಎಂಬುದು ಸಿದ್ಧವು. ಈ ಪ್ರಕಾರ ತ್ರಿವಿಧಜೀವರಲ್ಲೀನೂ ಅವರವರ ಸ್ವರೂಪಯೋಗ್ಯತಾನುಸಾರ ಅನ್ವಯಮಾಡಿಕೋಬೇಕು.

**ಪ್ರಮಾಣ :–** ದೇಹನಾಶವತ್ ದೇಹಿನಾಶೇ ಪುರುಷಾರ್ಥಾನುಪ ಪತ್ತಿರಿತಿ । ತತ್ರಾಹ । ದೇಹೇತಿ । ದೇಹಿ ದೇಹಿನೋಽರ್ಥಾರ್ಥ್ಯೇ ದೇಹೀ ಶಾಶ್ವತಃ । ಅಭಿಮಾನಮಂತರೇಣ ಜನ್ಮನಾಶರಹಿತಃ । ತಥಾ ಕಾಲತ್ರಯೇ ಪ್ಯೇಕಪ್ರಕಾರಃ । ಕಥಮ್ಮಿವ ಅರ್ಥ ಇವ । ಮೋಕ್ಷಲಕ್ಷಣ ಪುರುಷಾರ್ಥ ಇವ । ತರ್ಹಿ ಬ್ರಹ್ಮ ಸಾಮ್ಯಮಾಯಾತಮಿತ್ಯಸ್ಯಾಪ್ಯೇತ ದೇವೋತ್ತರಂ । ದೇಹ್ಯರ್ಥಃ ಜೀವಾಖ್ಯ ಪದಾರ್ಥಃ ಅಶಾಶ್ವತ ಏವ ಅನಿತ್ಯ ಏವ ।

ದ್ರವ್ಯಂ ಕರ್ಮ ಚ ಕಾಲಶ್ಚ ಸ್ವಭಾವೋ ಜೀವ ಏವ ಚ ।
ಯದನುಗ್ರಹಃ ಸಂತಿ ನ ಸಂತಿ ಯದುಪೇಕ್ಷಯಾ ॥

ಇತ್ಯಾದೇಃ ಜೀವನಿತ್ಯತ್ವಸ್ಯ ಶ್ರೀನಾರಾಯಣಾಧೀನತ್ವೇನ ಉಪಚರಿತತ್ವಾತ್ । ಹರೇರೇವ

ನಿರುಪಚರಿತ ನಿತ್ಯತ್ವಂ । ಅತಃ ತಯೋರ್ನಸಾಮ್ಯಮಿತ್ಯರ್ಥಃ ।

ಪೂರ್ವೋಕ್ತಗಳು ಯಾವತ್ತೂ ಪರಮಾತ್ಮ ಅನುಗ್ರಹ ಮಾಡಿ, ವಾಸ ಮಾಡಿಕೊಂಡು ಇದ್ದರೇ ಎಲ್ಲಾನೂ ಇರ್ತದೆ. ಪರಮಾತ್ಮ ವಿಯೋಗನಾದರೆ ಎಲ್ಲಾನೂ ನಾಶವಾಗತದೆ. ಆದ್ದರಿಂದ ನಾಶವಾಗಬಾರದು ಎಂತ ಅವಿಯೋಗನಾಗಿ ಜೀವನಲ್ಲಿ ಇನ್ನೂ ಅನೇಕ ನಾಶರಹಿತವಾದ ಪದಾರ್ಥಗಳಲ್ಲಿ ವಾಸಮಾಡಿಕೊಂಡು ಇದ್ದಾನೆ. ಅತ ಏವ ಈ ಕಾರಣದಿಂದ ಜೀವಗೆ ನಿತ್ಯತ್ವ ಪ್ರಾಪ್ತವಾಯಿತು. ಜೀವ ಶಾಶ್ವತ. ಇವ ಶಾಶ್ವತನಾದ ಪರಮಾತ್ಮನೋಪಾದಿಯಲ್ಲಿ ನಿತ್ಯ. ಇವ ನಿತ್ಯನಾಗಿ ಇರ್ತಾನೆ. ಏಕೆಂದರೆ, ಜೀವನ ನಿತ್ಯತ್ವಕ್ಕೆ ನಾರಾಯಣನ ಅಧೀನದಿಂದ ಉಪಚರಿತವಾಗೋಣದರ ದೆಸೆಯಿಂದ, ಜೀವ ನಿತ್ಯತ್ವದೋಪಾದಿಯಲ್ಲಿ ಇರ್ತಾನೆ. ಪರಮಾತ್ಮನಷ್ಟಂತೆ ನಿತ್ಯನಲ್ಲ. ಪರಮಾತ್ಮ ನಿರುಪಮಚರಿತ ನಿತ್ಯನಾದವನು. 'ಅತಃ ತಯೋರ್ನಸಾಮ್ಯಮಿತ್ಯರ್ಥಃ'. ಆದ್ದರಿಂದ ಜೀವ ಪರಮಾತ್ಮ ಉಭಯರಿಗೂ ಪರಸ್ಪರ ಸಾಮ್ಯ ಬರಲಿಲ್ಲ. ಜೀವ ಪರಮಾತ್ಮರಿಗೆ ಸರ್ವವಿಷಯದಿಂದಲೂ ಇಂಥಾ ಭೇದ ತಿಳಿಯಬೇಕು.

**ಪ್ರಮಾಣ :-** ದೇಹೇನ ದೇಹಿನೋ ರಾಜನ್ ದೇಹಾದ್ದೇಹೋ ಭಿಜಾಯತೇ ।
ಬೀಜಾದೇವ ಯಥಾ ಬೀಜಂ ದೇಹಾದರ್ಥವ ಶಾಶ್ವತಃ ॥

ಅಸ್ಯ ವ್ಯಾಖ್ಯಾನಂ ಪಿತೃದೇಹೇನ ಸಂಯುಕ್ತಾತ್ ಮಾತೃದೇಹಾತ್ ದೇಹಿನಃ ಉತ್ಪದ್ಯಮಾನಸ್ಯ ಪುತ್ರಲಕ್ಷಣಸ್ಯ ಜೀವಸ್ಯ ದೇಹಃ ಅಭಿಜಾಯತೇ। ಅತ್ರ ದೃಷ್ಟಾಂತಮಾಹ ಬೀಜಾದಿತಿ । ಬೀಜಾತ್ ಘನಸಾದಿ ಲಕ್ಷಣಾತ್ । ಜಲತೇಜ ಆದಿಲಕ್ಷಣಸಾಮಗ್ರೀ ಸಂವೃತಾತ್ ಅಂಕುರಾಖ್ಯಂ ವೃಕ್ಷಬೀಜ

ಶರೀರಂ ತೇನ ಸಹ ಜಾಯತೇ ॥ ತಸ್ಮಾತ್ ಯುಕ್ತಜಲಾದ್ಯಾತ್ ಘನಸಾತ್ ಘನಸಾದಿ ಬೀಜಾಂತರಮುತ್ಪದ್ಯತೇ । ತಸ್ಮಾಚ್ಚೇತಿ ಕಾರ್ಯಪರಂಪರಾ ನ ಚೈವ ಮನವಸ್ಥಾ । ಮೂಲಕಾರ್ಯಸ್ಯ ಪ್ರಕೃತ್ಯಾತ್ಮಕತ್ವಾತ್ । ತಥಾಪಿ ಮಾತೃವಿಕಾರ ಶುಕ್ಲಶೋಣಿತ ಸಂಬಂಧೇ ಕಲಿಕಾಲಾದಿಲಕ್ಷಣಕಾರ್ಯಂ ಅಭಿಮಾನಜೀವೇನ ಸಹಜಾಯತೇ । ತಸ್ಮಾತ್ ಪರಿಣತಾವಯವಾತ್ ಸ್ತ್ರೀ ಪುರುಷಭೂತಾತ್ ರೇತ ಆದಿಕ್ರಮೇಣ ಕಾರ್ಯಾಂತರಂ ಜಾಯತ ಇತಿ । ಅನೇನ ಕ್ರಮೇಣ ಭಗವಾನ್ ಭೂತೈಃ ಸೃಷ್ಟಿಂ ಕರೋತಿ । ಸ್ಥಿತಿ ಸಂಹಾರಯೋರೇವಮೂಹ್ಯಂ । ತದದೃಷ್ಟೇಶ್ವರವಶಾತ್ ತಸ್ಮಾತ್ ಸರ್ವಾಣಿ ಕಾರ್ಯಾಣಿ ಕಾನಿಚಿತ್ ಆಹಾತ್ಯ ಆತ್ಮನಾ । ನಾರಾಯಣಾಯ । ತಾನಿ ಕಾನಿಚಿತ್ ಪರಂಪರಯಾ ತದಧೀನಾನಿ । ತತ್ರಾಪಿ ವಿಶೇಷಸ್ತು ಪ್ರಮಾಣಾದವಗಂತವ್ಯಃ । ನನು ದೇಹ ನಾಶವತ್ ದೇಹಿ ನಾಶೇ ಪುರುಷಾರ್ಥಾನುಪಪತ್ತಿಃ । ತತ್ರಾಹ । ದೇಹೀತಿ । ದೇಹ ದೇಹಿನೋರ್ಮಧ್ಯೇ ದೇಹೀ ಶಾಶ್ವತಃ ॥ ಅವಶಿಷ್ಟ ಪ್ರಮಾಣಭಾಗ ಮ್ಯಾಲೆ ಉದಹರಿಸಿದೆ-**ಭಾಗವತ** ವಚನ.

## ಜೀವಬದ್ಧ ಎಂಬುದಕ್ಕೆ ಪ್ರಮಾಣ

ಜ್ಞಾನೇಂದ್ರಿಯೈಶ್ಚ ಮನಸಾ ಸತ್ತ್ವಂ ಬಧ್ನಾತಿ ಪೂರುಷಂ । ರಜಃ ಕರ್ಮೇಂದ್ರಿಯೈರ್ನಿತ್ಯಂ ಶರೀರೇಣ ತಮಸ್ತಥಾ । ಅಂತರಂ ಯತ್ತು ಕರ್ತೃತ್ವಂ ತತ್ಸರ್ವೇ ನಾಭಿ ಮನ್ಯತೇ । ರಜಸಾತ್ವಭಿಮನ್ಯೇತ। ಕರಣೈಃ ಕರ್ಮ ಕಾರಣೈಃ । ಶಾರೀರಂ ವೇದನಾದ್ಯಂ ತು ತಮಸಾಹ್ಯಭಿಮನ್ಯತೇ ।

ಅಕರ್ತಾ ಕರಣೈರ್ಹೀನಃ ಶರೀರೇಣ ವಿವರ್ಜಿತಃ ।
ನಿತ್ಯಜ್ಞಾನಸ್ವರೂಪೋಸೌ ಗುಣೈರೇವಾಭಿಮನ್ಯತೇ ॥
ಏವಂ ಜೀವಃ ಪರೇಣೈವ ಪ್ರೇರಿತಸ್ಸಂಸೃತಂ ವ್ರಜೇತ್ ॥
ನ ಪರಸ್ಸಂಸೃತಿಂ ಕ್ವಾಪಿ ಸ್ವಾತಂತ್ರ್ಯದಧಿಕತ್ವತಃ ।
ಏವಂ ಜೀವಪರೌ ಭಿನ್ನೌ ಕಿಮನ್ಯಚ್ಛ್ರೋತುಮಿಚ್ಛಸಿ ॥

**ಇತಿ ಪಾದ್ಮೇ । ಭಾಗವತತಾತ್ಪರ್ಯ-೨ನೇ ಅಧ್ಯಾಯ ॥**

ಈ ಪ್ರಮಾಣದಿಂದ ಜೀವ ಪರಮಾತ್ಮರಿಗೆ ಭೇದ ಎಂಬುದು ಸಿದ್ಧವು. ಆದ್ದರಿಂದ ಜೀವ ದೋಷಿ, ಪರಮಾತ್ಮ ನಿರ್ದೋಷಿ—ಎಂತ ತಿಳಿಯಬೇಕು. ||೧೮||

## ೨. ಭಾವಪ್ರಕಾಶಿಕೆ

ವೈಷ್ಣವರಿಗೆ ಮುಖ್ಯವಾದುದು ದೀಕ್ಷಾಸ್ವೀಕಾರವು. ವಿಷ್ಣುದೀಕ್ಷೆಯನ್ನು ಸ್ವೀಕರಿಸದವನು ವೈಷ್ಣವನಾಗುವುದಿಲ್ಲ. ವಿಷ್ಣುರಹಸ್ಯ ೭ನೆಯ ಅಧ್ಯಾಯದಲ್ಲಿ ಹೇಳಿರುವಂತೆ, ಲೋಕದಲ್ಲಿ ಅನ್ಯದೇವತೆಗಳನ್ನು ಉಪಾಸನೆ ಮಾಡುತ್ತಾ ಆ ದೀಕ್ಷೆಗಳನ್ನು ಸ್ವೀಕರಿಸುವವರು ಅನೇಕರುಂಟು. ಶೈವ ದೀಕ್ಷಾ ಮೊದಲಾದ ಎಲ್ಲಾ ದೀಕ್ಷೆಗಳಿಗಿಂತಲೂ ವಿಷ್ಣುದೀಕ್ಷೆಯು ಶ್ರೇಷ್ಠವಾದುದು. ಅದೇಕೆಂದರೆ ಬ್ರಹ್ಮಾದಿ ಸಕಲದೇವತೆಗಳಿಗೂ ವಿಷ್ಣುವು ಸ್ವಾಮಿಯಾಗಿರುವನು. ದೇವತೆಗಳಿಗೆಲ್ಲಾ ದೇವತೆ ಎಂದೆನಿಸುವನು. ಆದ್ದರಿಂದ ವಿಷ್ಣುದೀಕ್ಷೆಯು ಉತ್ತಮವಾದುದು. ಯಾವನಿಗೆ ವಿಷ್ಣುದೀಕ್ಷೆಯು ಇರುವುದೋ, ಆತನು ಸರ್ವಮಾನ್ಯನು. ಅವನನ್ನು ಯಾರಾದರೂ ಅವಮಾನ ಮಾಡಿದರೆ ವಿಷ್ಣುವನ್ನೇ ಅವಮಾನ ಮಾಡಿದಂತಾಗುವುದು. ನೀಚವರ್ಣನಾದರೂ ಯಾವನು ವಿಷ್ಣುದೀಕ್ಷೆ ಉಳ್ಳವನೋ ಅವನನ್ನು ಬಂಧುವಂತೆ ಭಾವಿಸಬೇಕು. ಅಂತಹವನಿಗೆ ನಮಸ್ಕಾರ ಮಾತ್ರ ಮಾಡಬಾರದು – ರಾಮಕೃಷ್ಣಾದಿ ಹೆಸರುಗಳಿಂದ ಅವನನ್ನು ಗೌರವಿಸಬೇಕು. ಉತ್ತಮ ಜಾತಿಯಾದ ಬ್ರಾಹ್ಮಣಕುಲದಲ್ಲಿ ಹುಟ್ಟಿ, ವೇದ ವೇದಾಂಗಗಳಲ್ಲಿ ಪಾರಂಗತನಾಗಿ, ಸದಾಚಾರಸಂಪನ್ನನಾಗಿದ್ದರೂ, ವಿಷ್ಣುದೀಕ್ಷೆಯನ್ನು ಸ್ವೀಕರಿಸದಿದ್ದರೆ, ಅವನನ್ನು ಚೋರನನ್ನು ಹೇಗೋ ಹಾಗೆ ಹೊರಗೆ ಹಾಕಬೇಕು. ಅವನಿಗೆ ಯಾವ ದಾನಾದಿಗಳನ್ನು ಕೊಟ್ಟರೂ ನಿಷ್ಫಲವೇ ಆಗುವುದು. ಯಾವನು ವೈಷ್ಣವದೀಕ್ಷೆ ಉಳ್ಳವನೋ ಅವನೇ ಸತ್ಪಾತ್ರನು. ಹವ್ಯಕವ್ಯಾದಿಗಳನ್ನು ಮಾಡುವಾಗ ಈತನಿಗೆ ಸ್ವಲ್ಪ ಕೊಟ್ಟರೂ, ಅದು ಅಕ್ಷಯವಾಗುವದು—ಎಂಬಿವೇ ಮೊದಲಾದ ವಾಕ್ಯಗಳಿಂದ ವಿಷ್ಣುದೀಕ್ಷೆಗೆ ಮಹಾಮಹಿಮೆಯನ್ನು ಹೇಳಿರುವರು. ಈ ವಿಷ್ಣುದೀಕ್ಷೆಯಲ್ಲಿ ಬಾಹ್ಯ

ದೀಕ್ಷೆಯೆಂತಲೂ, ಅಂತರದೀಕ್ಷೆಯೆಂತಲೂ ಎರಡು ಪ್ರಕಾರ, ಜ್ಞಾನಿಗಳಿಗೆ ಈ ಎರಡು ವಿಧ ದೀಕ್ಷೆಗಳೂ ಉಂಟು. ಅಜ್ಞಾನಿಗಳಿಗೆ ಅಂದರೆ ಸಣ್ಣ ಮಕ್ಕಳು ಮೊದಲಾದವರಿಗೆ ಬಾಹ್ಯದೀಕ್ಷೆಯು ಇದ್ದೇ ಇರಬೇಕು. ಇವುಗಳಲ್ಲಿ ಅಭ್ಯಂತರದೀಕ್ಷೆಯು ಯಾವುದೆಂದರೆ, ಪರಮಾತ್ಮನು ನನಗೆ ಸರ್ವೇಷ್ಟವನ್ನೂ ಕೊಡುವವನು, ಸಕಲವಾದ ಅನಿಷ್ಟಗಳನ್ನು ನಿವೃತ್ತಿ ಮಾಡುವವನು. ಪರಮಾತ್ಮನೊಬ್ಬನೇ ಸರ್ವೋತ್ತಮನು. ನಾನು ಯಾವಾಗಲೂ ಅವನ ಅಧೀನನು. ನನಗೆ ಅವನು ಸ್ವಾಮಿಯು ಎಂಬ ಜ್ಞಾನವು ನಿಶ್ಚಯವಾಗಿ (ಸಂಶಯವಿಲ್ಲದೆ) ಇರುವುದೇ ಅಭ್ಯಂತರ ದೀಕ್ಷೆಯು ಎಂದು ಹೇಳಿರುವರು. ಅದೇ ಅಭಿಪ್ರಾಯವನ್ನೇ ದಾಸರಾಯರು ಇಲ್ಲಿ ಹೇಳಿರುತ್ತಾರೆ. ಹರಿಯೇ ಸರ್ವೋತ್ತಮನು. ಪುರುಷರಾದ ಬ್ರಹ್ಮಾದಿಗಳಿಂದ ಪೂಜಿತಪಾದಕಮಲವುಳ್ಳವನು. ಜನನ ಮರಣಾದಿ ದೋಷವಿಲ್ಲದವನು, ಆನಂದಸ್ವರೂಪನು, ಸರ್ವತ್ರವಾಸ ಮಾಡುವವನು—ಎಂದು ತಿಳಿದು ಸರ್ವದಾ ಉಪಾಸನೆಯನ್ನು ಮಾಡುವುದೇ ಅಂತರದೀಕ್ಷೆ ॥೧೮॥

• **ಭಾವದರ್ಪಣ**

ನಾನೇ ನಿನ್ನವ, ನನಗೆ ನೀನು ಪತಿ-ಎಂಬೋದು ಅಂತರ್ದೀಕ್ಷೆ ವೈಷ್ಣವ ನ್ಹಾದಿಗಳಿಂದ ದೇಹಾಲಂಕಾರ ಮಾಡೋಣ. ಸ್ವದೇಹ ಪರಮಾತ್ಮನ ಕ್ಷೇತ್ರವೆನ ಚಿಂತನ ಮಾಡೋಣವು ಬಹಿರ್ದೀಕ್ಷ. ಹೀಗೆ ದೀಕ್ಷಾದ್ವಯ ಯಾವಾಗಲೂ ಇರಬೇಕೆಂದು ಹೇಳುತ್ತಾರೆ — ಎರಡು ಇತಿ. ॥೧೮॥

• **ಶ್ರೀವ್ಯಾಸದಾಸ ಸಿದ್ಧಾಂತ ಕೌಮುದೀ :—**

ಎರಡು ಇತಿ॥ ದೀಕ್ಷಾಹಿ ದ್ವಿವಿಧಾಪ್ರೋಕ್ತಾ ಬಾಹ್ಯಾಭ್ಯಂತರ ಭೇದತಃ ॥೧೮॥

]

## ಕನ್ನಡಾರ್ಥ

ದೀಕ್ಷೆಯಲ್ಲಿ "ಬಾಹ್ಯ" – "ಅಂತರ" ಗಳೆಂದು ಎರಡು ವಿಧ. ಜ್ಞಾನಿಗಳಿಗೆ ಎರಡೂ ತರಹೆಯ ದೀಕ್ಷೆಗಳಿರುತ್ತವೆ. ಅಜ್ಞಾನಿಗಳಿಗೆ ಬಾಹ್ಯ ದೀಕ್ಷೆಯೇ ಇರುತ್ತದೆ. "ಹರಿಯು ಸರ್ವೇಷ್ಟದಾಯಕನು. ಸರ್ವಾರಿಷ್ಟ ನಿವಾರಕನು,ಸರ್ವೋತ್ತಮನು. ಶ್ರೀಹರಿಯೇ,ಅವನ ಭಕ್ತನು ನಾನು" ಎಂಬ ದೃಢವಾದ ನಿಶ್ಚಯಜ್ಞಾನವು ಅಂತರ್ದೀಕ್ಷೆಯೆನಿಸುತ್ತದೆ." ಎಂದು ಹೇಳಿರುತ್ತದೆ. ಇದರ ಅಭಿಪ್ರಾಯವನ್ನೇ ವಿವರಿಸುತ್ತಾರೆ. "ಎರಡು" ಎಂಬ ಪದ್ಯದಿಂದ. ॥೧೮॥

### ೫. ಶ್ರೀಗುರುಹೃದಯಪ್ರಕಾಶಿಕೆ

ಆದ್ದರಿಂದ ದೇವರ ಕಥಾಲಾಪನದಿಂದ ಭಕ್ತಿ ಸಂಪಾದಿಸಿ, ವೈಷ್ಣವದೀಕ್ಷಾ ಸಂಪಾದಿಸಬೇಕೆಂದು ಮೂರು ಪದ್ಯಗಳಿಂದ ಬೋಧಿಸುತ್ತಾರೆ–ಎರಡೆಂದು ಮೊದಲುಮಾಡಿ. ಹೊರಗೆ ಗುರ್ತು ತಿಳಿಯುವುದು ಬಾಹ್ಯದೀಕ್ಷೆ ಎಂತಲೂ, ಮನೋನಿಶ್ಚಯವೆಂಬುದು ಅಂತರ್ದೀಕ್ಷೆ ಎಂತಲೂ, **ಪಾಂಚರಾತ್ರೋಕ್ತ.** ಎರಡುವಿಧ ವೈಷ್ಣವ ದೀಕ್ಷೆಯನ್ನು ತಿಳಿದ ಜ್ಞಾನಿಗಳಿಂದ ಈ ಎರಡರ ವಿವರವನ್ನು ತಿಳಿದು ದೀಕ್ಷೆಯನ್ನು ಧರಿಸಬೇಕು. ದೀರ್ಘದ್ವೇಷಗಳನ್ನು ಬಿಟ್ಟು ಎಂದರೆ, **ವೈಷ್ಣವದ್ವೇಷಹೇತೂನ್ಮೇ ಭಸ್ಮತ್ಕುರು ಮಾಧವ** ಎಂಬ ಮಂತ್ರಪ್ರಾರ್ಥನಾನುಸಾರ ವಿಷ್ಣು, ತದ್ಭಕ್ತರಲ್ಲಿ ಬಹು ಕಾಲ ಮಾಡುವ ದ್ವೇಷಾದಿಗಳನ್ನು ಬಿಟ್ಟ ನಂತರ ದೀಕ್ಷೆಗೆ ಅರ್ಹನೆಂದರ್ಥ. ವಸಿಷ್ಠ ವಿಶ್ವಾಮಿತ್ರಾದಿಗಳಿಗೆ ಇದ್ದ ಹಾಗೆ ಕೆಲವು ಕಾಲದ ದ್ವೇಷ ಮಹಾ ಅನರ್ಥಕ್ಕೆ ಕಾರಣವಲ್ಲ. ದೀರ್ಘವಾಗಿದ್ದರೆ ಮಹಾನರಕವೆಂದು ದೀರ್ಘಶಬ್ದದಿಂದ ತಿಳಿಯಬರುತ್ತದೆ. ಅಂತರ್ದೀಕ್ಷೆಯನ್ನು ತಿಳಿಸುತ್ತಾರೆ, ಹರಿಯೆಂದು. ಶ್ರೀಹರಿಯೇ ಸರ್ವೋತ್ತಮನು, ಕ್ಷರವೆಂಬ ಜಡದೇಹಬದ್ಧ ಬ್ರಹ್ಮಾದಿಗಳು, ಅಕ್ಷರಳೆಂಬ ಜಡದೇಹ ಸಂಬಂಧವೇ ಇಲ್ಲದೆ ನಿತ್ಯಮುಕ್ತಳೆಂಬ ಶ್ರೀಲಕ್ಷ್ಮಿಯು ಇವರುಗಳಿಂದ ಅನಾದಿಕಾಲದಿಂದಲೂ ಪೂಜಿತಚರಣಕಮಲವುಳ್ಳವನು.

ಜನ್ಮ ಮೊದಲಾದ ಅರವೆಂಬ ಸರ್ವದೋಷರಹಿತನು, ಆನಂದಸ್ವರೂಪನು, ಸರ್ವವ್ಯಾಪ್ತನು ಮತ್ತು ಕಮಲದಳದಂತೆ ವಿಶಾಲನೇತ್ರನಾದ ದೇವರಿಗೆ ಹೇಯವೆಂಬ ಬಾಧೆಕೊಡತಕ್ಕ ಕೆಟ್ಟ ವಸ್ತುಗಳಿಲ್ಲ. ಉಪಾದೇಯವೆಂಬ ಉಪಯೋಗ ವಸ್ತುಗಳೂ ಇಲ್ಲ. ನ್ಯಾಯ ಅನ್ಯಾಯ ಎಂಬ ಪುಣ್ಯ ಪಾಪ ಕರ್ಮಬಂಧವೂ ಇಲ್ಲ. ದ್ವೇಷವೆಂಬ ಪರದ್ರೋಹ ಬುದ್ಧಿಯು ದೇವರಿಗೆ ಇಲ್ಲ. ಗುಣದಲ್ಲಿ ಕ್ರೋಧ ಬುದ್ಧಿಯಾದ ಪ್ರಾತಃಸ್ನಾನ ಮಾಡಿದರೆ ದೊಡ್ಡವನಾದನೋ ಎಂಬ ಹಾಗೆ ಕ್ರೋಧ ಬುದ್ಧಿಯಾದ ಅಸೂಯವೂ ಇಲ್ಲ. ಜೀವರಿಗೆ ಸ್ಥೂಲದೇಹವನ್ನು ಅವನು ಕೊಡುವಂತೆ, ಆ ಸ್ವಾಮಿಗೆ ದೇಹವನ್ನು ತಂದುಕೊಡುವ ತಂದೆ ತಾಯಿಗಳು ಮೊದಲೇ ಇಲ್ಲ. ಅಂದರೆ ಕೃಷ್ಣಾದಿ ಸರ್ವಾವತಾರಗಳು ನೃಸಿಂಹನಂತೆ ಆವಿರ್ಭವಿಸಿದವು-ಎಂಬುದೇ ಮೊದಲಾದ ಮನೋನಿಶ್ಚಯ ಸ್ಮರಣೆ ಎಂಬ ಅಂತರ್ದೀಕ್ಷೆವುಳ್ಳವರನ್ನು ಈಸೋಕಾಯಿ ಎಂಬ ಸೋರೆ ಬುರುಡೆಯಂತೆ ಜನನಾದಿ ಸಮುದ್ರದಲ್ಲಿ ಮುಳುಗಿಸದೆ, ಮೋಕ್ಷ ಕೊಟ್ಟು ರಕ್ಷಿಸುವನೆಂದರ್ಥ ॥೧೮॥

## ಸರ್ವವ್ಯಾಖ್ಯಾನಸಾರಸಂಗ್ರಹ

**೧. ಶ್ರೀವಿಷ್ಣು ಪ್ರೇರಣೆಯು ಶ್ರೀವಿಷ್ಣು ಪ್ರೀತ್ಯರ್ಥಂ :-** ಎಂಬ ಜ್ಞಾನಾನುಸಂಧಾನದಿಂದ ಸಕಲಕರ್ಮಗಳನ್ನು ಮಾಡುತ್ತಿರುವ ಶ್ರೀಪರಮಾತ್ಮನ ಭಕ್ತರಿಗೆ ಇರುವ ಸಾಧನಾ ಮಾರ್ಗಗಳು ಎರಡುಪ್ರಕಾರ. ಇವುಗಳಿಗೆ **ದೀಕ್ಷೆ** ಎಂದು ಹೆಸರು. ದೀಕ್ಷಾ ಉಭಯ ಪ್ರಕಾರ:-**ಬಾಹ್ಯದೀಕ್ಷಾ ಮತ್ತು ಅಂತರ್ದೀಕ್ಷಾ :-** ಎಂದು.

**ಬಾಹ್ಯದೀಕ್ಷಾ :-**

ಹೊರಗೆ ಪ್ರತ್ಯಕ್ಷ ರೂಪದಲ್ಲಿ ಗೋಚರಿಸುವ ದೀಕ್ಷಾಗಳು **ಬಾಹ್ಯದೀಕ್ಷೆ**ಗಳೆನಿಸುವುವು. ನಿತ್ಯವೂ ಸಕಾಲಕ್ಕೆ ಸ್ನಾನಮಾಡೋಣ, ದ್ವಾದಶನಾಮಗಳು ಮತ್ತು ಪಂಚಮುದ್ರಾಧಾರಣ, ಮೃತ್ತಿಕಾಧಾರಣ, ತ್ರೈಕಾಲಿಕ ಸಂಧ್ಯಾ

ವಂದನೆ, ದೇವಪೂಜಾಕ್ರಮ, ಗುರುಹಿರಿಯರ ಶುಶ್ರೂಷಾ, ಅತಿಥಿಸತ್ಕಾರ, ಪಾವನರ ಪಂಕ್ತಿ ಭೋಜನ, ಇತ್ಯಾದಿ ಸತ್ಕರ್ಮಾನುಷ್ಠಾನಗಳು ಸಚ್ಛಾಸ್ತ್ರ ಅಧ್ಯಯನ. ಅಧ್ಯಾಪನಾದಿಗಳು – ಇವು ವಿಷ್ಣುಭಕ್ತರ ಬಾಹ್ಯದೀಕ್ಷೆಗಳು.

**ಅಂತರ್ದೀಕ್ಷಾ :–**

**ಮಾನಸಿಕ ಪೂಜಾಕ್ರಮ,** ಚಿತ್ತದಲ್ಲಿ ಶ್ರೀಹರಿಯ ಪ್ರತೀಕವನ್ನು ನಿಲ್ಲಿಸಿಕೊಂಡು, ನಿರಂತರ ಧ್ಯಾನೋಪಾಸನೆ, ಸ್ಥೂಲದೇಹವನ್ನು ಶ್ರೀಶನ ರಥವೆಂದು ಭಾವಿಸಿ, ಹೃದಯ ಕಮಲವೇ ಬಿಂಬನ ಪೀಠಸ್ಥಾನವೆಂಬ ಉತ್ತಮಾನುಸಂಧಾನದಿಂದ, ಪಿಂಡಾಂಡರೂಪವಾದ ದೇಹಗತ ಸಕಲೇಂದ್ರಿಯಗಳಲ್ಲಿ ಶ್ರೀಪರಮಾತ್ಮನ ವ್ಯಾಪ್ತಿ, ಅವನ ವ್ಯಾಪಾರವಿಶೇಷ ಗಳನ್ನು ಧ್ಯಾನಿಸುವುದು, ಸರ್ವತ್ರವ್ಯಾಪ್ತನಾದ ಆ ಸರ್ವೋತ್ತಮನ ವ್ಯಾಪ್ತ್ಯೋಪಾಸನಾ ಕ್ರಮ–ಇತ್ಯಾದಿ ಆಂತರಿಕವಾದ, **ಗೋಪ್ಯವಾಗಿ** ನಡೆಯಲ್ಪಡುವ ಕರ್ಮರೂಪವಾದ ದೀಕ್ಷೆಗಳೆಲ್ಲವೂ **ಅಂತರ್ದೀಕ್ಷೆ** ಗಳೆಂದೆನಿಸುವುವು. ಅನುಸಂಧಾನದಿಂದ, "ನನ್ನ ಹೆಂಡತಿ, ಮಕ್ಕಳು. ಪ್ರಿಯ ವಸ್ತುಗಳು, ನನ್ನ ಜೀವ,ಅತ್ಯಂತ ಶ್ರೇಷ್ಠನಾದ ನಿನ್ನ ಅಧೀನಗಳು"- ಎಂಬ ಉಪಾಸನಾಕ್ರಮವು ಅಂತರ್ದೀಕ್ಷೆಯು. **ವಿಷ್ಣು ದೀಕ್ಷೆಯೇ** ಸರ್ವೋತ್ಕೃಷ್ಟವಾದದ್ದು. ಬ್ರಹ್ಮಾದಿ ಸಕಲದೇವತೆಗಳಿಗೂ ಶ್ರೀವಿಷ್ಣುವೇ ನಿಯಾಮಕನು. ಅಕ್ಷರನಾಮಕಳಾದ ಶ್ರೀಲಕ್ಷ್ಮಿಗಿಂತ ಉತ್ತಮೋತ್ತಮನು. ಸಮಾಭ್ಯಧಿಕಶೂನ್ಯನಾದ ಆ ಸರ್ವೋತ್ತಮನ ವಿಷಯಧ್ಯಾನವೇ ಅತ್ಯುತ್ತಮವಾದ ವಿಷ್ಣುದೀಕ್ಷೆಯು. ವಿಷ್ಣುಭಕ್ತರಲ್ಲಿ ದ್ವೇಷವನ್ನು ತ್ಯಾಗಮಾಡಬೇಕು. ವಿಷ್ಣುದೀಕ್ಷಾಪರನಾದ ಒಬ್ಬ ಭಕ್ತನಲ್ಲಿ ಅಥವಾ ವಿದ್ವಾಂಸನಲ್ಲಿ ಮಾತ್ಸರ್ಯ, ದ್ವೇಷ ಇತ್ಯಾದಿಗಳು ಸತ್ಸಾಧನೆಗೆ ಮಾರಕವು. ಇದರಿಂದಲೇ, **"ವೈಷ್ಣವ ದ್ವೇಷ ಹೇತೂನ್ಮೇ ಭಸ್ಮೀಕುರು ಮಾಧವ"**-ಎಂಬ ಮಂತ್ರಾರ್ಥಾನುಸಾರ, ವಿಷ್ಣುಭಕ್ತರಲ್ಲಿ ಮಾಡುವ ದ್ವೇಷದ ಮೂಲಕಾರಣವನ್ನೇ ಭಸ್ಮ ಮಾಡಿಸು–ಎಂದು ಮಾಧವನಲ್ಲಿ ಪ್ರಾರ್ಥಿಸಿದ್ದಾರೆ.

**ಶ್ರೀಹರಿಯು** ಸರ್ವ ದೇಶ, ಕಾಲ, ಅವಸ್ಥಾದಿಗಳಲ್ಲಿ ನಿತ್ಯವ್ಯಾಪ್ತನು. ಇದರಿಂದ **ಸರ್ವಗನು.** ಶ್ರೀಹರಿಯು ಸರ್ವಜೀವರ ಬಿಂಬನು. ಜೀವರು ಅವನ ಅಧೀನರು. ಈ ರೀತಿ ನಿರಂತರ ವಿಷ್ಣುದೀಕ್ಷಾ ರೂಪವಾದ ಉತ್ತಮ ಜ್ಞಾನಾನುಸಂಧಾನದಿಂದ ಆ ಉತ್ತಮೋತ್ತಮನನ್ನು ಸದಾ ಸಂಸ್ಮರಿಸುತ್ತಿರಬೇಕೆಂದು-ವಿಷ್ಣುದೀಕ್ಷಾ ಮಾರ್ಗವನ್ನು ತಿಳಿಸುತ್ತಾರೆ-ದಾಸವರ್ಯರು ॥೧೮॥

## ಪದ್ಯ—೧೯

**ಮೂಲ :-**

**ಹೇಯವಸ್ತುಗಳಿಲ್ಲ ಊಪಾ ।**
**ದೇಯ ವಸ್ತುಗಳಿಲ್ಲ ನ್ಯಾಯಾ ।**
**ನ್ಯಾಯ ಧರ್ಮಗಳಿಲ್ಲ ದ್ವೇಷಾಸೂಯ ಮೊದಲಿಲ್ಲ ॥**
**ತಾಯಿತಂದೆಗಳಿಲ್ಲ ಕಮಲದ ।**
**ಳಾಯತಾಕ್ಷನೆ ಎನಲು ಈಸುವ ।**
**ಕಾಯಿಯಂದದಿ ಮುಳುಗಗೊಡದೆ ಭವಾಬ್ಧಿ**
**ದಾಟಿಸುವ ॥ ॥೧೯॥**

**ಅವತರಣಿಕೆ :-**

ಚರಾಚರಾತ್ಮಕವಾದ ಈ ಸಮಗ್ರ ಜಗತ್ತಿನಲ್ಲಿ ಸರ್ವತ್ರವ್ಯಾಪಕನಾದ ಕಮಲದಳಾಯತಾಕ್ಷನನ್ನು ಭಕ್ತಿಯಿಂದ ಸ್ತೋತ್ರಮಾಡುವ ಭಕ್ತರನ್ನು ದುಸ್ತರವಾದ ಸಂಸಾರಸಾಗರದಿಂದ ದಾಟಿಸಿ, ಅವರಿಗೆ ನಿಜಾನಂದವನ್ನೀಯುವನೆಂದು ತಿಳಿಸುತ್ತಾರೆ—**ಹೇಯವಸ್ತುಗಳಿಲ್ಲ** — ಎಂಬ ೧೯ ನೆಯ ಈ ಪ್ರಸಕ್ತ ಪದ್ಯದಿಂದ. ॥೧೯॥

**ಪ್ರತಿಪದಾರ್ಥ :-**

**ಹೇಯವಸ್ತುಗಳಲ್ಲಿ** = ನೀಚಗುಣವುಳ್ಳ ವಸ್ತುಗಳಲ್ಲಿ ವ್ಯಾಪ್ತನಾಗಿದ್ದರೂ, ಶ್ರೀಹರಿಗೆ ಅವುಗಳ ದುರ್ಗುಣಗಳಿಂದ ಲೇಪನವಿಲ್ಲ. **ಉಪಾದೇಯ ವಸ್ತುಗಳಲ್ಲಿ** = ಜಗದುತ್ಪತ್ತಿಗೆ ಉಪಾದನ ಕಾರಣವಾದ ಮೂಲ ಪ್ರಕೃತಿಯಲ್ಲಿ ಅಂತಸ್ಥಿತನಾಗಿದ್ದರೂ, ಅದರಿಂದ ಅತ್ಯಂತವಿಲಕ್ಷಣನು. **ನ್ಯಾಯ** = ನ್ಯಾಯವಾದ ಪುಣ್ಯಕರ್ಮಗಳೇನು. **ಅನ್ಯಾಯ** = ಅನ್ಯಾಯರೂಪವಾದ ದುಷ್ಕರ್ಮಗಳೇನು. **ಧರ್ಮಗಳಿಲ್ಲ** = ಧರ್ಮ ಅಧರ್ಮ ಗುಣಗಳಲ್ಲಿದ್ದರೂ, ಸರ್ವಾಂತರ್ಯಾಮಿಯಾದ ಆ ಸ್ವರಣಮುನಿಗೆ ತಲ್ಲೇಪವಿಲ್ಲ. **ದ್ವೇಷ** = ತಮೋಯೋಗ್ಯರಲ್ಲಿ ದ್ವೇಷವಾಗಲೀ, **ಅಸೂಯೆ** = ನಿತ್ಯಸಂಸಾರಿಗಳಾದ ರಜೋಜೀವರಲ್ಲಿ ಉದಾಸೀನರೂಪವಾದ ಅಸೂಯೆಯಾಗಲೀ, **ಮೊದಲಿಲ್ಲ** = ಅನಾದ್ಯನಂತಕಾಲದಿಂದಲೂ ಇಲ್ಲವೇ ಇಲ್ಲ. ಅಂದರೆ ತ್ರಿವಿಧಜೀವರಲ್ಲಿ ಅಂತರ್ಯಾಮಿಯಾಗಿದ್ದರೂ, ಸ್ನೇಹ–ಉದಾಸೀನ – ದ್ವೇಷಭಾವನಾದೂರನಾಗಿ ಸಮವರ್ತಿ ಎಂದೆನಿಸಿದ್ದಾನೆ. **ತಾಯಿ ತಂದೆಗಳಿಲ್ಲ**= ಮಾತಾಪಿತೃಗಳ ಸಂಬಂಧದಿಂದ ಗರ್ಭಯಾತನಾದಿ ಲೇಪಗಳಲ್ಲದವನು. ಜನ್ಮವಿದೂರನು. (ಅಜನಾಮಕನು). **ಕಮಲದಳಾಯತಾಕ್ಷನೆ** = ಕಮಲ ಪುಷ್ಪದ ದಳದಂತೆ ವಿಸ್ತಾರವಾದ ನೇತ್ರವುಳ್ಳವನೇ, **ಎನಲು** = ಸ್ವಾಮಿಭೃತ್ಯನ್ಯಾಯದಿಂದ ಭಕ್ತಿಪೂರ್ವಕವಾಗಿ ಪ್ರಾರ್ಥಿಸಲು, **ಈಸುವ ಕಾಯಿಯಂದದಿ** = ನೀರಿನಲ್ಲಿ ಈಜುವವನು ಮುಳುಗದಂತೆ ಉಪಯೋಗಿಸುವ ಸೋರೇಬುರುಡೆಯಂತೆ, **ಮುಣುಗಗೊಡದೆ** = ಮುಳುಗಿಸದಂತೆ ಮಾಡಿ, **ಭವಾಬ್ಧಿ** = ದುಸ್ತರವಾದ ಜನನ ಮರಣಾಖ್ಯವಾದ ಸಂಸಾರವೆಂಬ ಮಹಾಸಮುದ್ರವನ್ನು. **ದಾಟಿಸುವ** = ದಾಟಿಸಿ, ಮುಕ್ತಿ ಸುಖವನ್ನು ಅನುಗ್ರಹಿಸುವನು. ॥೧೯॥

# ವ್ಯಾಖ್ಯಾನಗಳು

## ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಪೂರ್ವೋಕ್ತ ಶ್ರೀಪರಮಾತ್ಮನ್ನ ಈ ಪ್ರಕಾರ ತಿಳಿದವರಿಗೆ ಸಂಸಾರ ಸಮುದ್ರ, ಶ್ರೀದೇವರು ದಾಟಿಸಿ, ಸುಖ ಕೊಟ್ಟು ಕಾಪಾಡತಾನೆ–ಎಂತ ಹೇಳತಾರೆ.

ಈ ಲೋಕದಲ್ಲಿ ಸುಗಂಧ, ದುರ್ಗಂಧ ಅನೇಕ ವಿಧವಾದ ಪದಾರ್ಥ ಗಳು ಎಷ್ಟು ಅವೋ ಅಷ್ಟರಲ್ಲೂ ಶ್ರೀಪರಮಾತ್ಮ ವ್ಯಾಪ್ತನಾಗಿ ಇದ್ದಾನೆ. ಆಯಾ ವಸ್ತುಗತದೋಷಗಳು ಪರಮಾತ್ಮಗೆ ಲೇಪವಿಲ್ಲ. ಸಕಲಪದಾರ್ಥಗಳ ಸೃಷ್ಟಿಗೆ ಉಪಾದಾನಭೂತವಾದ ಮೂಲಜಡಪ್ರಕೃತಿ ವೆಶೆಯಿಂದ ಉಪಾ ದೇಯರೂಪದಿಂದ ಪರಿಣಮಿತವಾದ ಜಗತ್ತಿನಲ್ಲಿ ವ್ಯಾಪ್ತನಾಗಿ ಇದ್ದಾನೆ. ತದ್ಗತ ನಾನಾವಿಧವಾದ ಗುಣಗಳೇನು, ಅದಕ್ಕೆ ಆಗತಕ್ಕ ಭೇದಾ ಭೇದಾದಿಗ ಳೇನು ಇವುಗಳಿಂದ ಜನಿತ ಸುಖದುಃಖಗಳ ಲೇಪವಿಲ್ಲ. ನ್ಯಾಯುವಾದ ಪುಣ್ಯಕರ್ಮಗಳಲ್ಲಿ, ಅನ್ಯಾಯುವಾದ ಪಾಪಕರ್ಮಗಳಲ್ಲಿ ಇರೋವನಾಗಿದ್ದಾನೆ. ಧರ್ಮಾಧರ್ಮಗಳಲ್ಲಿದ್ದರೂ ತಲ್ಲೇಪವಿಲ್ಲ. ಶ್ರೀಪರಮಾತ್ಮಗೆ ಪೂರ್ವಿೀಕರಾದ ಜನನೀಜನಕರು ಇಲ್ಲ. ಜೀವಾಂತರ್ಗತನಾಗಿ ಜೀವನ ಕೂಡಾ ಪಿತೃಶರೀರ ದಶಿಯಿಂದಾ ಮಾತೃಶರೀರದಲ್ಲಿ ಆವಾಸನಾಗಿ ಇದ್ದ ಕಾಲಕ್ಕೂ ಗರ್ಭಯಾತ ನಾದಿಗಳ ಲೇಪವಿಲ್ಲ. ತಮೋಯೋಗ್ಯದಲ್ಲಿ ಸ್ವರೂಪಭೂತವಾದ ದ್ವೇಷ ದಲ್ಲಿ ಬಿಂಬನಾಗಿ ಅವರಲ್ಲಿ ತಾನು ದ್ವೇಷ ಮಾಡತಕ್ಕವನಲ್ಲ. ನಿತ್ಯಸಂಸಾರಿ ಗಳಲ್ಲಿ ಉದಾಸೀನರೂಪವಾದ ಅಸೂಯದಲ್ಲಿ ಬಿಂಬನಾಗಿ, ಅವರಲ್ಲಿ ತಾನು ಉದಾಸೀನ ಮಾಡತಕ್ಕವನಲ್ಲ. ಹಾಂಗೇ ಮುಕ್ತಿಯೋಗ್ಯರಲ್ಲಿ ಸ್ವರೂಪ ಭೂತ ಸ್ನೇಹದಲ್ಲಿ ಬಿಂಬನಾಗಿ ಇದ್ದಕಾಲಕ್ಕೂ ಆದರವರ ಲೇಪವಿಲ್ಲ. ಏಕೆ ಅಂದರೆ, ಆವರವರ ಸ್ವರೂಪವೇ ಅಂಥಾದ್ದು. ಆದ್ದರಿಂದ ತಲ್ಲೇಪ ಎಂಬುದು ಇಲ್ಲ. ಎಲ್ಲಾದಕ್ಕೂ ಬಾಧ್ಯಪಡದೆ ನಿರ್ಲಿಪ್ತನಾಗಿ ಇದ್ದಾನೆ.

ಈ ಪೂರ್ವೋಕ್ತಗಳು ಸರ್ವದಿಂದಲೂ ಲೇಪಿತನಾದವ ಜೀವ ಎಂತಲೂ, ಪರಮಾತ್ಮ ಎಂಥಾವನೆಂತಲೂ ತಿಳಿದು, ಮಹಾತ್ಮ್ಯಜ್ಞಾನಪೂರ್ವಕ ಸುದೃಢ ಸ್ನೇಹದಿಂದ ಪುಂಡರೀಕಪತ್ರಾಯತನೇತ್ರವುಳ್ಳವನೇ ಗತಿ, ಸ್ವಾಮಿ ಭೃತ್ಯನ್ಯಾಯದಿಂದ ಅನ್ಯರು ದಾರೂ ಗತಿಯಿಲ್ಲ—ಎಂತ ತ್ರಿಕರಣಶುದ್ಧಿ ಪೂರ್ವಕ ಅವನ ಪಾದವನ್ನು ನಂಬಿದರೆ, ಅತಿಗಂಭೀರವಾದ ಜಲದಲ್ಲಿ ಈಸತಕ್ಕ ಪುರುಷ, ಸೋರೇಕಾಯೀನ ಕಟ್ಟಿಕೊಂಡು ಜಲದಲ್ಲಿ ಪ್ರವೇಶಮಾಡಿ ಈಸತಾ ಇದ್ದರೆ, ಹ್ಯಾಂಗೆ ತಾನು ಮುಣಗದೆ ಇರತಾನೋ, ಈ ಸೋರೇ ಕಾಯಿ ಸದೃಶನಾದ ಪರಮಾತ್ಮನಲ್ಲಿ ಅನುಸಂಧಾನಪೂರ್ವಕ ಭಕ್ತಿವುಳ್ಳವಗೆ ಸಂಸಾರವೆಂಬ ಸಮುದ್ರದಲ್ಲಿ ಮುಣುಗೋಹಾಂಗೆ ಮಾಡದೆ ಅಂತ್ಯದಲ್ಲಿ ಜೀವನ್ಮುಕ್ತಿಸದೃಶವಾದ ದಡವನ್ನು ಸೇರಿಸಿ ಬ್ರಹ್ಮನ ಸಹ ಯೋಗ್ಯವಾದ ಸ್ವರೂಪಾನಂದವನ್ನು ಕೊಡತಾನೆ. ॥೧೯॥

## ೨. ಭಾವಪ್ರಕಾಶಿಕೆ

ಪರಮಾತ್ಮನು ಜಗತ್ಕುಟುಂಬಿಯಾದರೂ ಇದು ಬೇಕಾದ ವಸ್ತು ಇದು ಬೇಡದ ವಸ್ತು–ಎಂಬ ಭಾವನೆಯೇ ಆತನಿಗೆ ಇಲ್ಲ. ಇದು ನ್ಯಾಯ, ಇದು ಅನ್ಯಾಯವೆಂಬ ಭಾವನೆಯೂ ಇಲ್ಲ. ಇತರ ಜನರಲ್ಲಿ ಯಾವುದು ದೋಷವೆಂದು ಕಂಡು ಬರುವುದೋ, ಅದು ಪರಮಾತ್ಮನಲ್ಲಿ ಗುಣವಾಗಿಯೇ ಕಾಣುವುದು, ಎಂದು ಹೇಳಿರುವುದು. ಪರಮಾತ್ಮನಿಗೆ ಒಬ್ಬನಲ್ಲಿ ದ್ವೇಷವಿಲ್ಲ. ಒಬ್ಬನ ಮೇಲೆ ಹೊಟ್ಟೆಕಿಚ್ಚಿಲ್ಲ. ತಂದೆ ತಾಯಿಗಳಿಲ್ಲ. ಹೀಗೆ ತಿಳಿದು ಉಪಾಸನೆ ಮಾಡುವುದೂ ಒಂದು ಅಂತರದೀಕ್ಷೆಯು. ಈ ರೀತಿಯಾಗಿ ಉಪಾಸನೆಯನ್ನು ಮಾಡಿದರೆ ಒಣ ಸೋರೆಕಾಯಿಯನ್ನು ಸೊಂಟಕ್ಕೆ ಕಟ್ಟಿ ಕೊಂಡು ನೀರೊಳಗೆ ಈಸುವವನು ಆ ಸೋರೆಕಾಯಿಯು ಮುಣುಗಗೊಡದೆ

ಹೇಗೆ ತೇಲಿಸುವುದೋ, ಹಾಗೆ ಶ್ರೀಪರಮಾತ್ಮನು ಅಂತರದೀಕ್ಷೆಯಿಂದ ತನ್ನನ್ನು ಉಪಾಸನೆ ಮಾಡುವವರನ್ನು ಸಂಸಾರಸಮುದ್ರದಲ್ಲಿ ಮುಣುಗಗೊಡಿಸದೆ, ತೇಲಿಸಿ ಉದ್ಧರಿಸುವನು. ॥೧೯॥

೩. ಭಾವದರ್ಪಣ :–

ಹೇಯೇತಿ, ಹೇಯ–ಬಿಡತಕ್ಕ ಪದಾರ್ಥ. ಉಪಾದೇಯ–ಸಂಪಾದನಕ್ಕೆ ಯೋಗ್ಯವಾದದ್ದು-ಎಂಬಂರ್ಥ ॥೧೯॥

## ಶ್ರೀ ವ್ಯಾಸದಾಸಸಿದ್ಧಾಂತಕೌಮುದೀ

"ಹೇಯ" ಇತಿ ॥೧೯॥

### ಕನ್ನಡಾರ್ಥ

"ಹೇಯೋಪಾದೇಯರಹಿತನು, ಚಿಂತಾ ಸಂತಾಪ ಲೇಪ ಜನ್ಮ–ಮರಣ ಮುಂತಾದ ಸಕಲದೋಷರಹಿತನು. ನಿರ್ವ್ಯಾಜ ಕರುಣೆಯು. ಭವಾಬ್ಧಿತಾರಕನು." ಎಂದು ಶ್ರೀಹರಿಯನ್ನು ಸ್ತುತಿಸುತ್ತಾರೆ. "ಹೇಯ" ಎಂಬ ಪದ್ಯದಿಂದ ॥೧೯॥

## ಸರ್ವವ್ಯಾಖ್ಯಾನಸಾರಸಂಗ್ರಹ

೧ ಜಗತ್ತಿನಲ್ಲಿ ಉತ್ತಮ ವಸ್ತುಗಳು ಮತ್ತು ಹೇಯ ವಸ್ತುಗಳೆಂದು ಎರಡು ಪ್ರಕಾರ. ಪುಣ್ಯ, ಸತ್ಕರ್ಮ, ಅನಿಷಿದ್ಧ ವಸ್ತುಗಳು. ಸುಗಂಧ, ಭಗವದ್ಭಕ್ತಿ, ಶ್ರೀಹರಿಯ ಮಂಗಳ ಮೂರ್ತಿಗಳ ಸಂದರ್ಶನ, ವೇದಘೋಷ, ಶ್ರೀಹರಿಯ ಸಂಕೀರ್ತನಾ–ಇತ್ಯಾದಿಗಳನ್ನು ಕೇಳೋಣ–ಇತ್ಯಾದಿಗಳೆಲ್ಲವೂ

ಉತ್ತಮ ಸಂಸ್ಕಾರ ರೂಪವಾದ ಕ್ರಿಯೆಗಳು. ಆದರೆ, ಪಾಪ, ದುಷ್ಕರ್ಮ, ದುರಾಲೋಚನೆ, ಮನಸ್ಸನ್ನೇ ಕಲುಷಿತಗೊಳಿರುವ ದೃಶ್ಯಾದಿಗಳು ಇತ್ಯಾದಿ **ಹೇಯವಸ್ತು** ಗಳೆನಿಸುವುವು,

ಸರ್ವತ್ರಗತನಾದ ಆ ಸರ್ವೇಶ ಉತ್ತಮ ವಸ್ತುಗಳಲ್ಲಿಯೂ, ಹಾಗೆಯೇ ಹೇಯವಸ್ತುಗಳಲ್ಲಿಯು ವ್ಯಾಪ್ತನಾಗಿದ್ದಾನೆ. ತಮೋಯೋಗ್ಯ ಜೀವರಲ್ಲಿ ಬಿಂಬನಾಗಿದ್ದು, ಅವರ ದ್ವಾರಾ ದುಷ್ಕ್ರಿಯು ರೂಪವಾದ ಪಾಪ ಕಾರ್ಯಗಳನ್ನು ಮಾಡಿ ಮಾಡಿಸುತ್ತಿರುವನು. ಹೇಯಪದಾರ್ಥಗಲ್ಲಿದ್ದು ಅವುಗಳ ಸಹಜಗುಣಗಳನ್ನು ಅಭಿವ್ಯಕ್ತಿಗೊಳಿಸುವನು. ಆದರೂ ತತ್ಸಂಬಂಧವಾದ ದೋಷಗಳು ಅವನಿಗೆ ಇಲ್ಲ.

೨ ಸದ್ಧರ್ಮಗಳಿಗನುಸಾರವಾಗಿ. ವಿಧ್ಯುಕ್ತವಾದ ನಿಯಮಗಳೇ **ನ್ಯಾಯಗಳು.** ಧರ್ಮಕ್ಕೆ ವಿರುದ್ಧವಾಗಿ, ನಿಷೇಧಾತ್ಮಕವಾಗಿರುವುದೆಲ್ಲವೂ **ಅನ್ಯಾಯಗಳು.** ನ್ಯಾಯ ಮತ್ತು ಅನ್ಯಾಯ ಎಂಬ **ಉಭಯಧರ್ಮ** ಗಳಲ್ಲಿಯೂ, ಆ ಧರ್ಮಪ್ರವರ್ತಕನು ವ್ಯಾಪಕನಾಗಿದ್ದಾನೆ. ನ್ಯಾಯ ಸಂಬಂಧವಾದ ಪುಣ್ಯಫಲಗಳಾಗಲೀ, ಅನ್ಯಾಯದ ಫಲರೂಪವಾದ ಪಾಪ ಗಳಾಗಲೀ ಅವನಿಗಿಲ್ಲ.

೩. ತಮೋಯೋಗ್ಯಜೀವರಲ್ಲಿ **ದ್ವೇಷಭಾವನೆ** ಅವನಿಗಿಲ್ಲ. ಅವರ ಸ್ವರೂಪಭೂತಗುಣಕ್ಕನುಗುಣವಾಗಿ, ವಿಷ್ಣುದ್ವೇಷ ಹಾಗೂ ಭಗವದ್ಭಕ್ತರ ದ್ವೇಷ. ಸೋऽಹಂ ಉಪಾಸನೆ—ಇತ್ಯಾದಿ ಧರ್ಮಗಳನ್ನು ಅವರಲ್ಲಿ ಬಿಂಬಕ್ರಿಯಾದಿಂದ ಅಭಿವ್ಯಕ್ತಿಗೊಳಿಸುವವನೇ ಹೊರತು. ಜಗದ್ವಿಲಕ್ಷಣ ನಾದ, ನಿರ್ದೋಷಿಯಾದ ಶ್ರೀಪರಮಾತ್ಮನಿಗೆ ದ್ವೇಷಗಳಿಂದ ಅಲ್ಲ.

೪. ರಜೋಗುಣ ಜೀವರು ನಿತ್ಯಸಂಸಾರಿಗಳು. ಅವರಲ್ಲಿ ಅಂತಸ್ಥಿತ ನಾಗಿದ್ದು, ಮಿಶ್ರಗುಣ ಪ್ರಾಚುರ್ಯ ರೂಪವಾದ ಕ್ರಿಯಾದಿಗಳನ್ನು ಮಾಡಿ ಮಾಡಿಸುವನು. ಅವರಲ್ಲಿ **ಅಸೂಯಾ ರೂಪವಾದ** ಉದಾಸೀನಭಾವನೆ ಅವನಿಗಿಲ್ಲ.

೫. ಅಂತೆಯೇ, ಮುಕ್ತಿಯೋಗ್ಯಚೇತನರಾದ ಸಾತ್ವಿಕಜೀವರಲ್ಲಿ **ಸ್ನೇಹಭಾವನೆ** ಇಲ್ಲ ಅಂದರೆ, ದ್ವೇಷ- ಉದಾಸೀನ–ಸ್ನೇಹ ಎಂಬ ಭಾವನೆಗಳಿಂದ ದೂರನಾಗಿದ್ದು ನಿರ್ಲಿಪ್ತವಾಗಿದ್ದಾನೆ. ಆ ನಿರಂಜನಸ್ವರೂಪಿಯು.

೬. ತನ್ನ ಇಚ್ಛಾಮಾತ್ರದಿಂದ ಯುಗಯುಗಗಳಲ್ಲಿ ಧರ್ಮಸಂಸ್ಥಾಪನಾಕಾರ್ಯಕ್ಕಾಗಿ ಅವತರಿಸುವನು. ಅವನ ಅವತಾರಗಳು ಸಹಜವಾದ ಪ್ರಕಟರೂಪಗಳೇ ಹೊರತು, ಅವನಿಗೆ ಇತರ ಜೀವರಂತೆ ಶುಕ್ಲಶೋಣಿತ ಸಂಬಂಧವಿಲ್ಲ. ನಿತ್ಯಜ್ಞಾನಾನಂದಾದಿಗಳೇ ದೇಹವಾಗಿ ಉಳ್ಳ ಆ ನಿತ್ಯಸ್ವರೂಪನು ಸ್ವೇಚ್ಛೆಯಂತೆ ಪ್ರಾದುರ್ಭವಿಸುವನು. ಅವನಿಗೆ ಗರ್ಭವಾಸ, ಯಾತನಾದಿ ದೋಷಗಳಿಲ್ಲ. ಇದರಿಂದ, **ತಾಯಿ ತಂದೆಗಳಿಲ್ಲ.** ಆದರೆ ಸಕಲ ಜೀವರಿಗೂ ಅವನೇ ಜನನೀ ಜನಕನು.

೭. ಈ ರೀತಿಯಾಗಿ ಸಕಲದೋಷವಿದೂರನೂ, ಅನಂತಕಲ್ಯಾಣಗುಣಪರಿಪೂರ್ಣನೂ ಆದ ಆ ಅಪ್ರಾಕೃತಮಹಾಮಹಿಮನನ್ನು, — 'ಹೇ ಕಮಲದಳಾಯತಾಕ್ಷನೇ, ನೀನೇ ನನಗೆ ಗತಿಯು. ಅನಾದ್ಯನಂತ ಕಾಲದಿಂದಲೂ ನಿನ್ನ ಅಧೀನನು ನಾನು. ಹೇ ಶರಣಾಗತ ರಕ್ಷಾಮಣಿ ! ನನ್ನನ್ನು ಕರುಣದಿಂದ ಸಂರಕ್ಷಿಸಿ, ಉದ್ಧರಿಸು'— ಎಂದು ದೀನವಾಗಿ ಪ್ರಾರ್ಥಿಸಿದರೆ, ಅಂತಹ ಅನನ್ಯಭಕ್ತನನ್ನು ದುಸ್ತರವಾದ ಜನನ ಮರಣಾಖ್ಯವಾದ ಈ ಸಂಸಾರವೆಂಬ ಸಾಗರದಿಂದ ದಾಟಿಸಿ, ಅವರಿಗೆ ನಿತ್ಯಾನಂದರೂಪವಾದ ಮುಕ್ತಿಸುಖವನ್ನು ಅನುಗ್ರಹಿಸುವನು. ನೀರಿನಲ್ಲಿ ಈಜಲು ಕಲಿಯುವವನು ಮೊದಲು ಸೋರೇಬುರುಡೆಯನ್ನು ತನ್ನ ಟೊಂಕಕ್ಕೆ ಕಟ್ಟಿ, ನೀರಿನಲ್ಲಿ ಬೀಳುವನು. ಆ ಸೋರೇಬುರುಡೆಯು, ಆತನನ್ನು ನೀರಿನಲ್ಲಿ ಮುಳುಗಿಸದೆ, ತೇಲಿಸಿ, ದಡವನ್ನು ಮುಟ್ಟಿಸುವುದು. ಅಂತೆಯೇ **ಭವಾಬ್ಧಿ ದಾಟಿಸುವನು.** ॥೧೯॥

## ಪದ್ಯ—೨೦

**ಮೂಲ :–**

**ಮಂದನಾದರು ಸರಿಯೆ ಗೋಪೀ |**
**ಚಂದನ ಶ್ರೀಮುದ್ರೆಗಳ ನಲ |**
**ವಿಂದೆ ಧರಿಸುತ ಶ್ರೀತುಲಸಿಪದ್ಮಾಕ್ಷಸರಗಳನು ||**
**ಕಂದರದ ಮಧ್ಯದಲಿ ಧರಿಸಿ ಮು |**
**ಕುಂದ ಶ್ರೀಭೂರಮಣ ತ್ರಿಜಗ |**
**ದ್ವಂದ್ಯ ಸರ್ವಸ್ವಾಮಿ ಮಮಕುಲ ದೈವವೆನೆ ಪೊರೆವ ||**

**||೨೦||**

**ಅವತರಣಿಕೆ**

ಬಾಹ್ಯದೀಕ್ಷಾಯುತನಾಗಿ, ಅಂತರ್ದೀಕ್ಷಾ ದ್ವಾರಾ, ಭಕ್ತಿಯಿಂದ ತ್ರಿಜಗದ್ವಂದ್ಯನಾದ ಮುಕುಂದನನ್ನು ಸರ್ವೇಶ್ವರನೆಂದು ಸ್ತುತಿಸಿದರೆ, ಅವರನ್ನು ಸಂರಕ್ಷಿಸುವನೆಂದು ತಿಳಿಸುತ್ತಾರೆ–ಮಂದನಾದರು–ಎಂಬ ೨೦ನೆಯ ಪ್ರಸಕ್ತ ಪದ್ಯದಿಂದ. ||೨೦||

**ಪ್ರತಿಪದಾರ್ಥ**

**ಮಂದನಾದರು ಸರಿಯೆ** = ಮೂಢನಾದರೂ ಸರಿಯೆ, **ಗೋಪೀ ಚಂದನ** = ಗೋಪೀಚಂದನದಿಂದ ದ್ವಾದಶನಾಮಗಳನ್ನು ದೇಹದ ನಿಯತ ವಾದ ಸ್ಥಾನಗಳಲ್ಲಿ ವಿಧ್ಯುಕ್ತವಾಗಿ ಧರಿಸಿ, **ಶ್ರೀಮುದ್ರೆಗಳ** = ಪಂಚ ಅವಿದ್ಯಾಪರಿಹಾರಕವಾದ ಚಕ್ರ, ಶಂಖ, ಗದಾ, ಪದ್ಮ ಮತ್ತು ನಾರಾಯಣ ಗಳೆಂಬ ಪಂಚಮುದ್ರೆಗಳನ್ನು, **ನಲವಿಂದೆ**= ಅತ್ಯಂತ ಶ್ರದ್ಧಾಸಕ್ತಿಗಳಿಂದ, **ಧರಿಸುತ** = ದೇಹದಲ್ಲಿ ಧಾರಣಮಾಡಿ, **ಶ್ರೀತುಲಸಿ ಪದ್ಮಾಕ್ಷ ಸರಗಳ**

= ಶ್ರೀತುಲಸೀಸರ ಮತ್ತು ಕಮಲದ ಮಣಿಗಳ ಮಾಲೆಗಳನ್ನು, **ಕಂಧರದ** = ಕುತ್ತಿಗೆಯು, **ಮಧ್ಯದಲಿ ಧರಿಸುತ** = ಮಧ್ಯದಲ್ಲಿ ದೇಹಗತ ಬಿಂಬನಿಗೆ ಅಲಂಕಾರವೆಂಬ ಅನುಸಂಧಾನದಿಂದ ಧರಿಸುತ್ತ, **ಮುಕುಂದ** = ಮೋಕ್ಷಪ್ರದನಾದ ಸ್ವಾಮಿಯೇ ! **ಶ್ರೀ ಭೂರಮಣ** = ಶ್ರೀದೇವಿ, ಭೂದೇವಿಗೆ ಪತಿಯಾದ ಶ್ರೀಪರಮಾತ್ಮನೇ ! **ತ್ರಿಜಗದ್ವಂದ್ಯ** = ಮೂರು ಲೋಕಗತ ಸಜ್ಜನರಿಂದ ವಂದಿತನಾದವನೇ ! **ಸರ್ವಸ್ವಾಮಿ** = ರಮಾಬ್ರಹ್ಮಾದಿ ಸಮಸ್ತ ಚೇತನರಿಗೂ ಪ್ರಭುವಾದವನೇ ! **ಮಮ ಕುಲದೈವ** = ನನ್ನ ಕುಲದೇವನೇ ! **ಎನೆ** = ಎಂದು ಸ್ತೋತ್ರ ಮಾಡಲು. **ಪೊರೆವ** = ಸಂರಕ್ಷಿಸುವನು. ॥೨೦॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣಒಡೆಯರ ವ್ಯಾಖ್ಯಾನ

ಬಾಹ್ಯರೂಪವಾದ ದೀಕ್ಷಾಯುಕ್ತನಾಗಿ ಶ್ರೀಪರಮಾತ್ಮನ್ನ ಕೊಂಡಾಡ ಎಂತ ಹೇಳತಾರೆ. ಅಂತರ್ದೀಕ್ಷಾ ಇಲ್ಲದೆ ಬಾಹ್ಯದೀಕ್ಷಾ ಮಾತ್ರವೇ ಇದ್ದವ, ಸಂಸಾರಸಮುದ್ರ ದಾಟೋಕ್ರಮ ಹ್ಯಾಂಗೆಂದರೆ, ಅಂತರ್ದೀಕ್ಷಾದಿಂದಲೇ ದಾಟಬೇಕು. ಬಾಹ್ಯದೀಕ್ಷಾದಿಂದ ದಾಟಲಾರ-ಎಂತ ಹೇಳತಾರೆ.

ಅಂತರ್ದೀಕ್ಷಾದಲ್ಲಿ ಅಜ್ಞಾನಿಯಾಗಿ ಮೂಢನಾಗಿ ಇದ್ದರೂ ಸರಿಯೆ, ಬಾಹ್ಯದೀಕ್ಷಾದಲ್ಲಿ ವಿಧ್ಯುಕ್ತಪ್ರಕಾರ ಕ್ರಮಗಳ ತಿಳಕೊಳ್ಳದೆ ಅಜ್ಞಾನಯುಕ್ತನಾಗಿದ್ದರೂ ಸರಿಯೆ, ಗೋಪೀಚಂದನದಿಂದ ದ್ವಾದಶನಾಮಗಳ ಧರಿಸಿ, ಶ್ರೀವಿಷ್ಣು ಪ್ರೀತಿಕರವಾಗಿ ಪಂಚ ಅವಿದ್ಯಾಪರಿಹಾರಕವಾದ ಶ್ರೀಪರಮಾತ್ಮನ ಆಯುಧಗಳಾದ ಚಕ್ರ, ಶಂಖ, ಗದಾ, ಪದ್ಮ, ನಾರಾಯಣ ಎಂಬತಕ್ಕ ಪಂಚಮುದ್ರೆಗಳ ಗೋಪೀಚಂದನದಿಂದ, ಇವು ಕೇವಲ ಮಂಗಳಕ್ಕರಗಳೆಂದು ತಿಳಿದು, ಅಂಗಗಳಲ್ಲಿ ಉಕ್ತಪ್ರಕಾರದಿಂದ ಅತ್ಯಂತ ಶ್ರದ್ಧಾಭಕುತಿಯಿಂದ ಹಾಂಗೂ ಸಂತೋಷದಿಂದ ಪ್ರತಿದಿನದಲ್ಲೂ ಧಾರಣಮಾಡತಾ, ಹಾಂಗೇ

ಕಂಠಮಧ್ಯದಲ್ಲಿ ಶ್ರೀಪರಮಾತ್ಮಗೆ ಪ್ರೀತಿಯಾದ ಶ್ರೀತುಲಸೀಕಾಷ್ಠ ನಿರ್ಮಿತ ಮಣಿಮಾಲವೇನು, ಪದ್ಮದಲ್ಲಿ ಜನಿತ ಬೀಜದ ಮಾಲವೇನು, ಈ ಮಾಲಾಗಳನ್ನು ಧಾರಣಮಾಡಿದವನಾಗಿ ದೇವರನ್ನ ಸ್ತೋತ್ರಮಾಡಬೇಕು. ಏನೆಂತಂದರೆ, ಶ್ರೀದೇವೇರಿಗೆ ಭೂದೇವೇರಿಗೆ ಪತಿಯಾದವನೇ ಮೋಕ್ಷಪ್ರದನಾದವನೇ, ತ್ರಿ = ಮೂರಾದಂಥ, ಜಗತ್ = ಬ್ರಹ್ಮಾದಿ ಪುಷ್ಕರಾಂತ ನವಕೋಟಿ ದೇವತೆಗಳು, ಆಜಾನಜರು ದೇವಗಂಧರ್ವಾಂತ ಇಪ್ಪತ್ನಾಲ್ಕು ಕೋಟಿ ದೇವತೆಗಳು, ಮಾನುಷಗಂಧರ್ವರಾರಭ್ಯ ತೃಣಾಂತ ನಿರಂಶರು ಅಂತು-ಈ ತ್ರಿವಿಧ ಜಗತ್ತಿನ ದೆಸೆಯಿಂದ ವಂದ್ಯನಾದವನೇ, ದ್ವೇಷಿಗಳಾದ ಅಸುರರ ಶಿಕ್ಷಾಮಾಡತಕ್ಕವನೇ, ರಮಾಬ್ರಹ್ಮಾದಿ ತೃಣಾಂತ ತ್ರಿವಿಧರಾದ ಸರ್ವರಿಗೂ ಸ್ವಾಮಿಯಾದವನೇ, ಅಂತರ್ನಿಯಾಮಕನಾದವನೇ, ನನಗೂ ನನ್ನ ಕುಲದವರಾದ ಭಕ್ತರ ಸಮೂಹಕ್ಕೂ ಕುಲದೈವ ಎಂತ ಸ್ಮರಣೆ ಮಾಡಿದರೆ, ತನ್ನ ಪಾದ ನಂಬಿದವ-ಎಂತ ತಿಳಿದವನಾಗಿ, ಶ್ರೀಪರಮಾತ್ಮ ಶುದ್ಧವಾದ ಜ್ಞಾನ ಭಕುತಿ ವೈರಾಗ್ಯಗಳ ಕೊಟ್ಟು ಸಂರಕ್ಷಣ, ಮಾಡತಾನೆ. ಆದ್ದರಿಂದ ನಾಮಮುದ್ರೆಗಳಿಂದ ಅಲಂಕೃತನಾಗಿ ಪ್ರಾರ್ಥನೆ-ಎಂಬ ಬಾಹ್ಯ ದೀಕ್ಷಾ ಆದಿಯಲ್ಲಿ ಮಾಡತಾ ಬಂದರೆ, ಅಂತರ್ದೀಕ್ಷಾಕ್ಕೆ ಶ್ರೀದೇವರು ಪ್ರೇರಣೆ ಮಾಡತಾರೆಂದು ತಾತ್ಪರ್ಯ. ॥೨೦॥

## ೨. ಭಾವಪ್ರಕಾಶಿಕೆ

ಅಜ್ಞಾನಿಯಾದರೂ ವಿಷ್ಣುದೀಕ್ಷೆಯನ್ನು ಧರಿಸಬೇಕು. ಗೋಪೀ ಚಂದನದಿಂದ ೧೨ ಊರ್ಧ್ವಪುಂಡ್ರಗಳನ್ನು ಧರಿಸುವುದು. ಅದರ ಮೇಲೆ ಶಂಖ, ಚಕ್ರ, ಗದಾ, ಪದ್ಮ, ನಾರಾಯಣ ಮುದ್ರೆಗಳನ್ನು ಧರಿಸುವುದು. ತಪ್ತಮುದ್ರಾಧಾರಣೆಯನ್ನು ಮಾಡಿಕೊಳ್ಳುವುದು. ಇವು ಬಾಹ್ಯದೀಕ್ಷೆಗಳು. ಈ ದೀಕ್ಷೆಗಳು ಅಜ್ಞಾನಿಗಳಿಗೂ, ಜ್ಞಾನಿಗಳಿಗೂ ಸಮವಾದುವು. ಆದುದರಿಂದ ಎಲ್ಲರೂ ಧರಿಸಬೇಕು. ಅಜ್ಞಾನಿಗಳೆಂದರೆ ಸಣ್ಣಮಕ್ಕಳು, ಪಶುಗಳು, ಪಾತ್ರೆಗಳು, ಒಡವೆಗಳು, ರಥ, ಧ್ವಜ, ಪತಾಕಾದಿ ಎಲ್ಲಾ ಪದಾರ್ಥಗಳೂ ಅಜ್ಞಾನಿಗಳಲ್ಲಿ ಸೇರುವವು. ಈ ವಸ್ತುಗಳ ಮೇಲೆ ಇವೆಲ್ಲವೂ ಭಗವ

ತತ್ಸಂಬಂಧಿಗಳೆಂದು ತೋರಿಸುವುದಕ್ಕಾಗಿ ದ್ವಾದಶನಾಮಗಳನ್ನು ಮುದ್ರೆಗಳನ್ನು ತಾನೇ ಹಚ್ಚಬೇಕು. ಹೀಗೆ ಗೋಪೀಚಂದನ ಮುದ್ರೆಗಳನ್ನು ಧರಿಸಿ, ಕಂಠದಲ್ಲಿ ತುಲಸೀಮಣಿ, ಮಾಲೆಯನ್ನು, ಪದ್ಮಾಕ್ಷದ ಸರವನ್ನು ಧರಿಸಿದರೆ, ಬಾಹ್ಯದೀಕ್ಷೆಯನ್ನು ಧರಿಸಿದಂತಾಯಿತು. ತದನಂತರ ಮುಕುಂದ, ಮೂರುಲೋಕವಂದ್ಯ, ಸರ್ವಸ್ವಾಮಿ-ಮಮಕುಲದೈವವೇ-ಎಂದು ಉಪಾಸನೆ ಮಾಡುವುದು ಅಂತರ್ದೀಕ್ಷೆ. ಇವೆರಡರಿಂದ ದೀಕ್ಷಿತನೆಂದೆನಿಸಿದವನನ್ನು ಶ್ರೀಪರಮಾತ್ಮನು ರಕ್ಷಿಸುವನೆಂದು ತಾತ್ಪರ್ಯ. ॥೨೦॥

## ೩. ಭಾವದರ್ಪಣ

"ಅಂಕಿತಂ ಶಂಖಚಕ್ರಾದ್ಯೈರ್ವಿಷ್ಣುದೀಕ್ಷಾನ್ವಿತಂ ನರಂ। ಯೋ ನಿಂದತಿ ವಿಮೂಢಾತ್ಮಾ ಸ ದ್ವೇಷ್ಟಾ ವಿಷ್ಣುಮೇವಹಿ । ಈ ಮೇರೆಗೆ ವೈಷ್ಣವ ಚಿನ್ಹ ಧಾರಣಮಾಡಿ ಭಗವನ್ನಾಮ ಸ್ಮರಣ ಮಾಡು–ಎನ್ನುತ್ತಾರೆ. ಮುಂದ ನಾದರು ಇತಿ. ಕಂಧರ = ಕೊರಳು, ನಲವಿಂದೆ = ಸಂತೋಷದಿಂದೆ.
॥೨೦॥

## ೪. ಶ್ರೀವ್ಯಾಸದಾಸಸಿದ್ಧಾಂತಕೌಮುದೀ

"ಮುಂದ" ಇತಿ ॥ "ನಲವಿಂದ"–ಪ್ರೀತಿಯಿಂದ ॥೨೦॥

## ಕನ್ನಡಾರ್ಥ

ಜ್ಞಾನಿ, ಅಜ್ಞಾನಿಗಳೆಲ್ಲರಿಗೂ ಸಾಧಾರಣವಾಗಿರುವ ಬಾಹ್ಯದೀಕ್ಷೆಯನ್ನು ತಿಳಿಸುತ್ತಾರೆ. "ಮುಂದನಾದರು" ಎಂಬ ಪದ್ಯದಿಂದ. ತಪ್ತಮುದ್ರಾಗಳು, ದ್ವಾದಶೋರ್ಧ್ವಪುಂಡ್ರಗಳು, ಶ್ರೀಮುದ್ರೆಗಳು ಮತ್ತು ಗೋಪೀಚಂದನ ಇವುಗಳನ್ನು ದೇಹದಲ್ಲಿ ಧರಿಸುವುದು, ಬಾಹ್ಯದೀಕ್ಷೆ ಎನಿಸುತ್ತದೆ. ಈ ದೀಕ್ಷೆಯು ಜ್ಞಾನಿಗಳಿಗೂ, ಅಜ್ಞಾನಿಗಳಿಗೂ ಅವಶ್ಯವಾಗಿ ಬೇಕು. ॥೨೦॥

೫. ಶ್ರೀಗುರುಹೃದಯಪ್ರಕಾಶಿಕೆ

ಬಾಹ್ಯದೀಕ್ಷೆಯನ್ನು ತಿಳಿಸುತ್ತಾರೆ. ವೇದಾಂತ ಶಾಸ್ತ್ರಾರ್ಥ ಮೊದಲಾದ್ದನ್ನ ತಿಳಿಯುವ ಶಕ್ತಿಸಾಲದ ಅಲ್ಪಜ್ಞಾನಿಯಾದಾಗ್ಯೂ, ಮೇಲೆ ಹೇಳಿದ ಅಂತರ್ದೀಕ್ಷೆಯನ್ನು ಸಾಮಾನ್ಯವಾಗಿ ಮನಸ್ಸಿನಲ್ಲಿ ದೃಢವಾಗಿ ಇಟ್ಟುಕೊಂಡು, ಗೋಪೀಚಂದನ,ಶ್ರೀಮುದ್ರೆ ಎಂಬ ಚಕ್ರ, ಶಂಖ, ಗದಾ, ಪದ್ಮ,ನಾರಾಯಣ ನಾಮಮುದ್ರೆಗಳನ್ನು ಸದಾ ಧರಿಸುತ್ತಾ, ತಪ್ತಚಕ್ರಾದಿ ಮುದ್ರೆಯನ್ನು ಗುರುಮುಖದಿಂದ ಸ್ವೀಕರಿಸಿ, ನಿತ್ಯ ಸ್ನಾನಾನಂತರ ಶ್ರೀತುಳಸೀ, ಪದ್ಮಾಕ್ಷೀ, ಧಾತ್ರೀಮಣಿ ಮೊದಲಾದ ಜಪಸರಗಳನ್ನು ಧರಿಸಿ, ಕಂಧರವೆಂಬ ಕುತ್ತಿಗೆಯಲ್ಲೂ ಆ ಸರಗಳನ್ನು ಧರಿಸಿ, ಮುಕ್ತಿಪ್ರದನೇ,ಮೂರುಲೋಕದ ಜನರಿಂದ ನಮಸ್ಕೃತನೇ, ಶ್ರೀ ಭೂದೇವೇರ ಅರಸನೇ, ನಮ್ಮ ಕುಲಸ್ವಾಮಿಯೇ, ಸರ್ವ ಸ್ವಾಮಿಯೇ-ಎಂದು ನೆನೆಯುವಂಥ, ಹೊರಗಿನ ಗುರ್ತುಗಳ ದೀಕ್ಷೆಯುಳ್ಳವರನ್ನು ಸಹ ದೇವರ ರಕ್ಷಿಸುವನು.

ಅಯಂ ಸರ್ವೇಷ್ಟದಾತಾ ಮೇಸರ್ವಾನಿಷ್ಟ ನಿವಾರಕಃ ।
ಸರ್ವೋತ್ಕೃಷ್ಟೋಯ ಮೇವೈಕಃ ತದೀಯೋ ಹಂಸ ಮೇ ಗತಿಃ ॥
ಇತಿ ಜ್ಞಾನಂ ನಿಶ್ಚಿತಂ ಯತ್ ಸಾ ದೀಕ್ಷಾಭ್ಯಂತರಾಸ್ಮೃತಾ ।
ನಾಮ ಚಿನ್ಹಾದಿನಾ ದೇಹೇ ವಹ್ನಿನಾ ಚ ಮೃದಾಂಕನಂ ।
ಸಾ ಬಾಹ್ಯಾ ಪ್ರೋಚ್ಯ ತೇ ದೀಕ್ಷಾಹ್ಯ ಜ್ಞಾನಾಂ ಜ್ಞಾನಿನಾಮಪಿ ॥

ಎಂಬುದೇ ಮೊದಲಾದ ವಿಷ್ಣುರಹಸ್ಯಾರ್ಥ ವಿವರಿಸಲ್ಪಟ್ಟಿತು.

॥೨೦॥

## ಸರ್ವವ್ಯಾಖ್ಯಾನಸಾರಸಂಗ್ರಹ

೧. ಬಾಹ್ಯದೀಕ್ಷಾ ಮತ್ತು ಅಂತರ್ದೀಕ್ಷಾ ಇವೆರಡೂ ಶ್ರೀವಿಷ್ಣುವಿನ ಪ್ರೀತ್ಯರ್ಥವಾಗಿ ಅತ್ಯಗತ್ಯ. ಅಂತರ್ದೀಕ್ಷೆಯು ಉತ್ತಮಪಕ್ಷವು. ಅಂತ

ದೀಕ್ಷೆಯಿಲ್ಲದೇ ಬರೀ ಬಾಹ್ಯದೀಕ್ಷಾಯುತನಾದರೆ, ಅದು ಭಗವತ್ಪ್ರೀತಿಗೆ ಪೂರ್ಣವಾಗಿ ವಿಷಯುವಾಗಲಾರದು.

೨. ಮಾನವನು ಮೂಢನಾಗಿರಬಹುದು. ಅಂತಹ ಮಂದನಾದರೂ ಸರಿಯೆ, ದೇಹಕ್ಕೆ ಗೋಪೀಚಂದನ ಲೇಪನರೂಪವಾದ ದ್ವಾದಶನಾಮ ಗಳನ್ನು ಯುಕ್ತಸ್ಥಾನಗಳಲ್ಲಿ ಧರಿಸಬೇಕು. ಆ ದ್ವಾದಶನಾಮಗಳ ಧಾರಣವು ಕೇಶವಾದಿ ದಾಮೋದರ ಪರ್ಯಂತ ಶ್ರೀ ಹರಿಗೆ ಅಲಂಕಾರವೆಂಬ ಅನುಸಂಧಾನವಿರಬೇಕು.

೩. ಅಂತೆಯೇ, ಶಂಖ, ಚಕ್ರ, ಗದಾ, ಪದ್ಮ ಮತ್ತು ನಾರಾಯಣ ಎಂಬ ಶ್ರೀ ಹರಿಯ ಆಯುಧ ರೂಪವಾದ ಪಂಚಮುದ್ರೆಗಳನ್ನು ಧರಿಸಬೇಕು. ಇವುಗಳಲ್ಲಿ ಕ್ರುದ್ಧೋಲ್ಕಾದಿ ಪಂಚರೂಪಗಳನ್ನು ಸಂಸ್ಮರಿಸ ಬೇಕು. ಮುದ್ರಾಗತ ಈ ಪಂಚಭಗವದ್ರೂಪಗಳು ಅವಿದ್ಯಾಪಂಚಕಗಳ ಪರಿಹಾರಕವು.

೪. ತುಲಸೀ ಕಾಷ್ಠದಿಂದ ಮಾಡಿದ ಮಣಿಗಳನ್ನು ಪೋಣಿಸಿರುವ **ಶ್ರೀ ತುಳಸೀಸರವನ್ನು** ಕಂಠದಲ್ಲಿ ಧರಿಸಬೇಕು. ಇದು ಲಕ್ಷ್ಮೀಸಾನ್ನಿಧ್ಯ ವಿಶೇಷ. ಶ್ರೀರಮಾದ್ವಾರವೇ ಶ್ರೀ ಹರಿಯು ಪೂಜಾದಿಸೇವೆಗಳನ್ನು ಸ್ವೀಕರಿಸುವನು. ಶ್ರೀ ತುಲಸೀಮಾಲೆಯು ಕಂಠಕ್ಕೆ ಭೂಷಣವು. ಅದು ವಿಷ್ಣುಪ್ರೀತ್ಯರ್ಥವು.

೫. ಕಮಲದ ನಾಳಗಳಲ್ಲಿರುವ ಬೀಜಗಳನ್ನು ಒಣಗಿಸಿ, **ಪದ್ಮಾಕ್ಷ ಸರವನ್ನು** ತಯಾರಿಸುವರು. ಇದು ಜಪ ಮತ್ತು ಧ್ಯಾನ ಸಮಯಗಳಲ್ಲಿ ಎಣಿಕೆಗೆ ಸಹಾಯಕವಾಗಿರುವುದು. ಕಮಲಾಕ್ಷಿಮಣಿಯನ್ನು ಸಹ ಶ್ರೀ ತುಳಸೀಮಾಲೆಯೊಡನೆ ಕಂಠದಲ್ಲಿ ಧರಿಸಬೇಕು.

ಇವೆಲ್ಲವೂ **ಬಾಹ್ಯದೀಕ್ಷೆಗಳು.** ಉತ್ತಮ ಜ್ಞಾನಾನುಸಂಧಾನದಿಂದ ಬಾಹ್ಯದೀಕ್ಷಾ ಬದ್ಧನಾದರೆ ಉತ್ತಮ ಫಲ. ಹಾಗಿಲ್ಲದೆ ಮುಂದನಾಗಿ ಧರಿಸಿದರೂ, ಶ್ರೀ ಹರಿಯು ಅನುಗ್ರಹಿಸುವನು.

೬. ಪೂರ್ವೋಕ್ತ ಬಾಹ್ಯದೀಕ್ಷಕನಾಗಿ, ಮುಕ್ತಿಪ್ರದನಾದ **ಮುಕುಂದನನ್ನು** ಮನಸಾ ಸ್ಮರಿಸುತ್ತ, ಶ್ರೀದೇವಿ ಮತ್ತು ಭೂದೇವಿಗೆ ಸರ್ವೇಶನನ್ನು ಚಿತ್ತದಲ್ಲಿ ಸ್ಥಾಪಿಸಿಕೊಂಡು, ಮೂರ್ಲೋಕದ ಪ್ರಭುವಾದ **ತ್ರಿಜಗದ್ವಂದ್ಯನೇ** ಸರ್ವಪ್ರಕಾರದಲ್ಲೂ ನನಗೆ ನಿಯಾಮಕನಾಗಿರುವ, ಎನ್ನ **ಸರ್ವಸ್ವಾಮಿಯೇ**-ನನ್ನ ಕುಲದೈವನಾದ ಹೇ ಹರೇ,–ನನ್ನನ್ನು ಉದ್ಧರಿಸು ಎಂದು ಭಕ್ತಿಭಾವದಿಂದ ಪ್ರಾರ್ಥಿಸಿ, ಆವನ ಪಾದಾರವಿಂದಗಳಿಗೆ ಪೂರ್ಣ ಶರಣಾಗತನಾದವ. ಬಾಹ್ಯ ಹಾಗೂ ಅಂತರ್ದೀಕ್ಷಾಯುಕ್ತನಾದ ಅಂತಹ ಭಕ್ತನನ್ನು ಸದಾ ಸಂರಕ್ಷಿಸುವನು.

**ಪ್ರಮಾಣ :–**

**"ಅಂಕಿತಂ ಶಂಖಚಕ್ರಾದ್ಯೈಃತ ವಿಷ್ಣುದೀಕ್ಷಾನ್ವಿತಂ ನರಂ|**
**ಯೋನಿದಂತಿ ವಿಮೂಢಾತ್ಮಾ ಸ ದ್ವೇಷ್ಟಾ ವಿಷ್ಣುರ್ವೇವಹಿ||" ||೨೦||**

## ಪದ್ಯ-೨೧

ಮೂಲ :–

**ಪ್ರಾಯಧನಮದದಿಂದ ಜನರಿಗೆ |**
**ನಾಯಕ ಪ್ರಭುವೆಂಬ ಪೂರ್ವದಿ |**
**ತಾಯಿ ಪೊಟ್ಟೆಯೊಳಿರಲು ಪ್ರಭುವೆಂದೇಕೆ ಕರೆಯರಲ್ಲೆ ||**

**ಕಾಯ ನಿನ್ನನು ಬಿಟ್ಟು ಪೋಗಲು।**
**ರಾಯ ನೀನೆಂಬುವ ಪ್ರಭುತ್ವ ಪ।**
**ಲಾಯನವನೈದಿತು ಸಮಿಾಪದಲ್ಲಿದ್ದರದು ತೋರು॥ ॥೨೧॥**

**ಅವತರಣಿಕೆ :–**

ಪ್ರಾಪಂಚಿಕಭೋಗಗಳು, ಐಶ್ವರ್ಯ, ಪದವಿ, ವೈಭವಾದಿಗಳು ಅಶಾಶ್ವತ ಎಂದು ತಿಳಿಸುತ್ತಾರೆ.

**ಪ್ರತಿಪದಾರ್ಥ ;–**

**ಪ್ರಾಯ** = ಯೌವ್ವನಾವಸ್ಥೆ. **ಧನ** ಐಶ್ವರ್ಯ **ಮದದಿಂದ** = ಈ ಮದಗಳಿಂದ ಉನ್ಮತ್ತನಾಗಿ. **ಜನರಿಗೆ** = ಪತ್ನಿ ಹಾಗೂ ಸೇವಕ ವರ್ಗದವರಿಗೆ, **ನಾಯಕ** ಪತಿ ಎಂತಲೂ, **ಪ್ರಭು** = ಯಜಮಾನ (ನಿಯಾಮಕ) ನೆಂತಲೂ **ಎಂಬಿ** = ಎಂದು ಹೇಳುತ್ತೀಯೆ, ಇದರಿಂದ ಹೇಳಿಸಿಕೊಳ್ಳುವೆ. **ಪೂರ್ವದ** = ಇದಕ್ಕಿಂತ ಮುಂಚೆ. **ತಾಯಿ ಪೊಟ್ಟೆಯೊಳಿರಲು** = ಮಾತೃಗರ್ಭದಲ್ಲಿದ್ದಾಗ. **ಪ್ರಭುವೆಂದು** = ನೀನೇ ಯಜಮಾನನೆಂದು, **ಏಕೆ ಕರೆಯರೆಲ್ಲೈ** = ಯಾವ ಕಾರಣಕ್ಕಾಗಿ ಕರೆಯುವುದಿಲ್ಲ ? **ಕಾಯ** = ನಶ್ವರವಾದ ನಿನ್ನ ದೇಹವು. **ನಿನ್ನನು ಬಿಟ್ಟು ಪೋಗಲು** = ಮರಣ ಪ್ರಾಪ್ತಿಯಾದ ಸಮಯದಲ್ಲಿ ಜೀವವನ್ನು ಬಿಟ್ಟು ಹೋಗುತ್ತಿರಲು (ದೇಹ ಪತನವಾಗುತ್ತಿರಲು), **ರಾಯ ನೀನೆಂಬುವ** = ನೀನು ನಾಯಕ. ಪ್ರಭುವೆಂಬುವ **ಪ್ರಭುತ್ವ** = ರಾಜತ್ವವಾಗಲೀ. ಯಾಜಮಾನ್ಯವಾಗಲೀ **ಪಲಾಯನವ ಐದಿತು** = ಓಡಿಹೋಯಿತು. **ಸಮಿಾಪದಲ್ಲಿದ್ದರೆ** = ಆ ಐಹಿಕ ಭಾಗ್ಯಗಳೂ, ತನುವಿನ ಪ್ರಾಯಮದ ಇವುಗಳೇನಾದರೂ ನಿನ್ನ ಹತ್ತಿರದಲ್ಲಿದ್ದರೆ, **ಅದು ತೋರು** = ಅವುಗಳನ್ನು ತೋರಿಸು, ಹಾಗಾದರೆ ! ॥೨೧॥

# ವ್ಯಾಖ್ಯಾನಗಳು

## ೧. ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ

ಐಹಿಕಭೋಗಗಳು ಅಶಾಶ್ವತ ಎಂತ ಹೇಳತಾರೆ.

ತಾಯಿ ಉದರದಿಂದ ಜನನವಾದ ಅನಂತರ ಕಾಲವಿಳಂಬದ ಮ್ಯಾಲೆ ಯೌವನ ಪ್ರಾಪ್ತವಾದರೆ ಆಗ, ಯೌವನಸರಾದ ಸ್ತ್ರೀಜನರಿಗೆ ಯುಜಮಾನ ಎಂತಲೂ, ದ್ರವ್ಯದಿಂದ ಸಹಿತವಾದ ಮದದಿಂದ ಸಹಿತನಾಗಿ ಜನ ಸಮೂಹ ದಿಂದ ದೇಶಾಧಿಪತಿ ಎಂತಲೂ ಎನಿಸಿಕೊಂಬಿ. ನಾಯಕ, ಪ್ರಭು ಎಂಬುದು ಜನನಾನಂತರ ಮಧ್ಯಕಾಲದಲ್ಲಿ ಬಂದದ್ದು. ಇದಕ್ಕೆ ಪೂರ್ವಾವಸ್ಥವಾದ ಮಾತೃಗರ್ಭದಲ್ಲಿ ಇದ್ದು ನಾನಾವಿಧವಾದ ಗರ್ಭಯಾತನಾ ಪಡತಾ ಇರೋ ಕಾಲದಲ್ಲಿ ಪ್ರಭು ಎಂತಲೂ, ನಾಯಕ ಎಂತಲೂ ಏತಕ್ಕೋಸ್ಕರ ಕರಯೋ ದಿಲ್ಲ ? ಆಗ್ಗೆ ನಾಯಕತ್ವವೂ ಇಲ್ಲ, ಪ್ರಭುತ್ವವೂ ಇಲ್ಲವಾದ್ದರಿಂದ ಕರಯೋದಿಲ್ಲ. ಎಲೋ ಪ್ರಾಣಿ ಈ ದೇಹಗತ ಜೀವ ನಿನ್ನ ಶರೀರವನ್ನು ಬಿಟ್ಟು ಪ್ರತ್ಯೇಕವಾಗಿ ಹೋದರೆ, ಎಾದರೆ ಮೃತನಾದರೆ, ರಾಯ ನೀನೆಂತಲೂ, ಪ್ರಭು ಎಂತಲೂ, ನಾಯಕ ಎಂತಲೂ ಎನತಕ್ಕ ರಾಜತ್ವ ವೇನು, ಯುಜಮಾನತ್ವವೇನು ಓಡಿಹೋಗೋದಾಯಿತು. ನಂತರ ಪ್ರೇತ ಎಂಬ ನಾಮ ಬಂತು. ಪ್ರಭುತ್ವ ನಾಯಕತ್ವಗಳಾದ ಎರಡೂ ತಾಯಿ ಗರ್ಭದಲ್ಲಿ ಇದ್ದಾಗೇ ಆಗಲಿ, ಮರಣಾನಂತರದಲ್ಲಿ ಆಗಲಿ, ನಿನ್ನ ಸಮೀಪ ದಲ್ಲಿ ಇದ್ದದ್ದೇ ಖರೆ ಆದರೆ, ಆ ಎರಡು ಕಾಲದಲ್ಲಿ ತೋರಿಸೋವನಾಗು- ಎಂದರೆ, ಆ ನಾಯಕತ್ವ ಪ್ರಭುತ್ವ, ಎರಡೂ ಸಮೀಪದಲ್ಲಿ ಇರೋದಿಲ್ಲ ಎಂತ ತಾತ್ಪರ್ಯ.

**ವಿಶೇಷಾರ್ಥ :–** ದ್ರವ್ಯವೇನು, ಪ್ರಾಯಪೇನು, ಪ್ರಭುತ್ವವೇನು ಇವೇ ಮೊದಲಾದ ಐಹಿಕ ಸಂಬಂಧಗಳು ದಾಪವವೆ ಅವು ಯಾವತ್ತೂ

ಇಚ್ಛಾದಿಂದ ಬಂದವು. ದೇಹ ಬಿಡೋಕಾಲಕ್ಕೆ ಇವು ಯಾವತ್ತೂ ಬಿಟ್ಟು ಹೋಗತಕ್ಕವು. ಹುಟ್ಟುತಾ ಸಂಗಾತಿ ಬಂದದ್ದಲ್ಲ, ಹೋಗತಾ ಸಂಗಾತ ಬರೋದಲ್ಲ. ಹುಟ್ಟುತಾ ಸಂಗಾತ ಬಂದ ದೇಹವೇ ಕೊನೆಗೆ ಸಂಗಾತ ಬಾರದ ಮ್ಯಾಲಿ, ಕಡಿಮೀದು ಸಂಗಾತ ಬಂದೀತೇ, ಬರಲಾರದು. ಆದ್ದರಿಂದ ಕೊನಿಗಾಲಕ್ಕೆ ಸಂಗಾತ ಬಾರದೆ ಇರುವ ದೇಹದ ಅಭಿಮಾನ ವೇನು, ಐಹಿಕ ಸಂಬಂಧಪಟ್ಟ ದಾರಾಪುತ್ರಾದಿಗಳೇನು, ಐಹಿಕಸಂಬಂಧ ದ್ರವ್ಯ ಸುಖಾದಿಗಳೇನು, ಐಹಿಕ ಸಂಬಂಧವಾದ ಯಾವತ್ತರಲ್ಲೂ ಅಭಿಮಾನ ತ್ಯಾಗ ಮಾಡಿ, ಇವುಗಳೇ ತಾರಕವೆಂಬ ಬುದ್ಧಿಯನ್ನು ಮರತವನಾಗಿ, ಕಾಲ ತ್ರಯದಲ್ಲಿ ಸಂಗಾತ ಇದ್ದು ಕಾಪಾಡತಕ್ಕ ಪರಮಾತ್ಮನಲ್ಲಿ ಅಂತರ್ದೀಕ್ಷಾ ಯುಕ್ತನಾಗಿ, ವಿಷಯಭೋಗಾಭಿಮಾನ ತ್ಯಾಗಮಾಡಿ, ಸರ್ವಾಭಿಮಾನ ವನ್ನೂ ಪರಮಾತ್ಮನ ಪಾದದಲ್ಲಿ ಇಡಬೇಕೆಂದು ತಾತ್ಪರ್ಯವು. ॥೨೦॥

## ೨. ಭಾವಪ್ರಕಾಶಿಕೆ :–

ಲೋಕದಲ್ಲಿ ಜನರು ಯೌವನ ಮತ್ತು ಧನ–ಇವೆರಡರ ಮದದಿಂದ ನಾನು ಎಲ್ಲರನ್ನೂ ಪೋಷಿಸುತ್ತಿರುವೆನು. ನಾನು ಧೊರೆಯೆಂದು ಹೇಳಿ ಕೊಳ್ಳುತ್ತಿರುವನು. ನಾನು ಪ್ರಭುವೆಂದು ಹೇಳುವವರನ್ನು ಈ ಸ್ಥೂಲ ದೇಹವನ್ನು ನೋಡಿ ಪ್ರಭುವೆನ್ನುವರೋ ? ಅಥವಾ ಜೀವನನ್ನೋ ? ದೇಹಕ್ಕೆ ಪ್ರಭುತ್ವ ಕೊಟ್ಟರೆ ತಾಯಿಯ ಗರ್ಭದಲ್ಲಿ ಈ ಶರೀರ ಪೂರ್ಣ ವಾದಾಗಲೂ, ಮಗುವಾಗಿದ್ದ ಕಾಲದಲ್ಲೂ ಇದೇ ಶರೀರದಿದ್ದಿತಷ್ಟೇ ?, ಆಗೇಕೆ ಪ್ರಭುವೆಂದು ಯಾರೂ ಹೇಳುವುದಿಲ್ಲ. ಶರೀರವು ಪ್ರಭುವಾದುದೇ ನಿಜವಾದರೆ, ಕಾಲಾಂತರದಲ್ಲಿ ಕಿವಿ ಮೊದಲಾದ ಇಂದ್ರಿಯಗಳು ನಮ್ಮನ್ನೇಕೆ ಬಿಡುವುವೂ. ನಮ್ಮ ಪ್ರಭುತ್ವವು ಅವುಗಳ ಮೇಲೆ ಏಕಿಲ್ಲ ? ಶರೀರವು ನಮ್ಮನ್ನೇಕೆ ಬಿಟ್ಟು ಹೋಗುವುದು ? ಆದ್ದರಿಂದ ಪ್ರಭುತ್ವವು ದೇಹಕ್ಕಲ್ಲ ವೆಂದು ಹೇಳಿದಂತಾಯಿತು. ನಮ್ಮೊಳಗಿದ್ದು ಬಿಂಬರೂಪಿಯಾದ ಪರ ಮಾತ್ಮನು ಮಾಡಿಸುವ ಪ್ರಭುತ್ವವನ್ನು ಯೌವನಾದಿಮದಗಳಿಂದ ತಾನು ಪ್ರಭುವೆಂದು ಹೇಳುವವರು ಪೂರ್ವದಲ್ಲಿ ಯಾವನು ರಾಜಾಧಿರಾಜನೆಂದು

ಹೊಗಳಿಸಿಕೊಳ್ಳುತ್ತಿರುವನೋ ಆದೇ ಮಹಾರಾಜನೇ ಕಾಲದಿಂದ ಆಯುಷ್ಯವು ಕ್ಷೀಣವಾಗಿ ರಾಜನೆಂಬ ಬಿರುದುಳ್ಳ ಆ ಶರೀರವನ್ನು ಬಿಟ್ಟು ಕೂಡಲೇ, ಆ ರಾಜ ಶರೀರದಲ್ಲಿರುವ ರಾಜತ್ವವು ಹೋಗಿ ಅಮೇಧ್ಯ, ಕ್ರಿಮಿ, ಅಥವಾ ಭಸ್ಮವೆನಿಸುವನು. ಆದ್ದರಿಂದ ಪ್ರಭುತ್ವಾದಿ ಶಬ್ದಗಳು ಅಂತರ್ಯಾಮಿಯಾದ ಪರಮಾತ್ಮನಿಗೆ ಸಲ್ಲುವುದೇ ಹೊರತು, ದೇಹಿಗಳಿಗೆ ಆ ಶಬ್ದವು ಬರುವುದಿಲ್ಲವೆಂದು ತಾತ್ಪರ್ಯ ॥೨೧॥

## ೩. ಭಾವದರ್ಪಣ :-

"ಮಯ್ಯೈವ ದತ್ತಸ್ವಾತಂತ್ರ್ಯತ್ಕೇವಲೇಷ್ವಪಿ ಕರ್ಮಸು । ತಾವನ್ಮಾತ್ರೇಣ ಸಂಮುಗ್ಧಾಃ ಮನ್ಮಾಯಾಮುಷ್ಟಚೇತನಾಃ" । ಎಂಬ ಬಿಂಬಕ್ರಿಯಾಚಿಂತನಕ್ಕೆ ತಂದು ಸಾಧನ ಮಾಡಿರೆಂದು ಭಾವ ತೋರಿಸುತ್ತಾರೆ-ಪ್ರಾಯಧನೇತಿ. ॥೨೧॥

## ೪. ಶ್ರೀ ವ್ಯಾಸದಾಸ ಸಿದ್ಧಾಂತ ಕೌಮುದೀ

"ಪ್ರಾಯ" ಇತಿ ॥೨೧॥

## ಕನ್ನಡಾರ್ಥ

ಬಿಂಬರೂಪಿಯಾದ ಪರಮಾತ್ಮನ ಪ್ರಭುತ್ವವನ್ನು ಜೀವನು ಯೌವನ, ಧನ, ಮುಂತಾದ, ಮಮಕಾರ, ಅಹಂಕಾರ ಮೂಲಕವಾಗಿ ತನ್ನಲ್ಲಿ ಆರೋಪಿಸಿಕೊಳ್ಳುತ್ತಾನೆ-ಎಂಬುದಾಗಿ ನಿರೂಪಿಸುತ್ತಾರೆ. "ಪ್ರಾಯ" ಎಂಬ ಪದ್ಯದಿಂದ. ॥೨೧॥

## ೫. ಶ್ರೀ ಗುರುಹೃದಯ ಪ್ರಕಾಶಿಕೆ

ದೃಷ್ಟಾಂತನಿಮಿತ್ತ ಸಹಿತವಾಗಿ ಜೀವ ಪರಮಾತ್ಮರ ಭೇದವನ್ನು ಸ್ವಾತಂತ್ರ್ಯಾಸ್ವಾತಂತ್ರ್ಯಗಳಿಂದ ಬೋಧಿಸುತ್ತಾರೆ- ನಾಲ್ಕು ಪದ್ಯಗಳಿಂದ

ಪ್ರಾಯ ಎಂದು. ಪ್ರಾಯ ಧನ ಇವೇ ಮೊದಲಾದ ಮದದಿಂದ ನಾಯಕ ಎಂಬ ಸ್ವಾಮಿ,ಪ್ರಭು-ಸಮರ್ಥ ಎಂದು, ನಿನ್ನನ್ನು ಅಂಬಿ. ಅಂದರೆ ಜೀವರು ಯೌವನ ಆಧಿಪತ್ಯ ಬಂದಾಗ ಮಾತ್ರ ಸ್ವತಂತ್ರರೆಂದು ದೇವರ ಸನ್ನಿಧಾನ ನಿಮಿತ್ತದಿಂದ ಔಪಚಾರಿಕವಾಗಿ ಕರೆಸಿಕೊಳ್ಳುತ್ತಾರೆ. ತಾಯಿಗರ್ಭದಲ್ಲಿದ್ದಾಗಲೂ, ಕಾಯವೆಂಬ ಶರೀರ ಬಿಟ್ಟು ಹೋದಾಗಲೂ, ನಿನ್ನನ್ನು ಪ್ರಭುವೆಂದೂ ಯಾರೂ ಕರೆಯುವುದಿಲ್ಲ. ಮೊದಲಲ್ಲೂ ಕೊನೆಯಲ್ಲೂ ಇಲ್ಲದ ಪ್ರಭುತ್ವ, ಮಧ್ಯದಲ್ಲಿ ತೋರಿದ್ದು ದೇವರ ಸನ್ನಿಧಾನ ವಿಶೇಷದಿಂದಲೇ ಆದ್ದರಿಂದ, ಜೀವರಲ್ಲಿ ಪ್ರಭುತ್ವ ಪಲಾಯನವೆಂಬ ಓಟವನ್ನು ಹೊಂದಿತು, ಅಂದರೆ ಓಡಿಹೋಯಿತು. ಹಾಗಲ್ಲದಿದ್ದರೆ ತೋರಿಸಬಹುದು ಎಂದರ್ಥ.

**ನಯದಿದಮಗ್ರ ಆಸನ ಭವಿಷ್ಯದತೋ ನಿಧನಾದನಿಮಿತ್ತಕಮಂತರಾತ್ಮಯಿ ವಿಭಾತಿ ಮೃಷ್ಯಕರಸೇ**–ಎಂಬ **ಶ್ರುತಿಗೀತಾರ್ಥ** ವಿವರಿಸಲ್ಪಟ್ಟಿತು ॥೨೦॥

## ಸರ್ವವ್ಯಾಖ್ಯಾನಸಾರಸಂಗ್ರಹ

**ಬಾಲ್ಯತನ ಕಳೆದು** ಮಾನವನಿಗೆ ಯೌವ್ವನಾವಸ್ಥೆಯು ಬರುವುದು. ಆಗ ದೇಹಶಕ್ತಿ, ಕ್ರಿಯಾಸಾಮರ್ಥ್ಯ. ಉತ್ತಮವಾದ ಆರೋಗ್ಯ ಇತ್ಯಾದಿ ದೇಹಗತ ಸಂಪತ್ತುಗಳಿಂದ, **ಪ್ರಾಯಮದದಿಂದ** ಉನ್ಮತ್ತನಾಗಿ, ಸರ್ವಕ್ಕೂ ಮೂಲಕಾರಣನಾದ ಬಿಂಬವನ್ನು ಮರೆತು, ಅಹಂಕರ್ತೃತ್ವಾಭಿಮಾನಯುಕ್ತನಾಗಿ ಮದದಿಂದ ವರ್ತಿಸುವವನು.

ಸಂಪಾದಿತ ದ್ರವ್ಯ, ಹಿರಿಯರಿಂದ ಆರ್ಜಿತವಾದ ಸಂಪತ್ತು, ರಾಜತ್ವ, ಪ್ರಭುತ್ವ ಇತ್ಯಾದಿಗಳಿಂದ **ಧನವಂದ** ಉಂಟಾಗಿ ನಾನೇ ಕುಟುಂಬಕ್ಕೆ ಯಜಮಾನ, ರಾಜ್ಯಕ್ಕೆ ಪ್ರಭು ಎಂಬ ಭಾವನೆ ಮೂಡಿ, ಉನ್ಮತ್ತನಾಗುವನು.

ಆದರೆ ಅದೇ ಮಾನವನು ಈ ಸ್ಥಿತಿಗಿಂತ ಪೂರ್ವದಲ್ಲಿ ಮಾತೃಗರ್ಭದಲ್ಲಿದ್ದಾಗ, ಗರ್ಭಯಾತನೆಗಳಿಂದ ಬಳಲುತ್ತಿರುವನು. ಆಗ ಅವನನ್ನು ಕುಟುಂಬ ವರ್ಗದವರಾಗಲೀ, ರಾಜ್ಯದ ಪ್ರಜಾವರ್ಗವೇ ಆಗಲೀ, ಯಜಮಾನ ಹಾಗೂ ರಾಜನೆಂದು ಏಕೆ ಕರೆಯುವುದಿಲ್ಲ ? ಮಾತೃಗರ್ಭಗತ ಶಿಶುವಿಗೆ ಅಂತಹ ಯಜಮಾನ್ಯವಾಗಲೀ, ಪ್ರಭುತ್ವವಾಗಲೀ ಕೊಡುವುದಿಲ್ಲ.

ಮರಣ ಸಮಯದಲ್ಲಿ ಜೀವನಿಗೆ ದೇಹದಿಂದ ವಿಯೋಗ ಉಂಟಾಗುವುದು. ಆಗ ಪತನವಾಗುವ ದೇಹಕ್ಕೆ ಪ್ರಭುತ್ವಾದಿಗಳು ಎಂದಿಗಾದರೂ ಉಂಟೆ ! ಇಂತಹ ನಶ್ವರವಾದ ದೇಹವನ್ನು ನನ್ನದೆಂದು ಹೇಳಿಕೊಳ್ಳುವ ಜೀವನ ದೇಹಾಭಿಮಾನ ಅದೆಂತಹ ಹೇಯ ಭಾವನೆ ! ಜನನ ಕಾಲದಲ್ಲಾಗಲೀ, ಮರಣ ಸಮಯದಲ್ಲಾಗಲೀ, ತನ್ನ ಪ್ರಭುತ್ವ. ನಿಯಾಮಕತ್ವ, ಯಜಮಾನ್ಯ ಯಾವುವೂ ಸಮೀಪದಲ್ಲಿರುವುದಿಲ್ಲ. ಹಾಗಿದ್ದರೆ ತೋರಿಸು–ಎಂದು ಸವಾಲು ಹಾಕುತ್ತಾರೆ.

"ಹುಟ್ಟುತ್ತೇನೂ ತರಲಿಲ್ಲ. ಸಾಯುತ್ತೇನೂ ಒಯ್ಯಲಿಲ್ಲ ! ಎಂಬಂತೆ ನಶ್ವರವಾದ ಈ ದೇಹಸುಖಾನುಭೋಗಗಳು. ॥೨೦॥

## ಪದ್ಯ—೨೨

ವಾಸುದೇವೈಕಪ್ರಕಾರದಿ ।
ಈಶನೆನಿಸುವ ಬ್ರಹ್ಮ ರುದ್ರ ಶ ।
ಚೀಶ ಮೊದಲಾದಮರರೆಲ್ಲರು ದಾಸರೆನಿಸುವರು ॥
ಈ ಸುಮಾರ್ಗವ ಬಿಟ್ಟು ಸೋಹಮು ।
ಪಾಸನೆಯು ಗೈವ ನರ ದೇಹಜ
ದೈಶಿಕ ಕ್ಲೇಶಗಳು ಬರಲವನೇಕೆ ಬಿಡಿಸಿಕೊಳ ॥ ॥೨೨॥

**ಅವತರಣಿಕೆ**

ರಮಾ ಬ್ರಹ್ಮಾದಿ ಸಮಸ್ತರಿಗೂ ನಿಯಾಮಕನಾದ ವಾಸುದೇವ ನೊಬ್ಬನೇ ಸರ್ವೋತ್ತಮನೆಂತಲೂ, ಸೋಹಮುಪಾಸನೆಯು ಮಹಾ ಅನರ್ಥಕ್ಕೆ ಕಾರಣವೆಂತಲೂ ತಿಳಿಸುತ್ತಾರೆ– ॥೨೨॥

**ಪ್ರತಿಪದಾರ್ಥ**

**ವಾಸುದೇವ** = ಸಕಲ ಗುಣಗಣಪರಿಪೂರ್ಣನಾದ ವಾಸುದೇವ ನಾಮಕ ಶ್ರೀಪರಮಾತ್ಮನು. **ಏಕಪ್ರಕಾರದಿ** = ಅನಾದ್ಯನಂತ ಕಾಲ ದಿಂದಲೂ ನ್ಯೂನಾಧಿಕರಹಿತನಾದವನು, **ಈಶನೆನಿಸುವನು** = ಚರಾ ಚರಾತ್ಮಕವಾದ ಈ ಜಗತ್ತಿಗೆ ನಿಯಾಮಕನಾದ ಸ್ವಾಮಿ-ಎಂದು ಕರೆಸುವನು **ಬ್ರಹ್ಮ** = ಚತುರ್ಮುಖ ಬ್ರಹ್ಮದೇವರು, **ರುದ್ರ** = ಶಂಕರನು, **ಶಚೀಶ** = ಶಚೀಪತಿಯಾದ ಇಂದ್ರ, **ಮೊದಲಾದೆಲ್ಲರು** = ಇವರೇ ಮೊದಲಾದ ಸಮಸ್ತರೂ, **ದಾಸರೆನಿಸುವರು** = ಶ್ರೀ ಪರಮಾತ್ಮನ ಭೃತ್ಯರೆನಿಸುತ್ತಾರೆ. **ಈ ಸುಮಾರ್ಗವ ಬಿಟ್ಟು** = ಸಮೀಚೀನವಾದ ಮುಕ್ತಿಗೆ ಸಾಧನವಾದ ಈ ಪಥವನ್ನು ಬಿಟ್ಟು, **ಸೋಹಮುಪಾಸನೆಯ್ಯೈವ** = ಈಶನೇ ಜೀವನೆಂದು ಉಪಾಸನಾರೂಪವಾದ ಜೀವೇಶರ ಐಕ್ಯ ವನ್ನು ಚಿಂತಿಸುವ, **ನರ** = ಮಾನವನು, **ದೇಹಜ** = ದೇಹದಿಂದ ಉತ್ಪನ್ನವಾಗುವ ಆಧಿ ವ್ಯಾಧಿಗಳನ್ನಾಗಲೀ, **ದೈಶಿಕ** = ದೇಶ ಕಾಲಕ್ಕೆ ಸಂಬಂಧಿಸಿದ. **ಕ್ಲೇಶಗಳು** = ದುಃಖಗಳು **ಬರಲು** = ಪ್ರಾಪ್ತವಾದರೆ, **ಆವನು** = ಅಂತಹ ಸೋಹಮುಪಾಸಕನಾದ ಮಾನವನು, **ಏಕೆ ಬಿಡಿಸಿಕೊಳ** = ಏತಕ್ಕೆ ಬಿಡಿಸಿಕೊಳ್ಳಲು ಸಮರ್ಥನಾಗಿಲ್ಲ ? ॥೨೨॥

# ವ್ಯಾಖ್ಯಾನಗಳು

## ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ತಾರತಮ್ಯ ಪಂಚಭೇಧಗಳೇ ಸತ್ಯ ಎಂತಲೂ, ಇನ್ನೂ ಅಭಿಮಾನ ತ್ಯಾಗ ಮಾಡೋಣವೇ ಪ್ರಯೋಜನವಲ್ಲ, ಸಮೀಚೀನಜ್ಞಾನಬೇಕು-ಎಂತಲೂ ಹೇಳತಾರೆ.

ಗುಣಪೂರ್ಣನಾದ ಸರ್ವೋತ್ತಮನಾದ ವಾಸುದೇವ ಅನಾದ್ಯನಂತ ಕಾಲಕ್ಕೂ ಒಂದೇ ಪ್ರಕಾರ ನ್ಯೂನಾಧಿಕ್ಯದಿಂದ ರಹಿತನಾದವ ಎಂತಲೂ, ಚರಾಚರಕ್ಕೆ ಸ್ವಾಮಿ ಎಂತಲೂ, ಸರ್ವೋತ್ತಮ ಎಂತಲೂ, ಅನ್ಯಾಧೀನನಲ್ಲ ಎಂತಲೂ, ಸಮಸ್ತರಿಂದ ಕರಸೋವನಾಗತಾನೆ. ರಮಾ ಬ್ರಹ್ಮ ರುದ್ರ ಇಂದ್ರ ಇವರೇ ಮೊದಲಾದ ಅಸ್ವತಂತ್ರ ಚೇತನರೊಳಗೆ ಬ್ರಹ್ಮಗೆ ಉತ್ತಮರಾದ, ಮೊದಲು ಸಂಖ್ಯಾದಿಂದ ಪಠಿತರಾದ ರಮಾ ದೇವೇರು, ತದನ್ಯ ಬ್ರಹ್ಮಾದಿ ತೃಣಾಂತ ಮುಕ್ತಿಯೋಗ್ಯ ಜೀವರು, ಅಮರ ಶಬ್ದದಿಂದ ಅಷ್ಟೂ ಗ್ರಾಹ್ಯ. ಪರಮಾತ್ಮನಿಂದಲೂ ಚರಾಚರಗಳಿಂದಲೂ ಭೃತ್ಯರು ಎಂತ ಅನಿಸೋವರಾಗತಾರೆ. ವಾಸುದೇವ ಹ್ಯಾಂಗೆ ಈಶನೋ, ಅದರಂತೆ ಅನಾದ್ಯನಂತಕಾಲಕ್ಕೂ ನ್ಯೂನಾಧಿಕ್ಯಗಳಿಲ್ಲದೆ ಏಕಪ್ರಕಾರ ಮುಕ್ತಿಯೋಗ್ಯರು ದಾಸರೆಂತಲೇ ಎಣಿಸೋವರಾಗತಾರೆ. ಉಭಯರಿಗೆ ಇದು ಎರಡೂ ದಾವಾಗ್ಯೂ ಕೆಡೋದಿಲ್ಲ. ಈ ಸಮೀಚೀನ ಮಾರ್ಗವ ಸ್ವರೂಪದಲ್ಲಿ ಬಾಹ್ಯದಲ್ಲಿ ಇರತಕ್ಕ ಜೀವರು ಮ್ಯಾಲೆ ಉಕ್ತರಾದವರು. ದಾಸೋಹಂ ಎಂಬುದ ಬಿಟ್ಟು, ಗುಣಪೂರ್ಣ ಸರ್ವೋತ್ತಮ ಸರ್ವತಂತ್ರ ಸ್ವತಂತ್ರ ಬ್ರಹ್ಮ ನಾನೇ ಎಂತಲೂ, ಅನ್ಯದೇವತೆ ಬ್ಯಾರೆ ಇಲ್ಲಾ-ಎಂತಲೂ ಅಸಮೀಚೀನ ಮಾರ್ಗ ಸ್ವರೂಪದಲ್ಲಿ ಬಾಹ್ಯದಲ್ಲಿ ವಿದ್ಯಮಾನಗಳಾಗಿ ಉಪಾಸನ ಮಾಡತಕ್ಕ ಭಗವದ್ವೇಷಿ ತಮೋಯೋಗ್ಯ ಇಂಥಾ ಜೀವರು ಕೆಲವರು.

ಇವರಲ್ಲಿ ನಿತ್ಯಸಂಸಾರಿಗಳೂ ಅಂತರ್ಭೂತರೇ. ಪರಮಾತ್ಮ ತನ್ನ ಸರ್ವೋತ್ತಮತ್ವ, ಸರ್ವ ಸ್ವಾಮಿತ್ವ ಸೋಹಂ ಉಪಾಸಕರಾದ ಇವರಲ್ಲಿ ಪ್ರಚೋದನೆ ಮಾಡಿ ಬುದ್ಧಿ ಭೇದ ಮಾಡೋದಿಲ್ಲ. ಜೀವರೇನು, ಅವರವರ ಸ್ವಭಾವವೇನು ಈಶ್ವರನಿಂದ ರಚಿತವಲ್ಲ. ಇದು ಅನಾದಿನೇಮ. ಆದ್ದರಿಂದ ಇದ್ದುದ್ದರನ್ನು ಅಭಿವ್ಯಕ್ತಿ ಮಾಡತಾನೆ. ತಾನೇ ಈಶ್ವರ ಎನತಕ್ಕದ್ದೇ ನಿಶ್ಚಯವಾದರೆ, ಅಹಂ ಬ್ರಹ್ಮ ಎನತಕ್ಕ ಮನುಷ್ಯನು ದೇಹಸಂಬಂಧವಾದ, ದೇಹಕ್ಕೆ ಪ್ರಾಪ್ತವಾದ ರೋಗಾದಿ ಅನೇಕ ಉಪದ್ರವಗಳೇನು, ದೇಶಕ್ಕೆ ಅರಸಾದ ರಾಜನಿಂದ ಪ್ರಾಪ್ತವಾದ ದುಃಖಕರವಾದ ದಂಡನಾದಿ ಉಪದ್ರವಗಳೇನು ಇಂಥಾ ಅನೇಕವಿಧ ದುಃಖಗಳು ಪ್ರಾಪ್ತವಾಗಲು, ಅವನ್ನ ಅನುಭವಿಸುತ್ತಾನೆ. ಆ ಯಾವತ್ತೂ ದುಃಖಗಳನ್ನ ಏತಕ್ಕೋಸ್ಕರ ಬಿಡಿಸಿಕೊಂಬೋದಿಲ್ಲ ಎಂದರೆ, ಜೀವರ ಯೋಗ್ಯತಿ ಅನುಸರಿಸಿ ಸುಖದುಃಖಾದಿಗಳು ಈತನಿಂದ ಕೊಡಲ್ಪಡುತ್ತವೆ. ಅದರನ್ನ ತಿರಸ್ಕರಿಸಲಿಕ್ಕೆ ಜೀವರು ಶಕ್ತರಲ್ಲ. ತ್ರಿವಿಧ ಜೀವರಿಗೂ ಅನ್ಯನಾದವ ಈಶ ಬ್ಯಾರೆ, ಅವಗೆ ಸರ್ವರೂ ಭೃತರು. ಸ್ವರೂಪಯೋಗ್ಯತಾನುಸಾರ ವಿಪರೀತ ವ್ಯವಹಾರವೆಂದು ತಾತ್ಪರ್ಯ.

ತಾರತಮ್ಯ, ಪಂಚಭೇದ, ಹರಿ ಸರ್ವೋತ್ತಮ, ವಾಯು ಜೀವೋತ್ತಮ-ಎಂಬುದು ಪ್ರತ್ಯಕ್ಷಾದಿಗಳಿಂದ ಸಿದ್ಧವು.

**ವಿಶೇಷಾರ್ಥ** :– ಲೋಕದಲ್ಲಿ ಮಾರ್ಗಗಳು ಎರಡು, ಸುಮಾರ್ಗ,–ದುರ್ಮಾರ್ಗ ಎಂದು. ಸುಮಾರ್ಗ ದಾವದೆಂದರೆ ಮೋಕ್ಷಪ್ರದನಾದ ಸರ್ವತ್ರ ವ್ಯಾಪ್ತನಾದ ಗುಣಪೂರ್ಣನಾದ ವಾಸುದೇವರೂಪಿ ಪರಮಾತ್ಮ ವಿಚ್ಛಿತಿ ಇಲ್ಲದಂತೆ ಅನಾದ್ಯನಂತಕಾಲಕ್ಕೂ ಪ್ರಜರ ಪಾಲನಮಾಡತಕ್ಕ ಸ್ವಾಮಿ ಎಂತಲೂ, ಈ ಪರಮಾತ್ಮಗೆ ರಮಾ ಬ್ರಹ್ಮಾದಿ ದೇವತೆಗಳು ನೀತರಾದ ಭೃತ್ಯರೆಂತಲೂ (ಪರಮಾತ್ಮ ನೀತಸ್ವಾಮಿತ್ವವುಳ್ಳವ, ಹಾಂಗೆ ಅನಂತಾನಂತ ಭಗವದ್ರೂಪಗಳು ಎಂತ ತಾತ್ಪರ್ಯ) ತಿಳಕೊಂಬೋ ಜ್ಞಾನಾನುಸಂಧಾನ ಮಾರ್ಗ ದಾವದದೆ–ಇದೇ ಸುಮಾರ್ಗ. ಇನ್ನೂ ಪರಮಾತ್ಮನ ಪಾದ ಸಂದರ್ಶವಾಗಿ ಕಡೆಯಲ್ಲಿ ಸುಖಬಡತಕ್ಕೆ ಉತ್ತಮವಾದ ಜ್ಞಾನಮಾರ್ಗವು.

ಮೇಲೆ ಹೇಳಿದಂಥ ಮಾರ್ಗವನ್ನು ಅನುಸರಿಸದೆ ಅಭಿಮಾನ ತ್ಯಾಗ ಮಾಡೋಣ ಮಾತ್ರದಿಂದ ಸದ್ಗತಿ ಆಗಲಾರದು.

ದುರ್ಮಾರ್ಗ ದಾವದೆಂದರೆ-ಸೋಹಂ ಉಪಾಸನೆಗೈವ ಮಾರ್ಗವು. ಗುಣಪೂರ್ಣನಾದ ನಿರ್ದೋಷನಾದ ಪರಮಾತ್ಮನು ನಾನೇವೇ ಎಂತಲೂ, ನನಗೆ ಅನ್ಯನಾದ ಪರಮಾತ್ಮ ಬ್ಯಾರೆ ಇಲ್ಲ ಎಂತಲೂ, ಎಂದಿಗೂ ದೇವತಾಧೀನನಾಗೋದಿಲ್ಲ-ಎಂತಲೂ ಉಪಾಸನ ಮಾಡತಕ್ಕದ್ದು ದುರ್ಮಾರ್ಗ. ದೇವರು ತಾನೇ ಆದ ಪಕ್ಷದಲ್ಲಿ ದೇಹಕ್ಕೆ ಸಂಬಂಧವಾದ ರೋಗಾದಿ ಉಪ ದ್ರವಗಳೇನು, ಶಿಕ್ಷಾದಿಗಳೇನು-ಇವನ್ನು ಯಾಕೆ ಬಿಡಿಸಿಕೊಳ್ಳದೆ ಅನುಭವಿಸು ತ್ತಾನೆ ? ॥ ॥೨೨॥

೨. ಭಾವಪ್ರಕಾಶಿಕೆ

ಭಾಗವತ ಏಕಾದಶಸ್ಕಂಧ ೨ ನೆಯ ಅಧ್ಯಾಯ ತಾತ್ಪರ್ಯದಲ್ಲಿ "ಪೂರ್ಣಗುಣಾತ್ಮಕನಾದುದರಿಂದ ಆತ್ಮನೆಂದು ಹೆಸರುಳ್ಳವನು. ಅವನು ಸರ್ವಪ್ರಾಣಿಗಳಿಗೂ ಉತ್ತಮನು. ಅವನಾರೆಂದರೆ ನಾರಾಯಣನೇ ಹೊರ್ತು ಮತ್ತಾರೂ ಅಲ್ಲ. ಅವನೇ ಎಲ್ಲರ ಅಂತರ್ಯಾಮಿಯಾಗಿರುವನು. ಲಕ್ಷ್ಮೀದೇವಿಯರು, ಬ್ರಹ್ಮರುದ್ರಾದಿ ಸಕಲದೇವತೆಗಳು ಅವನ ಅಧೀನ ರಾಗಿರುತ್ತಿರುವರು, ಎಂದು ಯಾವನು ಉಪಾಸನೆ ಮಾಡುವನೋ ಅವನೇ ಭಾಗವತೋತ್ತಮನು"—ಎಂದು ಹೇಳಿರುವರು. ಅದೇ ಅಭಿಪ್ರಾಯವನ್ನೇ ದಾಸರಾಯರು ಇಲ್ಲಿ ಹೇಳಿರುವರು. ಪರಮಾತ್ಮನೊಬ್ಬನೇ ಸರ್ವೇಶ್ವರನು. ಬ್ರಹ್ಮರುದ್ರೇಂದ್ರಾದಿ ದೇವತೆಗಳೆಲ್ಲರೂ ಆ ಪರಮಾತ್ಮನಿಗೆ ಕಿಂಕರರು. ಎಂದುಪಾಸನೆ ಮಾಡುವವೇ ಸದುಪಾಸನೆಯು. ಇಂತಹ ಉಪಾಸನೆಯನ್ನು ಬಿಟ್ಟು "ಸೋಹಂ" ಅವನೇ ನಾನು-ಎಂದು ಉಪಾಸನೆಯನ್ನು ಮಾಡುವವನು ತಮೋಯೋಗ್ಯನು. ಪರಮಾತ್ಮನೇ ಜೀವವೆಂದು ಹೇಳುವುದು ಸುಳ್ಳಾದರೆ ಮಿಥ್ಯೋಪಾಸನೆಯಿಂದ ತಮಸ್ಸಾಗಲಿ ! ಅದು ನಿಜವಾದರೆ ಬಾಧಕವೇನು ? ಅಂದರೆ ಎಂದಿಗೂ ಅದು ನಿಜವಾಗುವುದಿಲ್ಲವೆಂದು "ದೇಹಜ" ಎಂಬ

ವಾಕ್ಯಗಳಿಂದ ತೋರಿಸುತ್ತಾರೆ. ನಿಜವಾಗಿ ನಾವೇ ಪರಮಾತ್ಮನಾದರೆ ಆನಂದ ಸ್ವರೂಪನಾದ ಪರಮಾತ್ಮನಿಗೆ ದುಃಖವಾವುದು ! ಮನುಷ್ಯರಿಗೆ ದೇಹಸಂಬಂಧವಾದ ಹೊಟ್ಟೆಶೂಲೆ ಮೊದಲಾದವು, ಕಣ್ಣು ಕಾಣದೆ ಹೋಗುವುದು-ಮೊದಲಾದ ದುಃಖಗಳೇ ಆಗಲಿ, ಕಾಲಸಂಬಂಧವಾದ ಶೀತೋಷ್ಣ ಮೊದಲಾದ ದುಃಖಗಳೇ ಆಗಲಿ ಬಂದಾಗ ಅದನ್ನೇಕೆ ಅನುಭವಿಸ ಬೇಕು? ತಾನೇ ಈಶ್ವರನಾದ ಮೇಲೆ, ಆ ದುಃಖಗಳು ತನ್ನನ್ನು ಬಾಧಿಸದೆ ಅವುಗಳಿಂದ ಬಿಡಿಸಿಕೊಳ್ಳಬಹುದಷ್ಟೆ ? ಆ ಶಕ್ತಿಯು ಇವನಿಗಿಲ್ಲದ ಮೇಲೆ ಇವನು ಈಶ್ವರನು ಹೇಗಾಗುವನು ? ಆದ್ದರಿಂದ ಜೀವನು ಈಶ್ವರನೆಂದು ಎಂದಿಗೂ ಹೇಳಲಾಗದೆಂಬ ಭಾವ ॥೨೨॥

೩. ಭಾವದರ್ಪಣ :-

ದಾಸೋಹಂ-ಎಂದು ಉಪಾಸನಾ ಮಾಡತಕ್ಕವನು ಸದ್ಗತಿ ಕಾಣುತ್ತಾನೆಂತಲೂ, ತಾನೇ ದೇವರೆಂದು ಉಪಾಸನಾ ಮಾಡತಕ್ಕವನು ಬಹು ಕ್ಲೇಶ ಬಿಡುತ್ತಾನೆಂತಲೂ ವಿವರ ತಿಳಿಸಿ ಕೊಡುತ್ತಾರೆ. ವಾಸುದೇವೇತಿ ॥೨೨॥

೪. ಶ್ರೀವ್ಯಾಸದಾಸ ಸಿದ್ಧಾಂತ ಕೌಮುದೀ :-

"ಈಶಾವಾಸ್ಯಮ್" ಇತ್ಯಸ್ಯಾರ್ಥಮಾಹ – "ವಾಸುದೇವ" ಇತಿ ॥೨೨॥

## ಕನ್ನಡಾರ್ಥ

"ಈ ಸಮಸ್ತವಾದ ಚೇತನಾಚೇತನಾತ್ಮಕ ವಿಶ್ವವು ಈಶನಾದ ಶ್ರೀಹರಿಯ ಆವಾಸವಾಗಿರುವದು. ಎಲ್ಲವೂ ಅವನ ವಶದಲ್ಲೇ ಇದ್ದು, ಅವನಿಂದ ಓತಪ್ರೋತವಾಗಿ ವ್ಯಾಪ್ತವಾದುದು." ಎಂದು ಉಪನಿಷತ್ತಿನ ಅರ್ಥವನ್ನು ನಿರೂಪಿಸುತ್ತಾರೆ.–"ವಾಸುದೇವನು" ಎಂಬ ಪದ್ಯದಿಂದ ॥೨೨॥

**೫. ಶ್ರೀಗುರು ಹೃದಯ ಪ್ರಕಾಶಿಕೆ :-**

ಸರ್ವಜಚ್ಚರಿತನಾದ್ದರಿಂದ ವಾಸುದೇವನೆಂಬ ಪರಮಾತ್ಮ ಏಕಪ್ರಕಾರ ಎಂದರೆ, ಅನಾದ್ಯನಂತಕಾಲದಲ್ಲೂ ಈಶ್ವರ ಸ್ವತಂತ್ರ ಎನಿಸಿಕೊಳ್ಳುವನು. ಬ್ರಹ್ಮ, ರುದ್ರ, ಶಚೀಶನೆಂಬ ಇಂದ್ರ ಮೊದಲಾದ ಸಮಸ್ತಜೀವರು ದಾಸರೆಂಬ ಸೇವಕರು. ಈ ಸುಮಾರ್ಗವಾದ ಭೇದೋಪಾಸನೆಯನ್ನು ಬಿಟ್ಟು, ಸೋಹಮುಪಾಸನೆ ಮಾಡುವ ಮನುಷ್ಯನು ಅಂದರೆ ದೇವರೇ ಜೀವನು, ಭೇದವೇನೂ ಇಲ್ಲವೆಂಬ ಉಪಾಸನೆಯನ್ನು ಮಾಡುವ ಸ್ವತಂತ್ರ ನೆಂದು ತಿಳಿದಿರುವವನು, ತಾನೇ ದೇಹಜ ಎಂದರೆ-ಶರೀರದಲ್ಲಿ ಹುಟ್ಟುವ ಜ್ವರಾದಿಗಳನ್ನು, ದೈಹಿಕ ಎಂದರೆ-ಮಾರ್ಗಾಯಾಸಾದಿಗಳನ್ನು ಪರಾಪೇಕ್ಷೆ ಯಿಲ್ಲದೆ ಪರಿಹರಿಸಿಕೊಳ್ಳುವುದಕ್ಕೆ ಶಕ್ತಿ ಇಲ್ಲದ್ದರಿಂದ ಇಂಥಾ ಉಪಾಸನೆ ಸುಳ್ಳಾದ್ದು, ಇದರಿಂದ ಫಲವಿಲ್ಲವೆಂದರ್ಥ. ಭೇದೋಪಾಸಕರಿಗೆ ದೇವರ ದಯ ಬರುವತನಕ ಉಪಾಸನೆ ಮಾಡುತ್ತಲೇ ಇರಬೇಕು-ಎಂತ ವಿಧಿ ಇದೆ. ಅಭೇದೋಪಾದಕರಿಗೆ ಸಿದ್ಧಿಯಾಗುವುದಕ್ಕೆ ಅಡ್ಡಿಯಾದ ಅಜ್ಞಾನ, ಇಲ್ಲದ್ದು ಎಲ್ಲಿಂದ ಬಂತೊ ಎಂಬ ಆಕ್ಷೇಪ ಬಲವಾಗಿ ನಿಲ್ಲುವುದೆಂದು ಆಶಯ.

**ಯದಿ ನಾಮ ಪರೋ ನ ಭವೇತ್ಸಹರಿಃ । ಕಥಮಸ್ಯ ವಶೇ ಜಗದೇತದಭೂತ್ ॥**

**ಯದಿ ನಾಮ ನ ತಸ್ಯ ವಶೇ ಸಕಲಂ । ಕಥಮೇವ ತು ನಿತ್ಯ ಸುಖಂ ನ ಭವೇತ್** ॥-ಎಂಬ ದ್ವಾದಶಸ್ತೋತ್ರಾರ್ಥ ವಿವರಿಸಿತು ॥೨೨॥

# ಸರ್ವವ್ಯಾಖ್ಯಾನಸಾರಸಂಗ್ರಹ

ಶ್ರೀ ಪರಮಾತ್ಮನು ಅಣುರೇಣುತೃಣಕಾಷ್ಠಾದಿಗಳಲ್ಲಿ ಪರಿಪೂರ್ಣ ವ್ಯಾಪ್ತನು. ಸರ್ವಜಗದ್ಭರಿತನು. ಪೂರ್ಣಗುಣಾತ್ಮಕನಾದ್ದರಿಂದ **ಆತ್ಮ** ನಾಮಕನು. ಅಂತಹ **ವಾಸುದೇವನಾಮಕನಾದ** ಶ್ರೀ ಪರಮಾತ್ಮನು ಸರ್ವೋತ್ತಮನು. ಅನಾದ್ಯನಂತ ಕಾಲದಿಂದ ಶಶ್ವದೇಕ ಪ್ರಕಾರನಾಗಿ ಚರಾ ಚರಾತ್ಮಕವಾದ ಜಗತ್ತಿಗೆ ನಿಯಾಮಕನಾಗಿದ್ದಾನೆ.

ರಮಾ, ಬ್ರಹ್ಮ, ವಾಯು, ಗರುಡ, ಶೇಷ, ರುದ್ರ, ಶಚೀರಮಣ ನಾದ ಇಂದ್ರಾದಿ ಸಮಸ್ತದೇವತಾಗಣ ಅನಾದ್ಯನಂತ ಕಾಲದಿಂದಲೂ ಅವನ ಸೇವಾನುಸೇವಕರು. ಅವನೊಬ್ಬನೇ ಈಶನು. ಇತರರೆಲ್ಲರೂ ಅವನ ದಾಸಭೂತರು.

ಜಗತ್ತಿನಲ್ಲಿ ಮಾರ್ಗಗಳು ಎರಡು ಪ್ರಕಾರವಿವೆ :–

ಸುಮಾರ್ಗ ಮತ್ತು ದುರ್ಮಾರ್ಗ–.

**ಸುಮಾರ್ಗ :–**

ಶ್ರೀಶನೇ ಸರ್ವ ತಂತ್ರಸ್ವತಂತ್ರನು. ರಮಾದಿ ಸಮಸ್ತರೂ ಅವನ ಅಧೀನರು. ಅವನ ಭೃತ್ಯರು. ಅವನೇ ಸರ್ವೇಶ್ವರನು. ಇತರರೆಲ್ಲರೂ ಅವನಿಂದ ನಿಯಮ್ಯರು. ಹರಿಯು ಸರ್ವೋತ್ತಮನು. ಶ್ರೀ ವಾಯು ದೇವರು ಜೀವೋತ್ತಮರು. ಪಂಚಬೇಧ, ತಾರತಮ್ಯ ಸತ್ಯವೂ ನಿತ್ಯವೂ ಆದುದು. ಜಗತ್ತು ಮಿಥ್ಯವಲ್ಲ. ಸತ್ಯಭೂತವಾದದ್ದು. ಈ ಉತ್ತಮಾನುಸಂಧಾನದಿಂದ ಯಾರು ಶ್ರೀ ಹರಿಯನ್ನು ಉಪಾಸಿಸುತ್ತಾರೋ, ಅವರ ಜ್ಞಾನಪಥವು **ಸುಮಾರ್ಗವೆನಿಸುವುದು.**

**ದುರ್ಮಾರ್ಗ :–**

ನಾನೇ ಈಶ್ವರನು, ನಾನೇ ಭೋಗಿ. ನಾನೇ ಸ್ವತಂತ್ರನು. ಜೀವನಿಗೂ ಈಶನಿಗೂ ಬೇಧವಿಲ್ಲ. ಪ್ರಾಪಂಚಿಕವಿಷಯಗಳೆಲ್ಲವೂ ವ್ಯಾವಹಾರಿಕ ಸತ್ಯವೇ ಹೊರತು, ಈ ಜಗತ್ತು ಪಾರಮಾರ್ಥಿಕವಾಗಿ ಮಿಥ್ಯಾಭೂತ ವಾದದ್ದು. ಜೀವನು ಅಜ್ಞಾನ ದೆಶೆಯಿಂದ, ಭ್ರಮಾವರಣಯುಕ್ತನಾಗಿ ತಾನೇ ಈಶನೆಂಬ ಭಾವವನ್ನು ಮರೆತು, ಅವನಿಂದ ನಾನು ಭಿನ್ನನೆಂದು ತಿಳಿಯುವನು–ಎಂಬೀ ಮಾಯಾವಾದ ರೂಪವಾದ, ಮಿಥ್ಯಾಭೂತವಾದ **ಸೋಽಹಂ ಉಪಾಸನಾಕ್ರಮವೇ. ದುರ್ಮಾರ್ಗವು :–**

ಒಂದು ಪಕ್ಷ, ಜೀವನೇ ಸರ್ವತಂತ್ರಸ್ವತಂತ್ರನಾದ ಈಶನೇ ಆಗಿದ್ದಲ್ಲಿ, ತನಗೆ ಕಾಲಕಾಲಕ್ಕೆ ಒದಗಿ ಬರುತ್ತಿರುವ ರೋಗಾದಿ ಉಪದ್ರವಗಳು, ಕಾಲ ದೇಶಾದಿಗಳಿಂದ ಉಂಟಾಗುವ ದುಃಖಗಳನ್ನು ಏತಕ್ಕೆ ಪರಿಹಾರ ಮಾಡಿ ಕೊಳ್ಳಲಾರ ? ಜೀವನೇ ಈಶ್ವರನಾಗಿದ್ದರೆ, ಭ್ರಷ್ಟಸಂಕಲ್ಪನೇಕೆ ಆಗುತ್ತಾನೆ ? ನಮ್ಮ ಮನಸ್ಸಿನ ಸಕಲ ಅಭಿಲಾಷೆಗಳನ್ನೂ ತಾನೇ ಯಾಕೆ ಪೂರ್ತಿಸಿಕೊಳ್ಳಲಾರ ? ಇವೆಲ್ಲವೂ ಕೇವಲ ಭ್ರಮೆ–ಎಂದು ವಾದಿಸುವ ದುರ್ವಾದಿಗಳೂ ಪ್ರತಿವಾದಿಸುವ ಜೀವೇಶರ ಐಕ್ಯವಾದವೂ ಕೂಡ ಮಿಥ್ಯೆಯೇ ಆಗುವುದಿಲ್ಲವೇ !

ಇದರಿಂದ "ಸೋಽಹಂ" ಎಂಬ ದುರ್ಮಾರ್ಗದ ಉಪಾಸನೆಯನ್ನು ತ್ಯಜಿಸಿ, ದಾಸಭಾವದಿಂದ. ಭಕ್ತಿಪೂರ್ವಕವಾಗಿ ಸರ್ವೇಶ್ವರನನ್ನು ಭಜಿಸಿ, ಅವನ ಪರಮಾನುಗ್ರಹವನ್ನು ಪಡೆಯಬೇಕೆಂದು ಸುಮಾರ್ಗದ ಬೆಳಕನ್ನು ತೋರಿದ್ದಾರೆ. ॥೨೨॥

## ಪದ್ಯ—೨೩

**ಮೂಲ :-**

**ಆ ಪರಬ್ರಹ್ಮನಲಿ ತ್ರಿಜಗ ।**
**ದ್ವ್ಯಾಪಕತ್ವ ನಿಯಾಮಕತ್ವ ।**
**ಸ್ಥಾಪಕತ್ವ ಪರತ್ವ ಈಶತ್ವಾದಿಗುಣಗಳಿಗೆ ॥**
**ಲೋಪವಿಲ್ಲೇಕ ಪ್ರಕಾರ ಸ್ವ ।**
**ರೂಪವೆನಿಪುವು ಸರ್ವಕಾಲದಿ ।**
**ಪೋಪುವಲ್ಲವು ಜೀವರಿಗೆ ದಾಸತ್ವದೋಷಾದಿ ॥ ॥೨೩॥**

**ಅವತರಣಿಕೆ :-**

ಶ್ರೀ ಪರಮಾತ್ಮನಲ್ಲಿ ಅನಾದ್ಯನಂತಕಾಲದಿಂದಲೂ ನಿತ್ಯವಾಗಿ ಇರುವ ವ್ಯಾಪಕತ್ವವು, ನಿಯಾಮಕಾತ್ವಾದಿ ಸರ್ವಗುಣ ಗಣಗಳು ಹಾಗೂ ತದ್ಭಿನ್ನರಾದ ಸರ್ವಜೀವರಲ್ಲೂ ಇರುವ ಅನಾದಿನಿತ್ಯವಾದ ದಾಸತ್ವ ಧರ್ಮಗಳನ್ನು ತಿಳಿಸುತ್ತಾರೆ- ॥೨೩॥

**ಪ್ರತಿಪದಾರ್ಥ :-**

**ಆ ಪರಬ್ರಹ್ಮನಲಿ** = ಪೂರ್ವೋಕ್ತ ಬ್ರಹ್ಮ ಶಬ್ದ ವ್ಯಾಚ್ಯನಾದ ಪರಿಪೂರ್ಣನಾದ ವಿಷ್ಣುವಿನಲ್ಲಿ, **ತ್ರಿಜಗದ್ವ್ಯಾಪಕತ್ವ** = ಜಗತ್ತಿನ ಒಳಗೂ ಹೊರಗೂ, ಹಾಗೆಯೇ ಸರ್ವಜೀವನದ ಅಂತರ್ಬಹಿಶ್ಚನಾಗಿ ಸರ್ವತ್ರ ವ್ಯಾಪಿಸಿರುವ ಧರ್ಮವೂ, **ನಿಯಾಮಕತ್ವ** = ತನ್ನಿಂದ ಸೃಷ್ಟರಾದ ಚರಾಚರಾತ್ಮಕವಾದ ಜಗತ್ತನ್ನು ನಿಯಮನ ಮಾಡುವ ಸಾಮರ್ಥ್ಯ ವಿಶೇಷವೂ, **ಸ್ಥಾಪಕತ್ವ** = ಜಗತ್ತಿನಲ್ಲಿ ಸಕಲ ವಸ್ತುಗಳೂ (ಜೀವ-

ಜಡರೂ) ಹೀಗೆಯೇ ಇರಬೇಕು ಎಂಬ ಸತ್ಯಸಂಕಲ್ಪ ರೂಪವಾದ ಸ್ಥಾಪಕತ್ವ ಧರ್ಮವೂ, **ವಶಿತ್ವ** = ಸಕಲವೂ ತನ್ನ ಆಧೀನದಲ್ಲಿ ಸದಾ ಇರುವಂತೆ ಇಟ್ಟುಕೊಂಡಿರುವ ಧರ್ಮ, **ಈಶಿತ್ವ** = ಸರ್ವಸ್ವಾಮಿತ್ವ (ಪ್ರಭುತ್ವಗುಣ) **ಆದಿ ಗುಣಗಳಿಗೆ** = ಇವೇ ಮೊದಲಾದ ಅಸದೃಶವಾದ ಗುಣಧರ್ಮಗಳಿಗೆ, **ಲೋಪವಿಲ್ಲ** = ಅನಾದ್ಯನಂತಕಾಲಕ್ಕೂ ನ್ಯೂನಾಧಿಕ್ಯಗಳಿಲ್ಲ. **ಏಕಪ್ರಕಾರ** = ಒಂದೇ ರೀತಿಯಲ್ಲಿ, **ಸ್ವರೂಪವೆನಿಸುವುವು** = ಶ್ರೀ ಪರಮಾತ್ಮನ ಸ್ವರೂಪಭೂತಗಳಾಗಿವೆ. ಈ ಗುಣ ಕರ್ಮಗಳಿಗೂ, ಶ್ರೀ ಪರಮಾತ್ಮನಿಗೂ ಅಭೇದ. **ಸರ್ವಕಾಲದಿ** = ಎಲ್ಲಾ ಕಾಲಗಳಲ್ಲಿಯೂ (ಸದಾ ಸರ್ವದಾ) **ಪೋಪವಲ್ಲವು** = ಶ್ರೀ ಪರಮಾತ್ಮನನ್ನು ಬಿಟ್ಟು ಅಗಲುವುದಿಲ್ಲ, **ಜೀವರಿಗೆ** = ಸಕಲ ಚೇತನರಿಗೆ, **ದಾಸತ್ವ ದೋಪಾದಿ** = ದಾಸತ್ವ ಹೇಗೋ ಹಾಗೆ, ಈಶತ್ವ ಶ್ರೀ ಪರಮಾತ್ಮನ ಸ್ವರೂಪಭೂತ ಗುಣ ಹ್ಯಾಗೋ, ಹಾಗೆ ಜೀವರಿಗೆ ದಾಸತ್ವಗುಣವು. ॥೨೩॥

## ವ್ಯಾಖ್ಯಾನಗಳು

### ೧. ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ

ದೇವರಲ್ಲಿ ಇರತಕ್ಕ ಗುಣಗಳ ಹೇಳುತಾರೆ. ಪೂರ್ವೋಕ್ತನಾದ ಸರ್ವೋತ್ತಮನಾದ ಚತುರ್ಮುಖ ಬ್ರಹ್ಮಗೆ ಅನ್ಯನಾದ ಬ್ರಹ್ಮನಲ್ಲಿ, ಬ್ರಹ್ಮ ಶಬ್ದವಾಚ್ಯನಾದ ವಿಷ್ಣುವಿನಲ್ಲಿ, ಅಂದರೆ ನಾರಾಯಣ ದೇವರಲ್ಲಿ ಹದಿನಾಲ್ಕು ಲೋಕಗಳ ಒಳ ಹೊರಗೂ, ಬ್ರಹ್ಮಾಂಡದ ಒಳ ಹೊರಗೂ ಮತ್ತು ತ್ರಿವಿಧ ಜೀವರ ಅಂತರ್ಬಹಿಃ ಏನು ತತ್ತದಾಕಾರದಿಂದ ವ್ಯಾಪಕತ್ವವೂ, ಅವರವರ ಸ್ವರೂಪಯೋಗ್ಯತಾನುಸಾರ ಈಶ್ವರನಿಂದ ರಚಿತವಲ್ಲದ ಅನಾದಿಕರ್ಮಾನುಸಾರ ಸ್ವರೂಪದಲ್ಲಿ, ಬಾಹ್ಯಸ್ಥೂಲ ದೇಹದಲ್ಲಿ ನಿಯಾಮಕತ್ವ, ಅವತಾರಗಳ ಮಾಡಿ ಧರ್ಮಸ್ಥಾಪಕತ್ವವೇನು, ಬ್ರಹ್ಮಾಂಡ ಸೃಷ್ಟಿಮಾಡಿ, ಅದರಲ್ಲಿ ಜೀವರ ಸೃಷ್ಟಿಮಾಡಿ, ಸಾಧನಪೂರ್ತಿ ಮಾಡಿಸಿ, ಲಿಂಗಭಂಗ ಐದಿಸಿ, ಅವರಿಗೆ ಯೋಗ್ಯವಾದ ಸ್ಥಾನಗಳಲ್ಲಿ ಅವಾಗವಾಗಿರುವಂತೆ ಸ್ಥಾಪಕತ್ವ,

ಚರಾಚರಗಳ ತನ್ನ ವಶದಲ್ಲಿ ಇಟ್ಟುಕೊಂಡು ಇರುವದೂನೂ, ತನ್ನ ವಶ ತಾನೇ ಆಗಿ ಇರೋಣವೇನು, ಸರ್ವಸ್ವಾಮಿತ್ವವೇನು ಇವೇ ಮೊದಲಾದ ಅಸದೃಶ ವಾದ ಅನೇಕ ಗುಣಗಳಿಗೆ ಅನಾದ್ಯನಂತಕಾಲಕ್ಕೂ ನ್ಯೂನಾಧಿಕ್ಯಗಳಿಲ್ಲ, ಒಂದೇ ಪ್ರಕಾರ ಇರೋವಾಗಿ ಅವೆ, ಈ ಗುಣಗಳು ಪರಮಾತ್ಮನ ಸ್ವರೂಪ ಭೂತಗಳೆಂದು, ಈ ಪರಮಾತ್ಮಗೆ ಅಭಿನ್ನ ಎಂತಲೂ ಎನಿಸೋವಾಗಿ ಅವೆ. ಇವು ಪರಮಾತ್ಮನ್ನ ಬಿಟ್ಟು ಹೋಗೋದಿಲ್ಲ. ಇದಕ್ಕೆ ದೃಷ್ಟಾಂತ, ತ್ರಿವಿಧ ಜೀವರಿಗೆ ಅನಾದ್ಯನಂತಕಾಲದಲ್ಲಿ ದಾಸತ್ವ ಎಂಬುದು ಹ್ಯಾಂಗೆ ಹೋಗೋ ದಿಲ್ಲವೋ, ಈ ದಾಸತ್ವದೋಪಾದಿಯಲ್ಲಿ ಈಶತ್ವಾದಿ ಗುಣಗಳು ಪರಮಾತ್ಮನಲ್ಲಿ ಇರೋದು ಹೋಗೋದಿಲ್ಲ. ಈಶನ ಗುಣಗಳು ದಾಸರಿಗೆ ಬರೋದಿಲ್ಲ. ದಾಸರ ಗುಣಗಳು ಈಶಗೆ ಬರೋದಿಲ್ಲ. ದಾಸರ ಗುಣಗಳು ಅಪೂರ್ಣಗಳು, ಈಶನ ಗುಣಗಳು ಪೂರ್ಣಗಳು. ಈ ಎರಡೂ ಸರ್ವಕಾಲದಲ್ಲಿ ನ್ಯೂನಾಧಿಕ್ಯ ಗಳು ಆಗೋದಿಲ್ಲ.

**ವಿಶೇಷಾರ್ಥ :–** ಈಶನಾದವ ಎಂದಿಗೂ ದಾಸನಾಗೋದಿಲ್ಲ. ದಾಸ ನಾದವ ಎಂದಿಗೂ ಈಶನಾಗೋದಿಲ್ಲ. ಆದ್ದರಿಂದ ಈಶನಲ್ಲಿ ವಿದ್ಯಮಾನ ಗಳಾದ ಪೂರ್ವೋಕ್ತಗುಣಗಳು 'ಸೋಹಂ' ಎಂತ ಉಪಾಸನ ಮಾಡತಕ್ಕ ಪುರುಷನಲ್ಲಿ ಇಲ್ಲವಾದ ಕಾರಣ 'ತಾನೇ ದೇವರು' ಎಂತ ಅಂಬೋಣ ಕುಮಾರ್ಗವಾಯಿತು. ಕುಮಾರ್ಗಕ್ಕೆ ಕುತ್ಸಿತವಾದ ಅಂಧಂತಮಸ್ಸೇ ಪ್ರಾಪ್ತಿ. ಆದ್ದರಿಂದ ಸುಮಾರ್ಗ ಆಚರಿಸಿ, ಸದ್ಗತಿ ಹೊಂದಬೇಕೆಂತ ತಾತ್ಪರ್ಯ. ಸೋಹಂ ಉಪಾಸನಮಾಡತಕ್ಕವನು ದೈತ್ಯನು ॥೨೩॥

## ೨. ಭಾವಪ್ರಕಾಶಿಕೆ :–

ಪರಮಾತ್ಮನು ಮೂರುಲೋಕದ ಒಳಗೂ ಹೊರಗೂ ಸಹ ವ್ಯಾಪಿಸಿ ಕೊಂಡಿರುವನು. ಬ್ರಹ್ಮಾದಿ ಜೀವರಿಗೆ ತ್ರಿಜಗದ್ವ್ಯಾಪಕತ್ವವಿದ್ದರೂ, ಸ್ವತಂತ್ರವ್ಯಾಪಕರಲ್ಲ. ಅಸ್ವತಂತ್ರರು. ಪರಮಾತ್ಮನು ಸ್ವತಂತ್ರ ನಿಯಾಮಕನು. ಬ್ರಹ್ಮಾದಿ ಸಕಲ ಚೇತನರನ್ನೂ ನೀವು ಹೀಗೇಯೇ ಇರ ಬೇಕೆಂದು ತನ್ನ ವಶದಲ್ಲಿಟ್ಟುಕೊಂಡು ಯಾರ ಯಾರ ಯೋಗ್ಯತೆ ಎಷ್ಟೋ

ಅಷ್ಟರ ಒಳಗೆ ಅವರು ಇರುವಂತೆ ಮಾಡಿರುವನು. ಈ ಅಧಿಕಾರವು ಯಾವ ಜೀವರಿಗೂ ಇಲ್ಲ. ಸರ್ವೇಶ್ವರನಾದ ಪರಮಾತ್ಮನ ಗುಣಗಳು ಶಶ್ವದೇಕಪ್ರಕಾರ ವಾಗಿರುವವು. ಜೀವನೇ ಪರಮಾತ್ಮನಾಗಿದ್ದರೆ, ಈ ಗುಣಗಳು ಅವನಲ್ಲಿ ಯಾವಾಗಲೂ ಇರಬೇಕಾಗಿದ್ದಿತು. ಹಾಗಿಲ್ಲ. ಜೀವನು ಯಾವಾಗಲೂ ಅಪೂರ್ಣನು. ಜೀವನಿಗೆ ದಾಸತ್ವವು ಹೇಗೆ ನಿತ್ಯವೋ, ಹಾಗೆ ಪರಮಾತ್ಮನಿಗೆ ಪ್ರಭುತ್ವಾದಿ ಗುಣಗಳು ನಿತ್ಯವು. ಇಂತಹ ಸ್ವಾಮಿಯು ನಾನೇ – ಎಂದು ಉಪಾಸನೆ ಮಾಡಿದರೆ. ಅವನಿಗೆ ದುಃಖಕರವಾದ ತಮಸ್ಸೇ ಪ್ರಾಪ್ತವಾಗುವುದು ॥೨೩॥

**ಭಾವದರ್ಪಣ :–**

ಸರ್ವಗುಣಗಳಿಂದಲೂ ಶಶ್ವದೇಕಪ್ರಕಾರ ಶ್ರೀಹರಿಯು ಪ್ರಕಾಶಿಸುತ್ತಾನೆಂದು ಹೇಳುತ್ತಾರೆ. "ಆ ಪರಬ್ರಹ್ಮೇತಿ." "ಆದೌ ವಂದ್ಯಃ ಸರ್ವದೇವೈಕ ವಂದ್ಯಃ ವೇದೇ ಶಾಸ್ತ್ರೇ ಸೇತಿಹಾಸೇ ಪುರಾಣೇ। ಸತಾತ್ಪರ್ಯೋ ವಿಷ್ಣುರೇವೈಕ ಏವ ಪ್ರಕಾಶ್ಯತೇಽಸೌ ನಮ್ಯ ಏಕೋ ಹರಿರ್ಹಿತಿ ॥" **ಗಾರುಡೋಕ್ತೇಃ** ವ್ಯಾಪಕತ್ವ = ವ್ಯಾಪಿಸೋಣ. ನಿಯಾಮಕತ್ವ = ಆಜ್ಞಾ ಮಾಡೋಣ, ಸ್ಥಾಪಕತ್ವ = ಸ್ಥಾಪಿಸೋಣ, ವಶತ್ವ = ಸರ್ವರನ್ನ ವಶಮಾಡಿ ಕೊಂಡಿರೋಣ, ಈಶತ್ವ = ಸ್ವಾಮಿತ್ವ ಎಂಬರ್ಥ. ॥೨೩॥

**೪. ಶ್ರೀವ್ಯಾಸದಾಸ ಸಿದ್ಧಾಂತ ಕೌಮುದೀ :–**

"ಅನೀಶತ್ವಂ ಅದುಃಖತ್ವಂ ಈಶತ್ವಂ ತದ್ವಿಪರ್ಯಯಃ" ॥ ಇತ್ಯುಕ್ತಾರ್ಥಮಾಹ–"ಆ ಪರ" ಇತಿ ॥೨೩॥

## ಕನ್ನಡಾರ್ಥ

ಜೀವನಿಗೆ ಪಾರತಂತ್ರ್ಯವೂ ದು:ಖಾನುಭವವೂ ಇರುತ್ತದೆ. ಇವು (ಈ ದೋಷಗಳು) ಜೀವನ ಧರ್ಮಗಳು. ಪರಮಾತ್ಮನಿಗೆ ಇದರ ವಿರುದ್ಧವಾದ ಗುಣಗಳು ಇರುತ್ತವೆ— ಎಂದು ಹೇಳಿದುದನ್ನೇ ಹೇಳುತ್ತಾರೆ. "ಆ ಪರಬ್ರಹ್ಮನು" ಎಂಬ ಪದ್ಯದಿಂದ.

"ಬ್ರಹ್ಮ" ಇದು ಸಹಸ್ರನಾಮಾಂತರ್ಗತವಾದ ನಾಮವು. ಅಚಿಂತ್ಯವಾದ ಜ್ಞಾನ, ಆನಂದ ಮುಂತಾದ ಗುಣಗಳಿಂದ ಸದಾಪೂರ್ಣನು. ಅಭಿವೃದ್ಧನು. ಆದರಂತೆ ಜಗತ್ತಿನಲ್ಲಿ ವ್ಯಾಪಿಸುವವನು, ಎಂದು **ಬೃಹತೀ** ಮಂತ್ರಾನುಗುಣವಾದ ಅರ್ಥ.

"ಈಶತ್ವಾದಿ ಗುಣಗಳ ಲೋಪವಿಲ್ಲ" ಎಂಬು ಮುಂತಾಗಿರುವ ವಚನಗಳು. "ಗುಣಭೃನ್ನಿರ್ಗುಣ" ವೆಂಬ ನಾಮಾರ್ಥಾನುವಾದಕಗಳಾಗಿರುತ್ತವೆ. "ಗುಣಭೃತ್" ಎಂಬುದು ಬ್ರಹ್ಮ ಶಬ್ದಾರ್ಥ ವಿವರಣರೂಪವೂ ಆಗಿರುತ್ತದೆ. ॥ ೨೩ ॥

### ೫. ಶ್ರೀಗುರುಹೃದಯಪ್ರಕಾಶಿಕೆ

ಈಗ ಸಿದ್ಧಿ ಇಲ್ಲದಂತೆ ಕಾಲಾಂತರಕ್ಕೂ ಅಭೇದೋಪಾಸನೆ ಯಾರಿಗೂ ಇಲ್ಲವೆಂದು ತಿಳಿಸುತ್ತಾರೆ, "ಆ ಪರಬ್ರಹ್ಮ" ಎಂದು. ಆ ಪರಬ್ರಹ್ಮನೆಂಬ ಗುಣಪೂರ್ಣದೇವರಲ್ಲಿ ತ್ರಿಜಗದ್ವ್ಯಾಪಕತ್ವ ಎಂಬ ಸರ್ವವ್ಯಾಪಕಶಕ್ತಿಯು, ನಿಯಾಮಕತ್ವವೆಂಬ ನಿಬಂಧನ ಶಕ್ತಿಯೂ, ಸ್ಥಾಪಕತ್ವವೆಂಬ ತನ್ನಾಧಾರದಲ್ಲಿ ಸರ್ವವನ್ನೂ ಇಟ್ಟುಕೊಳ್ಳುವ ಶಕ್ತಿಯು, ವಶತ್ವವೆಂಬ ಸ್ವಾತಂತ್ರ್ಯಶಕ್ತಿಯು, ಈಶತ್ವವೆಂಬ ಆಜ್ಞಾಶಕ್ತಿ ಮೊದಲಾದ ಗುಣಗಳಿಗೆ ಏಕಪ್ರಕಾರವೆಂಬ ಅನಾದ್ಯನಂತಕಾಲದಲ್ಲೂ ಲೋಪವಿಲ್ಲವು. ಸದಾ ಜೀವರಿಗೆ ದಾಸತ್ವವೆಂಬುದು

ಸ್ವರೂಪಭೂತವಾದ್ದರಿಂದ ಹೇಗೆ ಹೋಗುವುದಿಲ್ಲವೋ, ಹಾಗೆ ಹಿಂದೆ ಹೇಳಿದ ಗುಣಗಳೆಲ್ಲಾ ದೇವರಿಗೆ ಸದಾ ಸ್ವರೂಪಸಿದ್ಧವೆನಿಸುವುವು ॥೨೩॥

## ಸರ್ವವ್ಯಾಖ್ಯಾನಸಾರಸಂಗ್ರಹ

ಶ್ರೀ ಪರಮಾತ್ಮನು ಪರಬ್ರಹ್ಮವಾಚ್ಯನು. ಬ್ರಹ್ಮ – ಎಂಬ ಶಬ್ದವು **ವಿಷ್ಣುಸಹಸ್ರನಾಮಾಂತರ್ಗತವು.** ಈ ಶಬ್ದಕ್ಕೆ ಪರಿಪೂರ್ಣನೆಂದರ್ಥ. ಅಚಿಂತ್ಯವಾದ ಜ್ಞಾನಾನಂದಾದಿ ಗುಣಗಳಿಂದ ಪರಿಪೂರ್ಣನಾಗಿರುವುದರಿಂದ, ಅವನಿಗೆ **ಪರಬ್ರಹ್ಮ** ನೆಂದು ಹೆಸರು. ಚತುರ್ಮುಖ ಬ್ರಹ್ಮದೇವರಿಗೂ, "ಬ್ರಹ್ಮ" ಎಂತ ನಾಮ. ಆದರೆ ಬ್ರಹ್ಮದೇವ ಜೀವೋತ್ತಮರಾದರೂ, ಶ್ರೀಶನ ವಿವಕ್ಷಾ, ಪೂರ್ಣತ್ವ ಅವರಿಗಿಲ್ಲ. ಪರಾಧೀನರು–

**ಶ್ರೀಹರಿಯು** ಸಕಲವಸ್ತುಗಳಲ್ಲಿ. ಚೇತನರಲ್ಲಿ, ದೇಶ ಕಾಲಾದಿಗಳಲ್ಲಿ ಪರಿಪೂರ್ಣನಾಗಿ ವ್ಯಾಪ್ತನಾಗಿದ್ದಾನೆ. ಅವನಿಲ್ಲದ ಸ್ಥಳವಿಲ್ಲ. ಇದರಿಂದ **ತ್ರಿಜಗದ್ವ್ಯಾಪಕತ್ವ ಮತ್ತು ನಿಯಾಮಕತ್ವ.** ಅವನ ಸ್ವರೂಪಗತ ಧರ್ಮಗಳು. ಅಂತೆಯೇ ಸ್ವಾತಂತ್ರ್ಯವೆಂಬುದು ಅವನಿಂದ ಅಭಿನ್ನವಾದ ಗುಣಧರ್ಮವು.

ಸತ್ಯಸಂಕಲ್ಪನ ಇಚ್ಛೆಯಂತೆ ಸಕಲ ಜಗದ್ವ್ಯಾಪಾರಗಳೆಲ್ಲವೂ ನಡೆಯುತ್ತಿರುವುವು. **'ತೇನ ವಿನಾ ತೃಣಮಪಿ ನಚಲತಿ'**–ಎಂಬ ವಚನದಂತೆ, ಸಕಲ ಚೇತನರು, ಜಡವಸ್ತುಗಳ ಮೇಲಿನ ನಿಯಂತ್ರಣ, ಅವು ಹ್ಯಾಗೆ ಇರಬೇಕೋ ಆ ಸಹಜಸ್ಥಿತಿಯಲ್ಲಿಯೇ ಇರೋಣ - ಇವು ಅವನ **ಸರ್ವವ್ಯಾಪಕತ್ವಕ್ಕೆ** ಸಾಕ್ಷಿಯಾಗಿವೆ. ಚರಾಚರಾತ್ಮಕವಾದ ಸಮಗ್ರ ಜಗತ್ತು ಅವನ ವಶದಲ್ಲಿರುವುದರಿಂದ, **ಸರ್ವವಶತ್ವವು** ಅವನ ಸ್ವರೂಪಭೂತಗುಣ ವಿಶೇಷವು. ಸಮಸ್ತಕ್ಕೂ ನಿಯಾಮಕನಾಗಿರುವುದರಿಂದ, **ಈಶತ್ವ** ಎಂಬ ಗುಣವು ಅವನದೇ.

ದಾಸತ್ವವೆಂಬುದು ಜೀವರ ಸ್ವರೂಪ ಲಕ್ಷಣವು. ಈಶತ್ವವೆಂಬುದು ಶ್ರೀ ಪರಮಾತ್ಮನ ಸ್ವರೂಪ ಲಕ್ಷಣವು. ಈಶನೆಂದಿಗೂ ದಾಸನಾಗಲಾರ. ದಾಸನೆಂದೂ ಈಶನಾಗಲಾರನು. ಈ ವೈಲಕ್ಷಣ್ಯ ಅನಾದ್ಯನಂತಕಾಲದಿಂದ ಶಾಶ್ವತ ಮತ್ತು ಸತ್ಯ ॥೨೩॥

## ಪದ್ಯ-೨೪

**ಮೂಲ :–**

ನಿತ್ಯನೂತನ ನಿರ್ವಿಕಾರ ಸು ।
ಹೃತ್ತಮು ಪ್ರಣವಸ್ಥ ವರ್ಣೋ ।
ತ್ಪತ್ತಿಕಾರಣ ವಾಙ್ಮನೋಮಯ ಸಾಮಗಾನರತ ॥
ದತ್ತ ಕಪಿಲ ಹಯಾಸ್ಯ ರೂಪದಿ ।
ಪೃಥಕ್ ಪೃಥಕ್ ಜೀವರೊಳಗಿದ್ದು ಪ್ರ ।
ವರ್ತಿಸುವನವರಪರ ಯೋಗ್ಯತೆ ಕರ್ಮವನನುಸರಿಸಿ ॥ ॥೨೪॥

**ಅವತರಣಿಕೆ :–**

ಅನಂತಕಲ್ಯಾಣಗುಣಗಣ ಪರಿಪೂರ್ಣನು, ಸರ್ವಕ್ರಿಯಾಪ್ರವರ್ತಕನೂ ಆದ ಶ್ರೀ ಪರಮಾತ್ಮನು ಜೀವರ ಅನಾದಿಸ್ವಭಾವ ಮತ್ತು ಕರ್ಮಗಳಿಗನುಗುಣವಾಗಿ ಪ್ರವರ್ತಿಸುತ್ತಾ, ತತ್ತತ್ಫಲಪ್ರದನಾಗಿರುವನು – ಎಂದು ತಿಳಿಸುತ್ತಾರೆ–

**ಪ್ರತಿಪದಾರ್ಥ :-**

**ನಿತ್ಯ** = ಶಾಶ್ವತನಾಗಿ, **ನೂತನ** = ಕ್ಷಣಕ್ಷಣಕ್ಕೆ ಹೊಸ ಹೊಸ ದಾದ ಅತ್ಯಾಶ್ಚರ್ಯ ವ್ಯಾಪಾರಗಳನ್ನು ಪ್ರದರ್ಶಿಸುತ್ತಿರುವ, **ನಿರ್ವಿಕಾರ** = ಯಾವ ಕಾಲಕ್ಕೂ ಯಾವ ವಿಕಾರವನ್ನು ಹೊಂದದೆ ಶಶ್ವದೇಕಪ್ರಕಾರ ನಾದ, **ಸುಹೃತ್ತಮ** = ತನ್ನನ್ನೇ ನಂಬಿ ಭಜಿಸುತ್ತಿರುವ ಸಜ್ಜನರ ಹೃದಯಸ್ಥ ನಾಗಿ ಸರ್ವೋತ್ತಮನಾಗಿರುವ, **ಪ್ರಣವಸ್ಥ** = ಓಂಕಾರಾಂತರ್ಗತನಾಗಿ, **ವರ್ಣೋತ್ಪತ್ತಿ ಕಾರಣ** = ಅಕ್ಷರಗಳ ಉತ್ಪತ್ತಿಗೆ ಕಾರಣನಾಗಿ, ಅವುಗಳಲ್ಲಿ ಅಂತಸ್ಥಿತನಾಗಿ ವರ್ಣಗಳಿಗೆ ಅಭಿವ್ಯಂಜಕ ಶಕ್ತಿ ಪ್ರದನಾಗಿರುವ, **ವಾಙ್ಮನೋ ಮಯ** = ವಾಗಿಂದ್ರಿಯದಲ್ಲಿದ್ದು ವಾಙ್ಮಯ ಎಂತಲೂ, ಮನೋ ಇಂದ್ರಿಯಗಳಲ್ಲಿದ್ದು, ಮನೋಮಯನೆಂತಲೂ ಕರೆಯಿಸಿಕೊಳ್ಳುವವನಾಗಿ, **ಸಾಮಗಾನರತ** = ಸಾಮವೇದ ಪ್ರತಿಪಾದ್ಯನಾಗಿ, ಸಾಮಗಾನಪ್ರಿಯನಾಗಿ, **ದತ್ತ** = ದತ್ತಾತ್ರೇಯ ರೂಪದಿಂದ (ಮುಕ್ತಿ ಯೋಗ್ಯರಲ್ಲಿ), **ಕಪಿಲ** = ಕಪಿಲ (ರೂಪದಿಂದ (ನಿತ್ಯ ಸಂಸಾರಿಗಳಲ್ಲಿ), **ಹಯಾಸ್ಯ** = ಹಯಗ್ರೀವ ರೂಪದಿಂದ (ತಮೋಯೋಗ್ಯರಲ್ಲಿ) **ಪೃಥಕ್ ಪೃಥಕ್ ಜೀವರೊಳಗಿದ್ದು** = ಮುಕ್ತಿಯೋಗ್ಯರು, ನಿತ್ಯ ಸಂಸಾರಿಗಳು, ಮತ್ತು ತಮೋಯೋಗ್ಯರು ಎಂಬ ತ್ರಿವಿಧ ಜೀವವರ್ಗಗತ ಭಿನ್ನ ಭಿನ್ನರಾದ ಅನಂತಜೀವರ ಅಂತ ರ್ಯಾಮಿಯಾಗಿದ್ದು. **ಅವರವರ** = ಆಯಾಯಾ ಕರ್ಮಗಳ, **ಯೋಗ್ಯತೆ** = ಅನಾದಿ ಸ್ವರೂಪದ ಸ್ವಭಾವ, **ಕರ್ಮವ** = ಅನಾದಿ ಜಡ ಕರ್ಮ ಗಳು. **ಅನುಸರಿಸಿ** = ಅವುಗಳಿಗನುಸಾರವಾಗಿ, **ಪ್ರವರ್ತಿಸುವ** = ಬಿಂಬಕ್ರಿಯಾ ದ್ವಾರಾ ವ್ಯಾಪಾರಗಳನ್ನು ಮಾಡಿ ಮಾಡಿಸುವನು. ||೨೪||

# ವ್ಯಾಖ್ಯಾನಗಳು

## ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಜೀವರ ಯೋಗ್ಯತಾನುಸಾರ ಪರಮಾತ್ಮ ಪ್ರವರ್ತಿಸತಾನೆ –ಎಂತ ಹೇಳತಾರೆ.

ಬ್ರಹ್ಮಾದಿ ಜೀವರೋಪಾದಿಯಲ್ಲಿ ಪ್ರತಿ ಪ್ರತೀ ಕಲ್ಪಕಾಲಕ್ಕೆ ಬ್ಯಾರೆ ಬ್ಯಾರೆ ಪರಮಾತ್ಮ ಎಂತ ಇಲ್ಲದೆ, ಅನಾದ್ಯನಂತ ಕಾಲಕ್ಕೂ ಒಬ್ಬನಾಗೇ ಇರತಕ್ಕವ ಪರಮಾತ್ಮ. ಮತ್ತು ಜೀವಾಂತರ್ಗತನಾಗಿ ಅವಿಯೋಗನಾಗಿ ಜೀವಗೆ ನಿತ್ಯತ್ವ ಸ್ಥಾಪನ ಮಾಡಿದವ. ಜೀವನ ನಿತ್ಯತ್ವಕ್ಕೆ ನಿತ್ಯಬಿಂಬ ನಾದವ. ನೂತನಕರಗಳಾದ ಅತ್ಯಾಶ್ಚರ್ಯ ವ್ಯಾಪಾರಗಳ ರಮಾದೇವೇರಿಗೆ, ಜೀವರಿಗೆ ತೋರಿಸಿ ಆನಂದದಲ್ಲಿ ಮುಣುಗಿಸತಕ್ಕವ. ನೂತನವಾಗಿ ತೋರೋವ. ಜೀವಾಂತರ್ಗತನಾಗಿ ಅವಿಯೋಗನಾಗಿ ಇದ್ದ ಕಾಲಕ್ಕೂ ಪ್ರತಿಬಂಧಕಸಾಮಗ್ರಿಗಳಿಂದ ಜೀವರೋಪಾದಿಯಲ್ಲಿ ಸುಖದುಃಖಾದಿಗಳಿಗೆ ಸಂಬಂಧಪಡದೆ ತದ್ಭಿನ್ನನಾಗಿ, ವಿಕಾರವಿಲ್ಲದೆ ಇರತಕ್ಕವ. ಸಮೀಚೀನ ಗಳಾದ ಹೃದಯಾಕಾಶದಲ್ಲಿ ಭಕ್ತ್ಯಾದಿಗಳಿಂದ ಪ್ರತ್ಯಕ್ಷವಾಗಿ ಧ್ಯಾನ ಮಾಡುವ ಭಗವದ್ಭಕ್ತರಿಗೆ ಶ್ರೇಷ್ಠರಾದ ಜೀವೋತ್ತಮರಾದ ಬ್ರಹ್ಮವಾಯು ಗಳಿಗಿಂತಲೂ ಸರ್ವೋತ್ತಮನಾದವ. ಓಂಕಾರಾಂತರ್ಗತನಾಗಿ ಓಂಕಾರ ವಾಚ್ಯನಾದವ ಮತ್ತು ಓಂಕಾರಗತ ಅಕಾರಾದಿ ಅಕ್ಷರಗಳ ಉತ್ಪತ್ತಿಗೆ ಕಾರಣ ನಾಗಿ, ಆಯಾ ವರ್ಣಗಳ ಉತ್ಪತ್ತಿ ಮಾಡಿ, ಆಯಾ ವರ್ಣಾಂತರ್ಗತನಾಗಿ ವರ್ಣವಾಚ್ಯನಾಗಿ ಇರತಕ್ಕವ. ವಾಗಿಂದ್ರಿಯದಲ್ಲಿ ಇದ್ದು, ವಾಙ್ಮಯ ಎಂತಲೂ ಮನೋಇಂದ್ರಿಯಗಳಲ್ಲಿದ್ದು, ಮನೋಮಯ ಎಂತಲೂ ಕರಸಿ, ಮನೋವಾಗಿಂದ್ರಿಯಗಳಿಂದ ವರ್ಣಾತ್ಮಕವಾದ ಅನೇಕ ವಿಧ ಮಾತುಗಳ, ವೇದಶಾಸ್ತ್ರಗಳ ನುಡಿಸಿತಕ್ಕವ. ಸಾಮವೇದದಿಂದ ಗಾನಮಾಡತಕ್ಕ ಮುಕ್ತ ರಲ್ಲಿ ಆಸಕ್ತಿಯುಳ್ಳವ. ಸಾಮಗಾನದಲ್ಲೂ ಪರಮ ಪ್ರೀತನಾದವ. ಅನಾದಿಸ್ವರೂಪ ಸ್ವಭಾವ ಬ್ಯಾರೆ ಬ್ಯಾರೆ ಆದ ಮುಕ್ತ

ಯೋಗ್ಯ, ನಿತ್ಯಸಂಸಾರಿ, ತಮೋಯೋಗ್ಯ ಈ ತ್ರಿವಿಧಜೀವರೊಳಗೆ, ದತ್ತಾತ್ರೇಯ ರೂಪದಿಂದ ಮುಕ್ತಿಯೋಗ್ಯರಲ್ಲಿ, ಕಪಿಲ ರೂಪದಿಂದ ನಿತ್ಯ ಸಂಸಾರಿಗಳಲ್ಲಿ, ಹಯಗ್ರೀವರೂಪದಿಂದ ತಮೋಯೋಗ್ಯರಲ್ಲಿ ಆಯಾ ರೂಪದಿಂದ ಆಯಾ ಜೀವರಲ್ಲಿ ಇದ್ದು, ಆ ತ್ರಿವಿಧ ಜೀವರ ಅನಾದಿಸ್ವರೂಪ ಸ್ವಭಾವದ ಯೋಗ್ಯತೆ, ಅನಾದಿ ಜಡಕರ್ಮ ಎರಡನ್ನು ಅನುಸರಿಸಿ, ತ್ರಿವಿಧ ಜೀವರ ಸ್ಥೂಲದೇಹ ದ್ವಾರಾ ಮಾಡತಕ್ಕ ಜೀವಕೃತಕರ್ಮಗಳ ಬಿಂಬಕ್ರಿಯಾ ದ್ವಾರಾ ತಾನು, ನಂತರ ಜೀವನ ದ್ವಾರಾ ದೇಹದಿಂದ ಪ್ರವರ್ತಿಮಾಡಿಸುವ. ಈ ಪ್ರಕಾರ ಪೂರ್ವೋಕ್ತ ರೂಪಗಳಿಂದ ವ್ಯಾಪಾರಗಳ ಮಾಡತಾನೆ. ಈ ರೂಪತ್ರಯಗಳು ಸ್ವರೂಪಯೋಗ್ಯತಾನುಸಾರ ಜ್ಞಾನಪ್ರದರೂಪಗಳು ವೇದವತ್ ಸೂತ್ರವತ್ ಎಂತ ತಾತ್ಪರ್ಯ ॥೨೪॥

## ೨. ಭಾವಪ್ರಕಾಶಿಕೆ :-

ಶ್ರೀ ಪರಮಾತ್ಮನು ನಿತ್ಯದಲ್ಲೂ ಹೊಸಬನು, ದ್ವಾರಾವತಿಯಲ್ಲಿರುವವರು ನಿತ್ಯದಲ್ಲಿ ಶ್ರೀ ಕೃಷ್ಣನನ್ನು ನೋಡುತ್ತಿದ್ದರೂ ಮತ್ತೂ ಹೊಸಬನಾಗಿಯೇ ಕಾಣುತ್ತಿರುವುದರಿಂದ ಎಷ್ಟು ನೋಡುತ್ತಿದ್ದರೂ, ಆ ನೋಟಕರ ಕಣ್ಣುಗಳು ತೃಪ್ತಿ ಹೊಂದವು-ಎಂದು ಭಾಗವತ ಪ್ರಥಮ ಸ್ಕಂಧದಲ್ಲಿ ಹೇಳಿರುವರು. ಆದ್ದರಿಂದ ಪರಮಾತ್ಮನು ನಿತ್ಯ ನೂತನನು. ಸ್ಥೂಲ ಶರೀರಗಳಲ್ಲಿ ಬಾಲ್ಯ, ಯೌವನ, ವೃದ್ಧಾಪ್ಯ ಮೊದಲಾದವು ಬರುತ್ತಾ ಬರುತ್ತಾ, ಶರೀರಗಳು ವಿಕಾರ ಹೊಂದುವುವು. ಅಂತಹ ವಿಕಾರವು ಪರಮಾತ್ಮನ ಯಾವ ರೂಪಗಳಿಗೂ ಯಾವ ದೇಹಗಳಿಗೂ ಬರುವುದಿಲ್ಲ. ಆದ್ದರಿಂದ ಪರಮಾತ್ಮನು ನಿರ್ವಿಕಾರನು. ಸುಹೃತ್ತಮನು ಅಂದರೆ, ನಿತ್ಯದಲ್ಲೂ ತನ್ನ ಪ್ರಾಣಕ್ಕೆ ಸಮನೆಂದು ಯಾರನ್ನು ಭಾವಿಸುವನೋ ಅವನೇ ಸುಹೃತ್ ಎಂಬುವನು. ಪರಮಾತ್ಮನು ಪ್ರಾಣಕ್ಕಿಂತಲೂ ಹೆಚ್ಚು ಪ್ರಿಯ ವಿಷಯನಾದುದರಿಂದ ಸುಹೃತ್ತಮನೆಂದರು. ಪ್ರಣವದ 'ಓಂ' ಎಂಬ ಅಕ್ಷರದಲ್ಲಿ ಅ, ಉ, ಮ-ಎಂಬ ಮೂರು ವರ್ಣಗಳು ಸೇರಿರುವುವು. ಇವು ಮೂರು ಮೊಟ್ಟಮೊದಲು ಪರಮಾತ್ಮನಿಂದ ಹುಟ್ಟಿದವು. ವಾಙ್ಮಯ ಮನೋಮಯನೆಂದರೆ

ಸರ್ವಜೀವರೊಳಗಿದ್ದು, ವಾಙ್ಮನೋವ್ಯಾಪಾರಗಳನ್ನು ಮಾಡಿಸುವನು. ವಿಶೇಷವಾಗಿ ಸಾಮವೇದದಲ್ಲಿ ಭಗವನ್ಮಹಿಮೆ ಹೆಚ್ಚಾಗಿ ಇರುವುದು. ಆದ್ದರಿಂದ ಸಾಮಗಾನರತ ಎಂದರು. ದತ್ತಾತ್ರೇಯ, ಕಪಿಲ, ಹಯಗ್ರೀವ ರೂಪಗಳಿಂದ ಪ್ರತಿಯೊಂದು ಜೀವರೊಳಗೂ ಇದ್ದು, ಅವರವರ ಸ್ವರೂಪ ಯೋಗ್ಯತೆಯನ್ನೂ, ಪ್ರಾರಬ್ಧಕರ್ಮಗಳನ್ನೂ ಅನುಸರಿಸಿ, ಅವರಿಂದ ಆಗ ಬೇಕಾದ ಕಾರ್ಯಗಳನ್ನು ಮಾಡಿ ಮಾಡಿಸುವನು. ॥೨೪॥

## ೩. ಭಾವದರ್ಪಣ :–

ನಿತ್ಯನೂತನೇತಿ. ನಿರ್ವಿಕಾರ = ವಿಕಾರ ಶೂನ್ಯ, ಸುಹೃತ್ತಮ = ಅತ್ಯಂತ ಪ್ರಿಯ, ಪ್ರಣವಸ್ಥ ಓಂಕಾರದಲ್ಲಿದ್ದವ, ವರ್ಣೋತ್ಪತ್ತಿ ಕಾರಣ = ಚತುರ್ವಿಧ ಜಾತಿಯುಳ್ಳ ಬ್ರಹ್ಮಾದಿ ದೇವತೆಗಳನ್ನೂ, ಮನುಷ್ಯರನ್ನೂ ನಿತ್ಯವಾದ • ಅಕಾರಾದಿ ವರ್ಣಗಳನ್ನೂ ಭಾಗವತಾದಿ ಗ್ರಂಥರೂಪದಿಂದ ಸೃಷ್ಟಿಸುವುದಕ್ಕೆ ಕಾರಣನಾದವ. ಏತಾದೃಶ ಹರಿಯು ತ್ರಿವಿಧರ ಕರ್ಮಾನುಸರಿಸಿ ಪ್ರವರ್ತಿಸುವನೆಂಬ ಭಾವ ॥೨೪॥

## ೪. ಶ್ರೀ ವ್ಯಾಸದಾಸ ಸಿದ್ಧಾಂತ ಕೌಮುದೀ

"ನಿತ್ಯ" ಇತಿ ॥ "ನೂತನ "ದ್ರಷ್ಟೄಣಾಮ್" ॥೨೪॥

### ಕನ್ನಡಾರ್ಥ

ಹರಿಯು ಅಸಾಧಾರಣವಾದ ಗುಣಗಳನ್ನೂ, ರೂಪಗಳನ್ನೂ ಹೇಳಿ ಸ್ತುತಿಸುತ್ತಾರೆ. "ನಿತ್ಯ" ಎಂಬ ಪದ್ಯದಿಂದ.

"ನಿತ್ಯದಲ್ಲಿ ನೂತನವಾಗಿರುವನು" ಎಂದರೆ – ನೋಡುವವರ ದೃಷ್ಟಿಯಲ್ಲಿ ಹೊಸ ಹೊಸ ವಿಶೇಷಾಕಾರಗಳಿಂದ ಗೋಚರನಾಗುತ್ತಾನೆ –ಎಂದು ಅಭಿಪ್ರಾಯವನ್ನು ತಿಳಿಯಬೇಕು. ॥೨೪॥

## ೫. ಶ್ರೀ ಗುರುಹೃದಯ ಪ್ರಕಾಶಿಕೆ

ಆದ್ದರಿಂದ ದೇವರು ಸರ್ವಸ್ವತಂತ್ರ, ತದಧೀನಕ್ರಿಯ ಉಳ್ಳವರು ಜೀವರೆಂದು ಭಾವಿಸುವುದೇ ಸದ್ಗತಿಗೆ ಸಾಧನವೆಂದು ಏಳು-ಪದ್ಯದಿಂದ ತಿಳಿಸುತ್ತಾರೆ, ನಿತ್ಯ ಎಂದು ಮೊದಲು. ನಿತ್ಯನೂತನ, ಸದಾ ಹೊಸ ಪರಿರೂಪಗಳುಳ್ಳಂಥವನಾದಾಗ್ಯೂ, ಜ್ಞಾನರೂಪನಿರ್ವಿಕಾರನಾದ, ಸರ್ವಸಜ್ಜನರಿಗೆ ಪರಮಾಪ್ತನಾದ, ಪ್ರಣವೆಂಬ ಓಂಕಾರ ಸಂಸ್ಥಿತನಾದ, ಆದ್ದರಿಂದ ಮನಸ್ಸಿಗೂ ವಾಕ್ಕಿಗೂ ಮುಖ್ಯ ವಿಷಯನಾದ, ಸಾಮವೇದಗಾನಲೋಲನಾದ ಶ್ರೀ ಹರಿಯು ಜ್ಞಾನಪ್ರಾಪಕ ದತ್ತಾತ್ರೇಯ, ಕಪಿಲ, ಹಯಗ್ರೀವ ಮೊದಲಾದ ರೂಪಗಳಿಂದ ಪೃಥಕ್ಪೃಥಕ್ ಅಂದರೆ, ಬೇರೆ ಬೇರೆ ಜೀವರುಗಳಲ್ಲಿದ್ದು, ಅವರವರ ಯೋಗ್ಯತೆ, ಕರ್ಮಾನುಕೂಲವಾಗಿ ಪ್ರವರ್ತಿಸುವ-ಅಂದರೆ, ಪ್ರೇರಣಾದಿ ಕಾರ್ಯ ಮಾಡುವನು.

**ಯಸ್ಯಾವತಾರಾಜ್ಞೇಯಂ ತೇ ಶರೀರೇಷ್ವಶರೀರಿಣಃ ||** ಎಂಬ ಭಾಗವತಾರ್ಥ ವಿವರಿಸಿತು ॥೨೪॥

## ಸರ್ವವ್ಯಾಖ್ಯಾನಸಾರಸಂಗ್ರಹ

ಅನಾದ್ಯನಂತಕಾಲದಿಂದಲೂ ಶ್ರೀ ಪರಮಾತ್ಮನು ಶಾಶ್ವತನು. ಅಚ್ಯುತನಾಮಕನೂ ಏಕಮೇವ ಹಾಗೂ ಅದ್ವಿತೀಯನು. ಸದಾ ಜೀವಾಂತರ್ಗತನಾಗಿದ್ದು, ಜೀವರಿಗೆ ನಿತ್ಯತ್ವಸ್ಥಾಪನೆಗೆ ಕಾರಣನು.

ಅವನ ವ್ಯಾಪಾರಗಳು ಅತ್ಯಾಶ್ಚರ್ಯಕರ ಹಾಗೂ ಅತ್ಯದ್ಭುತವಾದುವು. ಅಂಚಿತ್ಯಮಹಿಮನಾದ ಅವನು ಕ್ಷಣ ಕ್ಷಣಕ್ಕೆ ಹೊಸ ಹೊಸದಾಗಿ ಗೋಚರಿಸುವನು. ಶ್ರೀ ಪರಮಾತ್ಮನ ನಿತ್ಯಾವಿಯೋಗಿಯಾದ ಶ್ರೀ ಲಕ್ಷ್ಮೀದೇವಿಗೆ ನಿತ್ಯನೂತನನಾಗಿ ಕಾಣಿಸುತ್ತಾ, ಅವನ ಅಪಾರವಾದ

ಅಸದೃಶವಾದ ಮಹಾಮಹಿಮೆಗಳನ್ನು ಸಾಕಲ್ಯೇನ ಅರಿಯದಂತೆ ಮಾಡುತ್ತಿರುವ ಅಗಮ್ಯಮಹಿಮನು. ತನ್ನ ಅಂತರಂಗ ಭಕ್ತರಿಗೆ ಅತ್ಯಂತ ಪ್ರೀತಿಯ ವಿಷಯನು. ನಿರ್ಮಮರಾಗಿ, ನಿಷ್ಕಾಮ ಭಕ್ತಿಯಿಂದ ಶ್ರೀಹರಿಯನ್ನು ಭಜಿಸುತ್ತಿರುವ ಭಕ್ತರ ಹೃದಯದಲ್ಲಿ ವಿರಾಜಮಾನನಾಗಿ, ಅವರ ಭಕ್ತಿಯನ್ನು ವೃದ್ಧಿಮಾಡಿ, ತನ್ನ ಸಂದರ್ಶನ ಭಾಗ್ಯ ನೀಡುವುದರಿಂದ **ಸುಹೃತ್ತಮನು.** ಶರೀರಕ್ಕೆ ಕಾಲಕಾಲಕ್ಕೆ ಬರುವ ಬಾಲ್ಯ –ಯೌವ್ವನ – ಮುಪ್ಪು ಇತ್ಯಾದಿ ವಿಕಾರಗಳು ನಿತ್ಯಜ್ಞಾನಾನಂದಸ್ವರೂಪನಾದ ಆ ನಿರಂಜನನಿಗೆ ಯಾವ ಕಾಲಕ್ಕೂ ಇಲ್ಲವೇ ಇಲ್ಲ. ಚತುರ್ವಿಧವಾದ ನಾಶಗಳು ಅವನಿಗಿಲ್ಲ. ಶಶ್ವದೇಕ ಪ್ರಕಾರನಾಗಿದ್ದಾನೆ. ಜೀವ ಜಡರಲ್ಲಿ ಅಂತಸ್ಥಿತನಾಗಿ, ಸರ್ವಕ್ರಿಯಾ ಪ್ರವರ್ತಕನಾಗಿದ್ದರೂ, ಜಡ ಜೀವರುಗಳ ದೋಷಗಳ ತಾಪ ಅವನಿಗಿಲ್ಲ. ಜಗದ್ವಿಲಕ್ಷಣನಾದ ಆ ಜಗದೀಶನು **ನಿರ್ವಿಕಾರನು.**

ಓಂಕಾರಕ್ಕೆ **ಪ್ರಣವ** ಎಂದು ಹೆಸರು. ಸರ್ವ ಶಬ್ದ, ಸ್ವರ, ವರ್ಣಗಳಿಗೆ ಮಾತೃಸ್ಥಾನರೂಪವಾದ ಬೀಜಾಕ್ಷಕವು **ಓಂಕಾರವು.** ಇಂತಹ ಓಂಕಾರ ಪ್ರತಿಪಾದ್ಯನಾಗಿ, ಅ–ಕಾರ, ಉ–ಕಾರ, ಮ–ಕಾರ, ನಾದ, ಬಿಂದು, ಘೋಷ, ಶಾಂತ ಮತ್ತು ಅತಿಶಾಂತ ವಾಚ್ಯನಾಗಿರುವುದರಿಂದ **ಪ್ರಣವಸ್ಥನು.**

ವರ್ಣಗಳು ಅಂದರೆ ಅ–ಕಾರಾದಿ ಕ್ಷ–ಕಾರ ಪರ್ಯಂತ ಇರುವ ೫೧ ಅಕ್ಷರಗಳೂ ಜಡಗಳು ಅವುಗಳಿಗೆ ಸ್ವತಃ ಪ್ರವೃತ್ತಿ ಶಕ್ತಿ ಇಲ್ಲ. ಸರ್ವ ವರ್ಣ ಪ್ರತಿಪಾದ್ಯನಾದ ಸರ್ವೇಶನು ವರ್ಣಾಂತರ್ಗತನಾಗಿದ್ದರೂ, ಅವುಗಳ ಉಚ್ಚಾರಣಾಕ್ರಿಯ, ತದ್ವಾರಾ ಅರ್ಥಾನುಪತ್ತಿ ಇತ್ಯಾದಿ ವರ್ಣಾಭಿವ್ಯಂಜಕ ಶಕ್ತಿಗೆ ಮೂಲಕಾರಣವಾಗಿದ್ದಾನೆ.

ವಾಗಿಂದ್ರಿಯದಲ್ಲಿದ್ದು, ವಾಗ್ರೂಪವಾದ ವ್ಯಾಪಾರಗಳನ್ನು ಮಾಡಿ ಮಾಡಿಸುವನು. ವರ್ಣೋಚ್ಚಾರಣೆ,ಸಂಭಾಷಣೆ, ಪ್ರವಚನ,ವಾದ್ಯಘೋಷ, ಗಾಯನ, ವಾದ ವಿವಾದಗಳು ಇತ್ಯಾದಿ ಸರ್ವ ವಾಗ್ರೂಪ ಕ್ರಿಯೆಗಳಿಗೆ ಕಾರಣನಾದ್ದರಿಂದ **ವಾಙ್ಮಯನು.**

ಮನಸ್ಸು, ಚಿತ್ತ, ಬುದ್ಧಿ ಇತ್ಯಾದಿ ಮನೋ ಪಂಚಕಗಳಲ್ಲಿ ಅಂತಸ್ಥಿತನಾಗಿರುವನು. ॥೨೪॥

## ಪದ-೨೫

**ಮೂಲ :–**

**ಶ್ರುತಿಗಳಾತನ ಮಾತು ವಿಮಲ ।**
**ಸ್ಮೃತಿಗಳಾತನ ಶಿಕ್ಷೆ ಜೀವ ।**
**ಪ್ರತತಿ ಪ್ರಕೃತಿಗಳೆರಡು ಪ್ರತಿಮೆಗಳೆನಿಸಿಕೊಳುತಿಹವು ॥**
**ಇತರ ಕರ್ಮಗಳೆಲ್ಲ ಲಕುಮಿಯಾ ।**
**ಪತಿಗೆ ಪೂಜೆಗಳೆಂದು ಸ್ಮರಿಸುತ ।**
**ಚತುರವಿಧ ಪುರುಷಾರ್ಥಗಳ ಬೇಡದಿರು ಸ್ವಪ್ನದಲಿ ॥ ॥೨೫॥**

**ಅವತರಣಿಕೆ :–**

ನಮ್ಮ ದ್ವಾರಾ ದೈಹಿಕ ಮಾನಸಿಕ ಬೌದ್ಧಿಕವಾದ ಸಮಸ್ತ ಕರ್ಮಗಳೂ ಅವನ ಪೂಜೆಗಳೆಂದು ಉತ್ತಮಾನುಸಂಧಾನದಿಂದ ಅರ್ಪಿಸುತ್ತಾ, ನಿಷ್ಕಾಮ ನಾಗಿರಬೇಕೆಂದು ತಿಳಿಸುತ್ತಾರೆ.

**ಪ್ರತಿಪದಾರ್ಥ :–**

**ಶ್ರುತಿಗಳು** = ಅಪೌರುಷೇಯವಾದ ವೇದವಾಕ್ಯಗಳು, **ಆತನ** = **ಮಾತು** = ವೇದಪುರುಷನಾದ ಆ ಪರಮಾತ್ಮನ ಆಜ್ಞೆಯಿಂದಲೇ ತಿಳಿಯಬೇಕು. **ವಿಮಲ** = ನಿರ್ದೋಷಿಗಳಾದ, **ಸ್ಮೃತಿಗಳು** = ವೇದಾನುಸಾರಿಯಾದ ಪುರಾಣ, ಇತಿಹಾಸಾದಿ ಸಚ್ಛಾಸ್ತ್ರಗಳು, **ಆತನ ಶಿಕ್ಷೆ** = ವಿಧಿ ನಿಷೇಧರೂಪವಾದ ನಿಯಮಗಳೆಂದು ತಿಳಿಯಬೇಕು. **ಜೀವ ಪ್ರತತಿ** =

ತ್ರಿವಿಧ ಜೀವರ ಸಮೂಹವು, **ಪ್ರಕೃತಿಗಳು** = ಪೃಥಿವ್ಯಾದಿ ಭೂತಪಂಚಕ ಗಳಾದ ಜಡಗಳು, **ಎರಡು** = ಜೀವಜಡಗಳೆರಡೂ **ಪ್ರತಿಮೆಗಳೆನಿಸಿ ಕೊಳುತಿಹವು** = ಶ್ರೀ ಪರಮಾತ್ಮನ ಆವಾಸಸ್ಥಾನ ರೂಪವಾದ ಅಧಿಷ್ಠಾನ ಗಳೆಂದು ಕರೆಯಲ್ಪಡುವುವು. (ಜೀವರು ಚಲಪ್ರತೀಕಗಳು. ಜಡಗಳು ಅಚಲ ಪ್ರತೀಕಗಳು) **ಇತರ ಕರ್ಮಗಳೆಲ್ಲ** = ಸಕಲ ಕರ್ಮಗಳೆಲ್ಲವೂ **ಲಕುಮಿಯ ಪತಿಗೆ** = ಲಕ್ಷ್ಮೀರಮಣನಾದ ಶ್ರೀ ಹರಿಗೆ, **ಪೂಜೆಗಳೆಂದು** = ಅವನಿಂದಲೇ ಪ್ರೇರಿತರಾಗಿ ಜೀವನ ದ್ವಾರಾ ನಡೆಯಿಸಲ್ಪಟ್ಟವು ಎಂಬ ಅನುಸಂಧಾನ ರೂಪವಾದ ಪೂಜೆಗಳೆಂದು, **ಸ್ಮರಿಸುತ** = ಮನಸಾ ಧ್ಯಾನಿ ಸುತ್ತ, **ಚತುರವಿಧ ಪುರುಷಾರ್ಥಗಳ** = ಧರ್ಮ, ಅರ್ಥ, ಕಾಮ ಮತ್ತು ಮೋಕ್ಷಗಳೆಂಬ ನಾಲ್ಕು ವಿಧವಾದ ಫಲಗಳನ್ನು **ಸ್ವಪ್ನದಲಿ** = ಕನಸಿನಲ್ಲಾದರೂ ಸಹ, **ಬೇಡದಿರು** = ಫಲಾಪೇಕ್ಷೆಯಿಂದ ಬೇಡ ಬೇಡ– ಎಂದು ಉಪದೇಶಾಮೃತ ನೀಡಿದ್ದಾರೆ. ॥೨೫॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ನಿಷ್ಕಾಮಕರ್ಮ ಮಾಡಬೇಕು ಎಂತ ಹೇಳತಾರೆ. ಅಪೌರುಷೇಯವಾದ ವೇದದಲ್ಲಿ ಹೇಳತಕ್ಕದ್ದು ವೇದಪುರುಷನಾದ ಎಂದರೆ ಶ್ರೀಹರಿ ಸರ್ವೋ ತ್ತಮ, ಗುಣಪೂರ್ಣ, ನಿರ್ದೋಷ, ಸೃಷ್ಟ್ಯಾದ್ಯಷ್ಟಕರ್ತೃ, ಸರ್ವತಂತ್ರ ಸ್ವತಂತ್ರ ಎಂತಲೂ, ಶ್ರೀ ಪರಮಾತ್ಮನಿಂದ ಸೃಜ್ಯರಾದ ಜೀವರ ಸಮೂಹ ವೇನು, ಪೃಥಿವ್ಯಾದಿ ಪ್ರಕೃತಿ ಸಾಂಕೇತವಾದ ಪಂಚಭೂತಗಳ ಸಮೂಹವೇನು, ಈಜಡಜೀವಗಳು ಪರಮಾತ್ಮನ ಆವಾಸಕ್ಕೆ ಅಧಿಷ್ಠಾನ ಭೂತವಾದ ಪ್ರತಿಮಾ ಗಳು ಎಂತಲೂ ಎನಿಸಿಕೊಳ್ಳುತ್ತಾ ಇರೋವಾಗಿ ಅವೆ. ಅಪೌರುಷೇಯ ವಾದ ವೇದಗಳು ಈಶ್ವರನಿಂದ ರಚಿತವಲ್ಲ, ಅನಾದಿಯು. ನಿರ್ದೋಷ ವಾದ ವೇದಗಳ ಅರ್ಥಗಳ, ನಿರ್ದೋಷರಾದ ಶ್ರೀವೇದವ್ಯಾಸದೇವರು, ವ್ಯಾಖ್ಯಾನವಾದ ಪುರಾಣಗಳು ಭಾಷಾತ್ರಯಗಳು ಎಂದರೆ ದರ್ಶನ, ಗುಹ

ಮತ್ತು ಸಮಾಧಿ ಭಾಷಾಗಳಿಂದ ವೇದಕ್ಕೆ ಅವಿರುದ್ಧವಾದ ಸನ್ಮಾರ್ಗ ರೂಪವಾದ ಸಾಧನ ಮಾರ್ಗಗಳ ಹೇಳಿದ್ದಾರೆ. ಆದ್ದರಿಂದ ವಿಧಿ ನಿಷೇಧಗಳ ತೋರಿಸಿಕೊಟ್ಟು ಆಚರಿಸತಕ್ಕದ್ದು ಇದು, ಆಚರಿಸಕೂಡದ್ದು ಇದು ಎಂತ ಶಿಕ್ಷಾರೂಪವಾಗಿ ಪರಮಾತ್ಮ ತನ್ನ ಆಜ್ಞಾರೂಪವಾದ ಶಾಸನವನ್ನು ಪುರಾಣಗಳಲ್ಲಿ ಹೇಳಿ ಇರೋಣದರಿಂದ, ಸ್ಮೃತಿಗಳು ಆತನ ಶಿಕ್ಷಾರೂಪವಾದವು-ಎಂತ ಕರಸೋವಾದವು. ಆದ್ದರಿಂದ ಶಿಕ್ಷಾರೂಪವಾದ ಸ್ಮೃತಿಗಳಿಂದಲೇ ಅನುಸಂಧಾನ ಕ್ರಮಗಳು ಯಾವತ್ತೂ ತಿಳಿಯಬೇಕು ಎಂತ ತಾತ್ಪರ್ಯ. ಇದು ಪೌರುಷೇಯ ದೇವರ ಪೂಜಾ, ಸ್ನಾನ, ಸಂಧ್ಯಾವಂದನ, ಜಪ, ಹೋಮ, ತೀರ್ಥಯಾತ್ರಾದಿಗಳು ಪ್ರತೀತದಲ್ಲಿ ಪುಣ್ಯ ಕರ್ಮಗಳಾಗೇ ಅವೆ. ತದ್ವ್ಯತಿರಿಕ್ತ ಇತರವಾದ ದಾರಾ ಪುತ್ರಾದಿಗಳ ಪೋಷಣ, ಆತ್ಮಸುಖ ಮೊದಲಾದ ಈ ಕರ್ಮಗಳು ಪ್ರತೀತದಲ್ಲಿ ಇತರ ಕರ್ಮಗಳಾಗಿ ಅವೆ. ಉಭಯವಿಧ ಕರ್ಮಗಳು ಯಾವತ್ತೂ ಲಕ್ಷ್ಮೀಪತಿಯಾದ ನಾರಾಯಣ ದೇವರಿಗೆ ಪೂಜಾ ಎಂತಲೇ ಸ್ಮರಣೆ ಮಾಡತಾ ಎಂದರೆ,ಪ್ರತೀತ ಪುಣ್ಯಕರ್ಮಗಳೇನು,ತದಿತರ ಕರ್ಮಗಳೇನು, ಮನಾದಿ ಏಕಾದಶೇಂದ್ರಿಯಗಳಿಂದ ಆಗೋವಾಗತವೆ. ಅಹಂ ಮಮತಾದಿಗಳಿಂದ ರಹಿತನಾಗಿ, ನಿಸ್ಪೃಹನಾಗಿ ಕರ್ಮ ಮಾಡತಕ್ಕ ದೇಹೇಂದ್ರಿಯಾದಿಗಳಲ್ಲಿ ಇದ್ದು, ಕರ್ಮಗಳ ಮಾಡಿಸತಕ್ಕ ಆಯಾ ಇಂದ್ರಿಯಗತ ಪರಮಾತ್ಮನ್ನ ಸ್ಮರಿಸತಾ, ಕರ್ಮಾಂತರ್ಗತ ಶ್ರೀದೇವರ, ಇಂದ್ರಿಯಸ್ಥ ಪರಮಾತ್ಮನಲ್ಲ, ಇಂದ್ರಿಯಸ್ಥ ಪರಮಾತ್ಮನ್ನ ಹೃದಯಾಕಾಶಗತ ಶ್ರೀ ಪರಮಾತ್ಮನಲ್ಲಿ ಐಕ್ಯ ಚಿಂತನರೂಪದಿಂದ ಧ್ಯಾನಮಾಡತಾ ಕರ್ಮಗಳ ಯಾವತ್ತೂ ಈ ರೀತ್ಯಾ ಪೂಜೆಗಳಿಂದರ್ಪಿಸತ, ಕನಸಿನಲ್ಲಿ ಆದರೂ ಧರ್ಮಾರ್ಥಕಾಮ ಮೋಕ್ಷಗಳೆಂಬ, ಈ ನಾಲ್ಕು ವಿಧ ಪ್ರಯೋಜನಗಳು ಅಧಿಕಾರಿಯಾದ ಪುರುಷಗೆ ಮುಖ್ಯವಾದವು. ಇವನ್ನ ಫಲಾಪೇಕ್ಷೆಯಿಂದ ಯಾಚನಾ ಮಾಡಧಾಂಗೆ ಇರಬೇಕೆಂದು ತಾತ್ಪರ್ಯ. ॥೨೫॥

**ವಿಶೇಷಾರ್ಥ:–** ಕರ್ಮಗಳ ಹ್ಯಾಂಗೆ ಅರ್ಪಿಸಬೇಕೆಂದರೆ, ಕರ್ಮಾಂತರ್ಗತ ಪರಮಾತ್ಮಗೂ ಅಧಿಷ್ಠಾನಾಂತರ್ಗತ ಪರಮಾತ್ಮಗೂ ಐಕ್ಯಚಿಂತನಿ ಮಾಡೋಣವೇ ಅರ್ಪಿಸೋಣ. ಕರ್ಮಗಳ ಯಾವತ್ತೂ ಪೂಜಾತ್ವೇನ ಅರ್ಪಿಸು–ಎಂದರೆ, ಜಡಕರ್ಮ ಅರ್ಪಿಸು ಎಂತ ತಾತ್ಪರ್ಯವಲ್ಲ. ಪ್ರತಿಮಾಂತ ರ್ಗತ ಪರಮಾತ್ಮನಲ್ಲಿ ಕರ್ಮಾಂತರ್ಗತ ಪರಮಾತ್ಮನ್ನ ಒಂದಂಶದಿಂದ ತೆಗೆದು ಕೊಂಡು ಮೇಳನರೂಪವಾದ ಅರ್ಪಣೆ ಮಾಡಬೇಕಂತ ತಾತ್ಪರ್ಯ ॥೨೫॥

೨. **ಭಾವಪ್ರಕಾಶಿಕೆ :–**

ಶ್ರುತಿಗಳೆಲ್ಲವೂ ಭಗವಂತನ ವಾಕ್ಯವೆಂದು ತಿಳಿ. ಪುರಾಣವಾಕ್ಯ ಗಳೆಲ್ಲವೂ ಪರಮಾತ್ಮನ ಅಪ್ಪಣೆ ಎಂದು ತಿಳಿಯಬೇಕು. ಜೀವ ಶರೀರಗಳು ಮತ್ತು ಪ್ರಕೃತಿ ಇವೆರಡೂ ಪರಮಾತ್ಮನ ಪ್ರತಿಮೆಗಳೆಂದು ಭಾವಿಸು. ನೀನು ಮಾಡುವ ಎಲ್ಲಾ ಕರ್ಮಗಳನ್ನೂ ಪರಮಾತ್ಮನ ಪೂಜೆಗಳೆಂದು ತಿಳಿದು, ಪರ ಮಾತ್ಮನಿಗೆ ಅರ್ಪಿಸುತ್ತಿರು. ಧರ್ಮಾದಿ ನಾಲ್ಕು ವಿಧ ಪುರುಷಾರ್ಥಗಳನ್ನು ಸ್ವಪ್ನದಲ್ಲಾದರೂ ಬೇಡದಿರು. ನಿಷ್ಕಾಮುಕನಾಗಿ ಕರ್ಮಗಳನ್ನು ಮಾಡ ಬೇಕೆಂಬ ತಾತ್ಪರ್ಯ ॥೨೫॥

೩. **ಭಾವದರ್ಪಣ :–**

"ಶ್ರುತಿಸ್ಮೃತಿ ಮಮೈವಾಜ್ಞೆ ಕುರ್ಯಾತ್ತದನು ಸಾರತಃ" ಎಂಬ **ವಿಷ್ಣುರಹಸ್ಯ** ರೀತ್ಯಾ "ಶ್ರುತಿಸ್ಮೃತಿ ಹರೇರಾಜ್ಞಾ ತಸ್ಯಾಹಮನುಗಸ್ಸದಾ" ॥ ಎಂಬ **ವಾಯುಪುರಾಣ** ರೀತ್ಯಾ ವರ್ತಿಸಿರೆಂದು ಸಜ್ಜನರಿಗೆ ಹೇಳುತ್ತಾರೆ. ಶ್ರುತೀತಿ. ॥೨೫॥

೪. **ಶ್ರೀವ್ಯಾಸದಾಸ ಸಿದ್ಧಾಂತ ಕೌಮುದೀ :–**

"ಶ್ರುತಿ" ಇತಿ ॥೨೫॥

## ಕನ್ನಡಾರ್ಥ

"ಶ್ರುತಿಸ್ಮೃತಿಗಳು ನನ್ನ ಆಜ್ಞೆಗಳು. ಇವುಗಳನ್ನನುಸರಿಸಿ ಸತ್ಕರ್ಮಗಳನ್ನು ಮಾಡಬೇಕು. ಅವರ ಕರ್ಮಾನುಸಾರವಾಗಿ ಫಲಗಳನ್ನು ಕೊಡುತ್ತೇನೆ. ಶ್ರವಣ, ಮನನ, ಧ್ಯಾನ್ಯಗಳಿಂದ ನನ್ನನ್ನು ಸಾಕ್ಷಾತ್ಕರಿಸಿಕೊಳ್ಳುವವರಿಗೆ ಮೋಕ್ಷವನ್ನು ನಾನು ಕೊಡುತ್ತೇನೆ. ನನ್ನನ್ನು ದ್ವೇಷಿಸುವವರನ್ನು ಅಂಧತ್ತಮಸ್ಸಿನಲ್ಲಿ ನುಗ್ಗಿಸುವೆನು. ಅಲ್ಲಿ ಬಿದ್ದರೆ, ಪುನಃ ಅಲ್ಲಿಂದ ಮರಳುವದಾಗುವುದಿಲ್ಲ". ಎಂದು ವಿಷ್ಣು ರಹಸ್ಯದಲ್ಲಿ ಪರಮಾತ್ಮನ ವಚನವಿರುತ್ತದೆ.

ಭಗವಾನ್ ವಿಷ್ಣುವು ತನ್ನ ಸೇವೆಗಾಗಿ ದೇಶ ಕಾಲ ಕ್ರಿಯೆಗಳೊಡನೆ ಜೀವರನ್ನು ಸೃಜಿಸಿದ್ದಾನೆ. ಆದುದರಿಂದ ಅವನನ್ನು ಆರಾಧಿಸತಕ್ಕದ್ದು. ಎಂದು, ಬೆಳಿಗ್ಗೆ ಎದ್ದ ನಂತರ ಸಂಕಲ್ಪವನ್ನು ಮಾಡಿ, ಕರ್ಮಗಳನ್ನಾಚರಿಸಬೇಕು. "ಶ್ರೀ ವಿಷ್ಣು ಪೂಜಾರ್ಥವಾಗಿಯೇ ಹೊರತು ನನ್ನ ಸ್ವಾರ್ಥಕ್ಕಲ್ಲ." ಎಂದು ಸಂಕಲ್ಪಿಸು–ಅಂದರೆ, ದಾನ-ಪ್ರತಿಗ್ರಹ ಮುಂತಾದವುಗಳನ್ನು ಮಾಡುತ್ತೇನೆ. "ಯಾಕೆಂದರೆ, ಶ್ರುತಿ ಸ್ಮೃತಿಗಳು ಶ್ರೀ ಹರಿಯ ಆಜ್ಞೆಗಳು. ನಾನು ಆ ಪರಮಾತ್ಮನ ಅನುಚರನು. ಆದುದರಿಂದ ಜೀವವಿರುವವರೆಗೂ ಅವನ ಆಜ್ಞಾಧಾರಕನಾಗಿಯೇ ಉಳಿಯುವೆನು – ಇರುವೆನು." – ಹೀಗೆ ತಿಳಿದು ವಿಷ್ಣುವಿನನ್ನು ಸದಾ ಆಲಸ್ಯವಿಲ್ಲದೇ ಜಪಿಸತಕ್ಕದ್ದು, ಹಾಗೂ ಧ್ಯಾನಿಸತಕ್ಕದ್ದು. ಎಂದು ಶಾಂಡಿಲ್ಯ ತತ್ವದಲ್ಲಿ ಹೇಳಲಾಗಿರುತ್ತದೆ. ॥೨೫॥

### ೫. ಶ್ರೀಗುರುಹೃದಯ ಪ್ರಕಾಶಿಕೆ :–

ವೇದಗಳು ಆ ದೇವರ ಮಾತು. ಅಂದರೆ, ವಾಕ್ಕಿನಿಂದ ವ್ಯಕ್ತವಾದುವುಗಳೆಂದರ್ಥ. ನಿರ್ದೋಷ ವೇದಾನುಸಾರಿ ಸ್ಮೃತಿಗಳು ಆ ಸ್ವಾಮಿಯ ಆಜ್ಞೆ. ಚೇತನ, ಸ್ವಭಾವ, ಜೀವರು, ಜಡಸ್ವಭಾವ ಪ್ರಕೃತಿ ಸಹ ಎರಡೂ, ದೇವರ ಪ್ರತಿಮೆಗಳಂತೆ ಅಧಿಷ್ಠಾನವೆನಿಸಿಕೊಳ್ಳುವುವು. ಇತರವಾದ ಸರ್ವಜೀವ

ಕ್ರಿಯೆಗಳು ಲಕ್ಷ್ಮೀಪತಿಯಾದ ದೇವರ ಪೂಜೆ ಎಂದು ಸ್ಮರಿಸುತ್ತಾ, ಸ್ವಪ್ನದಲ್ಲೂ ಸಹಾ ಚತುರ್ವಿಧ ಪುರುಷಾರ್ಥಗಳನ್ನು ಕೇಳಿಕೊಳ್ಳದೆ, ದೃಢ ಭಕ್ತರು ಇರುವದೆಂದರ್ಥ.

**ಯಸ್ಮಿನ್ ಸರ್ವಾಣಿ ಕರ್ಮಾಣಿ ಸನ್ಯಸ್ಯಾಧ್ಯಾತ್ಮ ಚೇತಸ । ನಿರಾಶೀ ನಿರ್ಮಮೋಯಾತಿ ಪರಂಜಯತಿ ಸೋಽಚ್ಯುತ ॥**–ಎಂಬ **ಸದಾಚಾರಸ್ಮೃತ್ಯರ್ಥ** ವಿವರಿಸಿತು. ॥೨೫॥

# ಸರ್ವವ್ಯಾಖ್ಯಾನಸಾರಸಂಗ್ರಹ

ಅನಂತ ಸಂಖ್ಯಾಕವಾದ ವೇದ ಸಮೂಹಗಳು ಅಪೌರುಷೇಯವಾದುವು. ಅನಾದ್ಯನಂತಕಾಲದಿಂದಲೂ ನಿತ್ಯವಾಗಿವೆ. ಶ್ರೀಪರಮಾತ್ಮನು ವೇದ ಪುರುಷನು. ಸಕಲ ವೇದಗಳೂ ಆತನ ಅಪಾರ ಮಹಿಮಾತಿಶಯಗಳನ್ನು ಗುಣ ಸ್ತೋಮಗಳನ್ನೂ ಮುಖ್ಯ ಪ್ರವೃತ್ತಿಯಿಂದ ಹೊಗಳುತ್ತಿವೆ. ಈ ಕಾರಣ ದಿಂದ ಶ್ರುತಿಗಳಲ್ಲಿ ಹೇಳಿರುವ ಸಕಲವಾಕ್ಯಗಳೂ ವೇದಪ್ರತಿಪಾದ್ಯನ್ನು ಹೊಗಳುವ ಮಾತುಗಳು.

ಭಾಗವತಾದಿ ಇತಿಹಾಸ ಗ್ರಂಥಗಳು ವೇದಾನುಸಾರಿಯಾದ ಪೌರುಷೇಯ ಗ್ರಂಥಗಳು. ಇವುಗಳಿಗೆ **ಸ್ಮೃ** ತಿಗಳೆಂದು ಹೆಸರು. ಶ್ರುತ್ಯರ್ಥ ಪ್ರತಿಪಾದಕವಾದ ಈ ಸ್ಮೃತಿಗಳು ನಿರ್ದೋಷರಾದ ಶ್ರೀಮನ್ನಾರಾಯಣನ ಅವತಾರಭೂತರಾದ ಶ್ರೀ ವೇದವ್ಯಾಸ ಮಹರ್ಷಿಗಳಿಂದ ರಚಿತವಾದುವು. ಅಂತಹ ಸ್ಮೃತಿಗತ ಮಾತುಗಳೆಲ್ಲವೂ **ಶಿಕ್ಷಾರೂಪವಾದ** ವಿಧಿ ನಿಷೇಧಾತ್ಮಕ ವಾದ ನಿಯಮಾವಳಿಗಳು. ಇವು ಭಕ್ತರ ಸಾಧನಕ್ಕೆ ಸಹಕಾರಿಯಾಗಿವೆ.

ತ್ರಿವಿಧರಾದ ಸಕಲ ಜೀವವರ್ಗ ಮತ್ತು ಪೃಥಿವ್ಯಾದಿ ಭೂತಪಂಚಕ ಗಳು ಪ್ರಾಕೃತ ಸಂಬಂಧವಾದ ಜಡಗಳು. ಆ ಸರ್ವೇಶ್ವರನ **ಪ್ರತಿಮೆಗಳೆನಿಸುವುವು.** ಸಕಲ **ಕರ್ಮಗಳ ಕರ್ತೃವು ಶ್ರೀ ಪರಮಾತ್ಮನೇ ಹೊರತು,**

ಜೀವನಲ್ಲ, ಬಿಂಬಕ್ರಿಯಾದ್ವಾರಾ ಪ್ರತಿಬಿಂಬರಾದ ಜೀವರಲ್ಲಿ ಕರ್ಮಾಭಿವ್ಯಕ್ತಿ. ಕರ್ಮಾಂತರ್ಗತನಾದ ಶ್ರೀ ಪರಮಾತ್ಮನ ಭಗವದ್ರೂಪಗಳಿಗೂ, ತಜ್ಜನಿತ ಫಲರೂಪವಾದ **ಪುಣ್ಯ-ಪಾಪ-ಮಿಶ್ರ** ಕರ್ಮಗಳಲ್ಲಿ ಅಂತರ್ಗತನಾದ ಭಗವದ್ರೂಪಗಳಿಗೂ, ಜೀವನಾಧಿಷ್ಠಾನಗತನಾದ ಸ್ವಬಿಂಬಕ್ಕೂ ಐಕ್ಯಚಿಂತನಾ ಕ್ರಮವೇ **ಶ್ರೀಶನಿಗೆ ಕರ್ಮಗಳ ಅರ್ಪಣೆ**-ಎಂದೆನಿಸುವುದು. ಇದರಿಂದ ಸಕಲಕರ್ಮಗಳೂ ಶ್ರೀ ಲಕ್ಷ್ಮೀರಮಣನಿಗೆ ಪೂಜೆಗಳಿಂದು ಉತ್ತಮ ಜ್ಞಾನಾನುಸಂಧಾನದಿಂದ ಮನಸಾ ಸ್ಮರಿಸುತ್ತಿರಬೇಕೆಂದು ತಿಳಿಸುತ್ತಾರೆ.

ಮಾನವನಾಗಿ ಧರ್ಮ, ಅರ್ಥ, ಕಾಮ ಮತ್ತು ಮೋಕ್ಷವೆಂಬ ನಾಲ್ಕು ವಿಧವಾದ ಪ್ರಯೋಜನಗಳಿಗೆ **ಪುರುಷಾರ್ಥಚತುಷ್ಟಯ**- ಎಂದು ಹೆಸರು. ಇವುಗಳ ಅಭಿಲಾಷೆ ಸಕಾಮಕರ್ಮಕ್ಕೆ ಹೊರತು ನಿಷ್ಕಾಮನವಲ್ಲ. ಇದರಿಂದ ಕನಸಿನಲ್ಲಿಯೂ ಸಹ ಚತುರ್ವಿಧಪುರುಷಾರ್ಥಗಳನ್ನೂ ಯಾಚಿಸದೆ, ಸಹಜವಾದ ಭಕ್ತಿಯಿಂದ ನಿಷ್ಕಾಮ ಮಾಡಬೇಕೆಂದು ತಾತ್ಪರ್ಯ, ॥೨೫॥

## ಪದ್ಯ-೨೬

**ಮೂಲ :-**

**ಭೂತಳಾಧಿಪನಾಜ್ಞಾಧಾರಕ ॥**
**ದೂತರಿಗೆ ಸೇವಾನುಸಾರದಿ ॥**
**ವೇತನವ ಕೊಟ್ಟವರ ಸಂತೋಷಿಸುವ ತೆರದಂತೆ ॥**
**ಮಾತರಿಶ್ವ ಪ್ರಿಯನು ಪರಮ ॥**
**ಪ್ರೀತಿಪೂರ್ವಕ ಸದ್ಗುಣಂಗಳ ॥**
**ಗಾಯಕರ ಸಂತೋಷ ಬಡಿಸುವ ಇಹಪರಂಗಳಲಿ ॥ ॥೨೬॥**

**ಅವತರಣಿಕೆ:–**

ಜಗತ್ಪತಿಯುನ್ನು ಪರಮಭಕ್ತಿ ಶ್ರದ್ಧೆಗಳಿಂದ ಸೇವಿಸುವ ಭಕ್ತರ ಯೋಗ್ಯತಾನುಸಾರ, ಅವರವರ ಅಭಿಲಾಷೆಗಳನ್ನು ಸಲ್ಲಿಸಿ, ಇಹ ಪರಗಳಲ್ಲಿ ಆನಂದಪಡಿಸುವೆನೆಂದು ತಿಳಿಸುತ್ತಾರೆ- ||೨೬||

**ಪ್ರತಿಪದಾರ್ಥ:–**

**ಭೂತಳಾಧಿಪನು** = ರಾಜ್ಯವನ್ನಾಳುವ ರಾಜನು, **ಆಜ್ಞಾಧಾರಕ** = ತನ್ನ ಆಜ್ಞೆಯುನ್ನು ಶಿರಸಾವಹಿಸಿ ಸೇವಾಮಾಡುವ, **ದೂತರಿಗೆ** = ರಾಜಭೃತ್ಯರಿಗೆ. **ಸೇವಾನುಸಾರದಿ** = ಅವರವರ ಯೋಗ್ಯತಾನುಸಾರ ಮಾಡುವ ಸೇವೆಗಳಿಗನುಗುಣವಾಗಿ, **ವೇತನವ ಕೊಟ್ಟು** = ಸಂಬಳವನ್ನು ನೀಡಿ. **ಅವರ** = ಆ ರಾಜಸೇವಕರನ್ನು, **ಸಂತೋಷಿಸುವ ತೆರೆದಂತೆ** = ಆನಂದಪಡಿಸುವಂತೆ. **ಮಾತರಿಶ್ವಪ್ರಿಯುನು** = ಜೀವೋತ್ತಮರಾದ ಶ್ರೀ ವಾಯುದೇವರಿಗೆ ಅತ್ಯಂತ ಪ್ರೀತಿಯ ವಸ್ತುವಾದ ಶ್ರೀಪರಮಾತ್ಮನು, **ಪರಮ ಪ್ರೀತಿಪೂರ್ವಕ** = ಅತ್ಯಂತ ಭಕ್ತಿಯಿಂದ, **ಸದ್ಗುಣಂಗಳ** = ಪರಮ ಮಂಗಳಕರವಾದ ಗುಣರಾಶಿಗಳನ್ನು, **ಗಾಯಕರ** = ಗಾಯನ ಮಾಡುವ (ಗುಣೋಪಾಸನೆ ಮಾಡುತ್ತಿರುವ) ಭಕ್ತರನ್ನು, **ಇಹ ಪರಂಗಳಲಿ** = ಈ ಜಗತ್ತಿನಲ್ಲಿ, ಹಾಗೂ ಪರದಲ್ಲಿ ನಿತ್ಯಾನಂದರೂಪವಾದ ಮುಕ್ತಿಸುಖವನ್ನು, **ಸಂತೋಷ ಪಡಿಸುವ** = ಕೊಟ್ಟು ಆನಂದಪಡಿಸುವನು. ||೨೬||

# ವ್ಯಾಖ್ಯಾನಗಳು

## ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಪರಮಾತ್ಮನ ಸೇವೆ ದಾರು ದಾರು ಹ್ಯಾಂಗೆ ಹ್ಯಾಂಗೆ ಮಾಡತಾರೋ ಆ ಸೇವಾಕರ್ಮ ಫಲವನುಸರಿಸಿ, ಹಾಂಗೆ ಹಾಂಗೆ ಫಲ ಕೊಡುತಾನೆ–ಎಂತ ಹೇಳತಾರೆ.

ಭೂಪಾಲಕನಾದ ರಾಜನು ತನ್ನ ಆಜ್ಞಾಧಾರಕರಾದ ಅವರವರ ಯೋಗ್ಯತಾನುಸಾರ ಪ್ರೇರಿತವಾದ ಆಜ್ಞಾಕ್ಕೆ ವಶರಾದ ಅಸ್ವತಂತ್ರರಾದ ಭೃತ್ಯರಾದವರಿಗೆ ಅವರವರ ಯೋಗತಾನುಸಾರ ಮಾಡಲ್ಪಟ್ಟ ಸೇವಾಕ್ಕೇ ಸಂತೋಷಪಟ್ಟವನಾಗಿ, ಜೀವನೋಪಾಯಕ್ಕೆ ಅನುಕೂಲಗಳಾದ ಸಂಬಳಗಳ ಕೊಟ್ಟು, ತನ್ನ ಭೃತ್ಯರಾದ ಜನರನ್ನು ಸಂತೋಷಪಡಿಸೋವನಾಗತಾನೆ ಹ್ಯಾಂಗೋ, ಇದರೋಪಾದಿಯಲ್ಲಿ ಜೀವೋತ್ತಮರಾದ ವಾಯುದೇವರಿಗೆ ಸಖನು, ಹದಿನಾಲ್ಕು ಲೋಕಕ್ಕೆ ರಾಜನಾದ ಶ್ರೀಪರಮಾತ್ಮ ತನಗೆ ದೂತರಾದ ತ್ರಿವಿಧಜೀವರೊಳಗೆ ದಾರು ದಾರು ಅತ್ಯಂತ ಅಂತಃಕರಣ ಪೂರ್ವಕವಾಗಿ ಸರ್ವೋತ್ಕೃಷ್ಟಗಳಾದ ಮಂಗಳಕರಗಳಾದ ಗುಣಗಳ ಗಾನ ಮಾಡತಕ್ಕವರ (ಎಂದರೆ, ಸ್ವರೂಪಸ್ವಭಾವ ಅನುಸರಿಸಿ ಸರ್ವರಿಗೆ ಪ್ರೇರಕ ಈಶನಾದ್ದರಿಂದ ಮುಕ್ತಿಯೋಗ್ಯರು ಸಚ್ಚಿದಾನಂದ, ಸೃಷ್ಟ್ಯಾದ್ಯಷ್ಟಕರ್ತಾ, ಸರ್ವತಂತ್ರಸ್ವತಂತ್ರ–ಎಂತ ಗಾನ ಮಾಡುತಾರೆ. ತದನ್ಯರು ದುಃಖ ಸ್ವಭಾವರೂಪವಾದ ಗಾಯನ ಮಾಡತಕ್ಕವರು. ಭಕ್ತಿ ಮಾಡತಕ್ಕ ಸ್ವರೂಪವುಳ್ಳವರು, ಈ ರೂಪದಲ್ಲಿ ಅಹಂಮಮತಾದಿಗಳ ಬಿಡಿಸಿ, ತಜ್ಜನಿತ ಸುಖಗಳ ಈ ಲೋಕದಲ್ಲಿ ಸುಸಾಧನ ಪೂರ್ತಿ ಆದನಂತರ ಜೀವನ್ಮುಕ್ತರನ ಮಾಡಿ ಉತ್ತಮವಾದ ಮಹರಾದಿಲೋಕಗಳಲ್ಲೇನು, ನಂತರ, ಲಿಂಗಭಂಗಾನಂತರ ವೈಕುಂಠಾದಿ ಲೋಕಗಳಲ್ಲೇನು ಇಟ್ಟು, ಈ ಪ್ರಕಾರ ಆನಂದ ಪಡಿಸ

ತಾರೆ. ತದನ್ಯರಿಗೆ ಇದಕ್ಕೆ ವಿಪರೀತಾವಸ್ಥೆ ಕೊಡತಾನೆ. ಲೋಕ ದೃಷಾಂತ ರಾಜನ ಸೇವಾನುಸಾರ ಭೃತ್ಯರು ಯಥಾಯೋಗ್ಯವಾಗಿ ಸೇವಾ ಮಾಡೋಣದರಿಂದ ರಾಜ ಸಂತುಷ್ಟನಾಗಿ ಫಲಕೊಟ್ಟಂತೆ, ಶ್ರೀಪರಮಾತ್ಮನ ಸೇವಾದಿಂದ ಜೀವರ ಯೋಗ್ಯತಾನುಸಾರ ಫಲಪ್ರಾಪ್ತಿ ಎಂತ ತಾತ್ಪರ್ಯ ॥೨೬॥

## ೨. ಭಾವಪ್ರಕಾಶಿಕೆ

ಮಹಾರಾಜನ ದೂತರು ರಾಜನಪ್ಪಣೆಯನ್ನು ಮೀರದೆ, ನಮಗೆ ಕೊಟ್ಟಿರುವ ಕೆಲಸವನ್ನು ರಾಜನು ಮೆಚ್ಚುವಂತೆ ಮಾಡುತ್ತಿದರೆ, ರಾಜನು ಅವರ ಕೆಲಸಕ್ಕೆ ಮೆಚ್ಚಿ ಅದಕ್ಕೆ ತಕ್ಕಂತೆ ಸಂಬಳವನ್ನು ಕೊಟ್ಟು ಅವರನ್ನು ಸಂತೋಷಪಡಿಸುವಂತೆ, ವಾಯುದೇವರಿಗೆ ಪ್ರೀತಿವಿಷಯನಾದ ಶ್ರೀಹರಿಯು ತನ್ನ ಚರಿತ್ರೆಗಳನ್ನು ಪಾಡುತ್ತಾ, ಶ್ರುತಿ ಸ್ಮೃತಿಗಳೆಂಬ ಭಗವ ದಾಜ್ಞೆಗೆ ಬದ್ಧನಾಗಿ ಕರ್ಮಗಳನ್ನು ಮಾಡುತ್ತಾ, ಮಾಡಿದ ಕರ್ಮಗಳನ್ನು ಪರಮಾತ್ಮನಿಗೆ ಅರ್ಪಿಸುತ್ತಿದ್ದರೆ. ಪ್ರೀತನಾಗಿ ಅವನ ಸೇವೆಗೆ ಮೆಚ್ಚಿ ಇಹ ಪರಂಗಳಲ್ಲಿ ಸುಖವನ್ನಿತ್ತು ಸಂರಕ್ಷಣೆ ಮಾಡುವನು ॥ ॥೨೬॥

## ೩. ಭಾವದರ್ಪಣ

ಭೂತಳೇತಿ ॥೨೬॥

## ೪. ಶ್ರೀ ವ್ಯಾಸದಾಸ ಸಿದ್ಧಾಂತ ಕೌಮುದೀ

"ಭೂತಲ" ಇತಿ ॥ "ಯಥೈವ ಲೋಕೇ ಪದ ಪಾಲಾಃ ಶಿಕ್ಷಯಂತಿ ನಿಜಾನ್ ಜನಾನ್ ॥ ಮಮ ಸೇವಾಂ ಇಮಾಂ ಕುರ್ಯಾ(ತ್) ಚೇತ್ ವೇದನಮಿದಂತವ ॥ ದಾಸ್ಯಾಮಿ ನೋ ಚೇತ್ ನೋ ದದಾಮ್" ॥ ಇತಿ ಚೋಕ್ತೇಃ ॥೨೬॥

## ಕನ್ನಡಾರ್ಥ

"ನನ್ನ ಈ ಸೇವೆಯನ್ನು ಮಾಡಿದರೆ ನನಗೆ ಈ ವೇತನ (ಸಂಬಳ) ವನ್ನು ಕೊಡುತ್ತೇನೆ- ಇಲ್ಲವಾದರೆ ಇಲ್ಲ" ಎಂದು ಲೋಕದಲ್ಲಿ ಆ ರಾಜರು ತಮ್ಮ ತಮ್ಮ ಭೃತ್ಯಜನರನ್ನು ಶಿಕ್ಷಿಸುವಂತೆ, ನಿಯಮಿಸುವಂತೆ ಹರಿಯೂ ಸಹ ತನ್ನ ಸದ್ಗುಣ–ಗಾಯಕರನ್ನು ನಿಯಮಿಸಿ, ಅವರಿಗೆ ಪ್ರಸನ್ನನಾಗುತ್ತಾನೆ–ಎಂದು **ಶ್ರೀ ವಿಷ್ಣುರಹಸ್ಯದಲ್ಲಿ** ಹೇಳಲಾಗಿರುತ್ತದೆ. ॥೨೬॥

## ೫. ಶ್ರೀ ಗುರುಹೃದಯಪ್ರಕಾಶಿಕೆ

ನಿಷ್ಕಾಮಭಕ್ತರಿಗೆ ದೇವರು ತಾನಾಗಿ ಇಷ್ಟಾರ್ಥ ಕೊಡುವನೆಂದು ಬೋಧಿಸುತ್ತಾರೆ- ಭೂತಳಾ ಎಂದು. ಭೂತಳಾಧಿಪನೆಂಬ ದೊರೆಯು ತನ್ನಾಜ್ಞಾಧಾರಕ ದೂತರಿಗೆ ಸೇವಾನುಸಾರ ವೇತನವೆಂಬ ಸಂಬಳವನ್ನು ತಾನಾಗಿ ಕೊಟ್ಟು, ಅವರನ್ನು ಸಂತೋಷಪಡಿರುವಂತೆ, ಮಾತರಿಶ್ವ–ಎಂದರೆ, ವೇದನಾಲ್ಕು, ಭಾರತ ಒಂದು, ಪಂಚರಾತ್ರ ಒಂದು, ಮೂಲ ರಾಮಾಯಣ ಒಂದು ಸಹ ಏಳು ಮಾತೃಗಳೆಂಬ ಗ್ರಂಥಗಳ ಅರ್ಥ ತಿಳಿದ ಪ್ರಾಣದೇವರ ಪ್ರಿಯನಾದ ದೇವರು, ಪ್ರೀತಿಪೂರ್ವಕವಾಗಿ ತನ್ನ ಸದ್ಗುಣ ಗಳನ್ನು ಕೊಂಡಾಡುವವರನ್ನು ಇಹ ಪರದಲ್ಲಿ ಸಹ ಸಂತೋಷಪಡಿಸುವನು. ॥೨೬॥

# ಸರ್ವವ್ಯಾಖ್ಯಾನಸಾರಸಂಗ್ರಹ

ರಾಜಭೃತ್ಯರು ಅವನ ಆಜ್ಞೆಯನ್ನು ಶಿರಸಾವಹಿಸಿ, ಅದನ್ನು ಮೀರದೆ, ಸೇವೆಯನ್ನು ಮಾಡಿದರೆ, ಅವರ ಸೇವೆಯಿಂದ ರಾಜನು ಸಂತುಷ್ಟನಾಗುವನು. ಶ್ರೀ ಹರಿಯ ಗುಣಗಾನಗಳನ್ನು ಮಾಡಬೇಕೆಂದು ತಿಳಿಸುತ್ತಾರೆ.

೨. ಸಂತುಷ್ಟನಾದ ರಾಜನು ತನ್ನ ಸೇವಕರಿಗೆ ಅವರವರ ಕಾರ್ಯ ದಕ್ಷತೆ ಹಾಗೂ ಸೇವಾಗಳಿಗನುಗುಣವಾಗಿ ಸಂಬಳವನ್ನು ನೀಡಿ, ಅವರನ್ನು ಸಂತೋಷಪಡಿಸುವನು. ಅಂತೆಯೇ ವಿಶ್ವಪತಿಯಾದ ಆ ಪರಮಾತ್ಮನು ರಾಜನ ಸದೃಶನು. ವಿಧಿ ನಿಷೇಧ ರೂಪವಾದ ವೇದ ಸ್ಮೃತಿವಾಕ್ಯಗಳೆಲ್ಲಾ ರಾಜನ ಆಜ್ಞೆಗಳಿದ್ದಂತೆ. ರಾಜದೂತರ ಸೇವೆಯಿಂದ ರಾಜನು ಸಂತುಷ್ಟನಾಗುವನು. ಹಾಗೆಯೇ ದೇವಾದಿದೇವನಾದ ಶ್ರೀಹರಿಯು ತನ್ನ ದಾಸರಾದ ಜೀವರು ಅವನ ಆಜ್ಞೆಯಂತೆ ನಡೆದರೆ, ಸಂತುಷ್ಟನಾಗುವನು. ರಾಜನು ಅವನ ಭೃತ್ಯರ ಸೇವೆ ಕಾರ್ಯನಿರ್ವಹಣೆಗಳಿಗನುಸಾರವಾಗಿ ಅವರಿಗೆ ಸಂಬಳವನ್ನು ನೀಡಿ, ಅವರ ಜೀವನೋಪಾಯಕ್ಕೆ ಅನುಕೂಲ ಕಲ್ಪಿಸಿ, ತದ್ವಾರಾ ಅವರನ್ನು ಆನಂದಪಡಿಸುವನು ಅಂತೆಯೇ ಪರಮೇಶ್ವರನು ತನ್ನ ಭಕ್ತರ ಯೋಗ್ಯತೆ, ಕರ್ಮಾಭಿವ್ಯಕ್ತರೂಪದಾದ ಕ್ರಿಯೆಗಳಿಗನುಸಾರವಾಗಿ ಇಹದಲ್ಲಿ ಸಕಲಭಾಗ್ಯ ಭೋಗರೂಪವಾದ ಸಂಪತ್ತನ್ನು ನೀಡುವನು. ಅವರ ಕರ್ಮಕೋಟಿಗಳನ್ನು ಕಳೆದು. ಭವಬಂಧಮುಕ್ತರನ್ನಾಗಿಸಿ, ನಿತ್ಯಾನಂದರೂಪವಾದ ಮೋಕ್ಷಾನಂದವನ್ನು ನೀಡುವನು. ರಾಜನು ತನ್ನ ಆಜ್ಞೆಯನ್ನು ಉಲ್ಲಂಘಿಸಿದ ದೂತರಿಗೆ ಶಿಕ್ಷೆ ವಿಧಿಸುವನು. ಅಂತೆಯೇ ರಾಜಾಧಿರಾಜನಾದ ಶ್ರೀಪರಮಾತ್ಮನು ವಿಧಿ ನಿಷೇಧಗಳನ್ನು ಮೀರಿದವರಿಗೆ ನರಕಾದ್ಯನರ್ಥರೂಪವಾದ ಶಿಕ್ಷೆಗಳನ್ನೀಯುವನು. ಶ್ರೀಹರಿಯು ಪ್ರಥಮಾಂಗಭೂತರಾದ ಮಾತರಿಶ್ವರ ಪ್ರಿಯನು ಶ್ರೀಹರಿಯು. ಅವನ ಅನಂತಾನಂತ ಮಂಗಳಕರವಾದ ಗುಣಗಳನ್ನು ಅವನೇ ಸರ್ವೋತ್ತಮ-ಸೃಷ್ಟ್ಯಾದ್ಯಷ್ಟಕರ್ತ, ಸರ್ವಪ್ರೇರಕನೆಂದರಿತು, ತಮ್ಮ ತಮ್ಮ ಯೋಗ್ಯತಾನುಸಾರ ಗುಣೋಪಾಸನೆ ಮಾಡುವ ಭಕ್ತವರ್ಗವನ್ನು ಸಂತೈಸುವನೆಂದು ತಾತ್ಪರ್ಯ. ॥೨೬॥

## ಪದ್ಯ-೨೭

**ಮೂಲ :–**

**ದೀಪ ದಿವದಲಿ ಕಂಡರಾದಡೆ ।**
**ಲೋಪಗೈಸುವರಾಕ್ಷಣ ಹರಿ ಸ ।**
**ಮೀಪದಲ್ಲಿರೆ ನಂದನಾಮ ಸುನಂದವೆನಿಸುವುವು ॥**
**ಔಪಚಾರಿಕವಲ್ಲ ಸುಜನರ ।**
**ಪಾಪಕರ್ಮವು ಪುಣ್ಯವೆನಿಸುವುದು ।**
**ಪಾಪಿಗಳ ಸತ್ಪುಣ್ಯ ಕರ್ಮವು ಪಾಪವೆನಿಸುವುವು ॥ ॥೨೭॥**

**ಅವತರಣಿಕೆ :–**

ಭಕ್ತರ ಪಾಪಗಳು ಪುಣ್ಯವೆನಿಸುವುವು. ಅಭಕ್ತರ ಪುಣ್ಯಕರ್ಮಗಳು ಪಾಪವೆನಿಸುವುವು–ಎಂದು ಸದೃಷ್ಟಾಂತವಾಗಿ ವಿವರಿಸುತ್ತಾರೆ.

**ಪ್ರತಿಪದಾರ್ಥ :–**

**ದೀಪ** = ದೀಪವನ್ನು, **ದಿವದಲಿ** = ಹಗಲು ಹೊತ್ತಿನಲ್ಲಿ, **ಕಂಡ ರಾದಡೆ** = ನೋಡಿದ ಜನರು, **ಆಕ್ಷಣ** = ತಕ್ಷಣವೇ, **ಲೋಪಗೈಸುವರು** = ದೀಪವನ್ನು ಆರಿಸುವರು. **ಹರಿ** = ಸರ್ವೋತ್ತಮನಾದ ಬಿಂಬರೂಪೀ ಶ್ರೀಪರಮಾತ್ಮನು, **ಸಮೀಪದಲಿರೆ** = ಜೀವನಿಗ ಅತ್ಯಂತ ಹತ್ತಿರವಾಗಿ, ಅವನ ಹೃತ್ಕಮಲದಲ್ಲಿಯೇ ಇರುತ್ತಿರಲಾಗಿ, **ನಂದನಾಮ** = ಸುಖಪ್ರದ ವಾದ ಭಗವನ್ನಾಮಸಂಕೀರ್ತನೆಯು, **ಸುನಂದವೆನಿಸುವುವು** = ಸಮೀಚೀನ ವಾದ ಆನಂದವನ್ನು ಕೊಡುವುದು ಎಂದೆನಿಸುವುದು. **ಔಪಚಾರಿಕವಲ್ಲ** = ಈ ಮಾತು ಕೇವಲ ಉಪಚಾರಕ್ಕೆ ಹೇಳಿದುದಲ್ಲ. **ಸುಜನರ** = ಸಾತ್ವಿಕ ಸ್ವಭಾವವುಳ್ಳ ಮುಕ್ತಿಯೋಗ್ಯಚೇತನರಾದ ಸಜ್ಜನರು. **ಪಾಪಕರ್ಮವು**

**ಪ್ರಸಂಗವಶಾತ್** ಮಾಡುವ ಪಾಪಕೃತ್ಯಗಳು, **ಪುಣ್ಯವೆನಿಸುವುದು** = ಪುಣ್ಯ ಕರ್ಮಗಳೆಂದೆನಿಸುವುವು. **ಪಾಪಿಗಳ** = ಭಗವದ್ವೇಷಿಗಳಾದ ದುರ್ಜನರ, **ಸತ್ಪುಣ್ಯ ಕರ್ಮವು** = ಪುಣ್ಯವೆಂದು ಕಾಣಿಸುವ ಕರ್ಮಗಳು, **ಪಾಪವೆನಿಸುವುವು** = ನಿಜವಾಗಿಯೂ ಪಾಪಕರ್ಮಗಳೇ ಆಗುವುವು. ॥೨೭॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಭಕ್ತರು ಮಾಡಿದ ಪಾಪ ಪುಣ್ಯವಾಗತದೆ. ಅಭಕ್ತರು ಮಾಡಿದ ಪುಣ್ಯ ಪಾಪವಾಗತದೆ–ಎಂತ ಹೇಳತಾರೆ. ಪುಣ್ಯಕರ್ಮ ಪಾಪ ದಾವ ರೀತೀಲಿ ಆಗತದೋ, ಪಾಪಕರ್ಮ, ಪುಣ್ಯದಾವ ರೀತೀಲಿ ಆಗತದೋ ಅದರ ವಿವರವೂನೂ, ಪಾಪ, ಪುಣ್ಯವಾಗಬೇಕಾದರೆ ಅದರ ಅನುಸಂಧಾನ ಕ್ರಮವೂನೂ, ಅದರಿಂದ ಆಗತಕ್ಕ ಮಹಾಫಲವೂನೂ ಇಂಥಾದ್ದು–ಎಂದು ಈ ಶ್ಲೋಕದಿಂದ ಹೇಳತಾರೆ.

**ಧರ್ಮೋ ಭವತ್ಯಧರ್ಮೋಽಪಿ ಕೃತೋ ಭಕ್ತೈಸ್ತವಾಚ್ಯುತ ॥**
**ಪಾಪಂ ಭವತಿ ಧರ್ಮೋಽಪಿ ಯೋ ನ ಭಕ್ತೈಃ ಕೃತೋ ಹರೇ ॥**
**–ಇತಿ ಭಾರತೇ ॥**

ದೀಪವನ್ನು ಅಂಧಕಾರ ರಹಿತವಾದ ಸೂರ್ಯನ ಪ್ರಕಾಶ ಇರೋ ಕಾಲದಲ್ಲಿ ನೋಡಿದ್ದೇ ಆದರೆ, ಕಂಡಂಥ ಜನರು ತಕ್ಷಣವೇ, ದೀಪದಿಂದ ಆಗತಕ್ಕ ಕಾರ್ಯವಿಲ್ಲ-ಎಂತ ತಿಳಿದು,ದೀಪವನ್ನು ಆರಿಸೋವರಾಗತಾರೆ. ಸರ್ವೋತ್ತಮನಾದ ಶ್ರೀ ಪರಮಾತ್ಮ ಸೂರ್ಯನ್ನ ಹಗಲಿನಲ್ಲಿ ಪ್ರತ್ಯಕ್ಷವಾಗಿ ಕಂಡೋಪಾದಿಯಲ್ಲಿ ದೇಹಕ್ಕೆ ಸಮೀಪವಾದ ಹೃದಯ ಕಮಲದಲ್ಲಿ, ಸಾಧನ ಸಂಪತ್ತಿನಿಂದ ಪರಮಾತ್ಮನ್ನ ಪ್ರತ್ಯಕ್ಷೀಕರಿಸಿಕೊಂಡು ಅಧಿಕಾರಿಯಾಗುವ ಇದ್ದರೆ, ಆ

ಅಧಿಕಾರಿಗೆ ಶ್ರೀ ಭಗವನ್ನಾಮ ಆನಂದಕೊಡೋದಾಗತದೆ. ಐಹಿಕದಲ್ಲಿ ಸುಖಕೊಡೋದಾಗತದೆ. ಇದೇ ಭಗವನ್ನಾಮ ಲಿಂಗಭಂಗ ಐದಿಸಿ, ಸಮೀಚೀನವಾದ ಸ್ವರೂಪಾನಂದ ಅಭಿವ್ಯಕ್ತಿ ಮಾಡಿ ಭೋಜನ ಮಾಡ ತಕ್ಕದ್ದು ಎಂತ ಕರಸತದೆ. ಈ ಮಾತು ಮರ್ಯಾದಾರ್ಥ ಉಪಚಾರಕ್ಕಾಗಿ ಹೇಳಿದ ಮಾತಲ್ಲ, ಸತ್ಯವೆಂತ ತಾತ್ಪರ್ಯ. ಇಂಥಾ ಭಗವದ್ಭಕ್ತರು ಅಪ ರೋಕ್ಷಾತ್ಪೂರ್ವದಲ್ಲಿ, ಅಪರೋಕ್ಷಾರ್ಥವಾಗಿ ಸಾಧನ ಮಾಡತ ಇರತಕ್ಕ ಕಾಲದಲ್ಲಿ ವಿಹಿತಕರ್ಮಗಳ ಬಿಡೋವರಾಗತಾರೆ, ಎಂದರೆ ಧ್ಯಾನಾಸಕ್ತರಾಗಿ ಬಿಡತಾರೆ. ಆದರೂ ಈ ಬಿಟ್ಟದು ದೋಷವಾಗೋದಿಲ್ಲ. ಸೂರ್ಯನ ಕಂಡ ನಂತರ ದೀಪ ಆರಿಸೋಣ ದೋಷವಾಗೋದಿಲ್ಲ. ಅಂಧಕಾರದ ಬಾಧಾ ಇಲ್ಲ ಹಾಂಗೋ ತದ್ವತ್, ಸೂರ್ಯ ಸದೃಶನಾದ ಪರಮಾತ್ಮನ್ನ ಹೃದಯ ಕಮಲದಲ್ಲಿ ಕಂಡಮ್ಯಾಲೆ, ದೀಪ ಸದೃಶವಾದ ಪುಣ್ಯ ಕರ್ಮಗಳ ತ್ಯಾಗ ದಾವದದೆ ಆ ತ್ಯಾಗರೂಪವಾದ ದೋಷ, ದೋಷ ಎಂತ ಅನಿಸದೆ ಪುಣ್ಯ ಎಂತ ಕರಸೋದಾಗತದೆ. ಭಗವದ್ವೇಷಿಗಳಾದ ದೈತ್ಯರು ಮಾಡತಕ್ಕ ಸಜ್ಜನರು ಮಾಡತಕ್ಕ ಪುಣ್ಯಕ್ಕೆ ಸದೃಶವಾದ ಪುಣ್ಯಕರ್ಮ ಭಾವಶುದ್ಧಿ ಇಲ್ಲದೇನೆ 'ಅಹಂಕರ್ತಾ' ಎಂಬ ಜ್ಞಾನದಿಂದ ಮಾಡತಾರೆ. ಹಾಂಗೆ ಮಾಡಿದ ಸಮೀಚೀನ ಪುಣ್ಯಕರ್ಮಗಳು ಯಾವತ್ತೂ ಪಾಪ ಕರ್ಮಗಳೇ ಆಗಿ ದುಃಖಕರವಾಗತವೆ. ಘೂಕಕ್ಕೆ (ಗೂಬೆಗೆ) ಸೂರ್ಯದರ್ಶನವಿಲ್ಲ. ಅದರ ಸಂಚಾರ ರಾತ್ರೀಕಾಲ ಅಂಧಕಾರದಲ್ಲಿ. ಹಗಲಿನಲ್ಲಿ ಇತರ ಪಕ್ಷಿಗಳು ಸಂಚರಿಸಿ ದಂತೆ ಅದೂ ಸಂಚರಿಸಿದ ಕಾಲಕ್ಕೂ, ಹಗಲು ಸಂಚರಿಸತಕ್ಕ ಪಕ್ಷಿಗಳು ಅಮಂಗಳವೆಂದು ಯಾರೂ ತಿಳಿಯುವುದಿಲ್ಲವಾಗಿ ಅವನ್ನ ಘಾತಿಸೋದಿಲ್ಲ. ಆದರೆ ರಾತ್ರಿ ಸಂಚರಿಸತಕ್ಕ ಗೂಗೀನ್ನ ಘಾತಿಸತಾರೆ. ಸಂಚಾರ ಸದೃಶ ಅಸುರರು ಮಾಡತಕ್ಕ ಪುಣ್ಯಕರ್ಮಕ್ಕೆ ಪಾಪಫಲವೇ ಆಗತದೆ ಎಂದು ತಾತ್ಪರ್ಯ. ಮತ್ತು ದೀಪ ಪುಣ್ಯ ಸದೃಶವಾದದ್ದು. ದೀಪ, ತನ್ನ ಸ್ಥಂಭಕ್ಕೆ ತನ್ನ ಬೆಳಕು ಕೊಡದೇ ಅಂಧಕಾರವೇ ಕೊಡೋದಾಗತದೆ. ತದ್ವತ್ ಅಸುರರು ಮಾಡಿದ ಪುಣ್ಯಕರ್ಮಗಳು ಪಾಪಗಳಾಗಿ ದುಃಖ ಕೊಡತವೆ–ಎಂತ ತಾತ್ಪರ್ಯ.

ಹೃದಯದಲ್ಲಿ ರೂಪವು ಧ್ಯಾನದಿಂದ ನೋಡತಾ ತದ್ಗತ ಪರಮಾತ್ಮನ್ನ ಅನು ಸಂಧಾನಪೂರ್ವಕ ಆನಂದೋದ್ರೇಕನಾಗಿ ನಾಮ ಉಚ್ಚಾರ ಮಾಡತಕ್ಕವನಿಗೆ ಆ ನಾಮ ನಂದಸುನಂದ ಕೊಡೋದಾಗತದೆ ಎಂತ ತಾತ್ಪರ್ಯ.

**ವಿಶೇಷಾರ್ಥ:–** ಸೂರ್ಯಸದೃಶನಾದ ಪರಮಾತ್ಮನ್ನ ಅಪರೋಕ್ಷದಲ್ಲಿ ಕಂಡಜ್ಞಾನಿಗಳು, ದೀಪ ಸದೃಶವಾದ ಐಹಿಕ ಸುಖಗಳನ್ನ ತ್ಯಾಗಮಾಡಿ, ಪಾಪ ತ್ರಿಕ ಸುಖಪ್ರದನಾದ ಪರಮಾತ್ಮನೆಂಬ ಸೂರ್ಯನ ಪ್ರಕಾಶವೆಂಬ ಜ್ಞಾನ ಭಕ್ತಿ ವೈರಾಗ್ಯದ ಬೆಳಕಿನಲ್ಲಿ, ವಿವೇಕವೆಂಬ ಚಕ್ಷುಸ್ಸಿನಿಂದ ಅವನ ಗುಣಗಳ ನೋಡುತಾ, ಆನಂದದಿಂದ ಸಂಚರಿಸತರಾದ್ದರಿಂದ, ಐಹಿಕ ಸುಖಗಳೆಂಬ ದೀಪವನ್ನ ತ್ಯಜಿಸಿ, ಸೂರ್ಯ ಸದೃಶನಾದ ಪರಮಾತ್ಮನ್ನ ಧ್ಯಾನಪೂರ್ವಕ ವಾಗಿ ನಾಮೋಚ್ಚಾರಣ ಮಾಡಿ, ಆ ಬೆಳಕಿನಿಂದ ಪಾಪಗಳೆಂಬ ಅಂಧಕಾರ ಪರಿಹರಿಸಿಕೊಂಬೋರೆಂಬ ತಾತ್ಪರ್ಯವು. ದೀಪವೆಂಬ ಪರಮಾತ್ಮನ್ನ ಕರದಲ್ಲಿ ಧರಿಸಿ ಅಂಧಕಾರವೆಂಬ ಪಾಪದಲ್ಲಿ ಪ್ರವೇಶ ಮಾಡಿದರೆ, ಅಂಧಕಾರದ ಬಾಧಕ ವಿಲ್ಲ. ದೀಪವೆಂಬ ಪರಮಾತ್ಮನ್ನ ಬಿಟ್ಟು, ಹುಟ್ಟಿದಂಥಾ ಸೂರ್ಯೋದಯ ಕಾಲದಲ್ಲಿ ಸಂಚಾರ ಮಾಡಿದರೂ ಎಂದರೆ, ಸೂರ್ಯೋದಯವೆಂಬ ಪುಣ್ಯದಲ್ಲಿ ಸಂಚಾರ ಮಾಡಿದರೂ ಅವಗೆ ಅಂಧಕಾರವೇ ಪ್ರಾಪ್ತಿ. ತದ್ವತ್ ಸುಜನರ ಪಾಪಕರ್ಮವು ಪುಣ್ಯವಾಗಿನ್ನೂ, ಪಾಪಿಗಳ ಸತ್ಕರ್ಮ ಪಾಪವಾಗಿನ್ನೂ ಫಲ ಕೊಡತದೆ–ಎಂತ ತಾತ್ಪರ್ಯ ॥೨೭॥

೨. **ಭಾವಪ್ರಕಾಶಿಕೆ :–**

ಹಗಲು ಕಾಲದಲ್ಲಿ ಮನೆಯೊಳಗೆ ದೀಪವು ಉರಿಯುತ್ತಿರುವುದನ್ನು ಮನೆಯವರು ಕಂಡರೆ ತಕ್ಷಣ ಅದನ್ನು ಆರಿಸಿಬಿಡುವರು. ಅಂತಹ ದೀಪ ಗಳನ್ನು ದೇವರ ಮನೆಯಲ್ಲಿ ಇಟ್ಟಿದ್ದರೆ, ನಂದಾದೀಪಗಳೆಂದು ಹೆಸರಿಟ್ಟು ನೋಡಿ ಆನಂದಿಸುವರು. ಇದರಂತೆ ಪರಮಾತ್ಮನೇ ತಾನೆಂದು ಸ್ವತಂತ್ರ ಕರ್ತೃತ್ವವನ್ನು ಅವಲಂಬಿಸಿ ಮಾಡಿದ ಪುಣ್ಯವು ಹಗಲು ಕಾಲದಲ್ಲಿ ಮನೆಯಲ್ಲಿ ರುವ ದೀಪದಂತೆ ಹಾನಿ ಹೊಂದುವುದು. ಪುಣ್ಯವು ಲೋಪವಾಗಿ ಅದರ ಪ್ರತಿಯಾಗಿ ಪಾಪ ಸಂಭವಿಸುವುದು. ಇದರಂತೆ ಭಗವದ್ಭಕ್ತರು ಮಾಡುವ

ಪಾಪಗಳೂ ಕೂಡ ಪರಮಾತ್ಮನು ಸ್ವತಂತ್ರನು. ನನಗೆ ಪ್ರಭುವು-ನಾನು ಆತನ ದಾಸನು-ನಾನು ಪರಾಧೀನನು-ಎಂಬ ಜ್ಞಾನದಿಂದ ಅವುಗಳನ್ನು ಪರಮಾತ್ಮನಲ್ಲಿ ಒಪ್ಪಿಸಲು,ಹಗಲು ದೀಪವು ಪರಮಾತ್ಮನ ಸನ್ನಿಧಾನದಲ್ಲಿರಲು ಹೇಗೆ ನಂದಾದೀಪವೆಂದು ಕರೆಸುತ್ತಾ ಆನಂದಕರವಾಗುವುದೋ, ಹಾಗೆ ಪಾಪಗಳೆಲ್ಲಾ ಭಸ್ಮವಾಗಿ ಪುಣ್ಯಫಲವನ್ನೇ ಕೊಡುವವು. ಈ ದೃಷ್ಟಾಂತ ದಲ್ಲಿ ದೀಪವು ಪುಣ್ಯಕರ್ಮಕ್ಕೆ ಉಪಮಾನವು. ಹಗಲು-ಕಾಲವು ದೀಪಕ್ಕೆ ವಿರುದ್ಧವಾದುದು, ಹರಿದ್ವೇಷಿಗಳು ಹಗಲುಕಾಲಕ್ಕೆ ಸಮರು. ಅವರು ಮಾಡಿದ ಪುಣ್ಯವು ಹಗಲುಕಾಲದ ದೀಪವು ನಾಶಹೊಂದುವಂತೆ ನಾಶ ಹೊಂದುವದು. ಅದೇ ಹಗಲು ಕಾಲದ ದೀಪವು ಭಗವತ್ಸನ್ನಿಧಾನದಲ್ಲಿದ್ದರೆ ಶುಭವಾಗುವುದು. ಅದರಂತೆ ಭಗವದ್ಭಕ್ತರು ಮಾಡಿದ ಪಾಪವು ಹಗಲಿನ ನಂದಾದೀಪದಂತೆ ಭಗವದನುಗ್ರಹವಿಶೇಷದಿಂದ ಪುಣ್ಯವಾಗುವುದೆಂದು ತಾತ್ಪರ್ಯ. ಮಹಾಭಾರತ ತಾತ್ಪರ್ಯ ನಿರ್ಣಯ ಮೊದಲನೆಯ ಅಧ್ಯಾಯ (ಶ್ಲೋಕ ೧೦೮) ರಲ್ಲಿ "ಧರ್ಮೋಭವತ್ಯಧರ್ಮೋಪಿ ಕೃತೋ ಭಕ್ತೈಸ್ತ ವಾಚ್ಯುತ । ಪಾಪಂ ಭವತಿ ಧರ್ಮೋಪಿಯೋ ನ ಭಕ್ತೈಃ ಕೃತೋ ಹರೇ" ಎಂದು ಹೇಳಿರುವುದನ್ನೇ ಈ ಪದ್ಯದಲ್ಲಿ ಹೇಳಿರುವರು. ॥೨೭॥

## ೩. ಭಾವದರ್ಪಣ :-

ಬಿಂಬಕ್ರಿಯಾ ಚಿಂತನಪೂರ್ವಕ ಸುಜನರಿಂದ ಅರ್ಪಣಮಾಡಲ್ಪಟ್ಟ ಪಾಪ ನಂದಾದೀಪವತ್ ತನ್ನ ಸಮೀಪದಲ್ಲಿಟ್ಟು ಪುಣ್ಯ ಮಾಡುತ್ತಾನೆಂತಲೂ, ಮಿಥ್ಯಾಜ್ಞಾನಿಗಳಿಂದ ಮಾಡಲ್ಪಟ್ಟ ಪುಣ್ಯಗಳು ಪಾಪದ ಹಾಗೆ ತಿಳಿದು, ಹಗಲು ಮನೆಯಲ್ಲಿ ಹಚ್ಚಿದ ದೀಪದ ಹಾಗೆ ತ್ಯಜಿಸುತ್ತಾನೆಂತಲೂ ಭಾವ ತೋರಿಸುತ್ತಾರೆ. ॥೨೭॥

## ೪. ವ್ಯಾಸದಾಸ ಸಿದ್ಧಾಂತ ಕೌಮುದೀ :-

"ದೀಪ" ಇತಿ ॥ "ಸುನಂದ" = ಸುಖಪ್ರದಃ ॥ ಧರ್ಮಂ ಭವತಿ ಇತಿ ಚ ॥೨೭॥

## ಶಬ್ದಾರ್ಥ

"ಅಭಕ್ತರ ಧರ್ಮಗಳು ಅಧರ್ಮಗಳಾಗುತ್ತವೆ. ಭಕ್ತರ ಅಧರ್ಮಗಳು ಧರ್ಮಗಳಾಗುತ್ತವೆ. ಇದು ಭಗವಂತನ ಮಹಾಮಹಿಮೆ." ಎಂದು ಹೇಳಿದುದನ್ನು ವಿವರಿಸುತ್ತಾರೆ. "ದೀಪ" ಎಂಬ ಪದ್ಯದಿಂದ.

"ಧರ್ಮೋಽಭವತ್ಯಧರ್ಮೋಽಪಿ" ಎಂಬ ವಾಕ್ಯಗಳು ಈ ವಿಷಯದಲ್ಲಿ ಪ್ರಮಾಣಗಳಾಗಿರುತ್ತವೆ. ॥೨೭॥

### ೫. ಶ್ರೀಗುರುಹೃದಯ ಪ್ರಕಾಶಿಕೆ :-

ಸದಸಜ್ಜನರ ಪುಣ್ಯಪಾಪಗಳನ್ನು ದೇವರು ವ್ಯತ್ಯಾಸ ಮಾಡುವನೆಂದು ಹೇಳಿದ್ದನ್ನು ದೃಷ್ಟಾಂತದಿಂದ ದೃಢಪಡಿಸುತ್ತಾರೆ, -ದೀಪ ಎಂದು. ದೀಪವನ್ನು ಹಗಲು ಅನ್ಯತ್ರ ಇರುವುದನ್ನು ಕಂಡು ಆರಿಸುವರು, ಶ್ರೀಹರಿ ಸಮೀಪದಲ್ಲಿದ್ದ ದೀಪವು ಶಾಂತವಾಗಿದ್ದರೆ, ನಂದಾದೀಪ ಸುನಂದಾದೀಪವೆಂದು ಹಚ್ಚಿಸಿ ಇಡುವರು. ಇದು ಹೇಗೋ, ಹಾಗೆ ಸುಜನರ ಪಾಪಗಳೂ ಕೂಡ ಪುಣ್ಯಗಳಾಗುವುವು. ಪಾಪಗಳು ಮಾಡಿದ ಸತ್ಪುಣ್ಯಕರ್ಮಗಳೂ ಸಹ ಪಾಪವೆನ್ನಿಸುವುವು.

**ಧರ್ಮೋ ಭವತ್ಯಧರ್ಮೋಽಪಿ ಕೃತೋ ಭಕ್ತೈಸ್ತವಾಚ್ಯುತ । ಪಾಪಂ ಭವತಿ ಧರ್ಮೋಽಪಿ ಯೋ ನ ಭಕ್ತೈಃ ಕೃತೋ ಹರೇಃ ॥** ಎಂಬ **ಸ್ಮೃತ್ಯನುಸಾರ,** ಇದು ಉಪಚಾರದ ಮಾತಲ್ಲ. ಸತ್ಯವೆಂದರ್ಥ ॥೨೭॥

# ಸರ್ವವ್ಯಾಖ್ಯಾನಸಾರಸಂಗ್ರಹ

ಹಗಲು ಹೊತ್ತಿನಲ್ಲಿ ದೀಪ ಉರಿಯುತ್ತಿರುವುದನ್ನು ಕಂಡಾಗ, ನಾವು ತಕ್ಷಣ ಆ ದೀಪವನ್ನು ಆರಿಸುತ್ತೇವೆ. ಪ್ರಕಾಶಮಾನವಾದ ಸೂರ್ಯನ ಬೆಳಕಿನಲ್ಲಿ ಆ ದೀಪದ ಅಗತ್ಯವಿಲ್ಲ.

ಅದರಂತೆಯೇ ಜ್ಞಾನಭಾಸ್ಕರ ಸದೃಶನಾದ ಶ್ರೀಪರಮಾತ್ಮನು ಜೀವರ ಹೃತ್ಕಮಲದಲ್ಲಿಯೇ ಬಿಂಬರೂಪನಾಗಿ ವಿರಾಜಮಾನನಾಗಿದ್ದಾನೆ. ಅವನ ಪ್ರಭಾನ್ವಿತವಾದ ಭವ್ಯ ದಿವ್ಯ ಸಾನಿಧ್ಯವಿಶೇಷದಿಂದ ಅಜ್ಞಾನವೆಂಬ ಕತ್ತಲೆಯು ಪರಿಹಾರವಾಗುವುದು. ಅವನ ಸಾನ್ನಿಧ್ಯ ಜೀವನಿಗೆ ಅರೆಕ್ಷಣ ಅಗಲದ ನಿತ್ಯಸಂಬಂಧ. ಅವನ ಪರಮಮಂಗಳಕರವಾದ ನಾಮ ಸಂಸ್ಮರಣೆ ನಿತ್ಯದಲ್ಲೂ ಇರುತ್ತಿರಲಾಗಿ, ಕತ್ತಲೆಯೆಂಬ ಅಜ್ಞಾನ ಪ್ರತಿಬಂಧಕವು ಜೀವನಿಗೆಲ್ಲಿ ಬಂತು !

ಅದೇ ಸತ್ಕರ್ಮಗಳನ್ನು ದುರ್ಜನರು ಮಾಡಿದರೆ. ತಜ್ಜನ್ಯವಾದ ಪುಣ್ಯ ಫಲಪ್ರಾಪ್ತಿಯಾಗುವುದಿಲ್ಲ. ಅವರು ದುರುದ್ದೇಶದಿಂದಲೂ, ಅಹಂಕರ್ತೃತ್ವಾಭಿಮಾನದಿಂದಲೂ, ಸಜ್ಜನರ ಪೀಡನೆಗಾಗಿ ಆ ಸತ್ಕರ್ಮಗಳನ್ನು ಮಾಡುವರು. ಇದರಿಂದ ಕರ್ಮಾನುಷ್ಠಾನದ ಉದ್ದೇಶ ದೋಷಪೂರಿತವಾಗಿರುವುದರಿಂದ, ಅವು ಪಾಪಕರ್ಮಗಳೇ ಆಗಿ, ಅವರಿಗೆ ದುಃಖಪ್ರದವಾಗುವುವು. ಅಸುರರು ಮಾಡಿದ ದಾನ, ಅತಿಥಿಸತ್ಕಾರ, ಯಜ್ಞಯಾಗಾದಿಗಳು, ತಪಸ್ಸು ಇತ್ಯಾದಿ ಸತ್ಕರ್ಮಗಳೆಲ್ಲವೂ ಕೊನೆಯಲ್ಲಿ ಅವರ ನಾಶಕ್ಕೆ ಕಾರಣವಾದುವು–ಎಂದು ಪುರಾಣ ಪ್ರಸಂಗಗಳಿಂದ ತಿಳಿಯುತ್ತೇವೆ. ಈ ಮೂರು ಕೇವಲ ಔಪಚಾರಿಕವಲ್ಲ. ಪರಮಸತ್ಯವೆಂದು ತಿಳಿಸುತ್ತಾರೆ.

|| ೨೨ ||

## ಪದ್ಯ-೨೮

**ಮೂಲ :-**

**ಧನವ ಸಂಪಾದಿಸುವ ಪ್ರದ್ರಾ।**
**ವಣಿಕರಂದದಿ ಕೋವಿದರ ಮನೆ।**
**ಮನೆಗಳಲಿ ಸಂಚರಿಸು ಶಾಸ್ತ್ರ ಶ್ರವಣಗೋಸುಗದಿ ||**
**ಮನನಗೈಸುಪದೇಶಿಸುತ ದು।**
**ರ್ಜನರ ಕೂಡಾಡದಿರು ಸ್ವಪ್ನದಿ।**
**ಪ್ರಣತಕಾಮದ ಕೊಡುವ ಸೌಖ್ಯಗಳಿಹಪರಂಗಳಲಿ || ||೨೮||**

**ಅವತರಣಿಕೆ :-**

ಅಧಿಕಾರಿಗಳಾದ ಜ್ಞಾನಿಗಳ ಮನೆ ಮನೆಗಳಿಗೆ ಹೋಗಿ ಜ್ಞಾನಾಖ್ಯ ದ್ರವ್ಯ ಸಂಪಾದನೆಗಾಗಿ, ಶಾಸ್ತ್ರಶ್ರವಣ ಮಾಡುವವರಾಗಬೇಕೆಂದು ತಿಳಿಸುತ್ತಾರೆ- ||೨೮||

**ಪ್ರತಿಪದಾರ್ಥ :-**

**ಧನವ ಸಂಪಾದಿಸುವ** = ದ್ರವ್ಯವನ್ನು ಸಂಪಾದಿಸಬೇಕೆಂಬ ಉದ್ದೇಶ್ಯದಿಂದ, **ಪ್ರದ್ರಾವಣಿಕರಂದದಿ** = ವರ್ತಕರು ಗ್ರಾಮಾಂತರಗಳಿಗೆ ಹೋಗಿ, ಅಲ್ಲಿ ತಮ್ಮ ಸರಕುಗಳನ್ನು ಮಾರಿ, ಹಣವನ್ನು ಗಳಿಸುಮತೆ, **ಕೋವಿದರ** = ಜ್ಞಾನಿಗಳ, **ಮನೆ ಮನೆಗಳಲಿ** = ಮನೆ ಮನೆಗಳಿಗೆ, **ಸಂಚರಿಸು** = ತಿರುಗಿ ಸಂಚರಿಸುತ್ತಿರು. **ಶಾಸ್ತ್ರ ಶ್ರವಣ ಗೋಸುಗದಿ** = ಜ್ಞಾನಿಗಳ ಮುಖದಿಂದ ಸಚ್ಛಾಸ್ತ್ರಶ್ರವಣದ ಉದ್ದೇಶ್ಯದಿಂದ ಅವರ ಮನೆಗಳಿಗೆ ಹೋಗಿ, **ಮನನ**

**ಗೈದು** – ಅವರಿಂದ ಉಪದಿಷ್ಟ ವಾದ ಶಾಸ್ತ್ರಪ್ರಮೇಯಗಳನ್ನು ಮನಸಾ ಸ್ಮರಿಸುತ್ತ, **ಉಪದೇಶಿಸುತ** = ಇತರರಿಗೆ ಉಪದೇಶ ಮಾಡುತ್ತಾ, **ದುರ್ಜನರ** = ಭಗವದ್ವೇಷಿಗಳನ್ನು **ಸ್ವಪ್ನದಿ** = ಕನಸಿನಲ್ಲಿಯೂ ಸಹ, **ಕೂಡಾಡದಿರು** = ಸಹವಾಸವನ್ನು ಖಂಡಿತ ಮಾಡಬೇಡ. **ಪ್ರಣತ ಕಾಮದ** = ಅಂತಹ ಭಕ್ತರಿಗೆ ಸರ್ವಾಭೀಷ್ಟಗಳನ್ನು ಈಡೇರಿಸುವ ಶರಣಾಗತ ವತ್ಸಲನು, ಇಹ = ಈ ಪ್ರಾಪಂಚಿಕ ಜೀವನದಲ್ಲಿ, **ಪರಂಗಳಲಿ** = ಪರಲೋಕದಲ್ಲಿ **ಸೌಖ್ಯಗಳ** = ಇಹಲೋಕದ ಭೋಗಭಾಗ್ಯರೂಪವಾದ ಆನಂದವನ್ನೂ, ಪರದಲ್ಲಿ ನಿತ್ಯಾನಂದರೂಪವಾದ ಮುಕ್ತಿಸುಖವನ್ನು **ಕೊಡುವ** = ನೀಡುವನು. ॥೨೮॥

## ವ್ಯಾಖ್ಯಾನಗಳು

### ೧. ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ

ಶ್ರೀ ಭಗವದನುಗ್ರಹಾಖ್ಯಫಲ ಸಂಪಾದಿಸಬೇಕಾದರೆ ಸಚ್ಛಾಸ್ತ್ರ ಶ್ರವಣ ಮಾಡಬೇಕು-ಎಂತ ಹೇಳತಾರೆ.

ಧನವನ್ನು ಸಂಪಾದನೆ ಮಾಡಬೇಕೆಂಬ ವರ್ತಕರಾದವರು ಗ್ರಾಮಾಂತರ ಗಳಿಗೆ ಹೋಗಿ,ಅಲ್ಲಿರತಕ್ಕ ತಮ್ಮ ಲಾಭಕ್ಕೆ ಅನುಗುಣರಾದ ಜನರುಗಳ ಮನಿ ಗಳಿಗೆ ಹೋಗಿ, ತಾವು ತಂದ ಸರಕುಗಳ ವಿಕ್ರಯ ಮಾಡಿ, ದ್ರವ್ಯ ಸಂಪಾದಿಸತಾರೆ. ಈ ವರ್ತಕರೋಪಾದಿಯಲ್ಲಿ ಅಧಿಕಾರಿ ಆದವ ಅನ್ಯಗ್ರಾಮ ಗತರಾದ ಜ್ಞಾನಿಗಳ ಮನಿಗಳಿಗೆ ತಿರುಗಿ, ತಮ್ಮ ಸಂದೇಹಗಳ ಪರಿಹಾರ ಮಾಡತಕ್ಕ ಭಗವದ್ಭಕ್ತರ ಕುಡು, ಸೇವಕವೃತ್ತಿರೂಪವಾದ ಕರಾಖ್ಯ ಸರಬಗಳ ಅವರಿಗೆ ಕೊಟ್ಟು, ಜ್ಞಾನಾಖ್ಯದ್ರವ್ಯ ಸಂಪಾದಿಸೇವರಾಗಬೇಕು. ಇಂಥಾ ಲಾಭಕ್ಕೋಸ್ಕರ ಸಚ್ಛಾಸ್ತ್ರಶ್ರವಣ ಮಾಡಬೇಕು. ಆದ್ದರಿಂದ ಸಚ್ಛಾಸ್ತ್ರಶ್ರವಣಗೋಸುಗವಾಗಿ ಜ್ಞಾನಿಗಳ ಮನಿಗಳಿಗೆ ಸಂಚಾರಮಾಡಿ ಶ್ರವಣ ಮಾಡೋವನಾಗು. ಆ ಶ್ರವಣ ಮಾಡಿದ್ದರನ್ನ ಮರಿಯದೆ ಸರ್ವದಾ

ಮನನ ಮಾಡತಾ, ಅದರಂತೆ ಅನುಷ್ಠಾನಮಾಡತಾ, ಅದರನ್ನ ಯೋಗ್ಯರಾದವರಿಗೆ ಉಪದೇಶ ಮಾಡತಾ, ಮತ್ತು ಬಹು ಮಂದಿ ಕೋವಿದರ ಮುನಿಗಳಿಗೆ ಸಂಚಾರಮಾಡಿ, ಅಲ್ಲಲ್ಲಿ ಮಧು, ಮಕ್ಷಿಕ ಅನೇಕ ಪುಷ್ಪಗತ ಮಧು ಸಂಗ್ರಹ ಮಾಡಿದಂತೆ, ಅವರವರ ದ್ವಾರಾ ಭಗವತ್ತತ್ತ್ವಾತಿಶಯಿಗಳ ತಿಳಕೊಂಬೋಣವೆಂಬ ಲಾಭ ಸಂಪಾದಿಸತಾ ಇರೋವನಾಗು. ಸ್ವಪ್ನದಲ್ಲಾದರೂ ಭಗವದ್ವೇಷಿಗಳಾದ ದೈತ್ಯರ ಸಹವಾಸ ಮಾಡದಿರು. ಹೀಂಗೆ ಇದ್ದರೆ, ಪರಮಾತ್ಮ ಸರ್ವೋತ್ತಮ, ಸರ್ವತಂತ್ರ ಸ್ವತಂತ್ರನೆಂದು-ತಿಳಿದು ಮನೋದೈನ್ಯರೂಪವಾದ ವಂದನಮಾಡತಕ್ಕ ಅಧಿಕಾರಿಗಳಿಗೆ ತನ್ನ ಸಂದರ್ಶನಾಖ್ಯ ಮಹಾಫಲವನ್ನ ಕೊಟ್ಟು, ಈ ಲೋಕದಲ್ಲೇನು, ಸ್ವರ್ಗಾದಿ ಮಹಾ ಲೋಕಗಳಲ್ಲಿ, ಈ ಉಭಯುವಾದ ಲೋಕಗಳಲ್ಲಿ ಅನೇಕ ಸುಖಗಳ ಕೊಡೋವನಾಗತಾನೆ. **ಜ್ಞಾನೇನೈವ ಪರಂ ಪದಂ ಯಾತಿ ತಸ್ಮಾದ್ವಿರಕ್ತಸ್ಸನ್ ಜ್ಞಾನಮೇವ ಸಮಾಶ್ರಯೇತ್**-ಎಂತ ಇರುವದ್ದರಿಂದ ಶ್ರೀ ಭಗವನುಗ್ರಹಾಖ್ಯ ಫಲ ಹೊಂದಬೇಕಾದರೆ ಗುರುಗಳ ದ್ವಾರಾ ಸಚ್ಛಾಸ್ತ್ರ ಶ್ರವಣ ಮನನದಿಂದ ಜ್ಞಾನೋತ್ಪತ್ತಿ ಆಗಿ, ನಂತರ ಮಹಾನಂದವನ್ನು ಐದಬೇಕು ಎಂತ ತಾತ್ಪರ್ಯ. ॥೨೮॥

## ೨. ಭಾವಪ್ರಕಾಶಿಕೆ

ವರ್ತಕನು ವ್ಯಾಪಾರಮಾಡಿ ಹೆಚ್ಚು ಲಾಭವನ್ನು ಪಡೆಯುವುದಕ್ಕೋಸ್ಕರ, ಆ ರಹಸ್ಯವನ್ನು ತಿಳಿದಿರುವ ವರ್ತಕರ ಮನೆಗಳಿಗೆ ತಿರುಗಿ, ಯಾವ ಸ್ಥಳಗಳಲ್ಲಿ ಸರಕುಗಳು ಮಾರುವದೆಂಬುದನ್ನು ತಿಳಿದುಕೊಂಡು, ಆ ಸ್ಥಳಗಳಿಗೆ ಹೋಗಿ, ವ್ಯಾಪಾರಗಳನ್ನು ಮಾಡಿ ಲಾಭವನ್ನು ಸಂಪಾದಿಸುವನು. ಅದರಂತೆಯೇ ಭಗವದ್ಭಕ್ತರು ಸಚ್ಛಾಸ್ತ್ರಶ್ರವಣವೆಂಬ ಲಾಭವನ್ನು ಪಡೆಯುವುದಕೋಸ್ಕರ ಸಜ್ಜನರ ಮನೆ ಮನೆಗಳಿಗೆ ತಿರುಗಿ, ಅಲ್ಲಿ ಸಾಧುಗಳಾದ ಜ್ಞಾನಿಗಳು ದೊರಕಿದಲ್ಲಿ, ಅವರಿಗೆ ಸೇವಾರೂಪವಾದ ಧಾನ್ಯಗಳನ್ನು ಮಾರಿ ಕಥಾ ಶ್ರವಣನೆಂಬ ಲಾಭವನ್ನು ಪಡೆಯಬೇಕೆಂಬ ತಾತ್ಪರ್ಯ. ವರ್ತಕರು ಲಾಭವನ್ನು ಸಂಪಾದನೆಮಾಡಿ, ಆ ಲಾಭ ದ್ರವ್ಯವು ಎಷ್ಟು? ಅಸಲು ಎಷ್ಟು?

ಇವುಗಳನ್ನು ಏಕಾಂತವಾಗಿ ಕೂತು, ಗಣನೆಮಾಡಿ ಲಾಭ ದ್ರವ್ಯವನ್ನು ಹೆಂಡತಿ ಮಕ್ಕಳ ಪೋಷಣೆಗೆ ಉಪಯೋಗಪಡಿಸುವರು. ಅದರಂತೆ ಕಥಾಶ್ರವಣವೆಂಬ ಲಾಭವನ್ನು ಸಂಪಾದನೆಮಾಡಿ, ಅದನ್ನು ಏಕಾಂತದಲ್ಲಿ ಕೂತು ಮನನಮಾಡಿ ತನ್ನ ಬಂಧು ಜನರಂತಿರುವ ಭಕ್ತಜನರಿಗೆ ಉಪದೇಶರೂಪವಾಗಿ ಹಂಚಬೇಕು. ಲಾಭಾಂಶವನ್ನು ವರ್ತಕರು ಹೇಗೆ ತಮ್ಮವರು ಹೊರತು ಪರರಿಗೆ ಕೊಡರೋ ಹಾಗೆ ತಮ್ಮವರಾದ ಭಕ್ತರಿಗೆ ಉಪದೇಶ ಮಾಡಬೇಕೇ ಹೊರತು ಪರಕೀಯರಂತಿರುವ ದುಷ್ಟರುಗಳಿಗೆ ಉಪದೇಶ ಮಾಡಬಾರದೆಂದು ತಾತ್ಪರ್ಯ. ಸಜ್ಜನರ ಸಂಗದಿಂದಲೇ ಕಥಾಶ್ರವಣವಾಗಬೇಕು. ಭಾಗವತ ದ್ವಾದಶಸ್ಕಂಧದಲ್ಲಿ ಹೇಳಿರುವ ಪ್ರಕಾರ, ಆ ಪರಮಾತ್ಮನ ಅವಿಸ್ಮೃತಿಯು (ಮರೆಯದೆ ಇರುವಿಕೆಯು) ಅಮಂಗಳವನ್ನೆಲ್ಲಾ ಪರಿಹಾರಮಾಡಿ, ಉತ್ತಮಗತಿಯನ್ನು ಕೊಡುವುದು-ಎಂದು ಹೇಳಿರುವರು. ಆದ್ದರಿಂದ ದಾಸರಾಯರು ಸಜ್ಜನ ಸಂಗಕ್ಕಾಗಿ ಮನೆ ಮನೆ ತಿರುಗಿ, ಕಥಾಶ್ರವಣಮಾಡಿ, ಮನನ ಮಾಡಿ, ಸಾಧು ಜನರಿಗೆ ಉಪದೇಶಮಾಡಿದರೆ, ಇಹ ಪರದಲ್ಲೂ ಸುಖವಾಗುವದೆಂದು ಹೇಳಿರುವರು. ॥೨೮॥

೩. ಭಾವದರ್ಪಣ :-

॥ಧನವು॥

೪. ಶ್ರೀವ್ಯಾಸದಾಸ ಸಿದ್ಧಾಂತ ಕೌಮುದೀ :-

"ಧನವ" ಇತಿ "ಪ್ರದ್ರಾವಣಿಕ" ವೈಶ್ಯಃ ॥೨೮॥

## ಕನ್ನಡಾರ್ಥ

"ದ್ರವ್ಯಾರ್ಜನೆಯಲ್ಲಿ ಕ್ಷಣ ಕ್ಷಣವನ್ನೂ ವಿಫಲಗೊಳಿಸುವ ಸತತ ದ್ವೀಪ ಸಂಚಾರಿ ವೈಶ್ಯ ವರ್ತಕನಂತೆ ಶಾಸ್ತ್ರಶ್ರವಣದ ಸಲುವಾಗಿ – ಮನೆ ಮನೆಗೆ

ತಿರುಗಿ, ಬುಧರಿಂದ ಉಪದೇಶ ಪಡೆದು, ಮನನಮಾಡು. ದುರ್ಜನರನ್ನು ಕನಸಿನಲ್ಲಿಯಾದರೂ ಹೊಗಳಬೇಡ. ಪರಮಾತ್ಮನು ಇಹ ಪರ ಸುಖಗಳನ್ನು ದಯಪಾಲಿಸುವ ಮಹಾ ಭಕ್ತಕಾಮದನಿರುತ್ತಾನೆ"–ಎಂದು ಉಪದೇಶಿಸುತ್ತಾರೆ.

"ಪ್ರದ್ರಾವಣಿಕ" = ವೈಶ್ಯ ವರ್ತಕ ॥೨೮॥

## ೫. ಶ್ರೀ ಗುರುಹೃದಯ ಪ್ರಕಾಶಿಕೆ :–

ಆದಾಗ್ಯೂ, ಇಹಪರಸಾಧಕ ಶ್ರೀ ಹರಿಕಥಾಶ್ರವಣಾರ್ಥವಾಗಿ ಸುಜನರಲ್ಲೇ ಸಂಚರಿಸಬೇಕೆಂಬು ಸದೃಷ್ಟಾಂತ ಬೋಧಿಸುತ್ತಾರೆ, ಧನವೆಂದು. ದ್ರವ್ಯಸಂಪಾದನೆಗೋಸ್ಕರವಾಗಿ ಮನೆ ಮನೆಗಳಿಗೆ ತಿರುಗುವ ಪ್ರದ್ರಾವಣಿಕರೆಂಬ ವ್ಯಾಪಾರಗಾರರಂತೆ ಸಚ್ಛಾಸ್ತ್ರಶ್ರವಣಾರ್ಥವಾಗಿ ಕೋವಿದರೆಂಬ ಜ್ಞಾನಿಗಳ ಮನೆ ಮನೆಗಳಿಗೆ ಸಂಚರಿಸುತ್ತಾ ಇರಬೇಕು. ಸ್ವಪ್ನದಲ್ಲಿಯೂ ಕೂಡಾ ದುರ್ಜರ ಮನಃಪೂರ್ವಕವಾಗಿ ಮಾಡಬಾರದು. ಹೀಗಿರುವವರಿಗೆ ಶರಣಾಗತರ ಇಷ್ಟಪ್ರದನಾದ ದೇವರು ಇಹ ಪರದಲ್ಲಿ ಸಹ ಸೌಖ್ಯವನು ಕೊಡುವನು. ॥೨೮॥

# ಸರ್ವವ್ಯಾಖ್ಯಾನಸಾರಸಂಗ್ರಹ

ಶ್ರೀ ಹರಿಯ ಪರಮಾನುಗ್ರಹವೆಂಬ ಧನವನ್ನು ಪಡೆಯಲು ಅಪೇಕ್ಷಿಸುವ ಜಿಜ್ಞಾಸುವು ಅಂತಹ ಕೋವಿದರು ಎಲ್ಲೆಲ್ಲಿ ಇದ್ದಾರೆಯೋ, ಅಂತಹ ಸ್ಥಳಗಳಿಗೆ ಹೋಗಿ, ಅವರ ಸೇವಾವೃತ್ತಿಮಾಡಿ, ಅವರ ಮುಖದಿಂದ ಸಚ್ಛಾಸ್ತ್ರಶ್ರವಣಮಾಡಬೇಕು. ಜ್ಞಾನಾರ್ಥಿಯೇ ವರ್ತಕರ ಸದೃಶನು. ಸೇವಾವೃತ್ತಿರೂಪವಾದ ವಿಕ್ರಿಯವೇ ಸರಕುಗಳನ್ನು ಮಾಡುವುದೆಂದರ್ಥ. ಕೋವಿದರೇ ಅವರ ಸ್ಥಿತಿಯನ್ನು ಸ್ವೀಕರಿಸಿ, ಜ್ಞಾನವೆಂಬ ಹಣವನ್ನು ಕೊಡುವವರು.

ಅಂತಹ ಕೋವಿದರಿಂದ ಜ್ಞಾನೋಪದೇಶ ಪಡೆದು, ಅದನ್ನು ಮನಸ್ಸಿನಲ್ಲಿ ಸ್ಮರಿಸುತ್ತಾ, ಮನನ ಮಾಡುತ್ತಿರಬೇಕು. ಮನನ ನಿಧಿಧ್ಯಾಸನಾದಿಗಳಿಂದ ತತ್ತ್ವಧಾರ್ಢ್ಯ ಉಂಟಾಗುವುದು. ತತ್ತ್ವನಿಷ್ಠಿತನಾಗಿ ಅದನ್ನು ಯೋಗ್ಯರಾದವರಿಗೆ ಉಪದೇಶಿಸುತ್ತಿರಬೇಕು. ಯೋಗ್ಯರಾದ ಅಧಿಕಾರಿಗಳಲ್ಲಿ ಉಪದೇಶಮಾಡಿದರೇ ಸಾರ್ಥಕ. ಇಲ್ಲದಿದ್ದರೆ ಉಭಯತ್ರರಿಗೂ ಹಾನಿ. ಹಾಗೂ ವ್ಯರ್ಥಲಾಪ.

ಭಗವದ್ವೇಷಿಗಳೂ, ಪರಪೀಡನಾಸಕ್ತರೂ ಆದ ದುರ್ಜನರ ಸ್ವಪ್ನದಲ್ಲಿಯೂ ಸಹ ಮಾಡಬೇಡ -ಎಂಬ ಎಚ್ಚರಿಕೆಯ ಮಾತುಗನ್ನಾಡಿದ್ದಾರೆ ಶ್ರೀದಾಸರಾಯರು. ಅಯೋಗ್ಯರೂ ದುರ್ಜನರೂ ಆದವರಲ್ಲಿ ಉಪದೇಶ ಮಾಡಿದರೆ. ಅದು ದುಸ್ಸಾಧನಕ್ಕೆ ಸಹಕಾರಿಯಾಗುವುದು. ಉಪದೇಶಕನಿಗೆ ಜ್ಞಾನಿಹಾನಿ.

ತನ್ನನ್ನು ನಿರಂತರ ಧೃಡವಾಗಿ ನಂಬಿ ಭಜಿಸುತ್ತಿರುವ ಭಕ್ತರ ಅಭಿಲಾಷೆಗಳನ್ನು ಈಡೇರಿಸುವ ಶರಣಾಗತವತ್ಸಲನು ಭಕ್ತರಿಗೆ ಇಹದಲ್ಲಿ ಪ್ರಾಪಂಚಿಕ ಉಪಭೋಗರೂಪವಾದ ಆನಂದವನ್ನು ಕೊಡುವನು. ಪರದಲ್ಲಿ ಸ್ವರೂಪಗತ ನಿತ್ಯಾನಂದರೂಪವಾದ ಮುಕ್ತಿ ಸುಖವನ್ನು ಈಯುವನು. ॥೨೮॥

## ಪದ್ಯ—೨೯

ಕಾರಕ ಕ್ರಿಯ ದ್ರವ್ಯ ವಿಭ್ರಮ ।
ಮೂರುವಿಧ ಜೀವರಿಗೆ ಬಹು ಸಂ ।
ಸಾರಕಿವು ಕಾರಣವೆನಿಸುವುವು ಎಲ್ಲ ಕಾಲದಲಿ ॥
ದೂರ ಓಡಿಸಿ ಭ್ರಾಮಕತ್ರಯ ।
ಮಾರಿಗೊಳಗಾಗದಲೆ ಸರ್ವಾ ।
ಧಾರಕನ ಚಿಂತಿಸುತಲಿರು ಸರ್ವತ್ರ ಮರಿಯದಲೆ ॥ ॥೨೯॥

**ಅವತರಣಿಕೆ :—**

ಸರ್ವಕ್ಕೂ ಆಧಾರನೂ ಪ್ರೇರಕನೂ ಆದ ಸರ್ವೇಶನನ್ನು ಸ್ಮರಿಸುತ್ತಿರಬೇಕೆಂದು ತಿಳಿಸುತ್ತಾರೆ.

**ಪ್ರತಿಪದಾರ್ಥ :—**

**ಕಾರಕ** = ಪಂಚಜ್ಞಾನೇಂದ್ರಿಯಗಳ ದ್ವಾರಾ ನಡೆಯುವ ವಿಷಯ ಗ್ರಹಣರೂಪವಾದ ಕ್ರಿಯೆಗಳಲ್ಲಿ ಕರ್ತೃತ್ವಾಭಿಮಾನ, **ಕ್ರಿಯೆ** = ಪಂಚ ಕರ್ಮೇಂದ್ರಿಯಗಳ ದ್ವಾರಾ ನಡೆಯುತ್ತಿರುವ ವ್ಯಾಪಾರಗಳಲ್ಲಿ ಕರ್ತೃತ್ವಾಭಿಮಾನ, **ದ್ರವ್ಯ** = ಪಂಚಭೂತಾತ್ಮಕವಾದ ದೇಹಾಭಿಮಾನ, **ವಿಭ್ರಮ** = ವಿಶೇಷಾಕಾರವಾದ ಅಜ್ಞಾನರೂಪವಾದ ಭ್ರಾಮಕತ್ರಯಗಳು. **ಮೂರುವಿಧ ಜೀವರಿಗೆ** = ಮುಕ್ತಿಯೋಗ್ಯರು, ನಿತ್ಯಸಂಸಾರಿಗಳು, ತಮೋಯೋಗ್ಯರು—ಎಂಬ ತ್ರಿವಿಧವರ್ಗದ ಜೀವರುಗಳಿಗೆ, **ಬಹು ಸಂಸಾರಕೆ** = ನಾನಾವಿಧವಾದ ಜನ್ಮಗಳಪ್ರಾಪ್ತಿ ಬಂಧಕರೂಪವಾದ ಸಂಸಾರಕ್ಕೆ, **ಇವು** = ಪೂರ್ವೋಕ್ತ ಭ್ರಾಮಕ ತ್ರಯಗಳು, **ಎಲ್ಲ ಕಾಲದಲಿ** = ಸರ್ವಕಾಲಗಳಲ್ಲಿ, **ಕಾರಣವೆನಿಸುವುವು** = ಕಾರಣವಾಗಿವೆ. **ದೂರ ಓಡಿಸಿ** = ಭಗವದನುಗ್ರಹಕ್ಕೆ ಪ್ರತಿಬಂಧಕವಾದ ಭ್ರಮತ್ರಯಗಳಿಗೆ ವಶವಾಗದೆ,

ಅವುಗಳಿಂದ ದೂರನಾಗಿದ್ದು. **ಭ್ರಾಮಕ ತ್ರಯ** = ಕಾರಕ-ಕ್ರಿಯಾ-ದ್ರವ್ಯ ಎಂಬ ಮೂರು ಪ್ರಕಾರವಾದ ಭ್ರಮೆಗಳಾದ. **ಮೂರಿಗೆ ಒಳಗಾಗದೆ** = ಶತ್ರುಗಳ ಬಾಧೆಗೆ ಸಿಕ್ಕಿದಂತೆ. **ಸರ್ವಾಧಾರಕನ** = ಚರಾಚರಾತ್ಮಕವಾದ ಸಮಸ್ತ ಜಗತ್ತಿಗೂ ಆಧಾರ ಭೂತನಾದ ಆ ಆಶ್ರಯದಾತನನ್ನು, **ಸರ್ವತ್ರ** = ಸರ್ವದೇಶ ಕಾಲಗಳಲ್ಲಿ. **ಮರಿಯದಲೆ** = ಮರೆಯದೇ, **ಚಿಂತಿಸುತಲಿರು** = ಅವನ ಗುಣೋಪಾಸನಾರೂಪವಾದ ಸ್ಮರಣೆಯನ್ನು ಮಾಡುತ್ತಿರು. ॥೨೯॥

# ವ್ಯಾಖ್ಯಾನಗಳು

## ೧. ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ

ಜ್ಞಾನವನ್ನ ಕೆಡಸತಕ್ಕ ಸಂಸಾರಕ್ಕೆ ಕಾರಣಗಳಾದ ಭ್ರಾಮಕತಯಕ್ಕೆ ಒಳಗಾಗಬ್ಯಾಡಾ-ಎಂತ ಹೇಳತಾರೆ, ಕಾರಕ ಕ್ರಿಯದ್ರವ್ಯ, ಎಂದರೆ ಕಣ್ಣು ಮೊದಲಾದ ಜ್ಞಾನೇಂದ್ರಿಯಂಗಳ ಕರ್ತೃತ್ವಾಭಿಮಾನ ಒಂದು, ಕ್ರಿಯವೆಂಬ ವಾಕ್ಕು ಮೊದಲಾದ ಕರ್ಮೇಂದ್ರಿಯಗಳ ಕರ್ತೃತ್ವಾಭಿಮಾನ ಒಂದು, ದ್ರವ್ಯವೆಂಬ ಪಂಚಭೂತಾತ್ಮಕ ದೇಹದ ಅಭಿಮಾನ ಒಂದು-ಈ ಮೂರೂ **ಸಂಯಾತ್ಯಸ್ಯಾಶು ನಿರ್ವಾಣಂ ದ್ರವ್ಯಜ್ಞಾನಕ್ರಿಯಾಭ್ರಮಃ.**

ಅಹಂ ಕರ್ತಾ,-ನಾನು ಯಜಮಾನ-ಎಂತಲೂ ಇಂದ್ರಿಯಜನ್ಯ ವ್ಯಾಪಾರಗಳು ತಾನು ಮಾಡತ್ತೇನೆ-ಎಂತಲೂ ಪಂಚಭೂತದಿಂದ ನಿರ್ಮಿತವಾದ ಶರೀರ,ಹಣ, ಬಂಗಾರ-ಇವುಗಳು ನನ್ನವು ಎಂಬುವೇ ವಿಶೇಷಾಕಾರವಾದ ಅಜ್ಞಾನರೂಪವಾದ ಭ್ರಾಮಕತ್ರಯಗಳು. ಮುಕ್ತಿಯೋಗ್ಯ ನಿತ್ಯಸಂಸಾರಿ, ತಮೋಯೋಗ್ಯರು ಈ ಮೂರು ವಿಧರಾದ ಜೀವರಿಗೆ ಈ ಪೂರ್ವೋಕ್ತ ಕಾರಕ-ಕ್ರಿಯ-ದ್ರವ್ಯಗಳು ಮೂರೂ. ನಾನಾವಿಧವಾದ ಜನ್ಮಗಳ ಧರಿಸಿ, ತದ್ವಾರಾ ಬಹು ದುಃಖಗಳ ಅನುಭವಿಸಲಿಕ್ಕೆ ಕಾರಣವಾಗಿ ಅವೆ. ಇವೇನೇ ಮೋಕ್ಷಕ್ಕೆ ಭಗವದನುಗ್ರಹಕ್ಕೆ ಪ್ರತಿಬಂಧಕವಾದುವು.

ಆದ್ದರಿಂದ ಪೂರ್ವೋಕ್ತ ಭ್ರಾಮಕತ್ರಯವಾದ ಶತ್ರುಗಳಿಗೆ ಸಿಕ್ಕಧಾಂಗೆ ಅವನ್ನ ಬಿಟ್ಟು (ಮಾ+ಆದಿ ಎಂತ ಪದ), ಸದಾ ಸರ್ವಕಾಲದಲ್ಲಿ ಅವನ್ನ ದೂರಮಾಡಿ, ಚರಾಚರ ಸರ್ವತ್ರವ್ಯಾಪ್ತನಾದ ಹೃದಯಗತ ಬಿಂಬನಾದ, ಸರ್ವಕ್ಕೂ ಆಧಾರಭೂತನಾದ ಪರಮಾತ್ಮನ್ನ ಮನಸ್ಸಿನಲ್ಲಿ ನೋಡತಾ ಧ್ಯಾನಮಾಡತಾ, ತಾನು ಅಸ್ವತಂತ್ರನೆಂತಲೂ ಸರ್ವಕರ್ಮವೂ ಭಗವದಾಜ್ಞಾನದಿಂದ ನಡೀತದೆ–ಎಂತಲೂ ಬಿಂಬಕ್ರಿಯಾ–ಪ್ರತಿಬಿಂಬಕ್ರಿಯಾ ತಿಳಿದು ಚಿಂತಿಸುತಾ ಇರೋವನಾಗು. ಪೂರ್ವೋಕ್ತ ಪರಮಾತ್ಮನು ಮರೀಧಾಂಗೆ ಇರೋವನಾಗು–ಎಂತ ತಾತ್ಪರ್ಯ. ॥೨೯॥

೨. ಭಾವಪ್ರಕಾಶಿಕೆ :–

ಸಂಸಾರದಲ್ಲಿ ನಾನಾ ವಿಧವಾದ ದುಃಖಗಳನ್ನು ಕೊಡಿಸುವುದಕ್ಕೂ, ಪುನಃ ಪುನಃ ಸಂಸಾರದಲ್ಲಿ ಲೋಲಾಡುವಂತೆ ಮಾಡುವಕ್ಕೂ ಕಾರಕ ಭ್ರಮೆ, ದ್ರವ್ಯ ಭ್ರಮೆ ಎಂಬ ಮೂರುವಿಧ ಭ್ರಮೆಗಳು ಕಾರಣವಾಗಿರುವವು. ಇದರರ್ಥ "ನಾನೇ ನನ್ನ ಹೆಂಡಿರುಮಕ್ಕಳನ್ನು ಪೋಷಿಸುತ್ತಿರುವೆನು–ಎಂಬ ಸ್ವತಂತ್ರ ಕರ್ತೃತ್ವಾಭಿಮಾನವೇ ಕಾರಕಭ್ರಮೆಯು. ನನ್ನ ಕಣ್ಣುಗಳೇ ನೋಡುವುದಕ್ಕೆ ನನ್ನ ಕಿವಿಯೇ ಕೇಳುವುದು ಎಂದು ಇಂದ್ರಿಯಗಳಿಗೆ ಸ್ವತಂತ್ರ ಕರ್ತೃತ್ವವನ್ನು ಊಹಿಸುವುದೇ ಕ್ರಿಯೆಯ ಭ್ರಮೆಯು. ನಮ್ಮ ದೇಹ, ಹೆಂಡರು, ದ್ರವ್ಯ ಭ್ರಮೆಯು. ಇಂತಹ ಮೂರುವಿಧ ಭ್ರಮೆಗಳೇ ಸಂಸಾರಧಲ್ಲಿ ನಾನಾ ಪ್ರಕಾರ ಕ್ಲೇಶವನ್ನು ಕೊಡಿಸುವುದಕ್ಕೂ, ಪುನಃ ಪುನಃ ಸಂಸಾರದಲ್ಲಿ ತಗಲಿಸಿ ಕಷ್ಟಪಡುವುದಕ್ಕೂ ಕಾರಣವಾಗಿರುವವು, ಆದ್ದರಿಂದ ಇಂತಹ ಭ್ರಾಮಕತ್ರಯವನ್ನು ದೂರದಲ್ಲಿ ಒಡಿಸಬೇಕು. ಈ ಮೂರು ವಿಧ ಭ್ರಮೆಗಳು ದೊಡ್ಡ ಮಾರಿಯಂತೆ ನಮ್ಮನ್ನು ಹಿಂಸಿಸುವುವು. ಅವುಗಳಿಗೆ ಒಳಗಾಗದೆ, ಸರ್ವಾಧಾರಕನಾದ ಶ್ರೀಪರಮಾತ್ಮನನ್ನು ಅವಿಚ್ಛಿನ್ನವಾಗಿ ಸರ್ವಕಾಲದಲ್ಲಿಯೂ. ಸರ್ವಸ್ಥಳಗಳಲ್ಲಿಯೂ, ಚಿಂತಿಸುತ್ತಿರಬೇಕೆಂಬ ತಾತ್ಪರ್ಯ. ॥೨೯॥

## ೩. ಭಾವದರ್ಪಣ

ನಾನೇ ಹೋಗುವೆ ನಾನೇ ಬರುವೆ, ಎಂಬರ್ಥ ತಕ್ಕ ಭ್ರಮವೇ ಕಾರಕ ಭ್ರಮ ಎಂದರ್ಥ. ಸರ್ವಕಾಲಗಳಲ್ಲಿ ನನ್ನ ಕರಣಗಳೇ ಕ್ರಿಯಾ ಮಾಡುತ್ತಿವೆ ಎಂಬೊದೇ–ಕ್ರಿಯಾಭ್ರಮೆ. ಧನ ದಾರಾಪತ್ಯಗಳಿಂದಲೇ ಸದ್ಗತಿ ಎಂಬೋದೇ–ದ್ರವ್ಯ ಭ್ರಮ ॥ ಏತಾದೃಶ ಭ್ರಾಮಕತ್ರಯಕ್ಕೆ ಒಳಗಾಗದೆ, ಸಮಸ್ತಕಾರ್ಯಗಳಿಗೂ ಆಧಾರಭೂತನಾದಂಥ ಸರ್ವಸ್ವತಂತ್ರನಾದ ಶ್ರೀ ಹರಿಯನ್ನ ಸ್ಮರಿಸುತ್ತ ಸಮಸ್ತಕ್ರಿಯಾ ಆತನಿಂದಲೇ ನಡೆಯುತ್ತದೆಂದು ಚಿಂತನ ಮಾಡೆಂದು ಹೇಳುತ್ತಾರೆ–ಕಾರಕೇತಿ.

## ೪. ಶ್ರೀ ವ್ಯಾಸದಾಸ ಸಿದ್ಧಾಂತ ಕೌಮುದೀ

"ಕಾರಕ" ಇತಿ ॥ "ದ್ರವ್ಯ ಕ್ರಿಯಾ ಕಾರಕ ವಿಭ್ರಮಾಃ" ॥ ಇತಿ **ಭಾಗವತೇ**

### ಕನ್ನಡಾರ್ಥ

ಸಂಸಾರಕ್ಕೆ ಕಾರಣಗಳಾದ ಮೂರು ಭ್ರಮಗಳನ್ನು ದೂರಗೊಳಿಸಿ, ನಿರಂತರ ಭಗವದ್ಧ್ಯಾನ ತತ್ಪರನಾದವನನ್ನು ಶ್ರೀ ಹರಿಯು ಭವದಿಂದ ಬಿಡಿಸಿ–ಸುಖವನ್ನೀಯುವನೆಂದು ಹೇಳುತ್ತಾರೆ, "ಕಾರಕ" ಎಂಬ ಪದ್ಯದಿಂದ.

**ಶ್ರೀಮದ್ಭಾಗವತದಲ್ಲಿ**–"ದ್ರವ್ಯ ಕ್ರಿಯಾ ಕಾರಕ ವಿಭ್ರಮಗಳನ್ನು ವಿಶದಪಡಿಸುತ್ತಾರೆ, ಶರೀರವನ್ನೇ ಆತ್ಮವೆಂದು ಬಗೆಯುವದು, ದ್ರವ್ಯ ಭ್ರಮವೆನಿಸುತ್ತದೆ. "ನಾನು ಮಾಡುವವನು–ಕರ್ತನು" ಎಂದು ಬಗೆಯುವುದು ಕ್ರಿಯಾಭ್ರಮವೆನಿಸುತ್ತದೆ, "ಜ್ಞಾನ ಕ್ರಿಯಾ ಸಾಧನಗಳಾದ ಇಂದ್ರಿಯಗಳು ನನ್ನವು ನನ್ನ ಅಧೀನಗಳು" ಎಂದು ಬಗೆಯುವದು ಕಾರಕ ವಿಭ್ರಮವೆನಿಸುತ್ತದೆ". ಎಂದು ಮುಂತಾಗಿ ನಿರೂಪಿಸಿರುತ್ತಾರೆ. ॥೨೯॥

ಶ್ರೀ ಗುರುಹೃದಯಪ್ರಕಾಶಿಕೆ:-

ಆದರೂ ಕರ್ತೃತ್ವಾಭಿಮಾನ ಬಿಡಬೇಕೆಂದು ಬೋಧಿಸುತ್ತಾರೆ, ಕಾರಕ ಎಂದು. ಕಾರಕವೆಂಬ ಕಣ್ಣು ಮೊದಲಾದ ಜ್ಞಾನೇಂದ್ರಿಯಗಳ ಕರ್ತೃತ್ವಾಭಿಮಾನ ಒಂದು. ಕ್ರಿಯವೆಂಬ ವಾಕ್ಕು ಮೊದಲಾದ ಕರ್ಮೇಂದ್ರಿಯಗಳ ಕರ್ತೃತ್ವಾಭಿಮಾನ ಒಂದು. ದ್ರವ್ಯವೆಂಬ ಪಂಚಭೂತಾತ್ಮಕ ದೇಹದ ಅಭಿಮಾನ ಒಂದು ಸಹ–ಇವು ಮೂರು ಜೀವರಿಗೆ ಸಂಸಾರವೆಂಬ ಜನನಮರಣಾದ್ಯನರ್ಥಕ್ಕೆ ಕಾರಣವಾಗಿರುವುವು. ಈ ಮೂರರಲ್ಲೂ ಜೀವನು ಸ್ವತಂತ್ರನೆಂಬ ಜ್ಞಾನ ಭ್ರಮವಾದ್ದರಿಂದ, ಮಾರಿಯಂತೆ ಉಪದ್ರವಕರವಾದ ಸ್ವತಂತ್ರಾಭಿಮಾನ ಭ್ರಾಂತಿಯನ್ನ ದೂರವಾಗಿ ಓಡಿಸಿ, ಅಂದರೆ ಪರಿಹರಿಸಿಕೊಂಡು ಸರ್ವಾಧಾರಕನಾದ ಅಂದರೆ, ಮೇಲೆ ಹೇಳಿದ ಜ್ಞಾನಕರ್ಮೇಂದ್ರಿಯ ದೇಹಗಳಿಗೆ ಆಧಾರನಾಗಿ ಪ್ರೇರಕನಾದ ಸ್ವಾಮಿಯನ್ನೇ ಸರ್ವತ್ರ ಮರೆಯದೆ ಸ್ಮರಿಸಬೇಕೆಂದರ್ಥ.

**ಯುಂಜಂತೋ ಯೋಗಿನೋ ಮನಸ್ಸಂಯಾಸ್ಯಂಕ್ಯಾಶು ನಿರ್ವಾಣಾಂ ದ್ರವ್ಯಜ್ಞಾನಕ್ರಿಯಾ ಭ್ರಮಾ ||** ಎಂಬ **ಭಾಗವತಾರ್ಥ** ವಿವರಿಸಿತು.

**ಯುಂಜನ್ನೇವಂ ಸದಾತ್ಮಾನಂ ಯೋಗೀ ನಿಯತ ಮಾನಸಃ**– ಎಂಬ **ಗೀತಾರ್ಥ** ಸಹ ವಿವರಿಸಲ್ಪಟ್ಟಿತು. ||೨೯||

## ಸರ್ವವ್ಯಾಖ್ಯಾನಸಾರಸಂಗ್ರಹ

ತ್ರಿವಿಧಜೀವರನ್ನೂ ಸಂಸಾರ ಬಂಧನವೆಂಬ ಸುಳಿಯಲ್ಲಿ ಸಿಕ್ಕಿಸಿ, ತೊಳಲಾಡುವಂತೆ ಮಾಡುವ ಮೂರು ಪ್ರಕಾರವಾದ ಭ್ರಮೆಗಳಿಗೆ **ಭ್ರಾಮಕತ್ರಯಗಳೆಂದು** ಹೆಸರು, ಇವು ಕ್ರಮವಾಗಿ ಕಾರಕ ಭ್ರಮೆ, ಕ್ರಿಯಾಭ್ರಮೆ, ಮತ್ತು ದ್ರವ್ಯ ಭ್ರಮೆ–ಎಂತ ಮೂರು ವಿಧ.

**ಕಾರಕಭ್ರಮೆ:-**

ಕಣ್ಣು, ಕಿವಿ, ಮೂಗು, ಜಿಹ್ವೆ, ತ್ವಕ್ಕು—ಎಂಬ ಪಂಚ ಜ್ಞಾನೇಂದ್ರಿಯಗಳು ನನ್ನವು ಅವುಗಳ ಧಾರಾ ನಡೆಯುವ ಸಕಲಜ್ಞಾನೇಂದ್ರಿಯ ರೂಪವಾದ ಕಾರ್ಯಗಳೆಲ್ಲವನ್ನು ನಾನೇ ಮಾಡುತ್ತಿದ್ದೇನೆ, ನಾನೇ ಕಾಲಕ್ಕೂ ಕರ್ತ ಎಂಬ ಅಹಂಕರ್ತೃತ್ವ ಜ್ಞಾನವೇ ಕಾರಕ ಭ್ರಮೆಯು.

**ಕ್ರಿಯಾಭ್ರಮೆ:-**

ಹಸ್ತ, ಪಾದ, ವಾಕ್ಕು, ಗುದ, ಉಪಸ್ಥ-ಎಂಬ ಪಂಚ ಕರ್ಮೇಂದ್ರಿಯಗಳ ದ್ವಾರಾ ನಡೆಯುತ್ತಿರುವ ಮಾನಸಿಕ, ಭೌದ್ಧಿಕ ದೈಹಿಕ ಇತ್ಯಾದಿ ಸಮಸ್ತಕ್ರಿಯೆಗಳೂ **ನನ್ನಿಂದ** ನಡೆಯುತ್ತಿವೆ-ಎಂಬ ಮಾಯಾ ಪ್ರತ್ಯಾತ್ಮಕವಾದ ಭ್ರಮೆಯು **ಕ್ರಿಯಾಭ್ರಮೆ** ಎನಿಸುವುದು.

**ದ್ರವ್ಯಭ್ರಮೆ :-**

ಪಾಂಚಭೌತಿಕವಾದ ಈ ದೇಹ ನನ್ನದು ಎಂಬ ದೇಹಾಭಿಮಾನ, ಸಂಪಾದಿತ ದ್ರವ್ಯ ನನಗೆ ಸೇರಿದ್ದು. ಪತ್ನೀ ಪುತ್ರರು ಮತ್ತು ಸಕಲಭೋಗ ಭಾಗ್ಯಾದಿಗಳೆಲ್ಲವೂ ನನ್ನವು-ಎಂಬ ಮಮಕಾರರೂಪವಾದ ಭ್ರಮೆಗೆ **ದ್ರವ್ಯ ಭ್ರಮ** ಎಂತ ಹೆಸರು. ಈ ಭ್ರಾಮಕತ್ರಯಗಳೇ ಸಂಸಾರಕ್ಕೆ ಕಾರಣವು. ಇವು ಸತ್ಸಾರ್ಥನೆಗೆ **ಪ್ರತಿಬಂಧಕಸಾಮಗ್ರಿಗಳು**. ಇವುಗಳನ್ನು **ನೂಡಿರಿ** ಎಂದಿದ್ದಾರೆ ದಾಸರಾಯರು. ಭ್ರಾಮಕ ತ್ರಯಗಳೆಂಬ ಮಾರಿಯು ವಶವಾಗದೇ. ಸಕಲಜಗತ್ತಿಗೂ ಆಧಾರಭೂತನೂ ಆಶ್ರಯದಾತನೂ ಆದ ಆ ಸರ್ವೇಶ್ವರನನ್ನು ಸಕಲ ಕಾಲ, ದೇಶ, ಅವಸ್ಥಾದಿಗಳಲ್ಲಿ ಅಹಂಕರ್ತೃತ್ವಾಭಿಮಾನವನ್ನು ಬಿಟ್ಟು, ಸಕಲಕ್ಕೂ ಶ್ರೀಹರಿಯೇ ಕರ್ತನೂ ಪ್ರೇರಕನೂ ಅಹುದೆಂದು ತಿಳಿದು ಮನಸಾ ಅವನ ಗುಣ ಮಹಿಮಾದಿಗಳನ್ನು ಚಿಂತಿಸುತ್ತಿರಲೆಂದು ಬಾಳಿನಲ್ಲಿ ಸದಾ ಎಡವಿ ಮುಗ್ಗರಿಸುತ್ತಿರುವ ಜೀವನಿಗೆ ಜಾಗ್ರತೆಯ ವಚನಗಳನ್ನಾಡಿದ್ದಾರೆ. ॥೨೯॥

## ಪದ್ಯ-೩೦

**ಮೂಲ :-**

**ಕರಣ ಕರ್ಮವ ಮಾಡಿದರೆ ವಿ ।**
**ಸ್ಮರಣೆ ಕಾಲದಿ ಮಾತುಗಳಿಗು ।**
**ತ್ತರವ ಕೊಡದೆ ಸುಮ್ಮನಿಪ್ಪನು ಜಾಗರಾವಸ್ಥೆ ॥**
**ಕರುಣಿಸಲು ವ್ಯಾಪಾರ ಮಾಡುವ ।**
**ಬರಲು ನಾಲ್ಕಾವಸ್ಥೆಗಳು ಪರಿ ।**
**ಹರಿಸಿಕೊಳನೇತಕೆ ಸ್ವತಂತ್ರನು ತಾನೆ ಎಂಬುವನು ॥ ॥೩೦॥**

**ಅವತರಣಿಕೆ :–**

ಸರ್ವೇಂದ್ರಿಯಗಳ ವ್ಯಾಪಾರಕ್ಕೆ ಜೀವನು ಸ್ವತಂತ್ರನಲ್ಲ. ಸಕಲ ಕ್ರಿಯೆಗಳಿಗೂ ಶ್ರೀಪರಮಾತ್ಮನೇ ಪ್ರೇರಕನೆಂದು, ಅನುಭವಸಿದ್ಧವಾದ ವಿಷಯಗಳಿಂದ ತಿಳಿಸುತ್ತಾರೆ.

**ಪ್ರತಿಪದಾರ್ಥ :–**

**ಕರಣ** = ಏಕಾದಶೇಂದ್ರಿಯಗಳ ದ್ವಾರಾ, **ಕರ್ಮವ ಮಾಡಿದರೆ** = ಜೀವನೇ ಸ್ವತಂತ್ರನಾಗಿ ಕ್ರಿಯೆಗಳನ್ನು ಮಾಡುವ ಪಕ್ಷದಲ್ಲಿ, **ವಿಸ್ಮರಣೆ ಕಾಲದಿ** = ಸ್ಮರಣೆ ತಪ್ಪಿರುವಾಗ, ಮತ್ತು ನಿದ್ರಾವಸ್ಥೆಯಲ್ಲಿ, **ಮಾತುಗಳಿಗೆ** = ಅವನಿಗೆ ಹೇಳಿದ ಮಾತುಗಳಿಗೆ **ಉತ್ತರ ಕೊಡದೆ** = ಪ್ರತ್ಯುತ್ತರಿಸದೆ, **ಸುಮ್ಮನಿಪ್ಪನು** = ಸುಮ್ಮನಿರುತ್ತಾನೆ (ನಿಷ್ಕ್ರಿಯನಾಗಿರುತ್ತಾನೆ). **ಜಾಗರಾವಸ್ಥೆ** = ಎಚ್ಚರಿಕೆಯನ್ನು, **ಕರುಣಿಸಲು** = ಶ್ರೀಪರಮಾತ್ಮನು ಅನುಗ್ರಹಿಸಿದಾಗ, **ವ್ಯಾಪಾರ ಮಾಡುವ** = ಇಂದ್ರಿಯಗತ ಕ್ರಿಯೆಗಳನ್ನು ಮಾಡುವವನಾಗುತ್ತಾನೆ. **ಸ್ವತಂತ್ರ ತಾನೇ ಎಂಬು**

**ವನು** = ಎಲ್ಲವೂ ತನ್ನಿಂದಲೇ ಪಡೆಯುವುವು, ನಾನೇ ಸರ್ವಕ್ರಿಯೆಗಳಿಗೂ ಸ್ವತಂತ್ರನೆಂಬ ಮಾನವನು, **ನಾಲ್ಕು ಅವಸ್ಥೆಗಳು** = ಜಾಗ್ರತೆ, ಸ್ವಪ್ನ, ಸುಷುಪ್ತಿ, ಮೂರ್ಛಾ ಎಂಬ ನಾಲ್ಕು ಪ್ರಕಾರವಾದ ಅವಸ್ಥೆಗಳು **ಬರಲು** = ಒದಗಲು, **ಏತಕೆ ಪರಿಹರಿಸಿಕೊಳನು** = ಏತಕ್ಕೆ ಪರಿಹಾರಮಾಡಿ ಕೊಳ್ಳಲು ಆಗುವುದಿಲ್ಲ ? ॥೩೦॥

## ವ್ಯಾಖ್ಯಾನಗಳು

### ೧. ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ

ಏಕಾದಶೇಂದ್ರಿಯಗಳ ದ್ವಾರಾ ಪರಮಾತ್ಮನ ವ್ಯತಿರಿಕ್ತ ಜೀವನೇನೇ ಆಯಾ ಇಂದ್ರಿಯಜನ್ಯ ಕಾರ್ಯರೂಪವಾದ ನೋಡೋಣ, ಕೇಳೋಣ ಮೊದಲಾದ ಕಾರ್ಯಗಳ ಮಾಡೋಣ ಒಬ್ಬನೇ ಆದರೆ, ದೇಹದಲ್ಲಿ ಸ್ಮರಣೆ ಇಲ್ಲದ ಕಾಲವಾದ ನಿದ್ರಾಕಾಲದಲ್ಲಿ ತನ್ನನ್ನು ಕುರಿತು, ಕೇಳಿದ ಮಾತುಗಳಿಗೆ ಪ್ರತ್ಯುತ್ತರ ಕೊಡದೇನೆ ಸುಮ್ಮನೆ ಇರೋವನಾಗತಾನೆ. ಶ್ರೀ ಪರಮಾತ್ಮನು, ನಿದ್ರಾಹೋಗಿ ಜಾಗ್ರದವಸ್ಥೆಯಾದ ಎಚ್ಚರಿಕೆ ಅವಸ್ಥಾ ಪ್ರಾಪ್ತವಾಗುವಂತೆ ಕರುಣಾ ಮಾಡಿದರೆ, ಇಂದ್ರಿಯಜನಿತ ವ್ಯಾಪಾರರೂಪವಾದ ಕರ್ಮಗಳ ಮಾಡುವ, ಕೇಳಿದ್ದಕ್ಕೆ ಪ್ರತ್ಯುತ್ತರ ಕೊಡುವ. ಪರಮಾತ್ಮನೋಪಾದಿಯಲ್ಲಿ ಜೀವನೂನೂ ಸ್ವಾಧೀನ ಸ್ವತಂತ್ರನಾದಿಯಲ್ಲಿ, ಹಾಂಗೆ ಸ್ವಾಧೀನ ಸ್ವತಂತ್ರ ತಾನೇ ಎನತಕ್ಕ ಪುರುಷನು ಜಾಗ್ರತಿ, ಸ್ವಪ್ನ, ಸುಷುಪ್ತಿ, ಮೂರ್ಛಾ ಎನತಕ್ಕ-ನಾಲ್ಕು ಅವಸ್ಥೆಗಳು ಬರಲು, ಈ ನಾಲ್ಕು ಅವಸ್ಥೆಗಳು ಬಾರದಂತೆ ಯನ್ನಿಮಿತ್ತವಾಗಿ, ಏಕೆ ಪರಿಹಾರ ಮಾಡಿಕೊಂಬೋದಿಲ್ಲ ? ತಾತ್ಪರ್ಯ–ಸರ್ವೇಂದ್ರಿಯವ್ಯಾಪಾರಕ್ಕೆ ಜೀವನು ಸ್ವತಂತ್ರನಲ್ಲ. ಶ್ರೀ ಪರಮಾತ್ಮ ಇಂದ್ರಿಯಾಂತರ್ಗತವಾಗಿ ಇದ್ದು, ಇಂದ್ರಿಯಗಳ ದ್ವಾರಾ ಜೀವಗೆ ನಿಯಮನ ಮಾಡಿದರೆ, ತದ್ದ್ವಾರಾ ಇಂದ್ರಿಯ ವ್ಯಾಪಾರ. ತದ್ವ್ಯತಿರಿಕ್ತ ಇಂದ್ರಿಯ ಗಳಿಗೆ ವ್ಯಾಪಾರವಿಲ್ಲ-ಎಂಬುದು ಪೂರ್ವೋಕ್ತ ಪ್ರತ್ಯಕ್ಷ ದೃಷ್ಟಾಂತವೇ ಸಾಕ್ಷಿ

ಇದರಿಂದ ಪರಮಾತ್ಮ ಸರ್ವಸ್ವತಂತ್ರ, ಜೀವರು ಅವನ ಅಧೀನಸ್ವತಂತ್ರ ರೆಂದು ತಿಳಿದು, ಸರ್ವದಾ ಭಗವದುಪಾಸನೆ ಮಾಡಬೇಕಂತ ತಾತ್ಪರ್ಯ. ॥೩೦॥

## ೨. ಭಾವಪ್ರಕಾಶಿಕೆ :–

ಇಂದ್ರಿಯಗಳೇ ಸ್ವತಂತ್ರವಾಗಿ ಕರ್ಮಗಳನ್ನು ಮಾಡುವುದಾದರೆ, ನಿದ್ರೆ ಮಾಡುತ್ತಿರುವಾಗಲೂ ಕಣ್ಣು, ಕಿವಿ, ಮೊದಲಾದ ಇಂದ್ರಿಯಗಳು ಇದ್ದೇ ಇರುವುವಷ್ಟೆ. ಆ ಸಮಯದಲ್ಲಿ ಯಾರಾದರೂ ಏನಾದರೂ ಕೇಳಿದರೆ, ನಿದ್ರೆ ಮಾಡುತ್ತಿರುವವನ ಕಿವಿಗಳೇಕೆ ಕೇಳವು ? ಬಾಯಿಯೂ ಉತ್ತರವನ್ನೇಕೆ ಕೊಡಲೊಲ್ಲದು ? ಎಚ್ಚರವಾಗಿದ್ದಾಗ ಮಾತ್ರ ಪ್ರಶ್ನೋತ್ತರಾದಿಗಳು ನಡಿಯುತ್ತವೆ. ಆದ್ದರಿಂದ ಸ್ವತಂತ್ರಶಕ್ತಿಯು ಇಂದ್ರಿಯಗಳಿಗಿಲ್ಲವೆಂದು ಹೇಳಿದಂತಾಯಿತು. ಸ್ವತಂತ್ರನು ತಾನೇ ಆಗಿದ್ದರೆ,ತನ್ನನ್ನು ಮೀರಿ ಬರುವ ನಿದ್ರೆಯನ್ನಾಗಲೀ, ನಿದ್ರೆ ಮಾಡುತ್ತಿರುವಾಗ ತಾನಾಗಿ ಎಚ್ಚರವಾಗುವುದೇ ಆಗಲಿ, ಮೂರ್ಛೆ ಬರುವುದು, ಸ್ವಪ್ನ ಬೀಳುವುದು ಇವೇ ಮೊದಲಾದವು ಗಳನ್ನು ತನ್ನಿಚ್ಛೆಯಿಂದ ತಾನೇಕೆ ಬಿಡಿಸಿಕೊಳ್ಳಬಾರದು ? ಅಂದರೆ, ನಮಗೆ ಬೇಕಾದಾಗ ನಿದ್ರೆಯು ಬರಲಿ ! ನಮ್ಮನ್ನರಿಯದೇ ನಿದ್ರೆಯು ಬರುವುದೇಕೆ ? ನಾವೇ ಸ್ವತಂತ್ರರಾದ ಮೇಲೆ ನಮ್ಮ ಇಚ್ಛೆಗೆ ಬಂದಾಗ ನಾವು ಏಳಬೇಕಲ್ಲದೆ,ನಮ್ಮನ್ನರಿಯದೇ ತಾನಾಗಿ ಎಚ್ಚರವೇಕೆ ಆಗಬೇಕು ? ನಮಗೆ ಬೇಕಾದರೆ ಸ್ವಪ್ನ ಬೀಳಲಿ, ತಾನಾಗಿ ಸ್ವಪ್ನವೇಕೆ ಬೀಳಬೇಕು ? ನಮಗಿಷ್ಟವಿಲ್ಲದ ಮೂರ್ಛೆ ಮೊದಲಾದ ರೋಗಗಳು ನಮಗೆ ಬಾರದಂತೆ ನಾವೇಕೆ ಅವುಗಳನ್ನು ತಡೆಯಬಾರದು ? ಮೃತ್ಯುವಾದರೂ ನಮಗೇಕೇ ಬರಬೇಕು ? ಇವುಗಳೆಲ್ಲವೂ ನಮ್ಮ ಪರಾಧೀನತೆಯನ್ನು ಸ್ಪಷ್ಟಪಡಿಸು ವುವು. ಹೀಗಿದ್ದರೂ ನಾವೇ ಸ್ವತಂತ್ರಕರ್ತರು, ನಮ್ಮ ಇಂದ್ರಿಯಗಳೇ ಕರ್ಮಗಳನ್ನು ಮಾಡುತ್ತವೆ ಎಂದು ಹೇಳಿದರೆ, ಇದು ಭ್ರಾಂತಿಯಲ್ಲವೇ ? ಭ್ರಾಂತಿ-ಎಂದು ಸ್ವತಃಸಿದ್ಧವಾಯಿತೆಂದು ತಾತ್ಪರ್ಯ ॥೩೦॥

**೩. ಭಾವದರ್ಪಣ :–**

ಪೂರ್ವದ ಪದ್ಯಾರ್ಥವೇ ವಿವರ ಮಾಡುತ್ತಾರೆ. ಕರಣೇತಿ. ॥೩೦॥

**೪. ಶ್ರೀವ್ಯಾಸದಾಸ ಸಿದ್ಧಾಂತ ಕೌಮುದೀ :–**

ಉಕ್ತಂ ಯುಕ್ತ್ಯಾ ದೃಢಯತಿ–"ಕರಣ" ಇತಿ ॥"ನಾಲ್ಕು"–ಮೋಹೇನ ಸಹ ॥೩೦॥

**ಕನ್ನಡಾರ್ಥ**

ಹಿಂದಿನ ಪದ್ಯದಲ್ಲಿ ಹೇಳಿದುದನ್ನು ಯುಕ್ತಿಯಿಂದ ಸಮರ್ಥಿಸುತ್ತಾರೆ– "ಕರಣ" ಎಂಬ ಪದ್ಯದಿಂದ. ಜಾಗ್ರತ್–ಸ್ವಪ್ನ–ಸುಷುಪ್ತಿಗಳೆಂಬ ಮೂರು ಅವಸ್ಥೆಗಳು. ಮೋಹವೆಂಬುವದು ನಾಲ್ಕನೆಯ ಅವಸ್ಥೆ-ಎಂದು ಇಲ್ಲಿ ಅಭಿಪ್ರಾಯವನ್ನು ತಿಳಿಯಬೇಕು. ॥೩೦॥

**೫. ಶ್ರೀಗುರುಹೃದಯಪ್ರಕಾಶಿಕೆ**

ಮತ್ತೂ ಜೀವಾಸ್ವಾತಂತ್ರ್ಯವನ್ನು ತಿಳಿಸಿಕೊಡುತ್ತಾರೆ–ಕರಣ ಎಂದು. ಕರಣವೆಂಬುವ ವಾಕ್ಕು ಮೊದಲಾದ ಇಂದ್ರಿಯದ ಕಾರ್ಯ ನಡೆಸುವಾಗ ವಿಸ್ಮರಣೆ ಎಂಬ ಮನಸ್ಸು ಅನ್ಯತ್ರ ಇರುವಾಗಲೂ, ನಿದ್ರೆಯಲ್ಲಿಯೂ ಸಹ॰ ಮಾತಾಡಿದ್ದಕ್ಕೆ ಪ್ರತ್ಯುತ್ತರ ಕೊಡದೆ ಜೀವ ಇರುವುದು, ಜಾಗ್ರದಾವಸ್ಥೆಯನ್ನು ದೇವರು ಕೊಟ್ಟಾಗ ಮಾತ್ರ ಮೊದಲಾದ ಕಾರ್ಯ ನಡೆಸುವುದು ಸಹ ಅನುಭವ ಇದ್ದಾಗ್ಯೂ, ಜೀವನೇ ಸ್ವತಂತ್ರಕರ್ತನೆಂಬ ಮನುಷ್ಯನು ಜಾಗ್ರತ್ ಸ್ವಪ್ನ ಸುಷುಪ್ತಿ ಮೂರ್ಛೆ ಎಂಬ ನಾಲ್ಕು ಅವಸ್ಥೆಗಳನ್ನು ಏಕೆ ಪರಿಹರಿಸಿಕೊಳ್ಳಬಾರದು ? ಆದ್ದರಿಂದ ಜೀವರು ಅಸ್ವತಂತ್ರರೆಂಬುದೇ ಸಿದ್ಧ. ॥೩೦॥

## ಸರ್ವವ್ಯಾಖ್ಯಾನಸಾರಸಂಗ್ರಹ

ಈ ಜ್ಞಾನೇಂದ್ರಿಯಗಳು ಜಡಗಳು. ಅವುಗಳಿಗೆ ಸ್ವತಃ ಏವ ಪ್ರವೃತ್ತಿ ಶಕ್ತಿ ಇಲ್ಲ. ಇಂದ್ರಿಯಾಭಿಮಾನಿದೇವತೆಗಳ ದ್ವಾರಾ, ಬಿಂಬರೂಪಿಯಾದ ಜಗದಾಂಬರಮಣನು ವಾಯ್ವಂತರ್ಗತನಾಗಿದ್ದು, ದೇಹಗತ ಇಂದ್ರಿಯಗಳಲ್ಲಿ ಪ್ರಕಾಶವ್ಯೋವ್ಯಾಪ್ತನಾದ ಜೀವನ ಅನುಭವಕ್ಕೆ ತಂದೀಯುವನು.

ಕ್ರಿಯಾರೂಪವಾದ ವ್ಯಾಪಾರಗಳು ಶರೀರಗತ ಪಂಚ ಕರ್ಮೇಂದ್ರಿಯ ಮೂಲಕ ನಡೆಯುತ್ತಿರುವುವು. ಈ ಇಂದ್ರಿಯಗಳೂ ಸಹ ಶ್ರೀಶನ ಪ್ರೇರಣೆಯಿಲ್ಲದೆ ಕಾರ್ಯನಿರ್ವಹಣೆ ಮಾಡಲಾರವು. ಕರಣಗಳು, ಅವೇ ಸ್ವತಂತ್ರವಾಗಿ ಕೆಲಸ ಮಾಡಲು ಸಮರ್ಥವಾಗಿದಿದ್ದರೆ. ಜೀವನು ನಿದ್ರೆ ಮಾಡುತ್ತಿರುವಾಗ, ಅಥವಾ ಮೂರ್ಛಾವಸ್ಥೆಯಲ್ಲಿರುವಾಗ, ಅದೇ ಇಂದ್ರಿಯಗಳು ಇದ್ದರೂ ಸಹ, ನಿಷ್ಕ್ರಿಯವಾಗಿರುವುವು. ಏಕೆ ?-ಎಂದು ಪ್ರಶ್ನಿಸುತ್ತಾರೆ-ದಾಸರಾಯರು. ಆ ಕಾಲದಲ್ಲಿ ಜೀವನು ಮಾತನಾಡಲಾರ. ಕೇಳುವ ಶಬ್ದವನ್ನು ಅರ್ಥಮಾಡಿಕೊಳ್ಳಲಾರ, ಯಾವ ಉತ್ತರವನ್ನೂ ಕೊಡದೆ ಸುಮ್ಮನಿರುವನು.

ಇದರಿಂದ ಜೀವನು ಅಸ್ವತಂತ್ರನು. ಪರರ ಸಹಾಯವಿಲ್ಲದೇ ತಾನೇ ತಾನಾಗಿ ಕ್ರಿಯಾಭಿವ್ಯಕ್ತಿ ಮಾಡಲಾರ. ಎಚ್ಚರಿಕೆ, ಸ್ವಪ್ನಾವಸ್ಥೆ, ಗಾಢ ನಿದ್ರಾವಸ್ಥೆ ಇತ್ಯಾದಿ ಅವಸ್ಥಾವಿಶೇಷಗಳನ್ನು ತಾನೇ ಸ್ವತಂತ್ರವಾಗಿ ಹೊಂದಲಾರ.

ಅವಸ್ಥೆಗಳು ನಾಲ್ಕು ವಿಧ :- ಜಾಗ್ರತಾವಸ್ಥೆ (ಎಚ್ಚರಿಕೆಯ ಸ್ಥಿತಿ), ಸ್ವಪ್ನಾವಸ್ಥೆ (ಕನಸಿನಸ್ಥಿತಿ), ಸುಷುಪ್ತ್ಯವಸ್ಥೆ (ಗಾಢನಿದ್ರೆ), ಮತ್ತು ಮೂರ್ಛಾ-(ಜ್ಞಾನ ತಪ್ಪುವುದು). ಜೀವನು ಸರ್ವತಂತ್ರ ಸ್ವತಂತ್ರನಾಗಿದ್ದರೆ, ಪೂರ್ವೋಕ್ತ ನಾಲ್ಕು ಅವಸ್ಥೆಗಳು ಪ್ರಾಪ್ತವಾದಾಗ, ತಜ್ಜನಿತ ಪ್ರಭಾವಗಳನ್ನು ಏಕೆ ಪರಿಹರಿಸಿಕೊಳ್ಳಲಾರ- ಎಂದು ಸವಾಲು ಹಾಕುತ್ತಾರೆ. ॥೩೦॥

## ಪದ್ಯ–೩೧

**ಮೂಲ :–**

**ಯುಕ್ತಿ ಮಾತುಗಳಲ್ಲ ಶ್ರುತಿಸ್ಮೃ ।**
**ತ್ಯುಕ್ತ ಮಾತುಗಳಿವು ವಿಚಾರಿಸೆ ।**
**ಮುಕ್ತಿಗಿವು ಸೋಪಾನವೆನಿಸುವುವು ಪ್ರತಿ ಪ್ರತಿ ಪದವು ॥**
**ಭಕ್ತಿಪೂರ್ವಕ ಪಠಿಸುವವರಿಗೆ ।**
**ವ್ಯಕ್ತಿ ಕೊಡುವ ಸ್ವರೂಪ ಸುಖ ಪ್ರವಿ ।**
**ವಿಕ್ತರನೆ ಮಾಡುವನು ಭವಭಯದಿಂದ ಬಹು ರೂಪ ॥ ॥೩೧॥**

**ಅವತರಣಿಕೆ :–**

ಪ್ರಸಕ್ತ ಗ್ರಂಥವು ಮುಕ್ತಿ ಹೇತುವೆಂದು ಹೇಳುತ್ತಾರೆ. ॥೩೧॥

**ಪ್ರತಿಪದಾರ್ಥ :–**

**ಯುಕ್ತಿ ಮಾತುಗಳಲ್ಲ** = ಪ್ರಸಕ್ತಗ್ರಂಥಸ್ಥ ವಿಷಯಗಳು ಕೇವಲ ಶುಷ್ಕವಾದ ಯುಕ್ತಿ ವಚನಗಳಲ್ಲ. **ಶ್ರುತಿ** = ಅಪೌರುಷೇಯು ವಾದ ವೇದಗಳು. **ಸ್ಮೃತಿ** = ವೇದಾರ್ಥ ಪ್ರತಿಪಾದಕವಾದ, ವೇದಾನು ಸಾರಿಯಾದ ಶ್ರೀಬಾದರಾಯಣರಿಂದ ಕೃತ ಪುರಾಣ, ಇತಿಹಾಸ, ಬ್ರಹ್ಮ ಸೂತ್ರಗಳೆಂಬ ಸ್ಮೃತಿಗಳು. **ಮಾತುಗಳಿವು** = ಇವುಗಳಲ್ಲಿ ಹೇಳಿದ ವಚನಗಳೇ ಹೊರತು, ಅವಕ್ಕೆ ವಿರುದ್ಧವಾದ ಮಾತುಗಳೊಂದೂ ಈ ಗ್ರಂಥ ದಲ್ಲಿಲ್ಲ. **ಇವು** = ಈ ಗ್ರಂಥಪ್ರತಿಪಾದಿತವಾದ ವಚನಗಳೆಲ್ಲವೂ, **ವಿಚಾರಿಸಿ** = ಸಚ್ಛಾಸ್ತ್ರಗಳ ದೃಷ್ಟಿಯಿಂದ ವಿಮರ್ಶಿಸಲಾಗಿ, **ಮುಕ್ತಿಗೆ** = ಮೋಕ್ಷವನ್ನು ಹೊಂದಲು, **ಸೋಪಾನವೆನಿಪುವು** = ಮೆಟ್ಟಿಲು ಗಳಂತಿವೆ. **ಪ್ರತಿ ಪ್ರತಿ ಪದವು** = ಪ್ರಸಕ್ತ ಗ್ರಂಥಗತ ಪ್ರತಿ ಪದ್ಯವೂ.

**ಭಕ್ತಿಪೂರ್ವಕ** = ಶ್ರದ್ಧಾ ಭಕ್ತಿಗಳಿಂದ, **ಪಠಿಸುವವರಿಗೆ** = ಗ್ರಂಥಸ್ಥ ಮರ್ಮವನ್ನರಿತು, ಅಧ್ಯಯನ ಮಾಡುವವರಿಗೆ, **ಬಹುರೂಪ** = ಅನೇಕ ರೂಪಗಳಿಂದ ವಿರಾಜಮಾನನಾಗಿರುವ ಶ್ರೀಪರಮಾತ್ಮನು, **ಭವಭಯದಿಂದ** = ಜನನಮರಣಾಖ್ಯವಾದ ಈ ಸಂಸಾರವೆಂಬ ಭಯದಿಂದ, **ಪ್ರವಿವಿಕ್ತರನೆ ಮಾಡುವನು** = ಅವರನ್ನು ಅಹಂ ಮಮಕಾರಾದಿಗಳಿಂದ ನಿರ್ಲಿಪ್ತರನ್ನಾಗಿಸಿ, ನಿಸ್ಪೃಹರನ್ನಾಗಿ ಮಾಡಿ, ಸಾಧನೆ ಪೂರ್ಣ ಮಾಡಿಸಿ, **ಸ್ವರೂಪಸುಖ** = ತದ್ವಾರಾ ಲಿಂಗಭಂಗಾನಂತರ, ಸ್ವರೂಪಗತ ಮುಕ್ತಿಯ ಆನಂದವನ್ನು, **ವ್ಯಕ್ತಿ ಕೊಡುವ** = ಅಭಿವ್ಯಕ್ತಿ ಮಾಡಿ, ಭೋಗಕ್ಕೆ ಕೊಡುವವನಾಗುತ್ತಾನೆ. ॥೩೧॥

# ವ್ಯಾಖ್ಯಾನಗಳು

## ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಈ ಗ್ರಂಥದಲ್ಲಿ ಹೇಳತಕ್ಕ ವಿಚಾರದಿಂದ ಅನುಷ್ಠಾನ ಮಾಡಿದವ ಮುಕ್ತನಾಗತಾನೆ ಎಂತ ಹೇಳತಾರೆ.

ವೇದ,ಪುರಾಣ ಇವುಗಳಿಗೆ ವಿರುದ್ಧವಾಗಿ, ಬರೇ ಶುಷ್ಕ ಯುಕ್ತಿಗಳಿಂದ ಆಡಿದ ಮಾತುಗಳಲ್ಲ. ಅಂದರೆ, ತರ್ಕಯುಕ್ತಿಯೋಪಾದಿಯಲ್ಲಿ ಆಡಿದ ಮಾತುಗಳಲ್ಲ, ಈ ಗ್ರಂಥಗತ ಪದಗಳ ಮಾಡಿದ ನಾನು ಆಡಿದ ಮಾತುಗಳು ಯಾವತ್ತೂ ಅಪೌರುಷೇಯವಾದ ವೇದಗಳು, ಈ ವೇದಗಳಿಗೆ ಅನುಸರಿಸಿದ ವೇದಾರ್ಥಗಳಿಂದ ಯುಕ್ತವಾದ ಶ್ರೀಭಗವದಂಶಭೂತರಾದ ಶ್ರೀಬಾದರಾಯಣ ದೇವರಿಂದ ಕೃತವಾದ ಸ್ಮೃತಿ ಸಾಂಕೇತವಾದ ಪುರಾಣಗಳು, ಹಾಂಗೆ ಶ್ರೀಮಧ್ವಾಚಾರ್ಯಕೃತ ಸಚ್ಛಾಸ್ತ್ರಗಳು, ಈ ಶಾಸ್ತ್ರಗಳಲ್ಲಿ ಹೇಳಿದ ವಾಕ್ಯಗಳೇ ಹೊರ್ತು, ತದ್ವ್ಯತಿರಿಕ್ತವಾದ ಮಾತುಗಳು ಒಂದೂ ಇದರಲ್ಲಿ ಇಲ್ಲ. ಈ ಮಾತುಗಳು ಎಂಥಾವು- ಇದರಿಂದ ಆಗತಕ್ಕ ಫಲ ಎಂಥಾದ್ದು-ಎಂತ ಪ್ರತ್ಯಕ್ಷಾದಿಗಳಿಂದ ಜ್ಞಾನಿಗಳಾದವರು ವಿಚಾರ ಮಾಡಲು,

ಲಿಂಗದೇಹದಿಂವ ಮುಕ್ತನಾಗೋದಕ್ಕೆ, ನಂತರ ಪರಮಾತ್ಮನ ಶಾಶ್ವತ ಮಂದಿರವಾದ ಸತ್ಯಲೋಕದ ಮ್ಯಾಲೆ ಇರತಕ್ಕ ವೈಕುಂಠಲೋಕ ಸೇರೋದಕ್ಕೆ ಈ ಮಾತುಗಳು ಪಾವಟಿಗೆ ಎಂತ ಅನಿಸೋವಾಗತವೆ. ಊರ್ಧ್ವ ಭಾಗಗತ ವೈಕುಂಠಮಂದಿರ ಸೇರಬೇಕಾದರೆ, ಸೋಪಾನಮಾರ್ಗದಿಂದ ನಡೀಬೇಕೇ ಹೊರ್ತು, ಅನ್ಯ ಮಾರ್ಗವೇ ಇಲ್ಲ. ಸೋಪಾನ ಮಾರ್ಗದಲ್ಲಿ ಗಮನಕ್ರಿಯಾ ಎಂಬುದೇ ತದನುಷ್ಠಾನವು. ಈ ಪ್ರಕಾರ ಸೋಪಾನ ಎಂತ ಕರಸೋದಾಗತದೆ. ಈ ಗ್ರಂಥದ ಪ್ರತಿ ಪ್ರತೀ ಶ್ಲೋಕಗಳು ಮಾತುಗಳು, ಈ ಶ್ಲೋಕಗಳಲ್ಲಿ ಇರುವ ಗರ್ಭೀಭೂತವಾದ ಅರ್ಥಮರ್ಮವ ಅರಿತು, ತಾರತಮ್ಯ ಪಂಚಭೇದದಿಂದ ಸಹಿತವಾಗಿ, ಸರ್ವೋತ್ತಮನಾದ ಪರಮಾತ್ಮನಲ್ಲಿ ಅವಿಚ್ಛಿನ್ನವಾದ ಭಕ್ತಿ ಇಟ್ಟು, ಇಂಥಾ ಭಕ್ತಿಪೂರ್ವಕ ಅರ್ಥಾನುಸಂಧಾನದಿಂದ ಪಠನ ಮಾಡೋ ಅಧಿಕಾರಿಗಳಿಗೆ ದೇಹೇಂದ್ರಿಯಾದಿಗಳಲ್ಲಿ ಅನೇಕ ರೂಪಗಳಿಂದ ನಿಯಾಮಕನಾದ ಶ್ರೀಪರಮಾತ್ಮ ಸಂಸಾರಸಾಂಕೇತವಾದ ಅಹಂಮಮತಾದಿಗಳಿಂದ, ತಜ್ಜನ್ಯ ಜನನ ಮರಣದಿಂದ ಪ್ರಾಪ್ತವಾಗತಕ್ಕ ಭಯದಿಂದ ಪ್ರಕರ್ಷೇಣ ಅಹಂಮಮತಾದಿಗಳಿಂದ ಲಿಪ್ತನಾಗದಂತೆ ಮಾಡಿ, ನಿಸ್ಪೃಹನನ್ನಾಗಿ ಮಾಡುವನು ತದ್ದ್ವಾರಾ ಸಾಧನಿ ಪೂರ್ತಿ ಮಾಡಿಸಿ, ಲಿಂಗಭಂಗಾನಂತರ ಸ್ವರೂಪಸುಖ ವ್ಯಕ್ತಿಮಾಡಿ ಭೋಗಕ್ಕೆ ಕೊಡೋವನಾಗತಾನೆ. ॥೩೦॥

೨. ಭಾವಪ್ರಕಾಶಿಕೆ :–

ಈ ಸಂಧಿಯಲ್ಲಿ ಹೇಳಿರುವ ದತ್ತಸ್ವಾತಂತ್ರ್ಯ ವಿಷಯಗಳು, ವಿಷ್ಣು ದೀಕ್ಷೆಯ ಸ್ವೀಕಾರ, ಇವುಗಳನ್ನು ಸಂಬಂಧಿಸಿದ ಕೆಲವು ತತ್ತ್ವಗಳು ಇವಿಲ್ಲವೂ ಬರೇ ನಮ್ಮ ಯುಕ್ತಿಗಳಿಂದ ಊಹಿಸಿ ಹೇಳಿದ ಮಾತುಗಳಲ್ಲ. ಶ್ರುತಿಗಳಲ್ಲೂ, ವಿಷ್ಣುರಹಸ್ಯ ಮೊದಲಾದ ಸ್ಮೃತಿಗಳಲ್ಲೂ ಇರುವುದನ್ನೇ ತೆಗೆದು ಹೇಳಿರುವ ವಾಕ್ಯಗಳಿವು. ಈ ಗ್ರಂಥವನ್ನು ಆಮೂಲಾಗ್ರವಾಗಿ ವಿಚಾರಮಾಡಿ ನೋಡಿದರೆ, ಅವರಲ್ಲಿರುವ ಪ್ರತಿಯೊಂದು ಪದವೂ ಮುಕ್ತಿಸ್ಥಾನವೆಂಬ ವೈಕುಂಠಕ್ಕೆ ಹೋಗಲಿಕ್ಕೆ ಒಂದೊಂದು ಮೆಟ್ಟಿಲಾಗಿರುವುದು.

ದೇಹೇಂದ್ರಿಯಾದಿಗಳಲ್ಲಿ ವ್ಯಾಪ್ತನಾಗಿ ಬಹುರೂಪದಿಂದ ವಾಸಮಾಡು ತ್ತಿರುವ ಶ್ರೀ ಹರಿಯು ಈ ಗ್ರಂಥವನ್ನು ಶ್ರವಣ ಪಠನ ಮಾಡುವವರನ್ನು ಇಹದಲ್ಲಿ ಸಂಸಾರದಿಂದ ಬೇರ್ಪಡಿಸಿ, ಅವರಿಗೆ ಮುಕ್ತಿಯಲ್ಲಿ ಸ್ವರೂಪಾನಂದ ವನ್ನು ಅಭಿವ್ಯಕ್ತಿ ಮಾಡಿಕೊಡುವನು. ॥೩೦॥

೩. ಭಾವದರ್ಪಣ :-

ವೇದಶಾಸ್ತ್ರದಲ್ಲಿ ಹೇಳಿರುತ್ತದೆಂದೆನುತ್ತಾರೆ- ಯುಕ್ತ್ಯೇತಿ. ॥೩೦॥

೪. ಶ್ರೀವ್ಯಾಸದಾಸ ಸಿದ್ಧಾಂತ ಕೌಮುದೀ :-

ಉಕ್ತಸ್ಯ ನಿರ್ಮೂಲತ್ವ ಚೋದ್ಯಂ ನಿರಾಹ – "ಯುಕ್ತ್ಯೆ" ಇತಿ ॥ ಜ್ಯೋತಿರಾದಿದ್ಯಧಿಷ್ಠಾನ ಸೂತ್ರಂ ಪ್ರಾಣವತಾ ಇತಿ ಚ॥ "ಶ್ರೋತ್ರೇಣ ಶ್ರಾವಯತಿ" ಇತ್ಯಾದ್ಯೇಃ ॥೩೦॥

## ಕನ್ನಡಾರ್ಥ

"ಜ್ಯೋತಿರಾದ್ಯಧಿಷ್ಠಾನಮ್ ತದಾ ಮನನಾತ್" "ಪ್ರಾಣತಾ ಶಬ್ದಾತ್" ಎಂಬ ಸೂತ್ರಗಳಲ್ಲಿ – ಅಗ್ನಿ ಮುಂತಾದವುಗಳಿಗೆ ಪ್ರೇರಕನಾದ ಶ್ರೀಹರಿಯೇ ಚಕ್ಷುರಾದಿ ಇಂದ್ರಿಯಗಳಿಗೆ ಪ್ರೇರಕನು. "ಯಃ ಚಕ್ಷುಷಿ ತಿಷ್ಠನ್"- ಎಂಬ ಶ್ರುತಿಗಳಲ್ಲಿ ಹೀಗೆ ಹೇಳಲಾಗಿರುತ್ತದೆ. ಪರಮಾತ್ಮನು ತನ್ನ ಇಂದ್ರಿಯಗಳಿಂದ ಪರಾಧೀನಕರ್ತನಾದ ಜೀವನಿಂದ ದರ್ಶನ ಮುಂತಾದ ಕ್ರಿಯೆಗಳನ್ನು ಮಾಡಿಸುತ್ತಾನೆ. ಯಾಕೆಂದರೆ "ಏಷಹ್ಯೇವ" ಎಂದು ಶ್ರುತಿಯು ಹೀಗೇ ಹೇಳುತ್ತದೆ.'' ಎಂಬುದಾಗಿ ಪರಮಾತ್ಮನೇ ಸರ್ವೇಂದ್ರಿಯ ಪ್ರೇರಕನು. ಅವನು ತನ್ನ ಸ್ವರೂಪಭೂತವಾದ ಜ್ಞಾನವನ್ನು ತಾನೇ ಹುಟ್ಟಿಸಿಕೊಳ್ಳುತ್ತಾನೆ. ತನಗೆ ತಾನು ಜ್ಞೇಯನೆಂದು ತಿಳಿಯಬೇಕು. ಗೋಪಾಲದಾಸಾರ್ಯರು ತಮ್ಮ ಸುಳಾದಿಯಲ್ಲಿ ಭಗವಂತನನ್ನು ಹಾಗೆ ಸ್ತುತಿಸಿರುತ್ತಾರೆ.

ಪರಮಾತ್ಮನು "ತಾನೇ ತಿಳಿಯುವವನು, ಮತ್ತು ತಿಳಿಯಲ್ಪಡತಕ್ಕವನು" ಎಂದು ಹೇಳಿದಂತೆ ಆಗುತ್ತದೆ. ಇದು ವಿರುದ್ಧವಾದುದು. ಹೀಗೆ ಕರ್ತೃಕರ್ಮಭಾವ ವಿರೋಧವಾದಿಗಳ ಪೂರ್ವಪಕ್ಷವನ್ನು ನಿರಾಕರಿಸಲು ಮುಂದೆ – ಉತ್ತರದಲ್ಲಿ ಜ್ಞಾನ ಶಬ್ದವನ್ನು ಉಪಯೋಗಿಸಿರುತ್ತಾರೆ. ಜ್ಞಾನ ಕರ್ಮತ್ವ ಹಾಗೂ ಜ್ಞಾತೃತ್ವ, ಇವೆರಡೂ ಪರಮಾತ್ಮನೊಬ್ಬನಲ್ಲಿ ಸಂಮಿಳಿತವಾಗಿರುತ್ತವೆ. ಈ ವಿಷಯದಲ್ಲಿ ಪ್ರಮಾಣಗಳನ್ನು ತೋರಿಸುತ್ತಾರೆ.

"ತಾನೇ ತಿಳಿಯುವವನು, ತಾನೇ ಜ್ಞಾನರೂಪನು, ತಾನೇ ಜ್ಞಾನದಿಂದ ತಿಳಿಯಲ್ಪಡತಕ್ಕವನು." ಕೇಶವನು ಹೀಗೆ ಜ್ಞಾತೃ, ಜ್ಞಾನ, ಜ್ಞೇಯರೂಪನು. ಎರಡನೆಯವರನ್ನೂ ತಿಳಿಯುತ್ತಾನೆ. ಭಗವಂತನ ಪ್ರಸಾದದಿಂದ ಒಮ್ಮೊಮ್ಮೆ ಪರರೂ ಭಗವಂತನನ್ನು ತಿಳಿಯಬಹುದು. ಅವನ ಅನುಗ್ರಹವಿಲ್ಲದೇ ಯಾರೂ ಆ ಹರಿಯನ್ನು ತಿಳಿಯಲು ಶಕ್ತರಾಗುವುದಿಲ್ಲ. ಆದರೆ –ಪರಮಾತ್ಮನು- ತನ್ನ ಜ್ಞಾನದಲ್ಲಿಯಾಗಲೀ ಪರರ ಬಗ್ಗೆಯ ಜ್ಞಾನದಲ್ಲಿಯಾಗಲೀ, ಜೀವರಂತೆ, ಪರರನ್ನು ಅವಲಂಬಿಸುವುದಿಲ್ಲ" ಎಂದು ಹೇಳಲಾಗಿರುತ್ತದೆ.

೧೩ ನೆಯ ಅಧ್ಯಾಯ ಗೀತಾತ್ಪರ್ಯದಲ್ಲಿ ಜ್ಞಾನ – ಜ್ಞೇಯಗಳ ವಿಷಯವಾಗಿ ಹೀಗೆ ನಿರೂಪಿತವಾಗಿದೆ. ಆದುದರಿಂದ ಹಿಂದೆ ಹೇಳಿದುದೆಲ್ಲವೂ ಪ್ರಮಾಣಪ್ರಮಿತವೆಂಬುದಾಗಿ ಭಾವಿಸಬೇಕು. ॥೩೦॥

೫. ಶ್ರೀಗುರುಹೃದಯಪ್ರಕಾಶಿಕೆ :–

ಶಾಸ್ತ್ರಯುಕ್ತಿಯುಕ್ತವಾದ ಈ ಗ್ರಂಥ ಜ್ಞಾನಿಗಳಿಗೆ ಅತ್ಯಪೇಕ್ಷಣೀಯವೆಂದು ಎರಡು ಪದ್ಯಗಳಿಂದ ತಿಳಿಸುತ್ತಾರೆ- ಯುಕ್ತಿ ಎಂದು. ಕೇವಲ ಯುಕ್ತಿಯಿಂದ ಹೇಳಿದ ಮಾತುಗಳು ಈ ಕಾವ್ಯದಲ್ಲಿಲ್ಲ. ಶ್ರುತಿಸ್ಮೃತ್ಯುಕ್ತ ಮಾತುಗಳಿಂದ ಕೂಡಿದ ಈ ಗ್ರಂಥ ವಿಚಾರ ಮಾಡಿದರೆ, ಮೋಕ್ಷಪ್ರಾಪ್ತಿಗೆ ಸೋಪಾನದಂತೆ ಜ್ಞಾನಸಾಧಕವು ಪ್ರತಿಪದ್ಯಗಳು. ಈ ಗ್ರಂಥವನ್ನು ಭಕ್ತಿಪೂರ್ವಕವಾಗಿ ಪಠಿಸುವ ಸುಜನರಿಗೆ ಬಹುರೂಪನಾದ ದೇವರು ಭವ

ಭಯವೆಂಬ ಜನನ ಸಂಸಾರ ಭೀತಿಯಿಂದ ಪ್ರವಿವಿಕ್ತರನು ಮಾಡುವನು- ಎಂದರೆ, ಬಿಡುಗಡೆ ಹೊಂದಿದವರನ್ನು ಮಾಡಿ, ಸ್ವರೂಪದ ಸುಖವ್ಯಕ್ತಿ ಎಂಬ ಮುಕ್ತಿಯನ್ನು ಕೊಡುವನು. ॥೩೦॥

# ಸರ್ವವ್ಯಾಖ್ಯಾನಸಾರಸಂಗ್ರಹ

ಪ್ರಸಕ್ತ ಗ್ರಂಥಸ್ಥ ವಿಷಯಗಳು ಕೇವಲ ಊಹೆಯ ಮಾತುಗಳಲ್ಲ. ಯುಕ್ತಿಯುಕ್ತವಾದ ಶುಷ್ಕವಾದ ಶಬ್ದಗಳ ಸಮೂಹವಲ್ಲ. ಈ ಗ್ರಂಥದಲ್ಲಿ ಉಕ್ತವಾಗಿರುವ ಪ್ರತಿವಿಷಯವೂ ಅಪೌರುಷೇಯವಾದ ವೇದವಾಕ್ಯಗಳಿಂದ ಪ್ರಮಿತವಾಗಿದೆ. ವೇದಾನುಸಾರಿಯಾದ ಪುರಾಣ, ಇತಿಹಾಸಾದಿ ಸ್ಮೃತಿಸಾಕೇಂತವಾದ ಸಚ್ಛಾಸ್ತ್ರಗಳ ಪ್ರಮಾಣಗಳಿಂದ ಕೂಡಿವೆ. ಪ್ರತಿ ಪದ್ಯಗತವಿಷಯಗಳನ್ನು ಶ್ರುತಿ ಸ್ಮೃತಿ ವಾಕ್ಯಗಳ ಪ್ರಮಾಣಗಳೊಡನೆ ಸಹಕರಿಸಿ, ಅಧ್ಯಯನರೂಪವಾಗಿ ವಿವೇಚಿಸಿದರೆ, ಪ್ರತಿ ಪ್ರತಿ ಪದವೂ, ನಿತ್ಯಾನಂದರೂಪವಾದ ಮುಕ್ತಿಗೆ ಸಾಧನವು. ಮುಕ್ತಿಮಂದಿರವಾದ ವೈಕುಂಠಾದಿ ನಿತ್ಯಲೋಕಗಳಿಗೆ ಒಂದೊಂದು ಪದ್ಯವೂ ಒಂದೊಂದು ಮೆಟ್ಟಿಲಿನಂತಿದೆ. ಈ ಗ್ರಂಥಗತ ವಿಷಯಗಳ ಶ್ರವಣ, ಮನನ, ಅಧ್ಯಯನ, ಉಪದೇಶಾದಿಗಳಿಂದ ಮೋಕ್ಷ ಪ್ರಾಪ್ತಿಯು ನಿಸ್ಸಂದೇಹವಾಗಿ ಆಗುವುದು.

ಗ್ರಂಥಪ್ರತಿಪಾದ್ಯನಾದ ಗರುಡವಾಹನ ಶ್ರೀಲಕ್ಷ್ಮೀನರಸಿಂಹ ದೇವರು ಪದ್ಯಗಳನ್ನು ಅರ್ಥಪೂರ್ಣವಾಗಿ, ಉತ್ತಮ ಜ್ಞಾನಾನುಸಂಧಾನದಿಂದ, ನಿರ್ಮತ್ಸರಭಾವದಿಂದ, ಯಾರು ಪಠಿಸುವರೋ, ಅವರ ಸಂಸಾರ ಬಂಧನವನ್ನು ಕಳಚಿ, ಅನಾದಿಕರ್ಮ ವಿಮೋಚನೆಗೈದು, ಅವರ ಸ್ವರೂಪಗತ ಸುಖವನ್ನು ಅಭಿವ್ಯಕ್ತಮಾಡುವನು. ॥೩೦॥

## ಪದ್ಯ—೩೨

ಮೂಲ :–

> ಶ್ರೀನಿವಾಸನ ಸುಗುಣ ಮಣಿಗಳ ।
> ಪ್ರಾಣವಂತ ವಯುನಾಖ್ಯ ಸೂತ್ರದಿ ।
> ಪೋಣಿಸಿದ ಮಾಲಿಕೆಯು ವಾಙ್ಮಯಂಗೆ ಸಮರ್ಪಿಸಿದ ॥
> ಜ್ಞಾನಿಗಳ ದೃಗ್ವಿಷಯವಹುದ ।
> ಜ್ಞಾನಿಗಳಿಗೆ ಅಸಹ್ಯ ತೋರ್ಪದು ।
> ಮಾಣಿಕವ ಮರ್ಕಟನ ಕೈಯೊಳು ಕೊಟ್ಟ ತೆರನಂತೆ ॥
> ॥೩೨॥

ಅವತರಣಿಕೆ :–

ಶ್ರೀನಿವಾಸನ ಸುಗುಣಗಳನ್ನು ತಿಳಿಸುವ ಈ ಕಾವ್ಯವು ಜ್ಞಾನಿಗಳಿಗೆ ಶ್ಲಾಘ್ಯವಾಗಿದ್ದು, ಅಜ್ಞಾನಿಗಳಿಗೆ ಅಸಹ್ಯವಾಗಿ ತೋರುವುದು–ಎಂದು ತಿಳಿಸುತ್ತಾರೆ. ॥೩೨॥

ಪ್ರತಿಪದಾರ್ಥ :–

**ಪ್ರಾಣವಂತ** = ಜೀವೋತ್ತಮರಾದ ಶ್ರೀಮುಖ್ಯಪ್ರಾಣದೇವರ ಅವತಾರರಾದ ಶ್ರೀ ಮನ್ಮಧ್ವಮುನಿವರರಿಂದ ಪ್ರಚುರವಾದ **ಶ್ರೀನಿವಾಸನ** = ಶ್ರೀಧರನಾದ ಶ್ರೀ ಪರಮಾತ್ಮನ, **ಸುಗುಣ ಮಣಿಗಳ** = ಸರ್ವೋತ್ಕೃಷ್ಟವಾದ ಗುಣಗಳೆಂಬ ಮಣಿಗಳನ್ನು, **ವಯುನಾಖ್ಯ ಸೂತ್ರದಿ** = ಪ್ರಾಣದೇವರೆಂಬ ಸೂತ್ರದಿಂದ (ದಾರದಿಂದ) **ಪೋಣಿಸಿದ** = ಪೋಣಿಸಿದ (ಕಟ್ಟಲ್ಪಟ್ಟ), **ಮಾಲಿಕೆಯು** = ಗುಣರತ್ನಾಖ್ಯಹಾರವನ್ನು, **ವಾಙ್ಮ**

**ಯಂಗೆ** = ವಾಗಂತರ್ಗತನಾದ ಶ್ರೀ ಹರಿಗೆ, **ಸಮರ್ಪಿಸಿದ** = ಸಮರ್ಪಣೆ ಮಾಡಿದ, **ಜ್ಞಾನಿಗಳ** = ಜ್ಞಾನಿಗಳಾದ ಭಗವದ್ಭಕ್ತರ, **ದೃಕ್ ವಿಷಯವಹುದು** = ಜ್ಞಾನದೃಷ್ಟಿಗೆ ಉತ್ತಮ ವಿಷಯವೆಂದು ತೋರುವುದು. **ಮಾಣಿಕವ** = ಅನರ್ಘ್ಯವಾದ ರತ್ನವನ್ನು **ಮರ್ಕಟನ** = ಕೋತಿಯ, **ಕೈಯೊಳು ಕೊಟ್ಟ ತೆರನಂತೆ** = ಕೈಯಲ್ಲಿ ಕೊಟ್ಟಂತೆ, **ಅಜ್ಞಾನಿಗಳಿಗೆ** = ಭಗವನ್ಮಹಿಮಾ ತಿಳಿಯದ ಜ್ಞಾನಶೂನ್ಯರಿಗೆ, **ಅಸಹ್ಯ ತೋರ್ಪುದು** = ಅಸಹ್ಯವಾಗಿ ತೋರಿ, ತ್ಯಾಗಮಾಡುವರು. ॥೩೨॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ :-

ಈ ಕಾವ್ಯ ಎಂಬುದು ಜ್ಞಾನಿಗಳಿಗೆ ಸಹ್ಯವಾಗಿನ್ನು, ಅಜ್ಞಾನಿಗಳಿಗೆ ಅಸಹ್ಯವಾಗಿನ್ನು ತೋರತದೆ. ಎಂದರೆ ಜ್ಞಾನಿಗಳಿಗೆ ಶ್ಲಾಘ್ಯ, ಅಜ್ಞಾನಿಗಳಿಗೆ ಅಶ್ಲಾಘ್ಯ-ಎಂತ ಹೇಳತಾರೆ.

ಜೀವೋತ್ತಮರಾದ ವಾಯುದೇವರ ಅವತಾರರಾದ ಮಧ್ವಾಚಾರ್ಯರಿಂದ ಶ್ರೀಹರಿ ಸರ್ವೋತ್ತಮನೆಂದು ಪ್ರಚುರವಾದ ಶ್ರೀ ದೇವೇರನ್ನ ತನ್ನ ವಕ್ಷಸ್ಥಳದಲ್ಲಿ ನಿವಾಸಿಯಾಗುಳ್ಳ ಗುಣಪೂರ್ಣನಾದ ಪರಮಾತ್ಮನ ಸರ್ವೋತ್ಕೃಷ್ಟವಾದ ಮಂಗಳಕರವಾದ ಗುಣಗಳೆಂಬ, ಶ್ರೀಮಧ್ವಾಚಾರ್ಯರಿಂದ ಕೃತವಾದ ಸಚ್ಛಾಸ್ತ್ರವೆಂಬ ಸಮುದ್ರದಲ್ಲಿ ವಿದ್ಯಮಾನಗಳಾದ್ದರನ್ನ ವಾಕ್ ಜಾಲಗಳಿಂದ ಹೊರಗೆ ತೆಗೆದು ಮಣಿಗಳ ಒಳಗೆ ಸರ್ವೋತ್ತಮ ಅವಕಾಶವತ್ ನಿರ್ಲಿಪ್ತನೆಂಬ ಛಿದ್ರಾವಕಾಶವನ್ನ ಮಾಡಿ, ಪ್ರಾಣದೇವರೆಂಬ ಸೂತ್ರದಿಂದ, ಈ ಪ್ರಕಾರದಿಂದ ಪೋಣಿಸಿದ ಗುಣರತ್ನಾಖ್ಯ ಮಾಲಾವನ್ನ ವಾಕ್ಯದಲ್ಲಿ ನಿಂತು ವಾಕ್ಯಗಳ ನುಡಿಸಿದ, ವಾಗ್ವಂತರ್ಗತ ವಾಙ್ಮಯನಾಮಕ ಪರಮಾತ್ಮಗೆ ಸಮರ್ಪಣೆ ಮಾಡಿದ ಈ ಗ್ರಂಥಾಖ್ಯಮಾಲಾ ಭಗವದ್ಭಕ್ತರಾದ ಜ್ಞಾನ ಚಕ್ಷುಉಳ್ಳವರ ದೃಷ್ಟಿಗೆ ಮಹಾಶ್ರೇಷ್ಠ ಎಂತ ತೋರೋವಾಗತದೆ. ಕೋತಿ

ಹಸ್ತದಲ್ಲಿ ಕೊಡಲ್ಪಟ್ಟ ಮಾಣಿಕ್ಯವನ್ನು ಇದರ ಮರ್ಮವನ್ನು ಅರಿಯದೆ ಕಟ್ಟಿ ತಿಂಬೋವಕ್ಕೆ ಸಾಧ್ಯವಾಗೋದೆ ಎಂದರೆ ಅಸಾಧ್ಯವೆಂತ ತಾತ್ಪರ್ಯ. ಮಾಣಿಕ್ಯ ಮರ್ಕಟದೋಪಾದಿಯಲ್ಲಿ ಭಗವನ್ಮಹಿಮಾ ತಿಳಿಯದ ಮರ್ಕಟ ಸದೃಶರಾದ ಜ್ಞಾನಶೂನ್ಯರಿಗೆ, ಮಾಣಿಕ್ಯಸದೃಶವಾದ ಈ ಗ್ರಂಥ ಅನುಷ್ಠಾನಕ್ಕೆ ತಂದು ಭೋಗಮಾಡೋದಕ್ಕೆ ಯೋಗ್ಯತಾ ಸಾಲದೆ ಅಸಹ್ಯ ತೋರಿ, ತ್ಯಾಗ ಮಾಡೋವರಾಗತಾರೆ. ಈ ಗ್ರಂಥ ಜ್ಞಾನಿಗಳಿಗೆ ಸಾಧ್ಯ, ಅಜ್ಞಾನಿಗಳಿಗೆ ಅಸಾಧ್ಯವೆಂತ ತಾತ್ಪರ್ಯ.

**ವಿಶೇಷಾರ್ಥ :–** ವಯುನಾಖ್ಯಸೂತ್ರದಿ **ಪೋಣಿಸಿ** ಅರ್ಪಿತ–ಎಂದರೆ, ಭಾರತೀರಮಣಮುಖ್ಯಪ್ರಾಣಾಂತರ್ಗತ ಶ್ರೀಪರಮಾತ್ಮಗೆ ಅರ್ಪಣೆ ಮಾಡಿದ್ದೇವು– ಎಂತ ಗ್ರಂಥಕರ್ತೃಗಳ ತಾತ್ಪರ್ಯ. ಶ್ರೀ ವಾಯುದೇವರ ಅವತಾರರಾದ ಶ್ರೀಮಧ್ವಾಚಾರ್ಯರಿಂದ ರಚಿಸಲ್ಪಟ್ಟ ಸಚ್ಛಾಸ್ತ್ರವೆಂಬ ಸಮುದ್ರದಿಂದ ತೆಗಿಯಲ್ಪಟ್ಟ ಮಾಣಿಕ್ಯಸದೃಶವಾದ ಪದಗಳೆಂಬ ಮಣಿಗಳು, ವಾಯುಪ್ರಚುರವಾದಂಥ ಸೂತ್ರದಲ್ಲಿ ಪೋಣಿಸಿದ ಗುಣರತ್ನಾಖ್ಯ ಮಾಲಾವನ್ನ ಸರ್ವಶಬ್ದವಾಚ್ಯನಾದ ಪರಮಾತ್ಮನು ನುಡಿಸಿದ ವಾಙ್ಮಯ ಪರಮಾತ್ಮಗೆ ಸಮರ್ಪಿಸಿರುತ್ತೇವೆ. ಈ ಮಾಲಾ ಜ್ಞಾನಿಗಳ ದೃಷ್ಟಿಗೆ ಮಹಾ ಶ್ರೇಷ್ಠ ಎಂತ ತೋರತದೆ. ಅಜ್ಞಾನಿಗಳಾದ ಎಂದರೆ, ಪಂಚಭೇದ ತಾರತಮ್ಯದಲ್ಲಿ ವಿರುದ್ಧಜ್ಞಾನವುಳ್ಳ ದೈತ್ಯರು, ಮರ್ಕಟದೋಪಾದಿಯಲ್ಲಿ ಈ ಮಾಲಾವನ್ನ ಅಂದರೆ, ಜೀವರತ್ನಾಖ್ಯವಾದ ಈ ಗ್ರಂಥವನ್ನ ಪರಿಗ್ರಹಿಸಿ (ಕೇವಲ ಪ್ರಾಕೃತ ರೂಪವಾದ) ಫಲಗಳೆಂದು ಕಚ್ಚಿ ನೋಡಿ ಕಠಿಣವಾಗಿದೆ ಎಂದು ಅದರ ಮರ್ಮವರಿಯದೆ ಬಿಸಾಕಿಬಿಡುತ್ತಾರೆ. ಆದ ಕಾರಣ ಗ್ರಂಥಕರ್ತೃಗಳಾದ ಶ್ರೀ ಮಜ್ಜಗನ್ನಾಥದಾಸರಾಯರು ತಮ್ಮ ಗ್ರಂಥ ಜ್ಞಾನಿಗಳಿಗೆ ಸಮ್ಮತವಾಗಿರೋದೇ ಹೊರ್ತು, ಅಜ್ಞಾನಿಗಳಿಗೆ ಅಸಮ್ಮತ ತೋರುವುದೆಂದು ಹೇಳತಾರೆ. ॥೩೨॥

## ೨. ಭಾವಪ್ರಕಾಶಿಕೆ :–

ಶ್ರೀಮನ್ಮಧ್ವಮತದ ಜ್ಞಾನವೆಂಬ ಸೂತ್ರದಲ್ಲಿ, ಪರಮಾತ್ಮನ ಉತ್ಕೃಷ್ಟವಾದ ಗುಣಗಳೆಂಬ ಮಣಿಗಳನ್ನು ಪೋಣಿಸಿ ಮಾಲೆಯನ್ನು ರಚಿಸಿ, ಈ ಮಾಲೆಯನ್ನು ವಾಕ್ಯಕ್ಕೂ ಮನಸ್ಸಿಗೂ ಅಧಿಪತಿಗಳಾದ ಉಮಾ ರುದ್ರರಿಗೆ ಈಶ್ವರನಾದ ಶ್ರೀಪರಮಾತ್ಮನಿಗೆ ಅರ್ಪಿಸಿರುವೆನು. ಅಂದರೆ, ಶ್ರುತಿಸ್ಮೃತಿಗಳಲ್ಲಿರುವ ರಹಸ್ಯಾರ್ಥಗಳು ಜನರಿಗೆ ಗೊತ್ತಾಗದೆ, ಗ್ರಂಥಗಳಲ್ಲಿ ಪರಸ್ಪರ ವಿರುದ್ಧಾರ್ಥಗಳಿರುವುದರಿಂದ ಸಜ್ಜನರು ಸಂಶಯಗ್ರಸ್ಥರಾಗಿರಲು, ಭಗವದಾಜ್ಞಾ ಪ್ರಕಾರ. ವಾಯುದೇವರು ಮಧ್ವಾಚಾರ್ಯರೆಂಬ ಹೆಸರಿನಿಂದ ಅವತರಿಸಿ, ಯಥಾರ್ಥಜ್ಞಾನವನ್ನು ಹೊರಪಡಿಸಿದರು. ಆದ್ದರಿಂದ ಶಾಸ್ತ್ರದಲ್ಲಿ ನಿಸ್ಸಂಶಯ ಜ್ಞಾನವಾಗಬೇಕಾದರೆ, ಮಧ್ವಮತದಿಂದಲೇ ಆಗಬೇಕು. ಅದನ್ನು ಮನಸ್ಸಿನಲ್ಲಿಟ್ಟುಕೊಂಡು ದಾಸಾರ್ಯರು ಹೀಗೆ ಹೇಳಿರುವರು. ಪರಮಾತ್ಮನ ಗುಣಗಳು ಶ್ರುತಿ ಸ್ಮೃತಿಗಳಲ್ಲಿ ಮಣಿಗಳಂತೆ ಪ್ರತ್ಯೇಕ ಪ್ರತ್ಯೇಕವಾಗಿರುವುವು. ಅವುಗಳನ್ನು ಮಧ್ವಮತ ಸಿದ್ಧಾಂತಗಳೆಂಬ ದಾರದೊಳಗೆ ಪೋಣಿಸಿರುವೆನು. ಇಂತಹ ಮಾಲೆಯ ಮಹಿಮೆಯನ್ನು ತಿಳಿಯಬೇಕಾದರೆ ಜ್ಞಾನಿಗಳಿಗೆ ಮಾತ್ರ ಸಾಧ್ಯವೇ ಹೊರತು, ಅಜ್ಞಾನಿಗಳಿಗೆ ಆಗಲಾರದು. ಹೇಗೆಂದರೆ, ಕೋತಿಯ ಕೈಯಲ್ಲಿ ಮಾಣಿಕ್ಯವನ್ನು ಕೊಟ್ಟರೆ.ಅದರ ಯೋಗ್ಯತೆಯು ಕೋತಿಗೆ ಗೊತ್ತೇ ? ಆ ಮಾಣಿಕ್ಯವನ್ನು ಕಚ್ಚಿನೋಡಿ ಅದರಲ್ಲಿ ಯಾವ ವಿಧವಾದ ರಸವನ್ನೂ ಕಾಣದೆ ಬಿಸಾಡುವುದು. ಅದರಂತೆ ಅಜ್ಞಾನಿಗಳಿಗೆ ಇದರಲ್ಲಿರುವ ಭಗವನ್ಮಹಿಮೆಯು ಹೇಗೆ ಗೊತ್ತಾದೀತು? ಇದರಲ್ಲೇನು ಸ್ತ್ರೀ ವರ್ಣನೆಯೆ ? ಶೃಂಗಾರರಸವೆ ? ಅಥವಾ ಇದೇನಾದರೂ ಕಿವಿಗೆ ಇಂಪಾದ ಕಾದಂಬರಿಯೆ ? ಅಜ್ಞಾನಿಗಳಿಗೆ (ದುರ್ಜನರಿಗೆ) ಬೇಕಾದ ವಿಷಯಗಳು ಇದರಲ್ಲಾವುದೂ ಇಲ್ಲವಾದುದರಿಂದ ಇದನ್ನು ತಿರಸ್ಕಾರ ಮಾಡುವರೆಂಬ ತಾತ್ಪರ್ಯ. ॥೩೨॥

### ೩. ಭಾವದರ್ಪಣ :–

ಈ ಗ್ರಂಥ ಸಜ್ಜನರಿಗೆ ಬಹು ಅನುಕೂಲವಾಗುತ್ತದೆ. ಇತರರಿಗೆ ಬಹಳ ಅಸಹ್ಯವಾಗುತ್ತದೆಂದು ಹೇಳುತ್ತಾರೆ- ಶ್ರೀನಿವಾಸಸೇತಿ. ವಯುನಾ ಜ್ಞಾನವೆಂಬರ್ಥ. "ತ್ವದ್ದತ್ತಯಾ ವಯುನೇತ್ಯತ್ರ ತಸ್ಯ ಜ್ಞಾನೇ ಪ್ರಯೋಗಾತ್" ವಾಙ್ಮಯನರೀಶಗೆ-ಎಂದರೆ,ತದಭಿಮಾನಿಗಳಾದ ಉಮಾ ರುದ್ರರಿಗೆ ಸ್ವಾಮಿಯಾದ ಪರಮಾತ್ಮನೆಂಬರ್ಥ. ॥೩೨॥

### ೪. ಶ್ರೀವ್ಯಾಸದಾಸ ಸಿದ್ಧಾಂತ ಕೌಮುದೀ :–

"ಶ್ರೀ" ಇತಿ ॥ "**ವಯುನ**" – ಜ್ಞಾನಂ ॥ "ತ್ವದ್ದತ್ತಯಾ ವಯುನಯಾ" ಇತಿ **ಭಾಗವತೇ** ॥ ॥೩೨॥

## ಕನ್ನಡಾರ್ಥ

"ಈ ಗ್ರಂಥ ಮಾಲಿಕೆಯು ಜ್ಞಾನಿಗಳಿಗೆ ಮೆಚ್ಚಿಗೆಯಾಗುವದು. ಅಜ್ಞರಿಗೆ ಇದರ ಮಹತ್ವವು ತಿಳಿಯಲಾರದು" ಈ ವಿಷಯವನ್ನು ದೃಷ್ಟಾಂತದಿಂದ ಉಪಾದಿಸುತ್ತಾರೆ. "ಶ್ರೀನಿವಾಸನ" ಎಂಬ ಪದ್ಯದಿಂದ.

"ವಯುನ –ಜ್ಞಾನ. ಭಾಗವತದಲ್ಲಿ ನಿನ್ನಿಂದ ಕೊಡಲ್ಪಟ್ಟ ವಯುನದಿಂದ – ಜ್ಞಾನದಿಂದ" ಎಂದು ಒಂದು ಶ್ಲೋಕದಲ್ಲಿ ಹೇಳಲಾಗಿರುತ್ತದೆ. ॥೩೨॥

### ೫. ಶ್ರೀಗುರುಹೃದಯ ಪ್ರಕಾಶಿಕೆ :–

ಶ್ರೀನಿವಾಸನಾದ ಸ್ವಾಮಿಯು ಸ್ವಾತಂತ್ರ್ಯಾದಿ ಗುಣರತ್ನಗಳನ್ನು ಪ್ರಾಣಮತವೆಂಬ ಶ್ರೀಮನ್ಮಧ್ವಮತ ಜ್ಞಾನರೂಪ ಸೂತ್ರದಿಂದ ಪೋಣಿಸಿದ ಈ ಕಾವ್ಯರೂಪ ಮಾಲಿಕೆಯನ್ನು, ವಾಙ್ಮಯನೆಂಬ ಕಾವ್ಯಸನ್ನಿಹಿತ

ಸರ್ವೋತ್ತಮದೇವರ ಅಂಸವೆಂಬ ಕೊರಳಲ್ಲಿ ಸಮರ್ಪಿಸಿ ಇರುವೆನು. ಇದು ಶಾಸ್ತ್ರಜ್ಞರ ಕಣ್ಣಿಗೆ ತಿಳಿಯಬರುವುದು. ಅಜ್ಞಜನಕ್ಕೆ ಮರ್ಕಟವೆಂಬ ಕೋತಿ ಕೈಲಿ ಮಾಣಿಕ್ಯವನ್ನು ಕೊಟ್ಟಂತೆ ಅಸಹ್ಯ ತೋರುವುದು. ಆದರಿಂದ ಬಾಧಕವಿಲ್ಲವೆಂದರ್ಥ. ॥೩೨॥

# ಸರ್ವವ್ಯಾಖ್ಯಾನಸಾರಸಂಗ್ರಹ

ಶ್ರೀನಿವಾಸನ ಗುಣ, ರೂಪ, ಕ್ರಿಯಾ, ಅವತಾರ, ಮಹಿಮಾ ಇತ್ಯಾದಿಗಳೆಲ್ಲವೂ ಅಪಾರ, ಅಸದೃಶ ಹಾಗೂ ಪರಿಪೂರ್ಣವಾದುವು. ಶ್ರೀ ಹರಿಯು ಗುಣಾಖ್ಯವಾದ ಶ್ರುತಿ ಸ್ಮೃತಿ ವಚನಗಳಿಂದ ಕೂಡಿದ ಮಹಾ ಸಾಗರದಲ್ಲಿ ಮುಳುಗಿ, ಆದರಿಂದ ಅವನ ಸುಗುಣಾವಳಿಗಳೆಂಬ ಅನರ್ಘ್ಯರತ್ನ ಗಳನ್ನು ದಾಸರಾಯರು ತೆಗೆದಿದ್ದಾರೆ. ಶ್ರೀ ಮುಖ್ಯಪ್ರಾಣದೇವರ ತೃತೀಯಾವತಾರಭೂತರಾದ ಶ್ರೀಮನ್ಮಧ್ವಮುನಿಗಳಿಂದ ಪ್ರಣೀತವಾದ ಸತ್ಸಿದ್ಧಾಂತವೇ ಪ್ರಾಣಮತವು. ಶ್ರೀ ಹರಿಯು ಅನಂತ ಸುಗುಣಾಖ್ಯ ಮಣಿ ಗಳನ್ನು ಶ್ರೀಮನ್ಮಧ್ವಮತ ಸತ್ಸಿದ್ಧಾಂತಗತ ಜ್ಞಾನಾಖ್ಯ ಸೂತ್ರದಿಂದ ಪೋಣಿಸಿ ಮಾಡಿದ ಹಾರವೇ ಈ ಶ್ರೀಮದ್ಹರಿಕಥಾಮೃತಸಾರವು. ಈ ಮಾಲಿಕೆಯನ್ನು ವಾಗಭಿಮಾನಿ ದೇವತೆಯಾದ ಸರಸ್ವತೀ, ಭಾರತೀ, ಅಗ್ನಿ ಹಾಗೂ ಮನೋಭಿಮಾನಿ ದೇವತೆಗಳಾದ ರುದ್ರ, ಉಮಾ ಇವರ ಅಂತರ್ಗತ ನಾದ ವಾಙ್ಮನೋಮಯನಾದ ಶ್ರೀ ಪರಮಾತ್ಮನಿಗೆ ಭಕ್ತಿಪೂರ್ವಕ ಸಮ ರ್ಪಿಸಿರುತ್ತಾರೆ.

ಶ್ರೀ ಹರಿಯ ಚರಿತಾಮೃತರೂಪವಾದ ಈ ಗ್ರಂಥಸ್ಥ ವಿಷಯಗಳು ನಿರ್ಮತ್ಸರರಾದ ಜ್ಞಾನಿಗಳ ದೃಷ್ಟಿಗೆ ವಸ್ತುಗಳಾಗಿ, ಅವರು ಅದರ ಶ್ರವಣ, ಮನನ, ಅಧ್ಯಯನಾದಿಗಳಿಂದ ಸಂತೋಷಪಡುವರು.

ಮೂಢರಾದ ಜ್ಞಾನಹೀನರು ಇದು ಕೇವಲ ಪ್ರಾಕೃತಗ್ರಂಥ ಎಂಬ ತಾತ್ಪರ್ಯಭಾವನೆಯಿಂದ ಜರೆಯುವರು. ಅವರಿಗೆ ಈ ಗ್ರಂಥವು ಸಹ್ಯ

ವಾಗುವುದಿಲ್ಲ. ಇದನ್ನು 'ಕೋಡಗನ ಕೈಯಲ್ಲಿರುವ ಮಾಣಿಕ್ಯದಂತೆ' ಎಂಬ ದೃಷ್ಟಾಂತದಿಂದ ವಿವರಿಸುತ್ತಾರೆ. ಮಾಣಿಕ್ಯವನ್ನು ಕೋಡಗನ ಕೈಯಲ್ಲಿಟ್ಟರೆ, ಅದು ಮೂಸಿ ನೋಡಿ, ಬಿಸಾಡುವುದು. ಕೋತಿಗೆ ಅನರ್ಘ್ಯವಾದ ರತ್ನದ ಬೆಲೆ ಗೊತ್ತಿಲ್ಲ. ಅಂತೆಯೇ ಅಜ್ಞಾನಿಗಳಿಗೆ ಈ ಗ್ರಂಥಸ್ಥ ವಿಷಯಗಳು ಸಹ್ಯವಾಗುವುದಿಲ್ಲವೆಂದು ತಿಳಿಸುತ್ತಾರೆ. ॥೩೨॥

## ಪದ್ಯ-೩೩

**ಮೂಲ :-**

**ಶ್ರೀ ವಿಧೀರ ವಿಪಾಹಿಪೇಶ ಶ ।**
**ಚೀವರಾತ್ಮಭವಾರ್ಕ ಶಶಿ ದಿ ।**
**ಗ್ದೇವ ಋಷಿ ಗಂಧರ್ವ ಕಿನ್ನರ ಸಿದ್ಧ ಸಾಧ್ಯಗಣ ॥**
**ಸೇವಿತ ಪಾದಾಂಭೋಜ ತ್ವತ್ಪಾ ।**
**ದಾವಲಂಬಿಗಳಾದ ಭಕುತರ ।**
**ಕಾವ ಕರುಣಾಸಾಂದ್ರ ಲಕ್ಷ್ಮೀಹೃತ್ಕುಮುದ ಚಂದ್ರ ॥**
**॥೩೩॥**

**ಅವತರಣಿಕೆ :-**

ಶ್ರೀ ರಮಾವರನು ತನ್ನನ್ನು ನಂಬಿ ಸ್ತುತಿಸುವವರನ್ನು ಸದಾ ಸಂರಕ್ಷಿಸುತ್ತಾನೆಂದು ತಿಳಿಸುತ್ತಾರೆ. ॥೩೩॥

**ಪ್ರತಿಪದಾರ್ಥ :–**

ಶ್ರೀ = ರಮಾದೇವಿಯರು, ವಿಧಿ = ಬ್ರಹ್ಮದೇವರು, **ಈರ** = ವಾಯುದೇವರು, **ವಿಪ** = ಪಕ್ಷಿ ಶ್ರೇಷ್ಠರಾದ ಗರುಡ ದೇವರು, **ಅಹಿಪ** = ಸರ್ವಶ್ರೇಷ್ಠರಾದ ಶೇಷದೇವರು, **ಈಶ** = ರುದ್ರದೇವರು, **ಶಚೀವರ** = ಶಚೀದೇವಿಯ ಪತಿಯಾದ ಇಂದ್ರದೇವರು, **ಆತ್ಮಭವ** = ಪರಮಾತ್ಮನ ಪುತ್ರನಾದ ಮನ್ಮಥ, **ಅರ್ಕ** = ಸೂರ್ಯ, **ಶಶಿ** = ಚಂದ್ರ, **ದಿಗ್ದೇವ** = ದಿಗಭಿಮಾನಿದೇವತೆಗಳು, **ಋಷಿ** = ಋಷಿಗಣ, **ಗಂಧರ್ವ** = ದೇವ, ಮಾನವ ಗಂಧರ್ವವರ್ಗ, **ಕಿನ್ನರ** = ಕಿನ್ನರರು, **ಸಿದ್ಧ** = ಸಿದ್ಧರೆಂಬ ವರ್ಗ, **ಸಾಧ್ಯಗಣ** = ಸಾಧ್ಯರು ಇತ್ಯಾದಿ ವರ್ಗಗಳಿಂದ, **ಸೇವಿತ ಪದಾಂಭೋಜ** = ಸಂಸೇವ್ಯಮಾನವಾದ ಪಾದಾರವಿಂದಗಳುಳ್ಳ ಶ್ರೀ ಹರಿಯು, **ಕರುಣಾಸಾಂದ್ರ** = ದಯಾಘನನು, **ಲಕ್ಷ್ಮೀ ಹೃತ್ಕುಮುದ ಚಂದ್ರ** = ಶ್ರೀಲಕ್ಷ್ಮೀದೇವಿಯರ ಹೃದಯವೆಂಬ ಕುಮುದ ಪುಷ್ಪದ ವಿಕಾಸಕ್ಕೆ ಚಂದ್ರಸದೃಶನಾದ **ತ್ವತ್ಪಾದವಲಂಬಿಗಳಾದ** = ಶ್ರೀ ಪರಮಾತ್ಮನ ಅಂತಹ ಪಾದಕಮಲಗಳನ್ನು ಆಶ್ರಯಿಸಿರುವ, **ಭಕುತರ** = ಭಕ್ತಜನರನ್ನು, **ಕಾವ** = ಸಕಲ ಆಪತ್ತುಗಳಿಂದ ಸಂರಕ್ಷಿಸುವನು. ॥೩೩॥

## ವ್ಯಾಖ್ಯಾನಗಳು

### ೧. ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ :–

ಶ್ರೀ ಪರಮಾತ್ಮ ತನ್ನ ಪಾದಾವಲಂಬಿಗಳಾದವರನ್ನ ರಕ್ಷಿಸುತಾನೆ–ಎಂತ ಹೇಳುತಾರೆ. ಲಕ್ಷ್ಮೀದೇವೇರು, ಬ್ರಹ್ಮದೇವರು, ವಾಯುದೇವರು, ಗರುಡ ದೇವರು, ಶೇಷದೇವರು, ರುದ್ರದೇವರು, ಶಚೀದೇವರಿಗೆ ಗಂಡನಾದ ಇಂದ್ರ

ದೇವರು, ಪರಮಾತ್ಮನ ಪುತ್ರನಾದ ಮನ್ಮಥ, ಕೃಷ್ಣ ಪುತ್ರ ಎಂತ ತಾತ್ಪರ್ಯ, ಸೂರ್ಯ ಚಂದ್ರಾದಿಗಭಿಮಾನಿದೇವತೆಗಳು,ಋಷಿಗಳು,ಗಂಧರ್ವರು ಕಿನ್ನರರು,ಸಿದ್ಧರು,ಸಾಧ್ಯರು ಇವರೇ ಮೊದಲಾದ ದೇವಗಂಧರ್ವರೇ ಅಂತ್ಯ ವಾಗಿ ಇರುವ ದೇವತೆಗಳು. ಆಜಾನಜ ದೇವತೆಗಳೆಂದು ಕರಸತಕ್ಕವರು, ದೇವಯೋನಿಜರೆಂದು ನಾಮಾಂಕಿತರು, ದೇವಗುಣ ಕರ್ಮಜಗಣ ಈ ಎರಡೂ ಸೇರಿ ಒಂಭತ್ತುಕೋಟಿ, ದೇವಯೋನಿಜರು ಇಪ್ಪತ್ನಾಲ್ಕುಕೋಟಿ–ಅಂತು ಒಟ್ಟು ಮೂವತ್ತುಮೂರುಕೋಟಿ ದೇವತಾಗಣದಿಂದ ಸೇವಿತವಾದ ಪಾದಕಮಲಗಳು ಉಳ್ಳವ. ಈ ಪೂರ್ವೋಕ್ತ ದೇವತೆಗಳಿಂದ ಸೇವಿತನಾದ ಪರಮಾತ್ಮ ಕರುಣಾಸಮೂಹ ಉಳ್ಳವ. ಲಕ್ಷ್ಮೀದೇವೇರ ಹೃದಯಗತ ಮನವೆಂಬ ಕುಮುದಪುಷ್ಪವನ್ನ ವಿಕಾಸಮಾಡೋದಕ್ಕೆ ಚಂದ್ರಸದೃಶ ನಾದವ. ಇಂಥಾ ಪರಮಾತ್ಮ, ಅಹಂಮಮತಾದಿಗಳ ತ್ಯಜಿಸಿ ನಿಸ್ಪೃಹರಾಗಿ ಹೃದಯಾಕಾಶದಲ್ಲಿ ಭಗವನ್ಮೂರ್ತಿ ಧ್ಯಾನದಲ್ಲಿ ನಿರತರಾಗಿ, ಅನ್ಯವಿಷಯಗಳ ಅವಲಂಬನ ಮಾಡದೆ, ಪರಮಾತ್ಮನಾದ ತನ್ನ ಪಾದವನ್ನೇ ಅವಲಂಬನ ಮಾಡಿದ ಭಕ್ತಜನರಿಗೆತನ್ನ ಅಪರೋಕ್ಷ ಕೊಟ್ಟು,ಆಗಾಮಿ ಸಂಚಿತಗಳ ನಾಶ, ನಿರ್ಲೋಪಮಾಡಿ ಸಂರಕ್ಷಣೆ ಮಾಡತಾನೆ. ॥೩೩॥

## ೨. ಭಾವಪ್ರಕಾಶಿಕೆ :–

ಲಕ್ಷ್ಮೀ, ಬ್ರಹ್ಮ, ವಾಯು, ಗರುಡ, ಶೇಷ, ರುದ್ರ. ಇಂದ್ರ, ಕಾಮ, ಸೂರ್ಯ, ಚಂದ್ರ, ದಿಗ್ದೇವತೆಗಳು, ಋಷಿಗಳು, ಗಂಧರ್ವರು, ಕಿನ್ನರು, ಸಿದ್ಧರು, ಸಾಧ್ಯರು- ಮೊದಲಾದವರಿಂದ ಸೇವಿತವಾದ ಪಾದ ಕಮಲಗಳುಳ್ಳ ಶ್ರೀಪರಮಾತ್ಮನು ತಾರತಮ್ಯ ಪ್ರಕಾರ ಮೇಲೆ ಹೇಳಿದ ದೇವತೆಗಳನ್ನು ಸ್ಮರಿಸುತ್ತಾ, ತನ್ನಲ್ಲಿ ಭಕ್ತಿಮಾಡುವರಾರೋ ಅವರನ್ನು ಸಂರಕ್ಷಿಸುವನು. ಬ್ರಹ್ಮಾದಿ ದೇವತೆಗಳಿಂದ ಪೂಜಿತವಾದ ಪಾದಕಮಲ ಗಳುಳ್ಳ ಶ್ರೀ ಹರಿಯು 'ತತ್ಪದಾವಲಂಬಿಗಳಾದ ಭಕ್ತರ' ಆ ದೇವತೆಗಳ ಪಾದಸೇವೆಯಲ್ಲಿ ನಿರತರಾದ ಭಕ್ತರನ್ನು ಕಾವನೆಂದು ಹೇಳಿರುವರು, ತಾರ

ತಮ್ಮ ಪ್ರಕಾರ ದೇವತೆಗಳನ್ನು ನಿತ್ಯದಲ್ಲೂ ಸ್ಮರಿಸುತ್ತಾ, ಅವರಂತರ್ಯಾಮಿ ಪರಮಾತ್ಮನನ್ನು ಪೂಜಿಸಿದರೆ ಅಂತಹ ಭಕ್ತರನ್ನು ಪರಮಾತ್ಮನು ಉದ್ಧಾರ ಮಾಡುವನೆಂಬ ತಾತ್ಪರ್ಯ. ॥೩೩॥

**೩. ಭಾವದರ್ಪಣ :–**

ಲಕ್ಷ್ಮೀ, ಬ್ರಹ್ಮ, ವಾಯು, ಗರುಡ, ಶೇಷ, ರುದ್ರ, ಇಂದ್ರ, ಕಾಮ, ಸೂರ್ಯ, ಚಂದ್ರ, ದಿಗ್ದೇವತೆ, ಋಷ್ಯಾದಿಗಳಿಂದ ಸೇವಿತನಾದ ಶ್ರೀ ಹರಿಯು ಸಂರಕ್ಷಿಸುವನು ಎನ್ನುತ್ತಾರೆ ಶ್ರೀವಿಧೀತಿ. ॥೩೩॥

**೪. ಶ್ರೀವ್ಯಾಸದಾಸ ಸಿದ್ಧಾಂತ ಕೌಮುದೀ :–**

"ಶ್ರೀ" ಇತಿ ॥ "ಈರ" ವಾಯು॥ "ವಿಪ" - ಗರುಡ ॥ "ಆತ್ಮಭವ" ಕಾಮ. ॥೩೩॥

## ಕನ್ನಡಾರ್ಥ

ಭಕ್ತರಕ್ಷಕನೆಂದು ಪರಮಾತ್ಮನನ್ನು ಸ್ತುತಿಸುತ್ತಾರೆ. "ಶ್ರೀ" ಎಂಬ ಪದ್ಯದಿಂದ (ಪದ್ಯಾರ್ಥವು ಸುಗಮವಿರುತ್ತದೆ). ॥೩೩॥

**೫. ಶ್ರೀ ಗುರುಹೃದಯ ಪ್ರಕಾಶಿಕೆ :–**

ಪರಮಾತ್ಮನನ್ನು ಮನಸ್ಸಿನಲ್ಲೇ ಧ್ಯಾನಿಸಿ ಸಂಬೋಧಿಸುತ್ತಾರೆ, ಶ್ರೀ ಎಂದು. ಲಕ್ಷ್ಮೀ,ಬ್ರಹ್ಮ, ಈರನೆಂಬ ವಾಯು, ವಿಪನೆಂಬ ಗರುಡ, ಅಹಿಪ ನೆಂಬ ಶೇಷ, ಈಶನೆಂಬ ರುದ್ರ, ಆತ್ಮಭವನೆಂಬ ಕಾಮ, ಅರ್ಕನೆಂಬ ಸೂರ್ಯ, ಶಶಿ ಎಂಬ ಚಂದ್ರ, ದಿಗ್ದೇವರೆಂಬ ವರುಣಾದಿಗಳು, ಋಷಿಗಳು,

ಗಂಧರ್ವರು, ಕಿನ್ನರರು, ಸಿದ್ಧರು ಸಾಧ್ಯಗಣರೆಂಬ ದೇವಾದಿ ಪದಯೋಗ್ಯ ಜೀವರು-ಇವರುಗಳಿಂದ ಸೇವಿತ ಪಾದಕಮಲವುಳ್ಳವನೇ, ನಿನ್ನಪಾದಾಶ್ರಿತ ಭಕ್ತರನ್ನು ರಕ್ಷಿಸುವ ಕರುಣಾಸಮುದ್ರನೇ, ಲಕ್ಷ್ಮೀಹೃದಯವೆಂಬ ಕುಮುದ ಪುಷ್ಪಕ್ಕೆ ಚಂದ್ರನಂತೆ ಸಂತೋಷಕೊಡುವ ದೇವರೇ,ನನ್ನ ವಿಜ್ಞಾಪನೆಗಳನ್ನು ಕೇಳೇನೆಂದರ್ಥ. ॥೩೩॥

## ಸರ್ವವ್ಯಾಖ್ಯಾನಸಾರಸಂಗ್ರಹ

ಆತ್ಮ–ತನ್ನಿಂದಲೇ, ಭವ ಉತ್ಪತ್ತಿಯಾದವ, ಅಂದರೆ, ಶ್ರೀಹರಿಯ ಪುತ್ರನಾದ ಮನ್ಮಥನು **ಆತ್ಮಭವನು.** ಶ್ರೀ ಹರಿಯ ಮನಸ್ಸಿನಿಂದ ಜಾತನಾದವನು ಶ್ರೀಕೃಷ್ಣಾವತಾರದಲ್ಲಿ. ಶ್ರೀ ಕೃಷ್ಣ ರುಕ್ಮಿಣಿಯರಿಗೆ ಪುತ್ರನಾಗಿ ಮನ್ಮಥನು ಪ್ರದ್ಯುಮ್ನನೆಂಬ ಹೆಸರಿನಿಂದ ಅವತರಿಸಿದನು.

ಶಶಿ – ಎಂದರೆ ಮೊಲ,. ಮೊಲದ ಸಾಂಕೇತವನ್ನು ಹೊಂದಿರುವ ಚಂದ್ರನು **ಶಶಿನಾಮಕನು.**

ದಿಕ್ಕಿಗೆ ಅಭಿಮಾನಿಗಳಾದ ದೇವತಾಸಮೂಹವು **ದಿಗ್ದೇವರೆಂದು** ಕರೆಯಿಸುವರು. ಚಂದ್ರನೂ ಸಹ ದಿಗ್ದೇವತೆಯೇ.

ವಸಿಷ್ಠಾದಿ ಸಪ್ತ ಋಷಿಗಳು ಮತ್ತು ಇನ್ನು ಅಸಂಖ್ಯಾತ ತಪೋನಿಧಿಗಳಾದ ಜ್ಞಾನಿವರ್ಗವು **ಋಷಿಗಣಕ್ಕೆ** ಸೇರಿದವರು. (ದೇವಗಣಾನಂತರ ಋಷಿಗಣ).

ದಿವ್ಯ ಗಾಯನ ನರ್ತನಾದಿಗಳಿಂದ ಶ್ರೀ ಹರಿಯನ್ನು ತೋಷಿಸುವವರೇ ತುಂಬುರಾದಿ **ಗಂಧರ್ವಗಣ.**

ದೇಹವು ಮಾನವರಂತೆಯೂ, ಮುಖವು ಮಾತ್ರ ಕುದುರೆಯುಂತೆಯೂ ಇರುವ ದೇವತಾವರ್ಗ ತುಂಬರರು (ನರತುರಗರು). ಇವರು ದೇವಯೋನಿ ವಿಶೇಷದವರು. ಇವರೆಲ್ಲರೂ ಕುಬೇರನ ಪ್ರಜೆಗಳು. ಕಶ್ಯಪಮುನಿಯಿಂದ ಸುರಸಿ ಎಂಬುವಳಲ್ಲಿ ಜನಿಸಿದವರು. ಉತ್ತಮ ಗಾಯಕರು.

ಅಣಿಮಾದಿ ಸಿದ್ಧಿಯನ್ನು ಪಡೆದಿರುವ ದೇವತಾವರ್ಗಕ್ಕೆ ಸಿದ್ಧರೆಂದು ಹೆಸರು. ಸಾಧ್ಯರು ಪರಾಕ್ರಮಶಾಲಿಗಳಾದ ದೇವತಾವರ್ಗಕ್ಕೆ ಸೇರಿದವರು.

ಇಂತು, ರಮಾ ಬ್ರಹ್ಮಾದಿ ಸಮಸ್ತದೇವಗಣದಿಂದ ಪೂಜಿಸಲ್ಪಟ್ಟ ಪಾದಾರವಿಂದವುಳ್ಳವನು ಶ್ರೀ ಹರಿ. ಶ್ರೀ ಪರಮಾತ್ಮನ ಪಾದಪದ್ಮಗಳನ್ನು ಅನವರತ ಸೇವಿಸುತ್ತಿರುವ ಸಮಸ್ತ ದೇವ–ಋಷಿ–ಗಂಧರ್ವ–ಚಕ್ರವರ್ತಿ-ಮಾನುಷೋತ್ತಮ ಗಣ ಇವರಿಂದ ಸೇವಿತ ಪಾದಾಂಭೋಜನಾದ ಅವರವರ ಅಂತರ್ಯಾಮಿರೂಪೀ ಶ್ರೀಪರಮಾತ್ಮನನ್ನು ಯಾರು ನಂಬಿ, ಸದಾ ಅವನ ಪಾದಾಶ್ರಿತರಾಗಿ, ಸ್ತುತಿಸುತ್ತಿರುವರೋ, ಅಂತಹ ಭಕ್ತಜನರನ್ನು ಸಕಲ ವಿಪತ್ತುಗಳಿಂದ ಸಂರಕ್ಷಿಸುತ್ತಾನೆ. ಶ್ರೀ ಲಕ್ಷ್ಮೀದೇವಿಯರ ಹೃದಯವೆಂಬ ಕುಮುದ ಪುಷ್ಪಕ್ಕೆ (ನೈದಿಲೆ) ಶ್ರೀಹರಿಯು ಚಂದ್ರಸದೃಶನು. ಚಂದ್ರನ ಉದಯದಿಂದ ಕುಮುದಪುಷ್ಪವು ಅರಳುವುದು. ಅಂತೆಯೇ, ಶ್ರೀಹರಿಯ ಪ್ರಕಾಶವೆಂಬ ಅನುಗ್ರಹದಿಂದ ಶ್ರೀ ಲಕ್ಷ್ಮಿಯು ಸಂತೋಷಪಡುವಳು. ||೩೩||

## ಪದ್ಯ—೩೪

ಮೂಲ –

ಆದರಿಸಿ ಗತಾಕ್ಷ ಭಾಷಾ ।
ಭೇದದಿಂದಲಿ ಕರೆಯಲದನು ನಿ ।
ಷೇಧಗೈದವಲೋಕಿಸದೆ ಬಿಡುವರೆ ವಿವೇಕಗಳು ॥
ಮಾಧವನ ಗುಣ ಪೇಳ್ವ ಪ್ರಾಕೃತ ।
ವಾದರೆಯು ಸರಿ ಕೇಳಿ ಪರಮಾ ।
ಹ್ಲಾದಬಡದಿಪ್ಪರೆ ನಿರಂತರ ಬಲ್ಲ ಕೋವಿದರು ॥ ॥೩೪॥

ಅವತರಣಿಕೆ :–

ಭಗವತ್ಕಥಾಶ್ರವಣವನ್ನು ಆದರದಿ ಮಾಡುವ ಸುವಿವೇಕಿಗಳು ಮಾಧವನ ಗುಣಗಳನ್ನು ನಿರೂಪಿಸುವ ಗ್ರಂಥವು ಪ್ರಾಕೃತಭಾಷಾಯುಕ್ತ ವಾಗಿದ್ದರೂ, ಓದಿ, ಕೇಳಿ ಸಂತೋಷಪಡುವರೆಂದು ತಿಳಿಸುತ್ತಾರೆ– ॥೩೪॥

ಪ್ರತಿಪದಾರ್ಥ :–

**ಗತಾಕ್ಷ** = ದೃಷ್ಟಿಶಕ್ತಿಯನ್ನು ಕಳೆದುಕೊಂಡಿರುವವನು. **ಭಾಷಾ ಭೇದದಿಂದಲಿ** = ಸಂಸ್ಕೃತ ಭಾಷೆಗೆ ಭೇದವಾದ ಪ್ರಾಕೃತ ಭಾಷೆಯೆಂದು, **ಕರೆಯಲು** = ಕರೆಯಲಾಗಿ, **ಅದನು** = ಅಂತಹ ಪ್ರಾಕೃತಗ್ರಂಥ ವನ್ನು, **ನಿಷೇಧಗೈದು** = ನಿಷೇಧಮಾಡಿ, **ವಿವೇಕಿಗಳು** = ಜ್ಞಾನಿ ಗಳಾದವರು, **ಅವಲೋಕಿಸದೆ ಬಿಡುವರೆ** = ನೋಡದೇ ಬಿಡುತ್ತಾರೆಯೇ? **ಮಾಧವನ** = ರಮಾಪತಿಯ, **ಗುಣ** = ಅಪಾರಗುಣಸಮೂಹಗಳನ್ನು, **ಪೇಳ್ವ** = ತಿಳಿಸುವ ಗ್ರಂಥವು, **ಪ್ರಾಕೃತವಾದರೆಯು ಸರಿಯೆ** =

ಪ್ರಾಕೃತವಾದ ಕರ್ನಾಟಕಭಾಷೆಯಲ್ಲಿದ್ದರೂ ಸರಿಯೆ, **ಬಲ್ಲ** = ಆ ಗ್ರಂಥದ ಮೌಲ್ಯವನ್ನು ತಿಳಿದಿರುವ, **ಕೋವಿದರು** = ನಿರ್ಮತ್ಸರರಾದ ಜ್ಞಾನಿಗಳು, **ನಿರಂತರ** = ಯಾವಾಗಲೂ, **ಕೇಳಿ** = ಗ್ರಂಥಸ್ಥ ವಿಷಯ ಗಳನ್ನು ಶ್ರವಣಮಾಡಿ, **ಪರಮಾಹ್ಲಾದ ಬಡದಿಪ್ಪರೆ** = ಹೆಚ್ಚು ಆನಂದ ವನ್ನು ಹೊಂದದೇ ಇರುತ್ತಾರೆಯೇ ? ಅಂದರೆ, ಖಂಡಿತ ಸಂತೋಷ ಪಡುವರೆಂದು ತಾತ್ಪರ್ಯ. ॥೩೪॥

## ವ್ಯಾಖ್ಯಾನಗಳು

### ೧. ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ

ಅಂತರಂಗದಲ್ಲಿ ಜ್ಞಾನಶುದ್ಧರಾದವರು ಇದರನ್ನ ಕನ್ನಡ ಭಾಷಾ ಎಂತ ತ್ಯಾಗಮಾಡೋದಿಲ್ಲ-ಎಂತ ಹೇಳತಾರೆ.

ಪ್ರಾಕೃತವಾದ ಜಡಾಧಿಷ್ಠಾನಗಳ ನೋಡೋದರಲ್ಲಿ ಹೋಗಲ್ಪಟ್ಟ ನೇತ್ರ ಉಳ್ಳವನಾಗಿಯೂ, ಸರ್ವಾಧಿಷ್ಠಾನದಲ್ಲಿ ಅಂತರ್ಗತನಾದ ಪರ ಮಾತ್ಮನ್ನ ನೋಡತಕ್ಕ ಜ್ಞಾನನೇತ್ರವುಳ್ಳವನಾಗಿಯೂ ಇರುವ ಪುರುಷನು ಭಗವದ್ಭಕ್ತರಲ್ಲಿ ಪರಮಾದರಮಾಡಿ, ಸಂಸ್ಕೃತಭಾಷಾಕ್ಕೆ ಭೇದವಾದ ಪ್ರಾಕೃತಭಾಷೆಯಿಂದಲಿ ಭಗವದ್ಭಕ್ತರಾದವರು ಕರೆಯೆ, ಆ ಮಾತನ್ನು ಭಾಷಾಭೇದವೆಂದು **ನಿಷೇಧಮಾಡಿ ಜ್ಞಾನಿಗಳಾದವರು ಭಾಷಾಭೇದ ದಿಂದ** ಕರೆದ ಜ್ಞಾನಿಯಾದ ಆ ಪುರುಷನ ಅವಲೋಕನ ಮಾಡದೆ ಬಿಡುವು ದಿಲ್ಲ, ನೋಡೇ ನೋಡುತ್ತಾರೆ. ಅದರೋಪಾದಿಯಲ್ಲಿ ಲಕ್ಷ್ಮೀಪತಿಯಾದ ಶ್ರೀನಾರಾಯಣದೇವರ ಕಲ್ಯಾಣಗುಣಗಳ ಪೇಳತಕ್ಕ ಅಧಿಕಾರಿ, ಮಿಶ್ರ ಜ್ಞಾನಿ ಮಿಥ್ಯಾಜ್ಞಾನಿ ಅಲ್ಲದೆ, ತಾರತಮ್ಯ ಪಂಚಭೇದದಿಂದ ಯುಕ್ತನಾಗಿ

ಭಗವದ್ಭಕ್ತನಾಗಿ ಭಕ್ತಿಪೂರ್ವಕ ಪರಮಾತ್ಮ ಗುಣಗಳ ಪ್ರಾಕೃತಭಾಷಾದಿಂದ ಹೇಳತಾನೆ. ಇಂತಹ ಅಧಿಕಾರಿ ಹೇಳಿದ ಗುಣಕಥನ ಪ್ರಾಕೃತಭಾಷಾದಲ್ಲಿ ಇದ್ದದ್ದಾದರೂ ಸರಿಯೇ, ಉತ್ತಮಾಧಿಷ್ಠಾನಮುಖ್ಯಜನ್ಯಗಳು ಶ್ರೇಷ್ಠ ಎಂತಲೂ, ತಾರತಮ್ಯ ಪಂಚಭೇದವನ್ನು ಅನುಸರಿಸಿದ ಪ್ರಾಕೃತಭಾಷಾನೇ ಶ್ರೇಷ್ಠ ಎಂತಲೂ, ನೀಚರಾದ ಮಿಶ್ರಜ್ಞಾನಿ ಮಿಥ್ಯಾಜ್ಞಾನಿಗಳಿಂದ ರಚಿತವಾದ ಸಂಸ್ಕೃತಭಾಷಾವಾದ ಕಾಲಕ್ಕೂ, ಅವರವರ ಮನೋಭಾವ ವಿಪರೀತಜ್ಞಾನವನ್ನು ಅನುಸರಿಸಿ ಇರೋಣದರಿಂದ, ಅಂತಹವರಿಂದ ರಚಿತವಾದ ಭಗವನ್ಮಹಾತ್ಮೆ ಸಂಸ್ಕೃತಭಾಷಾದಿಂಗ ಇದ್ದ ಕಾಲಕ್ಕೂ ನಿಷೇಧಎಂತಲೂ ಈ ಪ್ರಕಾರ ತಿಳಿದ ಜ್ಞಾನಿಗಳು ಸರ್ವಕಾಲವೂ ಪ್ರಾಕೃತಭಾಷಾದಿಂದ ರಚಿತವಾದ ಪರಮಾತ್ಮನ ಮಾಹಾತ್ಮೆ ಕೇಳಿ ಅತ್ಯಂತ ಸಂತೋಷವನ್ನ ಹೊಂದದೆ ಇರುವರೆ ? ಹೊಂದೇ ಹೊಂದುತ್ತಾರೆ ಎಂತ ತಾತ್ಪರ್ಯ. ಹಾಂಗೆ ಹೊಂದದೆ ನಿರಾಕರಿಸತಕ್ಕವರು ಅವಿವೇಕಿಗಳು ಎಂತ ತಾತ್ಪರ್ಯ.

**ವಿಶೇಷಾರ್ಥ** :– ಗುಡವನ್ನು ಭಾಷಾಭೇದದಿಂದ ಬೆಲ್ಲವೆಂತ ಕರೆದ ಮಾತ್ರಕ್ಕೆ ಗುಡ ಎಂತ ಕರೆದವರಿಗೆ ಸಿಹಿಯಾಗಿನ್ನೂ, ಬೆಲ್ಲ ಎಂತ ಕರದವರಿಗೆ ಕಹಿಯಾಗಿನ್ನೂ ಫಲಕೊಡತದ ? ತದ್ವತ್ ಭಾಷಾಭೇದದಿಂದ ಕರೆದಕಾಲಕ್ಕೂ ಸಿಹಿಯಾದ ಫಲವನ್ನೇ ಕೊಡತದೆ. ಮೆಣಸಿನಕಾಯಿನ ಸಂಸ್ಕೃತಭಾಷಾದಿಂದ ಗುಡ ಎಂತ ಕರದಮಾತ್ರಕ್ಕೆ ಸಂಸ್ಕೃತಭಾಷಾದಿಂದ ಗುಡ ಎಂತ ಕರೆದನೆಂದು ಸಿಹಿಫಲವು ಕೊಟ್ಟೀತೇ ? ಖಾರದ ಫಲವೇ ಕೊಡೋದಾಗತದೆ. ಆದ್ದರಿಂದ ಭಾಷಾದಿಂದಲೇ ಶುಭಾಶುಭ ಫಲಗಳಲ್ಲ. ದಾವ ಭಾಷಾವಾದರೂ ವಿವಕ್ಷಾವಸ್ತು ನಿರ್ದೋಷವಸ್ತುವಾಗಿದ್ದಲ್ಲಿ ಶುಭ ಫಲವೇ ಕೊಡತದೆ. ಆದ್ದರಿಂದ ಭಾಷಾನೇಮ ಎಂಬುದು ಕೆಲಸವಿಲ್ಲ. ಪರಮಾತ್ಮನ ವಿಷಯ ಹೇಳತಕ್ಕ ಗ್ರಂಥ ಪ್ರಾಕೃತವಾದರೂ ಗ್ರಾಹ್ಯವೆಂತಲೇ

ಸಿದ್ಧವು. ಮತ್ತು ಕ್ಷೀರ ಕರಕೊಂಬುವಗೆ ಕ್ಷೀರ ವಿವಕ್ಷಾನೇ ಹೊರ್ತು ಗೋವಿನ ವಿವಕ್ಷಾವಲ್ಲ. ಕರೀಗೋವು ಆದರೇನು? ಬಿಳೀಗೋವು ಆದರೇನು? ಕರೀಗೋವು ನಿಷಿದ್ಧ ಎಂತಲೂ ಬಿಳೀಗೋವು ನಿಷಿದ್ಧ ಅಲ್ಲಾ ಎಂತಲೂ ಉಂಟಾ ? ತದ್ವತ್ ಭಾಷಾವಿಷಯವಲ್ಲಾ ಎಂತ ತಾತ್ಪರ್ಯ. ॥೩೪॥

೨. ಭಾವಪ್ರಕಾಶಿಕೆ :–

ಸಂಸ್ಕೃತದಲ್ಲಿ ಕನ್ನಡಿಗೆ ಆದರ್ಶವೆಂದು ಹೇಳುವರು. ಸಂಸ್ಕೃತದಲ್ಲಿ ಪಂಡಿತನಾದ ಮತ್ತು ಸಂಸ್ಕೃತದಲ್ಲಿ ಅಭಿಮಾನವುಳ್ಳ ಒಬ್ಬ ಕುರುಡನು, ತನಗೆ ಕನ್ನಡಿಯು ಉಪಯೋಗವು ಇಲ್ಲದ್ದರಿಂದ ಈ ಆದರ್ಶವನ್ನು ಪ್ರಾಕೃತ ದಿಂದ ಕನ್ನಡಿಯೆಂದು ಮತ್ತೊಬ್ಬನು ಹೇಳಿಬಿಟ್ಟನು. ಆದ್ದರಿಂದ ಇದು ನಿಷಿದ್ಧವಾಯಿತು. ಇದನ್ನು ನೋಡಿಕೊಳ್ಳಬಾರದೆಂದು ದೂಷಿಸಿದರೆ' ವಿವೇಕಿಗಳು, ಈ ಕುರುಡನು ಕನ್ನಡಿಯನ್ನು ನಿಷೇಧ ಮಾಡಿರುವನು. ಆದ್ದ ರಿಂದ ನಾವು ನೋಡಿಕೊಳ್ಳಬಾರದೆಂದು ಕನ್ನಡಿಯನ್ನು ನೋಡಿಕೊಳ್ಳದೆ ಬಿಡುವರೆ ? ಎಂದಿಗೂ ಬಿಡಲಾರರು. ಇದರಂತೆ, ಈ ಪ್ರಾಕೃತಗ್ರಂಥದ ಯೋಗ್ಯತೆಯು ಗೊತ್ತಿಲ್ಲದ ಯಾವನೋ ಒಬ್ಬ ಸಂಸ್ಕೃತ ಪಂಡಿತನು ಇದು ಪ್ರಾಕೃತವೆಂದು ದೂಷಿಸಿದರೂ, ಇದರ ಯೋಗ್ಯತೆಯನ್ನು ತಿಳಿದ ಜ್ಞಾನಿ ಗಳು, ಇದರಲ್ಲಿರುವ ಭಗವನ್ಮಹಿಮೆಯನ್ನು ಕೇಳಿ ಆನಂದ ಪಡದೆ ಇರುವರೆ ? ಪ್ರಾಕೃತಭಾಷೆಯೇ ನಿಷೇಧವೆಂದು ಹಿಂದಿನ ಜ್ಞಾನಿಗಳು ಯಾರೂ ಹೇಳ ಲಿಲ್ಲ. ಆದ್ದರಿಂದ ಭಗವದ್ಗುಣಗಳಿಂದ ಕೂಡಿದ ಗ್ರಂಥವು ಪ್ರಾಕೃತ ವಾದರೂ ಅದು ನಿಷೇಧವಾಗದು ಸಂಸ್ಕೃತವಾದರೂ ಭಗವನ್ಮಹಿಮೆಯನ್ನು ಹೇಳದಿರುವ ಯಾವ ಗ್ರಂಥವೂ ಮಾನ್ಯವಲ್ಲವೆಂದು ತಾತ್ಪರ್ಯ. ॥೩೪॥

## ೩. ಭಾವದರ್ಪಣ

ಆದರ್ಶ ಎಂದರೆ ಕನ್ನಡಿ ಎಂಬರ್ಥ. ಪ್ರಾಕೃತದಿಂದ ಕನ್ನಡಿ ಎಂದು ಉಚ್ಚಾರ ಮಾಡಿದ ಮಾತ್ರಕ್ಕೇ ಎಲ್ಲರೂ ನೋಡಿಕೊಳ್ಳದೇ ಹೋಗುವರೇನು? ಸುಜ್ಞರಾದವರು ತ್ಯಜಿಸುವರೇನು ? ತದ್ವತ್ ಶ್ರೀ ಹರಿಯ ಸದ್ಗುಣ ಮಣಿಗಳನ್ನು ಪೋಣಿಸಿದಂಥ ಈ ಗ್ರಂಥ ಪ್ರಾಕೃತವಾದಾಗ್ಯೂ ಜ್ಞಾನಿಗಳು ಸ್ವೀಕಾರವೇ ಮಾಡುವರೆಂದು ಹೇಳುತ್ತಾರೆ–ಆದರ್ಶೇತಿ. ಪ್ರಾಕೃತದಿಂದ ಸಹ ಸ್ತೋತ್ರ ಮಾಡಬೇಕೆಂದು ಶ್ರೀಮದ್ಭಾಗವತದಲ್ಲಿ ಹೇಳಿದಂಥ ಪ್ರಮಾಣ ೩೩ ನೇ ಸಂಧಿ ೫ ನೇ ಪದ್ಯಕ್ಕೆ ಬರೆದಿದೆ. ಅಲ್ಲೇ ನೋಡತಕ್ಕದ್ದು. ॥೩೪॥

## ೪. ಶ್ರೀ ವ್ಯಾಸದಾಸ ಸಿದ್ಧಾಂತ ಕೌಮುದೀ

"ಆದರ್ಶ" ಇತಿ ॥ "ಅಗತಾಕ್ಷ" – ನೇತ್ರವಾನ್ ॥ ಭೇದ – ಪ್ರಾಕೃತ "ಕನ್ನಡಿ" ॥೩೪॥

### ಕನ್ನಡಾರ್ಥ

ಪ್ರಾಕೃತ ಭಾಷೆಯಲ್ಲಿ ಇದ್ದರೂ,ಇದು ಸರ್ವಮಾನ್ಯವೆಂದು ದೃಷ್ಟಾಂತ ಪೂರ್ವಕವಾಗಿ ನಿರೂಪಿಸುತ್ತಾರೆ. "ಆದರ್ಶ" ಎಂಬ ಪದ್ಯದಿಂದ ॥

ಇಲ್ಲಿ "ಅಗತಾಕ್ಷ" ಎಂದು ಪದಗಳನ್ನು ಬಿಡಿಸಬೇಕು. ಭಾಷಾಭೇದ ಅಂದರೆ ಪ್ರಾಕೃತಭಾಷೆ. "ಕನ್ನಡಿ" ಎಂದು ಪ್ರಾಕೃತ ಪದ ಎಂದು ತಿಳಿಯಬೇಕು. ॥೩೪॥

೫. ಗುರುಹೃದಯಪ್ರಕಾಶಿಕೆ :-

ಕನ್ನಡ ಭಾಷೆಯಿಂದ ಹೇಳಿದಾಗ್ಯೂ ಇದು ಶಾಸ್ತ್ರಾರ್ಥವೆಂದು ವಿವೇಕಿಗಳು ಗ್ರಹಿಸುವರೆಂದು ಸದೃಷ್ಟಾಂತ ತಿಳಿಸುತ್ತಾರೆ- ಆದರ್ಶ ಎಂದು. ಸಂಸ್ಕೃತದಲ್ಲಿ ಕರೆಸಿಕೊಳ್ಳುವ ಕನ್ನಡಿಯನ್ನು ಗತಾಕ್ಷನೆಂಬ ಕುರುಡನು ಅಥವಾ ಆದರ್ಶ ಇದ್ದುದ್ದನ್ನು ಸರಿಯಾಗಿ ಅರ್ಥಮಾಡಿಕೊಳ್ಳದೆ ಇರುವ ಮೂಢರು, ಭಾಷಾಭೇದದಿಂದ ಎಂದರೆ, ಈ ಕನ್ನಡಿಯನ್ನೇ ಅದ್ದವು ಎಂಬ ಮತ್ತೊಂದು ಭಾಷೆಯಿಂದ ಹೇಳಿದರೆ, ಆದರ್ಶವೆಂಬ ವಸ್ತುವನ್ನೇ ಭಾಷಾಂತರದಿಂದ ಹೇಳಿದನೆಂದು ತಿಳಿದ ವಿವೇಕಿಗಳು ಅದನ್ನು ನಿಷೇಧಗೈದು, ಅವಲೋಕಿಸದೆ ಬಿಡುವರೆ, ಎಂದರೆ, ಅದು ಆದರ್ಶವಲ್ಲವೆಂದು ಬಿಡದೆ ಮುಖ ನೋಡಿಕೊಳ್ಳುವಂತೆ, ಬಲ್ಲ ವಿದ್ವಾಂಸರು ಪ್ರಾಕೃತವೆಂಬ ಕನ್ನಡಭಾಷೆಯಿಂದ ಹೇಳಿದ ಈ ಕೃತಿಯನ್ನು ಕೇಳಿ ಪರಮಾಹ್ಲಾದವೆಂಬ ಸಂತೋಷವನ್ನು ಹೊಂದದೆ ಇರುವರೆ? ಅಂದರೆ ಹೊಂದೇ ಹೊಂದುವರು ಎಂಬ ಅಭಿಪ್ರಾಯ.

೩೪||||

## ಸರ್ವವ್ಯಾಖ್ಯಾನಸಾರಸಂಗ್ರಹ

ಸಂಸ್ಕೃತಭಾಷೆಯು ಗೀರ್ವಾಣಭಾಷೆಯು. ಸಕಲ ವೇದಗಳೂ, ಉಪನಿಷತ್ತುಗಳೂ, ಸ್ಮೃತಿರೂಪವಾದ ಪುರಾಣ, ಇತಿಹಾಸಗಳು, ವೇದಾರ್ಥನಿರ್ಣಾಯಕವಾದ ಬ್ರಹ್ಮಸೂತ್ರಗಳು, ಶ್ರೀಮದ್ಭಗವದ್ಗೀತೆ ಇತ್ಯಾದಿ ಸಚ್ಛಾಸ್ತ್ರಗಳೆಲ್ಲವೂ ಸಂಸ್ಕೃತಭಾಷೆಯಲ್ಲಿಯೇ ಇವೆ. ಪಾರಿಭಾಷಿಕ ಶಬ್ದಪ್ರಯೋಗಗಳು ಅವುಗಳ ಅರ್ಥವಿವರಣೆ ಆ ಭಾಷಾಯುಕ್ತವಾಗಿರುವುವು. ಈ ಕಾರಣದಿಂದ ಪ್ರಾಚೀನಾಚಾರ್ಯರು, ವ್ಯಾಖ್ಯಾನ

ಕಾರರು ಸಂಸ್ಕೃತ ಭಾಷೆಯನ್ನೇ ಬಳಸಿ, ಆ ಭಾಷಾಮಾಧ್ಯಮದ ದ್ವಾರವೇ, ಶಾಸ್ತ್ರಾಧ್ಯಯನಗಳನ್ನು ನಡೆಸುತ್ತಿದ್ದರು. ಕಾಲ ಬದಲಾಯಿಸಿದಂತೆ, ಕಲಿಕಾಲದ ದೆಸೆಯಿಂದಾಗಿ ಜನರಲ್ಲಿ ಜ್ಞಾನಮಾಲಿನ್ಯ ಉಂಟಾಗಿ, ಸಂಸ್ಕೃತ ಭಾಷಾ ಹೀನರಿಗೆ ಶಾಸ್ತ್ರಾರ್ಥಗಳ ಅರಿವು ಉಂಟಾಗದೇ ಪಾಮರರಾಗಿ, ಭಗವದನುಗ್ರಹ ಪ್ರಾಪ್ತಿಯ ಹಂಬಲವಿದ್ದರೂ, ಭಾಷೆಯ ಜ್ಞಾನಾಭಾವದಿಂದ ಗತಗೆಟ್ಟಾಗ, ಶ್ರೀಪಾದರಾಜರೇ ಆದಿಯಾಗಿ ಯತಿಪುಂಗವರು ಕನ್ನಡದಲ್ಲಿ ದೇವರನಾಮಗಳು, ಸುಳಾದಿ, ಉಗಾಭೋಗಗಳನ್ನು ರಚಿಸಿ, ಶ್ರೀಮನ್ಮಧ್ವಮತದ ಪ್ರಚಾರಕಾರ್ಯವನ್ನು ವ್ಯಾಪಕವಾಗಿ ಕೈಗೊಂಡರು. ಅವರ ನೇತೃತ್ವದಲ್ಲಿ ಶ್ರೀ ಪುರಂದರದಾಸರಾದಿ ಅಪರೋಕ್ಷಜ್ಞಾನಿಗಳಾದ ದಾಸವರೇಣ್ಯರು, ಸಂಸ್ಕೃತ ಭಾಷಾವಿಶಾರದರಾಗಿದ್ದರೂ, ಪಾಮರರ ಉದ್ಧಾರ್ಥವಾಗಿ, ನುಡಿಭಾಷೆಯಾದ ಚೆಲುಕನ್ನಡದಲ್ಲಿ ದಾಸವಾಙ್ಮಯ ದ್ವಾರಾ, ಜ್ಞಾನಪ್ರಚಾರಮಾಡಿದರು. ಭಗವದನುಗ್ರಹಕ್ಕೆ ಬೇಕಾದದ್ದು ಭಾಷೆಯಲ್ಲ. ಭಾವಮಾತ್ರ. ಮಿಥ್ಯಾವಾದಾದಿ ದುಷ್ಟಶಾಸ್ತ್ರಗಳೆಲ್ಲಾ ಸಂಸ್ಕೃತಭಾಷಾಯುಕ್ತವಾಗಿವೆ. ಹಾಗಾದರೆ ಅವು ಗ್ರಾಹ್ಯವೇ ?ಶ್ರೀಹರಿಯು ಸರ್ವಶಬ್ದವಾಚ್ಯನು, ಸರ್ವಭಾಷಾ ಪ್ರವರ್ತಕನು.

ಮಾಧವನ ಅಪಾರವಾದ ಗುಣ, ರೂಪ, ಕ್ರಿಯಾದಿಗಳನ್ನು ತಿಳಿಸುವ ಗ್ರಂಥ ಪ್ರಾಕೃತ ಭಾಷೆಯಲ್ಲಿದ್ದರೇನು ? ಅದು ಸುವಿವೇಕಗಳಿಂದ ಮಾನ್ಯವೇ ! ಕೋವಿದರು ಅದನ್ನು ಭಾಷಾಭೇದದಿಂದ ತಿರಸ್ಕರಿಸುವುದಿಲ್ಲ. ಖಂಡಿತ ಗ್ರಹಿಸುವರು. ಗ್ರಂಥಸ್ಥ ವಿಷಯಗಳನ್ನು ನೋಡಿ, ಓದಿ, ಆನಂದಿಸುವರು. ಪ್ರಮೇಯಕ್ಕೆ ವಿರುದ್ಧವಲ್ಲದೆ, ಶ್ರೀಮಧ್ವಾಚಾರ್ಯರ ಶಾಸ್ತ್ರಕ್ಕೆ ಅನುಸಾರಿಯಾದ ಶ್ರೀಹರಿಕಥಾಚರಿತ್ರೆಯು ಯಾವ ಭಾಷೆಯಲ್ಲಿಯೇ ಇರಲಿ, ಅದು ಮಾನ್ಯವೇ ಹೊರತು, ತ್ಯಾಜ್ಯ ಖಂಡಿತ ಅಲ್ಲ. ಭಾಷಾಮರಭಿಮಾನಿಗಳು ತಿರಸ್ಕರಿಸಿದರೆ, ಅದರಿಂದಾಗುವ ನಷ್ಟವೇನು ? ॥೩೪॥

# ಪದ್ಯ-೩೫

**ಮೂಲ :–**

**ಭಾಸ್ಕರನ ಮಂಡಲವ ಕಂಡು ನ ।**
**ಮಸ್ಕರಿಸಿ ಮೋದಿಸದೆ ದ್ವೇಷದಿ ।**
**ತಸ್ಕರನು ನಿಂದಿಸಲು ಕುಂದುಹುದೇ ದಿವಾಕರಗೆ ॥**
**ಸಂಸ್ಕೃತವಿದಲ್ಲೆಂದು ಕುಹಕ ತಿ ।**
**ರಸ್ಕರಿಸಲೇನಹುದು ಭಕ್ತಿ ಪು**
**ರಸ್ಕರದಿ ಕೇಳ್ವರಿಗೆ ಒಲಿವನು ಪುಷ್ಕರಾಕ್ಷ ಸದಾ ॥ ॥೩೫॥**

**ಅವತರಣಿಕೆ :–**

ಕುಹಕಿಗಳು ಇದು ಪ್ರಾಕೃತ ಗ್ರಂಥವೆಂದು ತಿರಸ್ಕರಿಸಿದರೆ, ಗ್ರಂಥದ ಮಹಿಮೆಗೆ ಕುಂದೇನೂ ಆಗುವುದಿಲ್ಲವೆಂದು ತಿಳಿಸುತ್ತಾರೆ- ॥೩೫॥

**ಪ್ರತಿಪದಾರ್ಥ :–**

**ಭಾಸ್ಕರನ ಮಂಡಲವ** = ಸೂರ್ಯನ ಮಂಡಲವನ್ನು, **ಕಂಡು** = ನೋಡಿ, **ನಮಸ್ಕರಿಸಿ** = ಭಕ್ತಿಯಿಂದ ವಂದಿಸಿ, **ಮೋದಿಸದೆ** = ಸಂತೋಷಪಡದೆ, **ದ್ವೇಷದಿ** = ದ್ವೇಷಭಾವದಿಂದ, **ತಸ್ಕರನು** = ಚೋರನು, **ನಿಂದಿಸಲು** = ತನ್ನ ಚೋರಕಾರ್ಯಕ್ಕೆ ಸಹಕಾರಿಯಾಗಿಲ್ಲವೆಂದು ಬೈಯ್ದರೆ, **ದಿವಾಕರಗೆ** = ಅವನ ನಿಂದೆಯು ಸೂರ್ಯನಿಗೆ, **ಕುಂದಹುದೇ** = ಕೊರತೆಯಾಗುವುದೇ ? **ಕುಹಕ** = ತದ್ವತ್, ಚೋರ ಸದೃಶನಾದವ, ವಕ್ರ ಬುದ್ಧಿಯುಳ್ಳ ಮಾನವನು **ಸಂಸ್ಕೃತವು** = ಗೀರ್ವಾಣ

ಭಾಷೆಯಾದ ಸಂಸ್ಕೃತದಲ್ಲಿ **ಇದಲ್ಲೆಂದು** = **ಈ** ಗ್ರಂಥವು ರಚಿತವಾಗಿಲ್ಲವೆಂದು **ತಿರಸ್ಕರಿಸಲು** = ತ್ಯಾಗಮಾಡಿದರೆ, **ಏನಹುದು** = ಆದರಿಂದ ಈ ಗ್ರಂಥಕ್ಕೆ ಕುಂದೇನಾದರೂ ಆಗುವುದೇ ? **ಭಕ್ತಿಪುರಸ್ಸರದಿ** = ಈ ಗ್ರಂಥಸ್ಥ ವಿಷಯವನ್ನು ಭಕ್ತ್ಯಾದರಗಳಿಂದ, **ಕೇಳ್ವರಿಗೆ** = ನಿರ್ಮಾತ್ಸರ್ಯಯುತರಾಗಿ ಕೇಳುವ ಜ್ಞಾನಿಗಳಿಗೆ **ಪುಷ್ಕರಾಕ್ಷ** = ಕಮಲದಳಾಯತಾಕ್ಷನಾದ ಶ್ರೀ ಪರಮಾತ್ಮನು (ಗ್ರಂಥಪ್ರತಿಪಾದ್ಯ ದೇವನು). **ಸದಾ ಒಲಿವನು** = ಯಾವಾಗಲೂ ಅನುಗ್ರಹಿಸುವನು. ॥೩೫॥

## ವ್ಯಾಖ್ಯಾನಗಳು

### ೧. ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ

ಭಗವನ್ಮಾಹಾತ್ಮ್ಯ ಪ್ರಾಕೃತಭಾಷಾದಿಂದ ಇರೋದಾದರೂ ಸರಿಯೆ ಕೇಳಿದರೆ ಭಗವದನುಗ್ರಹವಾಗತದೆ-ಎಂದು ಹೇಳತಾರೆ.

ಸೂರ್ಯಮಂಡಲವನ್ನು ಕಂಡು, ವಂದನಾ ಮಾಡಿ ಸಂತೋಷಪಡದೆ, ಸೂರ್ಯೋದಯನಾದನಲ್ಲ ಎಂಬ ದ್ವೇಷದಿಂದ, ಚೋರತನ ಮಾಡತಕ್ಕ ಪುರುಷನು ತಾನು ಮಾಡತಕ್ಕ ಚೋರಕಾರ್ಯಕ್ಕೆ ಅನುಕೂಲವಾದ ಅಂಧಕಾರ ಪರಿಹಾರ ಮಾಡಿ, ತನ್ನ ಕಿರಣಗಳಿಂದ ಪ್ರಕಾಶಉಂಟುಮಾಡಿ ತನ್ನ ಚೋರತ್ವಕಾರ್ಯಕ್ಕೆ ಭಂಗಮಾಡಿದನೆಂದು ಉದಯನಾದ ಸೂರ್ಯನಲ್ಲಿ ದೋಷಾರೋಪಣ ಮಾಡಿ ನಿಂದಿಸಲು, ಸೂರ್ಯನಿಗೆ ಇವನ ನಿಂದಾನಿಂದ ಕೊರತೆ ಆಗೋದೆ? ಆಗೋದಿಲ್ಲವೆಂದು ಅರ್ಥ. ಪೂರ್ಣಪ್ರಕಾಶನಾಗಿ ಇರ್ತಾನೆ. ತದ್ವತ್, ಹಾಂಗೆ ಚೋರಗೆ ಸದೃಶನಾದವ ದುಷ್ಟಬುದ್ಧಿ

ಯಾದವನು. ಸೂರ್ಯಸದೃಶವಾದ ಅಜ್ಞಾನಾಂಧಕಾರ ಪರಿಹಾರ ಮಾಡಿ, ಜ್ಞಾನಪ್ರಕಾಶ ಮಾಡುವ ಈ ಹರಿಕಥಾಮೃತಸಾರಾಖ್ಯ ಗ್ರಂಥದಲ್ಲಿ ದಾವ ದೋಷವೂ ಇಲ್ಲದೆ, ದೋಷರಹಿತನಾದ ಪರಮಾತ್ಮನ ಮಹಾತ್ಮೆ ಹೇಳ ತಿರಲಾಗಿ, ಈ ಹರಿಯ ಮಹಾತ್ಮ್ಯೆಯಲ್ಲಿ ದಾವ ದೋಷವೂ ಹೇಳಲಿಕ್ಕೆ ಬಾರದೆ, ಮಹಾತ್ಮರ ಯಶಸ್ಸು ಚೌರ್ಯ ಇಚ್ಛಾ ಉಳ್ಳ ಕುಹಕ ಸಾಂಕೇತ ನಾದ ಚೋರಗೆ, ಈ ಗ್ರಂಥಾಖ್ಯ ಸೂರ್ಯೋದಯದಿಂದ ಯಶಸ್ಸು ಚೋರ ತ್ವಕ್ಕೆ ಅನುಕೂಲ ಇಲ್ಲದೆ ಈ ಗ್ರಂಥಸ್ಥ ಸಂಸ್ಕೃತಭಾಷಾದಿಂದ ರಚಿತ ವಾದದ್ದು ಅಲ್ಲ-ಎಂತ ಹೇಳಿ ನಿಷ್ಪ್ರಯೋಜನ ನಿಮಿತ್ತ ಕಲ್ಪನಾ ಮಾಡಿ, ಸೂರ್ಯನ್ನ ತಸ್ಕರ ನಿಂದಿಸಿದೋಪಾದಿಯಲ್ಲಿ ತಿರಸ್ಕಾರ ಮಾಡಲು ಈ ಗ್ರಂಥಕ್ಕೆ ದೋಷ ಏನಾದರೂ ಪ್ರಾಪ್ತವಾಗೋದೇ- ಎಂದರೆ ಪ್ರಾಪ್ತವಾಗಲಾರದು. ಮತ್ತು ಅಹಂಜ್ಞಾನರಹಿತನಾಗಿ ಸಮೀಚೀನವಾದ ತಾರತಮ್ಯ ಪಂಚಭೇದ ಜ್ಞಾನದಿಂದ ಯುಕ್ತನಾಗಿ, ವಿರಕ್ತನಾಗಿ ದೇವರಲ್ಲಿ ಭಕ್ತಿ ಇಟ್ಟು ತತ್ಪರಸ್ಪರ ವಾಗಿ ಕೇಳಿ, ತದನುಷ್ಠಾನ ಮಾಡುವವರಿಗೆ ನಿರಂತರ ಹೃದಯಾಕಾಶದಲ್ಲಿ ಭಗವನ್ಮೂರ್ತಿ ಧ್ಯಾನಿಸತಕ್ಕವರಿಗೆ ಕಮಲದಳಾಯತಾಕ್ಷನಾದ ಶ್ರೀಪರ ಮಾತ್ಮ ಒಲಿದು ಪ್ರತ್ಯಕ್ಷನಾಗಿ ಕಾಪಾಡತಾನೆಂದು ತಾತ್ಪರ್ಯ. ||೩೫||

೨. ಭಾವಪ್ರಕಾಶಿಕೆ :-

ಕಳ್ಳನು ತಾನು ಮಾಡುವ ಕಳ್ಳತನಕ್ಕೆ ಸೂರ್ಯನು ವಿಘ್ನನೆಂದು ಭಾವಿಸಿ, ಸೂರ್ಯನಿಗೆ ನಮಸ್ಕಾರವನ್ನೂ ಪೂಜೆಯನ್ನೂ ಮಾಡದಿದ್ದರೆ, ಸೂರ್ಯನಿಗೆ ದೋಷವೇನು ? ಇದರಂತೆ ಕಪಟಿಗಳಾದ ಕೆಲವರು ಅಸೂಯೆಯಿಂದ ಈ ಗ್ರಂಥವು ಸಂಸ್ಕೃತವಲ್ಲವೆಂದು ದೂಷಿಸಿದರೆ, ಗ್ರಂಥಕ್ಕೆ ಲೋಪವೇನು ? ಶ್ರೀಪರಮಾತ್ಮನು, ಈ ಗ್ರಂಥವನ್ನು ಶ್ರವಣ, ಪಠನ ಮಾಡುವವರಿಗೆ ಪ್ರಸನ್ನನಾಗಿ ಅವರನ್ನುದ್ಧರಿಸುವನು. ||೩೫||

೩. ಭಾವದರ್ಪಣ :–

ದಾರ್ಷ್ಟಾಂತಿಕಾರ್ಥ ಪುನಃ ಅದೇ ವಿಷಯವನ್ನೇ ಹೇಳುತ್ತಾರೆ- ಭಾಸ್ಕರೇತಿ. ॥ ॥೩೫॥

೪. ವ್ಯಾಸದಾಸ ಸಿದ್ಧಾಂತ ಕೌಮುದೀ :–

"ಭಾಸ್ಕರ" ಇತಿ ॥ "ಕುಂದು" ನೈಚ್ಯ ॥ (ನೀಚತಾ) ॥೩೫॥

## ಕನ್ನಡಾರ್ಥ

ಸಂಸ್ಕೃತ ಭಾಷೆಯಿರದಿದ್ದರೂ ಇದು ಕಡಿಮೆಯುದಲ್ಲ. ಶ್ರೀ ಹರಿಯು ಪ್ರೀತಿಪಾತ್ರವಾದ ಮಹಾಪ್ರಬಂಧವೆಂಬುದಾಗಿ ಹೇಳುತ್ತಾರೆ. "ಭಾಸ್ಕರ" ಎಂಬ ಪದ್ಯದಿಂದ.

ಭಾಸ್ಕರನ ಮಂಡಲಕ್ಕೂ ಈ ಗ್ರಂಥಕ್ಕೂ ದೃಷ್ಟಾಂತ. ಬಿಂಬ ಭಾವ. ತಸ್ಕರರಿಗೂ ಕುಹಕರಿಗೂ ಬಿಂಬ ಪ್ರತಿಬಿಂಬ ಭಾವ. ಎರಡರಲ್ಲಿಯೂ ನ್ಯೂನತೆಯಿಲ್ಲದಿರುವುದು. ಸಾಧಾರಣ ಧರ್ಮ ಅಂದರೆ ವಸ್ತುಸಾಮ್ಯ. ಇತ್ಯಾದಿಗಳನ್ನು ಅಲಂಕಾರಜ್ಞರು ಊಹಿಸಬೇಕು. ॥೩೫॥

೫. ಶ್ರೀ ಗುರುಹೃದಯ ಪ್ರಕಾಶಿಕೆ :–

ದೂಷಕರ ದೂಷಣೆ ಈ ಗ್ರಂಥಕ್ಕೆ ಬಾಧೆ ಕೊಡಲಾರದೆಂದು ಸದೃಷ್ಟಾಂತ ತಿಳಿಸುತ್ತಾರೆ- ಭಾಸ್ಕರ ಎಂದು. ಭಾಸ್ಕರನೆಂಬ ಸೂರ್ಯನ ಮಂಡಲವನ್ನು ಕಂಡು, ನಮಸ್ಕರಿಸಿ ಸಂತೋಷಪಡದೆ-ದ್ವೇಷದಿಂದ ತಸ್ಕರನೆಂಬ ಕಳ್ಳನು ತನ್ನ ಕಳ್ಳತನಕ್ಕೆ ಅಡ್ಡಿಬಂದನೆಂದು, ಅತಿತೀಕ್ಷ್ಣನೆಂದು ನಿಂದಿಸಿದರೆ ಸೂರ್ಯಗೆ ಹೇಗೆ ಕಡಿಮೆ ಆಗುವುದಿಲ್ಲವೋ, ಹಾಗೆ ಈ ಗ್ರಂಥ ಸಂಸ್ಕೃತವಲ್ಲ-ಕನ್ನಡ, ಶೂದ್ರಭಾಷೆ-ಎಂದು ಕುಹಕ ಅಂದರೆ, ಕುಯುಕ್ತಿಯುಳ್ಳವನು, ತಿರಸ್ಕಾರವೆಂಬ ಅಪಮಾನ ಮಾಡಿದಾಗ್ಯೂ,ಏನಹುದು ಎಂದರೆ

ಹಾನಿ ಏನೂ ಇಲ್ಲವೆಂದರ್ಥ. ಮತ್ತು ಇದನ್ನು ಭಕ್ತಿಪೂರ್ವಕವಾಗಿ ಕೇಳುವರಿಗೆ ಪುಷ್ಕರಾಕ್ಷನೆಂಬ ಕಮಲದಳನೇತ್ರನಾದ ಶ್ರೀಹರಿ ಸದಾ ಒಲಿಯುವನು. ॥೩೫॥

## ಸರ್ವವ್ಯಾಖ್ಯಾನಸಾರಸಂಗ್ರಹ

ಕಳ್ಳತನ ಮಾಡುವವನಿಗೆ ಸೂರ್ಯನ ಬೆಳಕು ಅನಾನುಕೂಲ. ಆ ಚೋರನು ತನ್ನ ಚೋರಕಾರ್ಯಕ್ಕೆ ಅಡ್ಡಿಯಾಗಿರುವ ತೇಜೋಪ್ರದನಾದ ಸೂರ್ಯನನ್ನು ಕಂಡು, ವಂದಿಸಿ, ಸಂತೋಷಪಡದೇ, ದೂಷಿಸುವನು. ಚೋರನ ದ್ವೇಷಪೂರಿತವಾದ ನಿಂದೆಯಿಂದ ಭಾಸ್ಕರನ ಮಂಡಲಕ್ಕೆ ಕುಂದೇನಾದರೂ ಉಂಟಾಗುವುದೇ ?

ಅಂತೆಯೇ, ಕುಟಿಲಮತಿಗಳಾದ ಕುಹಕಿಗಳು, ಭಾಷಾದುರಭಿಮಾನಗ್ರಸ್ತರಾಗಿ, ಈ ಗ್ರಂಥವು ಸಂಸ್ಕೃತಭಾಷೆಯಲ್ಲಿ ರಚಿತವಾಗಿಲ್ಲ. ಕೇವಲ ಪ್ರಾಕೃತಭಾಷಾಗ್ರಂಥವಿದು. ಎಂದು ಹೇಳಿದರೆ, ಗ್ರಂಥಸ್ಥವಾದ ಶ್ರೀಹರಿಯ ಚರಿತಾಮೃತಕ್ಕೆ ಹಾನಿಯೇನಾದರೂ ಉಂಟೇ ? ಗ್ರಂಥಪ್ರತಿಪಾದ್ಯನಾದ ಶ್ರೀಲಕ್ಷ್ಮೀನರಸಿಂಹದೇವರು ಸಕಲದುರಿತಪರಿಹಾರಕರು. ಶ್ರೀಹರಿಯು, ರೂಪ, ಕ್ರಿಯಾದಿಗಳನ್ನು ಮನ ಮುಟ್ಟುವಂತೆ ವಿವರಿಸಲು ಹೊರಟಿರುವ ಪ್ರಸಕ್ತಗ್ರಂಥವು ಪ್ರಾಕೃತದಲ್ಲಿದ್ದರೂ, ಅಪ್ರಾಕೃತನ ಮಹಿಮಾನ್ವಿತವಿಷಯಗಳನ್ನು ಪ್ರತಿಪಾದಿಸುವುದರಿಂದ ತ್ಯಾಜ್ಯವೆಂದೆಂದಿಗೂ ಅಲ್ಲವೆಂದು ತಾತ್ಪರ್ಯ.

ಈ ಗ್ರಂಥಸ್ಥ ವಿಷಯಗಳನ್ನು ಭಕ್ತಿ ಆದರಗಳಿಂದ ಹೇಳುವವರಿಗೆ, ಕೇಳುವವರಿಗೆ, ಅಧ್ಯಯನಮಾಡುವವರಿಗೆ ಕಮಲದಳಾಯತಾಕ್ಷನಾದ, ಕಂಜನಾಭನು ಸದಾ ಪ್ರಸನ್ನನಾಗಿ ಅನುಗ್ರಹಿಸುವನು. ಇಲ್ಲಿ ಕುಹಕಿಗಳು ಚೋರನ ಸದೃಶರು. ಪ್ರಕಾಶಮಾನವಾದ ಭಾಸ್ಕರ ಮಂಡಲವು ನಿರ್ದೋಷನಾದ ಶ್ರೀಹರಿಯು ಗುಣಾವಳಿಗಳ ಸದೃಶ. ॥೩೫॥

## ಪದ್ಯ-೩೬

**ಮೂಲ :–**

**ಪತಿತನ ಕಪಾಲದೊಳು ಭಾಗೀ |**
**ರಥಿಯು ಜಲವಿರೆ ಪೇಯುವೆನಿಪುದೆ |**
**ಇತರ ಕವಿನಿರ್ಮಿತ ಕುಕಾವ್ಯಾಶ್ರಾವ್ಯ ಬುಧರಿಂದ ||**
**ಕೃತಿಪತಿ ಕಥಾನ್ವಿತವೆನಿಪ ಪ್ರಾ |**
**ಕೃತವೆ ತಾ ಸಂಸ್ಕೃತವೆನಿಸಿ ಸ |**
**ದ್ಗತಿಯನೀವುದು ಭಕ್ತಿಪೂರ್ವಕ ಕೇಳಿ ಪೇಳ್ವರಿಗೆ || ||೩೬||**

**ಅವತರಣಿಕೆ :–**

ಭಗವನ್ಮಹಿಮಾನ್ವಿತವಾದ ಯಾವ ಕಾವ್ಯವೇ ಆಗಲಿ, ಗ್ರಂಥವೇ ಆಗಲೀ, ಅದರ ನಿರ್ಮಾಣದಲ್ಲಿ ಉಪಯೋಗಿಸಿರುವ ಭಾಷಾ ಮುಖ್ಯ ವಲ್ಲ ಎಂಬ ಸದ್ವಚನವನ್ನು ತಿಳಿಸುತ್ತಾರೆ– ||೩೬||

**ಪ್ರತಿಪದಾರ್ಥ :–**

**ಪತಿತನ** = ಪಾಪಿಷ್ಠನಾದ ಮಾನವನ **ಕಪಾಲದೊಳು** = **ತಲೆ** ಬುರುಡೆಯಲ್ಲಿ, **ಭಾಗೀರಥಿಯು ಜಲವಿರೆ** = ಗಂಗಾಜಲವಿದ್ದ ಮಾತ್ರಕ್ಕೆ, **ಪೇಯುವೆನಿಪುದೆ** = ಪಾನಕ್ಕೆ ಯೋಗ್ಯವಾಗುವುದೇ ? **ಇತರ** = ಭಗವದ್ಭಕ್ತರಲ್ಲದೆ, ವಿಷ್ಣು ವೈಷ್ಣವ ದ್ವೇಷಿಗಳಾದ ಮಿಶ್ರ ಜ್ಞಾನಿ, ಮಿಥ್ಯಾ ಜ್ಞಾನಿಗಳಾದ, **ಕವಿನಿರ್ಮಿತ** = ಕವಿಗಳಿಂದ ರಚಿತವಾದ, **ಕುಕಾವ್ಯ** = ಕುತ್ಸಿತಕಾವ್ಯ **ಅಶ್ರಾವ್ಯ** = ಶ್ರವಣಕ್ಕೆ ಯೋಗ್ಯವಲ್ಲವೆಂತಲೂ ಕರೆಸುವು ದಾಗುತ್ತದೆ, **ಬುಧರಿಂದ** = ಭಗವದ್ಭಕ್ತರಾದ ಜ್ಞಾನಿಗಳಿಂದ, **ಕೃತಿಪತಿ**

= ಕೃತೀನಾಮಕಳಾದ ಲಕ್ಷ್ಮೀದೇವಿಯ ರಮಣನಾದ ಶ್ರೀಪ್ರದ್ಯುಮ್ನ ದೇವರ, **ಕಥಾನ್ವಿತವೆನಿಪ** = ಗುಣಗಾನರೂಪವಾದ ವಿಷಯಗಳಿಂದ ಯುಕ್ತವಾಗಿರುವ **ಪ್ರಾಕೃತವೆ** = ಪ್ರಾಕೃತಭಾಷೆಯಲ್ಲಿ ರಚಿತವಾದ ಈ ಗ್ರಂಥವೇ, ತಾ **ಸಂಸ್ಕೃತವೆನಿಸಿ** = ಸಂಸ್ಕೃತಭಾಷಾಕ್ಕೆ ಸಮಾನ ವೆಂದೆನಿಸಿಕೊಂಡು, **ಭಕ್ತಿಪೂರ್ವಕ** = ಅತ್ಯಂತ ಶ್ರದ್ಧಾಭಕ್ತಿಗಳಿಂದ, **ಕೇಳಿ** = ಶ್ರವಣ ಮಾಡುವವರಿಗೂ, **ಪೇಳ್ವರಿಗೆ** = ಹೇಳುವವರಿಗೂ, **ಸದ್ಗತಿಯನು** = ಉತ್ತಮ ಗತಿರೂಪವಾದ ಮೋಕ್ಷವನ್ನು **ಈವುದು** = ಕೊಡುವುದು. ॥೩೬॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಭಗವನ್ಮಹಿಮಾ ಮುಖ್ಯವೇ ಹೊರ್ತು ಭಾಷಾ ಮುಖ್ಯವಲ್ಲ– ಎಂತ ಹೇಳತಾರೆ. ಮತ್ತು ಸದ್ಗತಿ ಐದಬೇಕಾದರೆ ಭಾಷಾನೇ ಪ್ರಯೋಜನವಲ್ಲ" ಮುಖ್ಯ ಪ್ರಯೋಜನ ದಾವದೆಂದರೆ, ದಾವಭಾಷಾ ಆದಕಾಲಕ್ಕೂ ತಾರ ತಮ್ಯ ಪಂಚಭೇದದಿಂದ ಯುಕ್ತವಾಗಿ ಹರಿ ಸರ್ವೋತ್ತಮ, ವಾಯು ಜೀವೋ ತ್ತಮಪೂರ್ವಕವಾಗಿ ವಿಷ್ಣುಮಹಿಮಾದಿಂದ ಯುಕ್ತವಾದ ಕಾವ್ಯ ದಾವ ಭಾಷಾದಿಂದ ಇದ್ದರೂ, ಸದ್ಗತಿ ಕೊಡತದೆ, ತದನ್ಯಗಳ ಕೊಡೋದಿಲ್ಲ-ಎಂತ ದೃಷ್ಟಾಂತದಿಂದ ಹೇಳತಾರೆ.

ಜಾತಿಭ್ರಷ್ಟನಾದ ಬ್ರಾಹ್ಮಣನ ಶಿರದಲ್ಲಿ ತ್ರಿವಿಕ್ರಮ ದೇವರ ನಖದಿಂದ ಅಂಡಖರ್ಪರ ಭಿನ್ನವಾಗಿ ಬಹಿರಾವರಣದಿಂದ ಬಂದ ಪರಿಶುದ್ಧವಾದ ಗಂಗಾ

ಜಲವಿದ್ದ ಮಾತ್ರಕ್ಕೆ ಭಾಗೀರಥೀ ಪರಮಶುದ್ಧಳೆಂದು ಪಾನಕ್ಕೆ ಯೋಗ್ಯವಾಗೋದೆ ? ಯೋಗ್ಯವಾಗಲಾರದು. ಪತಿತನ ಸ್ಪರ್ಶವಾದ್ದರಿಂದ ಪಾನಕ್ಕೆ ಯೋಗ್ಯವಾಗಲಿಲ್ಲ. ತದಪೇಕ್ಷಯಾದ ಅತ್ಯಂತ ನೀಚವಾದ ಕೂಪೋದಕ, ಪತಿತನಲ್ಲದ ಭಗವದ್ಭಕ್ತನ ಕಪಾಲಗತ ಉದಕ ಶ್ರೇಷ್ಠ ಎಂತ ಎನಿಸಿ ಪಾನಕ್ಕೆ ಯೋಗ್ಯವಾದಂತೆ ಇದು ಹ್ಯಾಂಗೋ ತದ್ವತ್ ಭಗವದ್ಭಕ್ತರಲ್ಲದ ಇತರರಾದ ಮಿಶ್ರಜ್ಞಾನಿ ಮಿಥ್ಯಾಜ್ಞಾನಿಗಳಾದ ಕವಿಗಳಾದ ಏತಾದೃಶ ಜ್ಞಾನವುಳ್ಳವರಿಂದ ನಿರ್ಮಿತವಾದ ಭಗವನ್ಮಹಿಮಾದಿಂದ ರಹಿತವಾದ ಸಂಸ್ಕೃತಭಾಷಾದಿಂದ ರಚಿತವಾದ ಕಾವ್ಯ ದಾವದದೆ ಅದು ಕುತ್ಸಿತಕಾವ್ಯವೆಂದು ಕರಸುತ್ತದೆ. ಇಂಥಾ ಕಾವ್ಯ ಭಗವದ್ಭಕ್ತರಾದ ಜ್ಞಾನಿಗಳಿಂದ ಶ್ರವಣ ಮಾಡೋದಕ್ಕೆ ಯೋಗ್ಯವಲ್ಲ. ಗಂಗಾ ಯದ್ಯಪಿ ಉತ್ತಮಳಾದ ಕಾಲಕ್ಕೂ ಪತಿತನ ಸ್ಪರ್ಶವಾದ್ದರಿಂದ ತ್ಯಾಗಕ್ಕೆ ಕಾರಣಗಳು-ಹಾಂಗೋ ಅದರಂತೆ, ಭಾಗೀರಥೀ ಸದೃಶವಾದ ಸಂಸ್ಕೃತಭಾಷಾ ಪರಮಾತ್ಮನ ಮಾಹಾತ್ಮ್ಯವನ್ನು ಸ್ಪರ್ಶಮಾಡಿದರೇ ಶ್ರೇಷ್ಠತ್ವ ಬಂದೀತೆ ಹೊರ್ತು ಅನ್ಯಥಾ ಬರಲಾರದು. ಭಾಷಾದೊಳಗೆ ಶ್ರೇಷ್ಠಭಾಷಾನೇ. ಬ್ರಾಹ್ಮಣ ಪತಿತನಾದರೆ ಶೂದ್ರನಕ್ಕಿಂತಲೂ ನೀಚ ಎಂತ ಕರಸತಾನೆ. ಹೂವಿನಿಂದ ನಾರೂ ತಲೆಗೆ ಸೇರಿದಂತೆ ಸಂಸ್ಕೃತಭಾಷಾ ಎಂತ ತಿಳಿಯಬೇಕು. ಕೃತೀನಾಮಕ ಲಕ್ಷ್ಮೀದೇವರ ಪತಿಯಾದ ಶ್ರೀಪ್ರದ್ಯುಮ್ನಾಭಿನ್ನ ಶ್ರೀನಾರಾಯಣ ದೇವರ, ಅವನ ಗುಣಗಾನ, ಅವನ ಮಹಾತ್ಮೆ ಇತ್ಯಾದಿ ಕಥೆಗಳಿಂದ ಯುಕ್ತವಾದದ್ದು- ಎಂತ ಎನಿಸತಕ್ಕ ಕೂಪೋದಕಕ್ಕೆ ಸಾಮ್ಯವಾದ ಪ್ರಾಕೃತಭಾಷಾನೇ ತಾನು ಸಂಸ್ಕೃತ ತುಲ್ಯ ಎಂತ ಎನಿಸಿ ಸಮೀಚೀನವಾದ ಭಕ್ತಿ ವೈರಾಗ್ಯಗಳಿಂದ ಸಹಿತವಾದ ಭಗವದ್ವಿಷಯವಾದ ಜ್ಞಾನವನ್ನ ಕೊಡೋದಾಗತದೆ. ಸಂಸ್ಕೃತಭಾಷಾ ಶ್ರೇಷ್ಠವೆಂದು ಅದರಲ್ಲಿ

ದೃಷ್ಟಿ ಇಟ್ಟು ಭಗವನ್ಮಹಿಮಾರಹಿತವಾದ ಕಾವ್ಯಗಳ ಕೇಳೋಣದರಿಂದ ಅದು ಸದ್ಗತಿ ಕೊಡೋದಿಲ್ಲ ಎಂತ ತಾತ್ಪರ್ಯ. ಭಗವನ್ಮಹಿಮಾ ಹೇಳತಕ್ಕ ಪ್ರಾಕೃತವೇ ಆಗಲಿ ತಾರತಮ್ಯಪಂಚಭೇದದಿಂದ ಯುಕ್ತವಾದ **ಭಕ್ತಿಯಿಂದ ಸಹಿತರಾಗಿ** ಹೇಳತಕ್ಕವರಿಗೆ ಸದ್ಗತಿ ಕೊಡತದೆ. ತದ್ವ್ಯತಿರಿಕ್ತ ಸದ್ಗತಿ ಆಗೋದಿಲ್ಲ. ಸಂಸ್ಕೃತ ಅನ್ಯಮಹಾತ್ಮೆ ಹೇಳಿ, ಭಗವನ್ಮಹಾತ್ಮೆ ಬಿಡೋಣ ದರಿಂದ ಪ್ರಾಕೃತಭಾಷಾ ತುಲ್ಯವೇ ಆಗತದೆ. ಪ್ರಾಕೃತಭಾಷಾ ಆದರೂ ಭಗವನ್ಮಹಾತ್ಮೆ ಹೇಳಿದರೆ ಅದೇ ಸಂಸ್ಕೃತ ತುಲ್ಯವಾಗತದೆ. ದಾವ ಭಾಷಾ ವಾದರೂ ಭಗವನ್ಮಹಾತ್ಮೆ ಇರಬೇಕು. ಭಕ್ತಿರಸ ಇರಬೇಕು ಎಂತ ತಾತ್ಪರ್ಯ. ॥೨೬॥

**೨. ಭಾವಪ್ರಕಾಶಿಕೆ :–**

ಭಾಗೀರಥಿಯ ಉದಕವು ಸ್ನಾನಪಾನಾದಿಗಳಿಗೆ ಯೋಗ್ಯವಾದುದೇ ಆದರೂ ಆ ಉದಕವು ಪತಿತ ಚಂಡಲಾದಿಗಳ ಕಪಾಲಾಸ್ಥಿಯಲ್ಲಿ ನಿಂತಿರಲು ಅದು ಪಾನಕ್ಕೆ ಯೋಗ್ಯವಾಗುವುದೆ ? ಎಂದಿಗೂ ಇಲ್ಲ. ಭಾಗೀರಥಿಯು ಉತ್ತಮವಾದರೂ ಕಪಾಲದ ಅಸ್ಥಿಯಲ್ಲಿ ನಿಂತ ಪ್ರಯುಕ್ತ ಹೇಗೆ ನಿಷಿದ್ಧವೋ ಹಾಗೆ ಸಂಸ್ಕೃತವಾದರೂ ಸ್ತ್ರೀವರ್ಣನಾದಿಗಳಿಂದ ಅಶ್ರಾವ್ಯವು. "ಗಂಗಾ ಸಂಗೇನ ನೈರ್ಮಲ್ಯಂ ರಥ್ಯಾದ್ಭಿರ್ಲಭ್ಯತೇ ಯಥಾ" ॥ ಎಂಬ ತತ್ತ್ವ ಪ್ರಕಾಶಿಕೆಯು ವಾಕ್ಯದಂತೆ ಬೀದಿಯಲ್ಲಿ ಹರಿಯುತ್ತಿರುವ ಮೋಹರಿಯ ನೀರು ಗಂಗೆಯೊಳಗೆ ಸೇರಲು ಹೇಗೆ ಶುದ್ಧವಾಗುವುದೋ, ಹಾಗೆ ಗ್ರಂಥವು ಪ್ರಾಕೃತ ವಾದರೂ ಭಗವದ್ಗುಣಗಳಿಂದ ಕೂಡಿದರೆ ಗ್ರಾಹ್ಯವಾಗುವುದು. ಗಂಗೋ ದಕದಂತೆ ಸಂಸ್ಕೃತವಿದ್ದರೂ ಮಹತ್ತರವಾದ ದೋಷವುಳ್ಳ ಕಪಾಲದಲ್ಲಿ ನಿಂತರೆ, ಅದು ನಿಷಿದ್ಧವಾಗುವಂತೇ ಸಂಸ್ಕೃತವೂ ನಿಷಿದ್ಧವಾಯಿತು.

ಮೋಹರಿಯನೀರು ನಿಷಿದ್ಧವಾದರೂ ಗಂಗಾನದಿಯಲ್ಲಿ ಬೀಳುವುದರಿಂದ ಈ ಅಶುದ್ಧವಾದ ನೀರು ಸಹ ಶುದ್ಧವಾಗುವುದು. ಇದರಂತೆ ಪ್ರಾಕೃತಭಾಷೆಯು ಮೋಹರಿಯ ನೀರಿನಂತೆ ಅಶುದ್ಧವಾದರೂ ಅದು ಮಹಾನದಿಯಂತಿರುವ ವಿಷ್ಣುವಿನ ಮಹಿಮೆಯನ್ನು ಹೇಳುವುದರಿಂದ ಸಂಸ್ಕೃತದಂತೆ ಶುದ್ಧವಾಯಿತೆಂತ ತಾತ್ಪರ್ಯ. ಆದ್ದರಿಂದ ಈ ಗ್ರಂಥವನ್ನು ಪಠನ ಮಾಡುವವರಿಗೆ ಉತ್ತಮಗತಿಯಾಗುವದು. ॥೩೬॥

೩. ಭಾವದರ್ಪಣ :–

ನವರಸಭರಿತವಾದಂಥ ನಾಟಕಾಲಂಕಾರಸಹಿತ ಕಾವ್ಯಗಳೂ, ತರ್ಕಶಾಸ್ತ್ರ ಮೊದಲಾದ ಇತರ ಶಾಸ್ತ್ರಗಳೂ ಸಜ್ಜನರಿಂದ ಪರಲೋಕ ವಿಷಯದಲ್ಲಿ ಹ್ಯಾಗೆ ಅಗ್ರಾಹ್ಯವೋ, ಹಾಗೆ ಈ ಗ್ರಂಥದಲ್ಲಿ, ಶ್ರೀಹರಿಯ ಸದ್ಗುಣಾಖ ಅಮೂಲ್ಯ ತತ್ವರತ್ನ ಪೋಣಿಸಿದಂಥ ಪ್ರಾಕೃತೋಕ್ತಿಗಳಾದ್ದರಿಂದ ಜ್ಞಾನಿಗಳು ಸ್ವೀಕರಿಸುತ್ತಾರೆಂದು ಹೇಳುತ್ತಾರೆ. ಪತಿತೇತಿ ॥ ॥೩೬॥

೪. ಶ್ರೀ ವ್ಯಾಸದಾಸ ಸಿದ್ಧಾಂತ ಕೌಮುದೀ :–

"ಪತೀತ" ಇತಿ ॥ "ಇತರಃ" ಅಭಕ್ತಃ ॥ ಗಾರುಡೇ – ಚ ॥ ॥೩೬॥

## ಕನ್ನಡಾರ್ಥ

ಪ್ರಾಕೃತವಾದರೂ ಈ ಗ್ರಂಥವು ಸಂಸ್ಕೃತದ ಸತ್ಪ್ರಬಂಧಗಳಂತೆ, ಸೇವಿಸಿದವರಿಗೆ ಸದ್ಗತಿಯನ್ನೀವುದೆಂಬುದನ್ನು ನಿದರ್ಶನದಿಂದ ತೋರಿಸುತ್ತಾರೆ. "ಪತಿತನ" ಎಂಬ ಪದ್ಯದಿಂದ.

ಇತರರೆಂದರೆ ಅಭಕ್ತರೆಂದು ತಿಳಿಯಬೇಕು ಗರುಡಪುರಾಣದಲ್ಲಿ ೩೧ ನೆಯ ಅಧ್ಯಾಯದಲ್ಲಿ ಪರಮಾತ್ಮನ ವಚನವು ಹೀಗೆ ಇರುತ್ತದೆ. "ಅಭಕ್ತರಿಂದ ಉಚ್ಚರಿಸಲ್ಪಟ್ಟವಾದ ನಾಮವನ್ನು ಭಕ್ತನು ಕೇಳಿದರೆ, ನರಕದಲ್ಲಿ ದುಃಖವಾಗುತ್ತದೆ. ಅಭಕ್ತರು ಹೇಳುವ ಕಥೆಗಳು, ವೇದಗಳು, ಸ್ತುತಿಪಠನ, ಮಂತ್ರೋಚ್ಚಾರಣ, ವಚನಗಳು, ಅಭಕ್ತನು ಮಾಡಿದ ಅನ್ನ–ಅಡಿಗೆ, ಇವುಗಳು ಇಹ–ಪರಗಳಲ್ಲಿ ದುಃಖವನ್ನು ಕೊಡುತ್ತವೆ. ಅಭಕ್ತನು ಒಳ್ಳೇ ಸುಶ್ರಾವ್ಯ ಗಾಯನವನ್ನು ಮಾಡಿದರೂ ಅದು ದುಃಖಕಾರಿಯಾಗುವದು." ಎಂದು ಹೇಳಿರುತ್ತಾನೆ. ಇದಲ್ಲದೆ ಅವೈಷ್ಣವ ದಾನವೂ ಸಹ ಅದರಂತೆ ದುಃಖವನ್ನು ಕೊಡುವದು." ಎಂದೂ ಶ್ರೀಕೃಷ್ಣನ ವಚನವಿರುತ್ತದೆ. ॥೩೬॥

## ೫. ಶ್ರೀ ಗುರುಹೃದಯ ಪ್ರಕಾಶಿಕೆ :–

ಸಂಸ್ಕೃತವಾದರೂ ಅಸತ್ಕಾವ್ಯ ದುರ್ಗತಿಪ್ರದವು. ಪ್ರಾಕೃತವಾದರೂ ದೇವರ ಮಹಿಮೆ ಹೇಳುವ ಗ್ರಂಥವು ಸದ್ಗತಿಪ್ರದವೆಂದು– ಸದೃಷ್ಟಾಂತ ಬೋಧಿಸುತ್ತಾರೆ- ಪತಿತ ಎಂದು. ಜಾತಿಭ್ರಷ್ಟನ ಶಿರಸ್ಸಿನಲ್ಲಿ ಗಂಗಾಜಲ ಇದ್ದಾಗ್ಯೂ, ಅದು ಹೇಗೆ ಪಾನಯೋಗ್ಯವಲ್ಲವೋ. ಹಾಗೆ ಇತರರೆಂಬ ದುಷ್ಟವ್ರಿನಿರ್ಮಿತ ಕುತ್ಸಿತ ಕಾವ್ಯವು ಜ್ಞಾನಿಗಳಿಂದ ಕೇಳತಕ್ಕದ್ದಲ್ಲ. ಕೃತಿಪತಿ ಎಂಬ ಪದ್ಯ್ಯವನ್ನು ದೇವರ ಕಥೆಯಿಂದ ಕೂಡಿದ ಪ್ರಾಕೃತಭಾಷೆಯು ಕಾವ್ಯವೇ ಸಂಸ್ಕೃತ ಎನ್ನಿಸಿಕೊಂಡು ಭಕ್ತಿಪೂರ್ವಕ ಹೇಳಿ ಕೇಳುವವರಿಗೆ ಸದ್ಗತಿಯನ್ನು ಕೊಡುವುದು. ॥೩೬॥

# ಸರ್ವವ್ಯಾಖ್ಯಾನಸಾರ ಸಂಗ್ರಹ

ಪತಿತನ ತಲೆ ಬುರುಡೆಯಲ್ಲಿ ಗಂಗಾಜಲವಿದ್ದ ಮಾತ್ರಕ್ಕೆ ಅದು ಪಾನ ಯೋಗ್ಯವೆನಿಸುವುದಿಲ್ಲ. ಗಂಗಾಜಲವು ಪವಿತ್ರವಾಗಿರುವುದು ಖರೆ. ಆದರೆ ಅದು ಇರುವ ಅಧಿಷ್ಠಾನವು ನೀಚವಾಗಿರುವುದರಿಂದ ಗಂಗೋದಕವು ಪೇಯ್ಯ ವೆನಿಸುವುದಿಲ್ಲ. ಅಂತೆಯೇ ಸಂಸ್ಕೃತಭಾಷೆಯು ಭಾಷಾತಾರತಮ್ಯದಲ್ಲಿ ಶ್ರೇಷ್ಠವಾದ ಭಾಷೆಯೇನೋ ಖರೆ. ಆದರೆ ಐಕ್ಯವಾದಿಗಳೂ, ಮಿಥ್ಯಾವಾದಿ ಗಳೂ ಆದ ಇತರ ಕವಿಗಳಿಂದ ನಿರ್ಮಿತವಾದ ಶಾಸ್ತ್ರಗಳು, ಸ್ತ್ರೀಯರ ಕಚ–ಕುಚಗಳನ್ನೇ ವರ್ಣಿಸುವ ಇತರ ಗ್ರಂಥಗಳು ಸಂಸ್ಕೃತದಲ್ಲಿಯೇ ರಚಿತ ವಾಗಿದ್ದರೂ, ಅವು ಕುಕಾವ್ಯಗಳೆನಿಸುವುವು, ಅವು ಶ್ರವಣಕ್ಕೆ ಅರ್ಹವಲ್ಲ. ಅವುಗಳ ಅಧ್ಯಯನ, ಶ್ರವಣಾದಿಗಳಿಂದ ನರಕಾದ್ಯನರ್ಥಗಳೇ ಪ್ರಾಪ್ತಿ. ಸಂಸ್ಕೃತಭಾಷೆಯು ಪವಿತ್ರ ಗಂಗಾಜಲ ಸದೃಶವು. ಕುತಾರ್ಕಿರವಾದ ದುಶ್ಶಾಸ್ತ್ರಗಳು ಪತಿತನ ಕಪಾಲಸದೃಶವು. ಸಂಸ್ಕೃತದಲ್ಲಿದ್ದರೂ ಶ್ರವಣಾರ್ಹ ವಲ್ಲ- ಎಂದು ತಾತ್ಪರ್ಯ.

ಕೃತಿಪತಿಯ ಸುಧಾಮೃತವೆಂಬ ದಿವ್ಯ ಚರಿತ್ರಾನ್ವಿತವಾದ ಗ್ರಂಥವು ಪ್ರಾಕೃತದಲ್ಲಿದ್ದರೂ ಸರಿ, ಜ್ಞಾನಿಗಳಿಂದ ಗ್ರಾಹ್ಯವು. ಅದು ಸಂಸ್ಕೃತಕ್ಕೆ ಸಮಾನವೆನಿಸುವುದು, ನಿರ್ಮತ್ಸರರಾದ ಭಗವದ್ಭಕ್ತರು ಅದನ್ನು ಕೇವಲ ಪ್ರಾಕೃತವೆಂಬ ಭಾವನೆಯಿಂದ ದೂರೀಕರಿಸುವುದಿಲ್ಲ. ಶ್ರೀಹರಿಯ ಗುಣ ಗಳನ್ನು ಹೇಳದ ಕಾವ್ಯವು ಸಂಸ್ಕೃತದಲ್ಲಿದ್ದರೂ ತಾಜ್ಯಾರ್ಹವು. ಕೃತಿಪತಿ ಕಥಾನ್ವಿತವೆನಿಪ ಈ ಪ್ರಾಕೃತ ಗ್ರಂಥವು ಓದಿದವರಿಗೆ, ಹಾಗೂ ಕೇಳಿದವ ರಿಗೆ ಭಕ್ತಿಯನ್ನು ವರ್ಧಿಸಿ, ವೈರಾಗ್ಯಸಂಪತ್ತನ್ನು ಕರುಣಿಸಿ, ಅವರನ್ನು ಭಗವದನುಗ್ರಹಕ್ಕೆ ಪಾತ್ರರನ್ನಾಗಿಸಿ, ಸದ್ಗತಿಯನ್ನು ಕೊಡುವುದು. ಇದ ರಲ್ಲಿ ಸಂಶಯವಿಲ್ಲವೆಂದು ತಿಳಿಸುತ್ತಾರೆ. ॥೩೬॥

**ವಿಶೇಷ ವಿಷಯ :–** ೩೧ನೇ ಶ್ಲೋಕದಿಂದ ೩೬ನೇ ಶ್ಲೋಕದ ವರೆಗೆ ಗ್ರಂಥಕರ್ತೃಗಳು ಈ ಗ್ರಂಥದ ಬಗ್ಗೆ ಆಡಿರುವ ಮಾತುಗಳು ಬಹಳ ಅರ್ಥಗರ್ಭಿತವಾಗಿವೆ. ಇವುಗಳನ್ನು ಓದುಗರು ವಿಶೇಷವಾಗಿ ಗಮನಿಸ ಬೇಕು. ಈ ಕೃತಿರತ್ನವು ಮೋಕ್ಷಪ್ರದವೆಂದು ಗ್ರಂಥಕರ್ತೃಗಳ ಮಾತಿ ನಿಂದಲೇ ಸ್ಪಷ್ಟವಾಗುವುದು. ಶ್ರೀದಾಸರಾಯರ, ಅಪರೋಕ್ಷಜ್ಞಾನಿಗಳು. ಅವರ ಮಾತು ಆಪ್ತವಾಕ್ಯ ಪ್ರಮಾಣ. 'ಇದು ಮೋಕ್ಷಸಾಧಕಗ್ರಂಥವಲ್ಲ' (ಪ್ರಾಕೃತ ಭಾಷಾಗ್ರಂಥವಾದ ಕಾರಣ) ಎಂದು ಹೇಳುವವರು ಸ್ವೋತ್ತಮ ದ್ರೋಹದೆಸೆಯಿಂದಾಗಿ ನಿತ್ಯನರಕ ಭಾಜನರಾಗುವರು. ಶ್ರೀಹರಿಯೇ ಅವರಲ್ಲಿ ನಿಂತು ನುಡಿಸಿದ್ದಾನೆಂದು ಪ್ರಮಾಣಮಾಡಿ ಹೇಳಿರುವುದರಿಂದ, ಅವರ ಮಾತುಗಳಲ್ಲಿ ಅವಿಶ್ವಾಸವನ್ನು ತೋರುವವರು ಶ್ರೀಹರಿಯ ಮಾತಿ ನಲ್ಲೇ ಅವಿಶ್ವಾಸವನ್ನು ತೋರಿದಂತಾಗುವುದು. ಇದು ಪ್ರಕಾಶಕರ ನಿಸ್ಸಂಶಯವಾದ, ಸ್ಪಷ್ಟವಾದ ಅಭಿಪ್ರಾಯ. ॥೩೬॥

## ಪದ್ಯ-೩೭

ಮೂಲ:–

ವೇದಶಾಸ್ತ್ರ ಸಯುಕ್ತಿ ಗ್ರಂಥಗ ।
ಳೋದಿ ಕೇಳ್ದವನಲ್ಲ ಸಂತತ ।
ಸಾಧುಗಳ ಸಹವಾಸ ಸಲ್ಲಾಪಗಳು ಮೊದಲಿಲ್ಲ ॥
ಮೋದತೀರ್ಥಾರ್ಯರ ಮತನಾಗ ।
ರಾದವರ ಕರುಣದಲಿ ಪೇಳ್ದ ರ ।
ಮಾಧವ ಜಗನ್ನಾಥವಿಠ್ಠಲ ತಿಳಿಸಿದದರೊಳಗೆ ॥ ॥೩೭॥

**ಅವತರಣಿಕೆ :—**

ಶ್ರೀಮದಾನಂದತೀರ್ಥ ಭಗವತ್ಪಾದರಮತಾನುಗ್ರರಾದ ಜ್ಞಾನಿಗಳ ಕೃಪಾಬಲದಿಂದ ಈ ಗ್ರಂಥವನ್ನು ರಚಿಸಿದ್ದೆಂದು ಗ್ರಂಥಕರ್ತರು ಹೇಳುತ್ತಾರೆ. ॥೩೭॥

**ಪ್ರತಿಪದಾರ್ಥ :—**

**ವೇದ** = ಅಪೌರುಷೇಯವಾದ ವೇದಗಳು, **ಶಾಸ್ತ್ರ** = ಶ್ರೀಮದ್ಭಾಗವತ, ಇತ್ಯಾದಿ **ಪುರಾಣಗಳು**, ಭಾರತಾದಿ ಇತಿಹಾಸ ಗ್ರಂಥಗಳು, ಶ್ರೀಮದಾಚಾರ್ಯ ಕೃತ ಸರ್ವಮೂಲ **ಗ್ರಂಥ**ಗಳು. ತದನುಸಾರಿ ಟೀಕಾ ಟಿಪ್ಪಣಿ ಗ್ರಂಥರತ್ನಗಳು ಇತ್ಯಾದಿ ಸಚ್ಛಾಸ್ತ್ರಗಳು, **ಸಯುಕ್ತಿ ಗ್ರಂಥಗಳ** = ಯುಕ್ತಿ ಯುಕ್ತನಾದ ಅನೇಕ ಸದ್ಗ್ರಂಥಗಳು, **ಓದಿ** = ಇವುಗಳನ್ನು ಅಧ್ಯಯನ ಮಾಡಿಯೂ, **ಕೇಳ್ದವನಲ್ಲ** = ಅನ್ಯರಿಂದ ಶ್ರವಣ ಮಾಡಿದವನೂ ನಾನಲ್ಲ. **ಸಂತತ** = ಯಾವಾಗಲೂ, **ಸಾಧುಗಳ** = ಸಜ್ಜನರಾದ ಭಗವದ್ಭಕ್ತರ, **ಸಹವಾಸ** = ಸಂಗವಾಗಲೀ, **ಸಲ್ಲಾಪಗಳು** = ಅವರೊಡನೆ ಭಗವತ್ತತ್ವ ವಿಚಾರರೂಪವಾದ ಮಾತುಗಳಾಗಲೀ, **ಮೊದಲಿಲ್ಲ** = ಆಧ್ಯಾರಭ್ಯ ಇಂದಿನ ಪರ್ಯಂತ ಇಲ್ಲ. **ಮೋದತೀರ್ಥಾರ್ಯರ** = ಪರಮಪೂಜ್ಯರಾದ ಶ್ರೀಮದಾನಂದತೀರ್ಥ ಭಗವತ್ಪಾದರ **ಮತಾನುಗರಾದವರ** = ಸಿದ್ಧಾಂತವನ್ನು ಅನುಸರಿಸುವವರ, **ಕರುಣದಲಿ** = ನಮ್ಮ ಗುರುಗಳಾದ ಭಾಗಣ್ಣ ದಾಸವರ್ಯರ ಪರಮಾನುಗ್ರಹದಿಂದ (ಇದರಿಂದ ವಿಜಯದಾಸಾರ್ಯಾದಿ ಇತರ ಗುರು ಪರಂಪರಾ ಗ್ರಾಹ್ಯ) **ರಮಾಧವ** = ಇಂದಿರಾರಮಣಾಭಿನ್ನನಾದ **ಜಗನ್ನಾಥವಿಠ್ಠಲ** = ನನ್ನ ಅಂಕಿತನಾಮನಾದ ಶ್ರೀ ಜಗನ್ನಾಥವಿಠ್ಠಸ್ವಾಮಿಯು, **ತಿಳಿಸಿದದರೊಳಗೆ** = ನನಗೆ

ಜ್ಞಾನವನ್ನು ಕೊಟ್ಟು ಎಷ್ಟನ್ನು ತಿಳಿಸಿ, ಪರಮಾನುಗ್ರಹ ಮಾಡಿದ್ದಾನೋ ಅಷ್ಟರಲ್ಲಿ, **ಪೇಳ್ದ** = ಬಿಂಬನು ನನ್ನ ಅಧಿಷ್ಠಾನದಲ್ಲಿ ನಿಂತು, ಪ್ರೇರಿಸಿ ನುಡಿದು ನುಡಿಸಿದ್ದನ್ನು ಹೇಳಿರುವೆನು– ಎಂದು **ದತ್ತ ಸ್ವಾತಂತ್ರ್ಯ ಸಂಧಿಯನ್ನು** ಉಪಸಂಹರಿಸುತ್ತಾರೆ. ॥೩೭॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಶ್ರೀಹರಿಕಥಾಮೃತಸಾರವನ್ನ ಅಪರೋಕ್ಷಜ್ಞಾನದಿಂದ ಹೇಳಿದ್ದು ಎಂತ ಹೇಳತಾರೆ. ಈ ವರ್ತಮಾನ ಜನ್ಮದಲ್ಲಿ ಅಪೌರುಷೇಯವಾದ ವೇದಗಳೇನು, ಶ್ರೀಭಾಗವತ, ಭಾರತ ಇನ್ನೂ ಅನೇಕವಾದ ಪುರಾಣಗಳು ಹಾಂಗೇ ಶ್ರೀಸರ್ವಜ್ಞರಾಯರ ಗ್ರಂಥಗಳು, ಇನ್ನೂ ಟೀಕಾ ಮೊದಲಾದ ಅನೇಕ ಯುಕ್ತಿಗಳಿಂದ ಸಹಿತವಾದ ಗ್ರಂಥಗಳ ಪಠನ ಮಾಡಿದವನೂ ಅಲ್ಲ, ಅನ್ಯರಿಂದ ಕೇಳಿದವನೂ ಅಲ್ಲ. ನಿರಂತರದಲ್ಲಿ ಸಜ್ಜನರ ಸಹವಾಸ, ಅವರ ಸಂಗಡ ಶ್ರೀಭಗವತ್ತತ್ವ ವಿಚಾರರೂಪವಾದ ಮಾತುಗಳು. ಆದಿ ಆರಭ್ಯ ಅಂತ್ಯವರಿಗೂ ಇಲ್ಲ. ಇತ್ಯಾದಿ ಕಾರಣಗಳಿಂದ ಈ ಗ್ರಂಥ ರಚನ ಮಾಡಿದವನಲ್ಲ. ಆರ್ಯರಾದ ಶ್ರೀಮದಾನಂದತೀರ್ಥರ ಮತಶಾಸ್ತ್ರಕ್ಕೆ ಸಮ್ಮತವಾದ ಶಾಸ್ತ್ರವನ್ನ ಅನುಸರಿಸಿದವರಾದ ನಮ್ಮ ಗುರುಗಳಾದ ಭಾಗಣ್ಣದಾಸರಾಯರ ಪರಮಾನುಗ್ರಹದಿಂದ ಲಕ್ಷ್ಮೀಪತೀ ನಾರಾಯಣಾಭಿನ್ನನಾದ ಜಗತ್ತಿಗೆ ಸ್ವಾಮಿಯಾದ ಪಾಪಪರಿಹಾರಕನಾದ ಶ್ರೀಪರಮಾತ್ಮ ಎನಗೆ ಪ್ರತ್ಯಕ್ಷನಾಗಿ ಒಲಿದು ಹಿಂದಿನ ಜನ್ಮಗಳಲ್ಲಿ ಓದಿದ ವೇದಶಾಸ್ತ್ರ ಪುರಾಣ ಸಚ್ಛಾಸ್ತ್ರಾರ್ಥ

ಗಳನ್ನು ಸ್ಮೃತಿಗೆ ತಂದುಕೊಟ್ಟು ತಿಳಿಸಿದ್ದರ ಒಳಗೆ ಕೆಲವು ಮಟ್ಟಿಗೆ,ವಾಕ್ಯಾದಿ ನಲ್ಲಿ ಪರಮಾತ್ಮನು ನುಡಿಸಿದೋಪಾದಿಯಲ್ಲಿ ಪೇಳೋಪನಾಗಿದ್ದೇನೆ. ಅಷ್ಟೇ ಹೊರ್ತು ಇತರ ಸಹಾಯದಿಂದಲೂ, ನನ್ನ ಬುದ್ಧಿಬಲದಿಂದಲೂ ಹೇಳಿದ್ದಲ್ಲ- ಎಂತ ತಾತ್ಪರ್ಯ. ಇನ್ನೂ ನಾನು ಈ ಜನ್ಮದಲ್ಲಿ ನಮ್ಮ ಗುರು ಗಳ ಪರಮಾನುಗ್ರಹದಿಂದ ಉಪದಿಷ್ಟವಾದ ಶಾಸ್ತ್ರಾರ್ಥಗಳ ಹೇಳಿದ್ದೇನೆ-ಎಂತ ಶ್ರೀಜಗನ್ನಾಥದಾಸಾರ್ಯರು ಹೇಳಿದರು. ಆದ್ದರಿಂದ ಅಪರೋಕ್ಷಜ್ಞಾನದಿಂವ ಜನ್ಮಾಂತರ ಸಂಸ್ಕಾರ ವ್ಯಕ್ತವಾಗಿ ಹೇಳಿದ ಕಾವ್ಯಎಂತ ತಿಳಿಬೇಕು. ॥೩೭॥

## ಈ ಸಂಧಿಯಲ್ಲಿ ವಿಚಾರಕ್ರಮ

ಶ್ಲೋಕ ೧. ೨. ದತ್ತಸ್ವಾತಂತ್ರ್ಯ ವಿಚಾರ, ಅದರ ಕೃತ್ಯ.
ಶ್ಲೋಕ ೪. ೫. ನಿತ್ಯಸಂಸಾರಿಗಳಿಗೂ ೪೦೦ ಗುಣದಲ್ಲೇ ವಿಭಾಗ
ಶ್ಲೋಕ ೯. ಅನ್ನರೂಪದಿಂದ ಪರಮಾತ್ಮ ಪ್ರವೇಶ.
ಶ್ಲೋಕ ೧೦. ಸಲಿಲ ಬಿಂದು ಪಯೋಬ್ಧಿಯೊಳು ಬೀಳಲು, ದ್ವಂದ್ವಕರ್ಮ ಅರ್ಪಣೆ.
ಶ್ಲೋಕ ೧೩. ಅನ್ಯದೇವತೆಗಳಾದ ಬ್ರಹ್ಮಾದಿಗಳ ಭೋಜನ.
ಶ್ಲೋಕ ೧೭. ಚಿದಾನಂದಭೇದ ವಿಚಾರ.
ಶ್ಲೋಕ ೧೮. ಜೀವ ಪರಮಾತ್ಮರಿಗೆ ಕರ್ಮಫಲಭೋಗ ವಿಚಾರ.
ಶ್ಲೋಕ ೨೪. ೩೫. ಪ್ರಾಕೃತಭಾಷಾ ಸಮಾಧಾನ.

**॥ಇಂತು ಸಂಧಿ ೩೭ ಕ್ಕೆ ಶ್ರೀ ಸಂಕರ್ಷಣ ಒಡೆಯರ ಟೀಕಾ ಸಮಾಪ್ತಿಯು ॥**

೨. ಭಾವಪ್ರಕಾಶಿಕೆ :-

ವೇದ ಮೊದಲಾದ ಶಾಸ್ತ್ರಗ್ರಂಥಗಳನ್ನಾಗಲೀ, ಯುಕ್ತಿ (ತರ್ಕ) ಶಾಸ್ತ್ರಗಳನ್ನಾಗಲೀ ನಾನೂ ಓದಿದವನು, ಕೇಳಿದವನೂ ಅಲ್ಲ. ಅಥವಾ ಅಂತಹ ಜ್ಞಾನಿಗಳ ಸಹವಾಸದಲ್ಲಿದ್ದು, ಇಂತಹ ಸದ್ವಿಷಯಗಳ ಪ್ರಸ್ತಾಪಗಳು ನಡಿಸಿದವನೂ ಅಲ್ಲ. ಹಾಗಾದರೆ ಈ ಕವಿತಾ ಶಕ್ತಿಯು ಬಂದ ಬಗೆ ಹೇಗೆ? ಎಂದರೆ, ಶ್ರೀಮನ್ಮಧ್ವಮತಾವಲಂಬಿಗಳ ಕರುಣಾಬಲದಿಂದ, ಶ್ರೀ ಜಗನ್ನಾಥವಿಠ್ಠಲನು ನನ್ನೊಳಗಿದ್ದು ನುಡಿಸಿದಷ್ಟು ಹೇಳಿರುವೆನು. ಹೀಗೆ ಹೇಳಿದ ಮಾತ್ರದಿಂದ ದಾಸಾರ್ಯರು ಜ್ಞಾನಿಗಳಲ್ಲವೆಂದಲ್ಲ. ಅವರ ಪಾಂಡಿತ್ಯವು ಅವರ ಜೀವನ ಚರಿತ್ರೆಯಿಂದಲೂ ಅವರು ರಚಿಸಿದ ಗ್ರಂಥದಿಂದಲೂ ಗೊತ್ತಾಗುವುದು. ಆದರೆ ಈ ಪಾಂಡಿತ್ಯವು, ಅಂತರ್ಯಾಮಿಯಾದ ಪರಮಾತ್ಮನೆಂಬ ಭಾವನೆಯಿಂದ ಸ್ವಾಹಂಕಾರ-ಖಂಡನಕೋಸ್ಕರ ಹೀಗೆ ಹೇಳಿರುವರೆಂದು ಭಾವಿಸಬೇಕು. ॥೩೭॥

೩. ಭಾವದರ್ಪಣ :-

ಶ್ರೀಪರಮಾತ್ಮನ ಭಕ್ತಿರಸದಲ್ಲಿ ಮಗ್ನರಾದವರ ಕರುಣಾಬಲದಿಂದ ಗ್ರಂಥರಚನೆ ಮಾಡಿರುವೆನೆಂದು ಹೇಳುತ್ತಾರೆ. ॥೩೭॥

೪. ಶ್ರೀ ವ್ಯಾಸದಾಸ ಸಿದ್ಧಾಂತ ಕೌಮುದೀ :-

"ವೇದ" ಇತಿ ॥

## ಕನ್ನಡಾರ್ಥ

ಈ ಸಂಧಿಯನ್ನು ಮುಗಿಸುತ್ತಾರೆ "ವೇದ" ಎಂಬ ಪದ್ಯದಿಂದ. ಇದರಲ್ಲಿ ಸ್ವಾಹಂಕಾರ ಖಂಡನೆಯೂ, ಭಗವದ್ಭಕ್ತರ ಕರುಣಾಬಲವೂ ಶ್ರೀ

ಹರಿಗುರುಗಳ ಅನುಗ್ರಹ ಪಾತ್ರತೆಯೂ ಇರುವದೆಂದು ಈ ಪದ್ಯದ ತಾತ್ಪರ್ಯ. ॥೩೭॥

## ೫. ಶ್ರೀ ಗುರುಹೃದಯ ಪ್ರಕಾಶಿಕೆ :-

ಪಾಂಡಿತ್ಯಾಹಂಕಾರ ಖಂಡನೆಯನ್ನು ಮಾಡಿಕೊಳ್ಳುತ್ತಾ ಸಂಧಿಯನ್ನು ಮುಗಿಸುತ್ತಾರೆ- ವೇದ ಎಂದು. ವೇದಶಾಸ್ತ್ರಗಳನ್ನು, ಸಯುಕ್ತಿ ಎಂಬ ತರ್ಕಗ್ರಂಥಗಳನ್ನು ಓದಿ ಕೇಳಿದವರು ತಾವಲ್ಲವೆಂತಲೂ, ಸದಾ ಸಾಧು ಸಹ ವಾಸ ಸಲ್ಲಾಪಾದಿಗಳ ಬಲವು ತಮಗಿಲ್ಲವೆಂತಲೂ, ಅಂದರೆ ಇವುಗಳ ಬಲ ದಿಂದ ತಾವು ಈ ಗ್ರಂಥವನ್ನು ರಚಿಸಲಿಲ್ಲವೆಂತಲೂ, ಶ್ರೀಮದಾನಂದತೀರ್ಥ ರೆಂಬ ಪೂಜ್ಯಪಾದರ ಮತವನ್ನು ಅನುಸರಿಸಿರುವ ಸಜ್ಜನರುಗಳ ಕರುಣದಿಂದ ಈ ಗ್ರಂಥವನ್ನು ರಚಿಸಿದೆ-ಅಂದರೆ, ಶ್ರೀಮದಾಚಾರ್ಯರ ಶಾಸ್ತ್ರಕ್ಕೆ ಸಮ್ಮತ ವಾದ ಪ್ರಮೆಯಗಳನ್ನು ಅರಿತವರಾದ ತಮ್ಮ ಗುರುಗಳ ಪರಮಾನುಗ್ರಹ ದಿಂದ, ಈ ಗ್ರಂಥವನ್ನು ಪರಮಾತ್ಮ ಜಗನ್ನಾಥಸ್ವಾಮಿ ಪ್ರೇರಿಸಿದ ರೀತಿ ಯಲ್ಲಿ ರಚಿಸಿದೆನು-ಎಂತಲೂ ಹೇಳುತ್ತಾರೆ. ॥೩೭॥

# ಸರ್ವವ್ಯಾಖ್ಯಾನಸಾರ ಸಂಗ್ರಹ

ಅಪರೋಕ್ಷ ಜ್ಞಾನಿಗಳಾದ ಶ್ರೀ ಜಗನ್ನಾಥದಾಸರು ಅದ್ವಿತೀಯ ಪಂಡಿ ತರು. ಚತುಶ್ಶಾಸ್ತ್ರ ವಿದ್ವಾಂಸರು. ಆದರೂ ಕೂಡಾ ಸ್ವಾಹಂಕಾರ ಖಂಡ ನಾರ್ಥವಾಗಿ, ತಮ್ಮ ನೈಚ್ಯಾನುಸಂಧಾನಪೂರ್ವಕವಾದ ಭಾವನೆಯನ್ನಿಲ್ಲಿ ಮೂಡಿಸಿದ್ದಾರೆ.

'ಅಪೌರುಷೇಯವಾದ ವೇದರಾಶಿಗಳು, ಸ್ಮೃತಿ ಘಟಕವಾದ ಬ್ರಹ್ಮ ಸೂತ್ರ, ಶ್ರೀಮದ್ಭಾಗವತಾದಿ ಪುರಾಣಗ್ರಂಥಗಳು, ರಾಮಾಯಣ, ಶ್ರೀಮನ್ಮಹಾಭಾರತ- ಇತ್ಯಾದಿ ಇತಿಹಾಸಗ್ರಂಥಗಳು, ಶ್ರೀಮದಾನಂದ ತೀರ್ಥ ಭಗವತ್ಪಾದರಿಂದ ವಿರಚಿತ ಸರ್ವಮೂಲಗ್ರಂಥಗಳು, ಅವುಗಳ

ವ್ಯಾಖ್ಯಾನರೂಪವಾದ ಟೀಕಾ, ಟಿಪ್ಪಣಿ–ಇತ್ಯಾದಿ ಸಚ್ಛಾಸ್ತ್ರಗಳು ಇವುಗಳನ್ನು ತರ್ಕಬದ್ಧವಾಗಿ ಓದಿದವನು ನಾನಲ್ಲ. ಶ್ರವಣ ಮಾಡಿದವನೂ ಅಲ್ಲ, ಜ್ಞಾನಿಗಳ ಸಂಗಲಾಭವಿಲ್ಲ. ಅವರೊಡನೆ ಭಗವದ್ವಿಷಯವಾದ ಸಂಭಾಷಣೆ, ಜಿಜ್ಞಾಸಾದಿಗಳು ಮೊದಲೇ ಇಲ್ಲ. ಹೀಗಿದ್ದರೂ ಶ್ರೀಮನ್ಮಧ್ವಮುನಿಗಳ ಸತ್ಸಿದ್ಧಾಂತವನ್ನು ಅನುಸರಿಸುವ ವಿವೇಕಗಳ ಕಾರುಣ್ಯ ಬಲವೆಂಬ ಅನುಗ್ರಹ ನನಗೆ ಉಂಟು.

ಸ್ವರೂಪೋದ್ಧಾರಕರಾದ ಶ್ರೀಭಾಗಣ್ಣದಾಸರಾಯರ ಆಯುರ್ದಾನ, ಉಪದೇಶಾಮೃತ ಇವುಗಳ ದ್ವಾರಾ. ಗುರು ಕಾರುಣ್ಯ ಬಲವನ್ನು ಪಡೆದು, ಇಂದಿರಾರಮಣನಾದ ಶ್ರೀ ಜಗನ್ನಾಥವಿಠ್ಠಲ ಸ್ವಾಮಿಯು ನನ್ನ ಅಂತರಂಗಸ್ಥವಾಗಿದ್ದು. ಏನನ್ನು ನುಡಿದು ನುಡಿಸಿದ್ದಾನೆಯೋ ಅಷ್ಟನ್ನು ಈ ಗ್ರಂಥದಲ್ಲಿ ತಿಳಿಸುತ್ತೇನೆ. ನಿರ್ಮತ್ಸರರಾದ ಸುಜ್ಞಾನಿಗಳು ಆದರದಿಂದ ಆಲಿಸಬೇಕು- ಎಂದು ಪ್ರಾರ್ಥಿಸುತ್ತಾರೆ. ॥೩೭॥

**॥ಇಂತು ಶ್ರೀಮದ್ಧರಿಕಥಾಮೃತಸಾರವೆಂಬ ಕೃತಿರತ್ನದಲ್ಲಿ "ದತ್ತ ಸ್ವಾತಂತ್ರ್ಯಸಂಧಿ" ಎಂಬ ೧೬ನೆಯ ಸಂಧಿಯ ಅಂತ್ಯ ಪದ್ಯದ ಸರ್ವವ್ಯಾಖ್ಯಾನಸಾರ ಸಂಗ್ರಹವು ಪರಿಸಮಾಪ್ತಿಯಾಯಿತು ॥**

**॥ ಶ್ರೀ ಮುಕುಂದಾರ್ಪಣಮಸ್ತು ॥**